ಶ್ರೀ ಎಂ. ವೀರಪ್ಪ ಮೊಯಿಲಿ.—ಶಾಸಕರ ವಿಚಾರವನ್ನು ಪರಿಗಣಿಸಿ ಅದಕ್ಕೆ ಸೂಕ್ತ ಕಾರ್ಯ ಕ್ರಮವನ್ನು ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಈಗ ಸಭೆಯು ಮುಂದುವರೆದು ಮತ್ತೆ ಮಧ್ಯಾಹ್ನ ೨–೧೦ಕ್ಕೆ ಸಮಾವೇಶ ಗೊಳ್ಳುವುದು.

ಸದನವು ೧–೧೦ಕ್ಕೆ ಮುಕ್ತಾಯವಾಯಿತು.

ಸದನವು ಪುನ: ೨ ಗಂಟೆ ೨೦ ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

೧) ೧೯೮೦–೮೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ ೩೧—ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಜನಾರೋಗ್ಯ ಖಾತೆಗಳ ಸಚಿವರು).—ಮಾನ್ಯ ಉಪಾಧ್ಯಕ್ಷಿಣಿಯವರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧–೩–೧೯೮೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬೦,೫೦,೬೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಬೇಡಿಕೆಯನ್ನು ಮಂಡಿಸಲಾಯಿತು. ಈಗ ಬೇಡಿಕೆ ಮೇಲಿನ ಚರ್ಚೆಯನ್ನು ಮಾನ್ಯ ಸಿಂಧ್ಯಾರವರು ಪ್ರಾರಂಭಿಸಬಹುದು.

† ಶ್ರೀ ಪಿ ಜಿ.ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ರಾಜ್ಯದ ಆರೋಗ್ಯ ಸಚಿವರು ಈ ವರ್ಷ ಆರೋಗ್ಯ ಇಲಾಖೆಗೆ ಖರ್ಚು ಮಾಡತಕ್ಕಂಥ ಹಣಕ್ಕೆ ನಮ್ಮ ಒಪ್ಪಿಗೆ ಯನ್ನು ಕೇಳಲಿಕ್ಕೆ ಬೇಡಿಕೆಗಳನ್ನು ಮಂಡಿಸಿದ್ದಾರೆ. ಈ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ಮುಂಚೆ ನಮ್ಮ ಆರೋಗ್ಯ ಸಚಿವರಿಗೆ ಈ ಇಲಾಖೆಯನ್ನು ಆರೋಗ್ಯವಾಗಿ ಇಡಬೇಕು ಎನ್ನುವ ಆಸೆಯಂತೂ ಬಹಳ ಇದೆ. ಅವರು ಮಂತ್ರಿಯಾಗುತ್ತಾ ಇರುವುದು ಇದು ಮೂರನೇ ಸಾರಿ. ಅವರಿಗೆ ನಾವೆಲ್ಲರೂ ಸಹ ಯಶಸ್ಸನ್ನು ಕೋರುತ್ತೇವೆ. ಅವರು ಈ ಇಲಾಖೆಯಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳ ಬೇಕು. ಜೊತೆಗೆ ರಾಜ್ಯದ ಜನತೆಯ ಆರೋಗ್ಯವನ್ನು ಸುಧಾರಣೆ ಮಾಡಲಿಕ್ಕೆ ಎಲ್ಲ ಪ್ರಯತ್ನವನ್ನು ಮಾಡುತ್ತಾರೆಂದು ನಾವು ತಿಳಿದಿದ್ದೇವೆ. ಈ ಒಂದು ಆರೋಗ್ಯ ಇಲಾಖೆಯ ಮುಖ್ಯವಾದ ವ್ಯಕ್ತಿ ಗಳಲ್ಲಿ ಒಬ್ಬರಾಗಿರತಕ್ಕಂಥವರು ವೈದ್ಯರು. ಈ ವೈದ್ಯರುಗಳಿಗೆ ಇರತಕ್ಕಂಥ ಒಂದು ಮುಖ್ಯವಾದ ಗುಣ ನಮ್ಮ ಆರೋಗ್ಯ ಮಂತ್ರಿಗಳಲ್ಲಿದೆ. ರೋಗಿಯನ್ನು ನೋಡುವುದಕ್ಕೆ ಮುಂಚೆ ವೈದರು ಸ್ವಲ್ಪ ನಕ್ಕು ಚೆನ್ನಾಗಿ ಮಾತನಾಡಿಸಿದರೆ ಅರ್ಧ ಖಾಯಿಲೆ ಹೋದಹಾಗೆ ಆಗುತ್ತದೆ. ಆ ಗುಣ ನಮ್ಮ ಆರೋಗ್ಯ ಮಂತ್ರಿಗಳಲ್ಲಿದೆ. ನಗುತ್ತಾ, ನಗುತ್ತಾ ಎಲ್ಲರನ್ನೂ ಬಹಳ ಚೆನ್ನಾಗಿ ಮಾತನಾಡಿಸುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ.—ನಿಮಗೆ ರೋಗ ಹೋಗಿದೆಯೇ.

ಶ್ರೀ ಪಿ. ಜಿ. ಆರ್. ಸಿಂಧ್ಯ....ನನಗೆ ಏನೂ ರೋಗ ಇಲ್ಲ. ನಾನು ೧೫–೧೬ ತಿಂಗಳು ಆರೋಗ್ಯ ಮಂತ್ರಿಯಾಗಿದ್ದೆ. ಅದು ಏನು ಕಾರಣವೋ ಗೊತ್ತಿಲ್ಲ. ಅಂತೂ ಯಾವಾಗಲೂ ಸಹಿತ ಆರೋಗ್ಯ ಮಂತ್ರಿಗಳು ಅನಾರೋಗ್ಯದಿಂದ ಇರುತ್ತಾರೆ. ಆ ಪೋರ್ಟ್‌ಫೋಲಿಯೊ ಬಿಟ್ಟಮೇಲೆ ನಾನು ಆರೋಗ್ಯವಾಗಿದ್ದೆ. ಆ ಪೋರ್ಟ್‌ಫೋಲಿಯೊ ಇದ್ದಂಥ ಸಂದರ್ಭದಲ್ಲಿ ಒಂದಲ್ಲ ಒಂದು ರೋಗ ಇದ್ದೇ ಇರುತ್ತಿತ್ತು. ಆದ್ದರಿಂದ ಅವರಿಗೆ ಹಾಗೇ ಆಗದೇ ಇರಲಿ ಎಂದು ನಾನು ಆಸೆಯನ್ನು ವ್ಯಕ್ತ ಪಡಿಸುತ್ತೇನೆ.

ಉಪಾಧ್ಯಕ್ಷರು,—ಅವರಿಗೆ ಆ ಸಮಸ್ಯೆ ಇಲ್ಲ ಎಂದು ಕಾಣುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಕಾದು ನೋಡಬೇಕಾಗಿದೆ. ಈ ಇಲಾಖೆಯಲ್ಲಿ ವಿಚಿತ್ರವಾದ ಸಮಸ್ಯೆಗಳಿವೆ, ಇದು ಬಹಳ ವಿಚಿತ್ರವಾಗಿರತಕ್ಕ ಇಲಾಖೆ. ನಾನು ಈ ಇಲಾಖೆ ಬಗ್ಗೆ ನಾಲ್ಕು ಸಲಹೆಗಳನ್ನು ಸರ್ಕಾರದ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ನಮ್ಮ ದೇಶದಲ್ಲಿ ಒಂದು ನಂಬಿಕೆ ಇದೆ. ಆರೋಗ್ಯ ಸುಧಾರಣೆ ಆಗಬೇಕು, ಆರೋಗ್ಯವಾಗಿರಬೇಕು ಅಂದರೆ ಈ ಆರೋಗ್ಯವನ್ನೆಲ್ಲಾ ನಾವು ಕೊಂಡುಕೊಳ್ಳಬಹುದು, ಔಷಧಿ ತೆಗೆದುಕೊಂಡು, ಗುಳಿಗೆಗಳನ್ನು ನುಂಗಿದರೆ, ಹೆಚ್ಚಿಗೆ ಇಂಜಕ್ಷನ್‌ಗಳನ್ನು ತೆಗೆದುಕೊಂಡರೆ ಆರೋಗ್ಯ ಸುಧಾರಣೆ ಆಗುತ್ತದೆ, ಹೆಚ್ಚಿಗೆ ವೈದ್ಯರುಗಳು ಇದ್ದರೆ, ಹೆಚ್ಚಿಗೆ ಆಸ್ಪತ್ರೆಗಳನ್ನು ಮಾಡಿದರೆ ಹೆಚ್ಚಿನ ಸಂಖ್ಯೆಯಲ್ಲಿ ದಾದಿಯರು ಇದ್ದರೆ ಆರೋಗ್ಯದಲ್ಲಿ ಸುಧಾರಣೆಯಾಗುತ್ತದೆ ಎನ್ನತಕ್ಕಂಥ ಒಂದು ನಂಬಿಕೆ ನಮ್ಮಲ್ಲಿ ಬಹಳ ದಿನಗಳಿಂದ ಬಂದಿದೆ. ಅದಕ್ಕೆ ಒಂದು ಘೋಷಣೆಯನ್ನು ವಿಶ್ವ ಸಂಸ್ಥೆಯಲ್ಲಿ ಮಾಡಿದರು ಎಂದು ಎರಡು ಸಾವಿರ ಇಸವಿಯಷ್ಟು ಹೊತ್ತಿಗೆ ಇಡೀ ಪ್ರಪಂಚದಲ್ಲಿ ಎಲ್ಲರ ಆರೋಗ್ಯವನ್ನು ಸಹಿತ ಸುಧಾರಣೆ ಮಾಡುತ್ತೇವೆ. ಹೆಲ್ತ್ ಫಾರ್ ಆಲ್ ಬೈ ೨ ತೌಸಂಡ್ ಎ.ಡಿ. ಎನ್ನತಕ್ಕಂಥ ಘೋಷಣೆಯನ್ನು ನಾವು ಸಹ ಕೊಟ್ಟಿದ್ದೇವೆ. ಆದರೆ ನಮ್ಮ ದೇಶದಲ್ಲಿ ಶೇಕಡ ೮೦ರಷ್ಟು ಜನ ಇರತಕ್ಕಂಥ ಗ್ರಾಮೀಣ ಪ್ರದೇಶದಲ್ಲಿ ಜನರ ಆರೋಗ್ಯ ಸುಧಾರಣೆಗೆ ಔಷಧಿಗಿಂತ, ಆಸ್ಪತ್ರೆಗಳಿಗಿಂತ, ದಾದಿಯರಿಗಿಂತ ಬಹಳ ಮುಖ್ಯವಾಗಿರತಕ್ಕದ್ದು ಗ್ರಾಮದ ನೈರ್ಮಲ್ಯ ಇರಬೇಕು. ಅಂದರೆ ಒಳಚರಂಡಿ ವ್ಯವಸ್ಥೆ, ಕುಡಿಯಲಿಕ್ಕೆ ಶುದ್ಧವಾಗಿರತಕ್ಕ ನೀರು, ಪೌಷ್ಟಿಕ ಆಹಾರ ಇರಬೇಕು, ಅಂದರೆ ಇವುಗಳ ಆಧಾರದ ಮೇಲೆ ಆರೋಗ್ಯದ ಬಗ್ಗೆ ಸ್ವಾತಂತ್ರ್ಯ ಬಂದನಂತರ ಯೋಜನೆಗಳನ್ನು ತಯಾರು ಮಾಡಲಿಲ್ಲ ಈ ವಿಷಯದಲ್ಲಿ ಸಂಪೂರ್ಣವಾಗಿ ನಾವು ಇದುವರೆಗೆ ವಿಫಲರಾಗಿದ್ದೇವೆ. ನಾವು ಯಾವ ಘೋಷಣೆಗಳನ್ನು ಮಾಡಿದರೂ ಸಹಿತ ಈ ಒಂದು ಆರೋಗ್ಯವನ್ನು ಸುಧಾರಣೆ ಮಾಡುತ್ತೇವೆ ಅಂದರೆ ಬಹುಶಃ ಈ ಮೂಲಭೂತವಾದ ಸಮಸ್ಯೆ ಏನಿದೆ ಇದನ್ನು ಬಗೆಹರಿಸದೇ ಹೋದರೆ ಯಾವುದೆ ರೀತಿಯ ಉಪಯೋಗವಾಗುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಇವತ್ತು ನಮಗೆ ಬಹಳ ಮುಖ್ಯವಾಗಿರತಕ್ಕಂಥ ಪ್ರಾಬ್ಲಂ ರಿಸೋರ್ಸಸ್. ಎಲ್ಲಿಂದ ಹಣವನ್ನು ತರತಕ್ಕದ್ದು, ಆಸ್ಪತ್ರೆಗಳು ಬೇಕು, ವೈದ್ಯರುಗಳು ಬೇಕು, ಔಷಧಿಗಳು ಬೇಕು ಹೀಗೆ ಎಲ್ಲಾ ತರದ್ದೂಬೇಕು, ಆದರೆ ದುಡ್ಡನ್ನು ಎಲ್ಲಿಂದ ತರತಕ್ಕದ್ದು. ಒಂದು ಪಕ್ಷ ನಾವು ದುಡ್ಡನ್ನು ತೆಗೆದುಕೊಂಡು ಬರುತ್ತೇವೆ ಎಂದು ಇಟ್ಟುಕೊಳ್ಳೋಣ. ದುಡ್ಡನ್ನು ತೆಗೆದುಕೊಂಡು ಬಂದು ಔಷಧಿಗಳನ್ನು ಹಾಕಿದರೂ ಸಹ ಏನಾಗುತ್ತದೆ, ಇವತ್ತು ಹಳ್ಳಿಗಳಲ್ಲಿರತಕ್ಕಂಥ, ಗ್ರಾಮದಲ್ಲಿರತಕ್ಕಂಥ ಒಂದು ನೈರ್ಮಲ್ಯದ ವ್ಯವಸ್ಥೆ ಏನಿದೆ, ನಾವು ಕೊಡತಕ್ಕಂಥ ಪೌಷ್ಟಿಕತೆ ಇಲ್ಲದೆ ಇರತಕ್ಕಂಥ ಆಹಾರ ಏನಿದೆ, ಅಶುದ್ಧವಾಗಿರತಕ್ಕ ನೀರು ಏನಿದೆ ಈ ಪರಿಸ್ಥಿತಿ ಇರುವವರೆಗೂ ಬದಲಾವಣೆಯಾಗುವುದಕ್ಕೆ ಸಾಧ್ಯವೇ ಇಲ್ಲ ಎಂದು ನಾನು ತಿಳಿದಿದ್ದೇನೆ.

ಇವತ್ತು ನಾವು ೨೦ನೇ ಶತಮಾನದಿಂದ ೨೧ನೇ ಶತಮಾನಕ್ಕೆ ಹೋಗತಕ್ಕ ಕಾಲದಲ್ಲಿ ಟೆಕ್ನಾಲಜಿ ಮಿಷನನ್ನು ನಾವು ಬೇರೆ ದೇಶದಿಂದ ತರುವುದಕ್ಕೆ ಹೊರಟಿದ್ದೇವೆ. ಶುದ್ಧವಾದ ಕುಡಿಯುವ ನೀರಿನ ಬಗ್ಗೆ ಗ್ರಾಮೀಣ ನೈರ್ಮಲ್ಯವನ್ನು ಸುಧಾರಣೆ ಮಾಡತಕ್ಕದ್ದರ ಬಗ್ಗೆ ದೆಹಲಿಯ ಯೋಜನಾ ಭವನದಲ್ಲಿ ಇರತಕ್ಕ ಮಹಾಶಯರುಗಳಿಗೆ ೪೦ ವರ್ಷಗಳ ನಂತರ ಪ್ರಜ್ಞೆ ಬಂದಿದೆ ಎಂದು ಕಾಣುತ್ತಿದೆ. ನಮ್ಮ ಬೇಸಿಕ್ ಅಪ್ರೋಚ್ ಏನಿದೆ. ಅದು ಕ್ಯೂರೇಟೀವ್ ಇದೆಯೇ ಹೊರತು, ಪ್ರಿವೆಂಟೀವ್ ಒಂದೂ ಸಹಿತ ಇಲ್ಲ. ಕಾಯಿಲೆಗಳನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕೆಂದು ನಾವು ಯೋಚನೆ ಮಾಡುವುದಿಲ್ಲ, ಕಾಯಿಲೆ ಬಂದಮೇಲೆ ಏನು ಔಷಧಿ ಕೊಡಬೇಕೆಂಬುದನ್ನು ಯೋಚನೆ ಮಾಡುತ್ತೇವೆ. ಮೋಟಿವೇಷನ್ ಅಂದರೆ ನಾವು ಕ್ಯೂರೇಟಿವ್ ಆಸ್‌ಪೆಕ್ಟ್‌ಗೆ ಮಹತ್ವಕೊಟ್ಟಿದ್ದೇವೆಂದು ಅರ್ಥವಾಗುತ್ತದೆ. ಮೋಟಿವೇಷನ್ ಪ್ರಯತ್ನ ಮಾಡಲಿಲ್ಲ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಮ್ಮ ದೇಶದ ಸಾಮಾನ್ಯ ಪ್ರಜೆಗಳಿಗೆ ಆರೋಗ್ಯದ ಬಗ್ಗೆ ಮೋಟಿವೇಷನ್ ಏನಿರಬೇಕು, ಅದನ್ನು ಸಹ ನಾವು ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಮತ್ತೆ ನಮ್ಮ ರೂರಲ್ ಹೆಲ್ತ್ ಕೇರ್ ಡಿಲಿವರಿ ಸಿಸ್ಟಂ ಏನಿದೆ ಅದು ಸರಿಯಾಗಿಲ್ಲ. ನಾನು ಅಧಿಕಾರಿಗಳನ್ನು ಮತ್ತು ಮಂತ್ರಿಗಳನ್ನು ಟೀಕಿಸುವುದಕ್ಕಾಗಿ ಈ ಮಾತು ಹೇಳುತ್ತಿಲ್ಲ. ನಾನು ಈ ಖಾತೆಯಲ್ಲಿ ಸ್ವಲ್ಪ ದಿವಸ ಕೆಲಸ ಮಾಡಿದ್ದೇನೆ. ರೂರಲ್ ಹೆಲ್ತ್ ಡೆಲಿವರಿ ಸಿಸ್ಟಂ ಬದಲಾವಣೆಯಾಗುವವರೆಗೆ ಆರೋಗ್ಯದಲ್ಲಿ ಸುಧಾರಣೆಯಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ತಾವು ನನಗಿಂತ ವಯಸ್ಸಿನಲ್ಲಿ ಹಿರಿಯರು. ನಮ್ಮಜ್ಜಿ ನನಗೆ ತಲೆಗೆ ಹರಳೆಣ್ಣೆ ಹಾಕಿಕೊಳ್ಳಬೇಕು, ಬೇಧಿ ಆದರೆ ಏನು ಔಷಧಿ ತೆಗೆದುಕೊಳ್ಳಬೇಕು, ನೆಗಡಿ ಆದರೆ ಏನು ಔಷಧಿ ತೆಗೆದ ಕೊಳ್ಳಬೇಕೆಂದು ಹಾಗೂ ದೇಹದ ಯಾವ ಭಾಗದಲ್ಲಿ ಏನು ಖಾಯಿಲೆ ಬಂದರೆ ಏನು ಔಷಧ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಹೇಳುತ್ತಿದ್ದರು. ಮನೆ ಮದ್ದು, ಇವತ್ತು ಇದನ್ನೆಲ್ಲಾ ಹಾಳು ಮಾಡಿ, ಇವರನ್ನೆಲ್ಲಾ ಅರಳೀಕಾಯಿ ಪಂಡಿತರು ಎಂದು ಕರೆದೆವು. ನಾವು ಗ್ರಾಮೀಣ ಪ್ರದೇಶದಲ್ಲಿದ್ದಂತಹ

ವ್ಯವಸ್ಥೆಯನ್ನು ಹಾಳು ಮಾಡುವುದರಲ್ಲಿ ಬಹಳ ಯಶಸ್ವಿಯಾಗಿದ್ದೇವೆ. ಇಲ್ಲಿ ನಾವು ಗಮನಿಸಲೇ ಬೇಕಾದ ಒಂದು ವಿಚಾರ ಇದೆ. ಏನೆಂದರೆ, ನನ್ನ ಕ್ಷೇತ್ರವಾದ ಕನಕಪುರದಲ್ಲಿ ಕಗ್ಗಲಹಳ್ಳಿ ಎಂದು ಒಂದು ಊರಿದೆ. ಅಲ್ಲಿ ಮಂತ್ರವಾದಿ ತಮ್ಮಯ್ಯ ಎಂದು ಇದ್ದ. ಅವನ ಹಿರಿಯರು ಅವನಿಗೆ ಆಶೀರ್ವಾದ ಮಾಡಿದ್ದಾರೆ. ಅವನು ಸುಮಾರು ಮೂರು ಸಾವಿರ ಜನ ಹಾವು ಕಚ್ಚಿದವರಿಗೆ ಬದುಕಿಸಿದ್ದಾನೆ. ಅವನು ಏನು ಪ್ರತಿಜ್ಞೆ ಮಾಡಿದ್ದಾನೆಂದರೆ, ಔಷಧಿ ಕೊಟ್ಟಮೇಲೆ ರೋಗಿಯಿಂದ ದುಡ್ಡು ತೆಗೆದುಕೊಳ್ಳುವುದಿಲ್ಲ ಎಂದು ಇವನ್ನನ್ನು ಮಂತ್ರವಾದಿ ತಮ್ಮಯ್ಯ ಎಂದು ಕರೆದರೂ ಔಷಧಿ ಕೊಡುತ್ತಾನೆ. ಇವತ್ತು ನಾವುಗಳು ಬರೀ ಮಾಡ್ರನ್ ಮೆಡಿಸಿನ್ ಅಲೋಪತಿಕ್ ಸಿಸ್ಟಮ್ ಎಂದು ಹೇಳುತ್ತಿದ್ದೇವೆ. ಆದರೆ ನಿಜಾಂಶವನ್ನು ಕೂಡ ನೋಡಬೇಕಾಗುತ್ತದೆ. ನಾನು ಆರೋಗ್ಯ ಮಂತ್ರಿಯಾಗಿದ್ದರೂ ಕೂಡ ಆತನಿಗೆ ಏನೂ ಅನುಕೂಲ ಮಾಡಿಕೊಡುವುದಕ್ಕಾಗಲಿಲ್ಲ, ಅರಳೇಕಾಯಿ ಪಂಡಿತರಿಗೆ ಏಕೆ ಎನ್‌ಕ್ರೇಜ್ ಮಾಡುತ್ತೀರಿ ಎಂದು ಹೇಳುತ್ತಿದ್ದರು. ಕೊನೆಗೆ ಅವರಿಗೆ ಮಾಶಾಸನ ಕೂಡ ಕೊಡಲಿಕ್ಕೆ ಆಗದೆ, ವೃದ್ಧಾಪ್ಯವೇತನ ೫೦ ರೂಪಾಯಿ ಕೊಡಿಸಿದ್ದೇನೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮೂಳೆ ಮುರಿದರೆ ಕಟ್ಟತಕ್ಕ ಜನ ಇದ್ದಾರೆ. ಇವತ್ತು ಪುತ್ತೂರು ಡಾಕ್ಟರುಗಳು ಯಾವ ರೀತಿ ಮೂಳೆ ಮುರಿದರೂ ಕೋಳಿಮೊಟ್ಟೆ ರಸ ಮತ್ತು ಕೆಮ್ಮಣ್ಣು ಮುಂಡಿ ೩-೪ ತಿಂಗಳಲ್ಲಿ ಹಾಕಿ ಸರಿಪಡಿಸುತ್ತಾರೆ. ಇವತ್ತು ನಮ್ಮ ಆರ್ಥೋಪೆಡಿಕ್ಸ್ ಸಮಸ್ಯೆ ಏನಾಗಿದೆ. ಇವುಗಳು ಏನಾಗಿದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಕಳೆದ ೪೦ ವರ್ಷಗಳ ಅವಧಿಯಲ್ಲಿ ಗ್ರಾಮೀಣ ನೈರ್ಮಲ್ಯವನ್ನು ಗ್ರಾಮೀಣ ಆರೋಗ್ಯವನ್ನು ಸಂಪೂರ್ಣವಾಗಿ ಹಾಳು ಮಾಡಿ ಆ ಭಾಗದಲ್ಲಿ ಬೇರೆ ಪದ್ಧತಿಯನ್ನು ತರುವುದರಲ್ಲಿ ವಿಫಲರಾದ ಮೇಲೆ ಪ್ಲಾನಿಂಗ್ ಕಮೀಷನ್‌ನವರು ಸಹ ಗ್ರಾಮೀಣ ನೈರ್ಮಲ್ಯದ ಬಗ್ಗೆ ಹೇಳುವುದಕ್ಕೆ ಈಗ ಹೊರಟ್ಟಿದ್ದಾರೆ. ಟೆಕ್ನಾಲಜಿ ಮಿಷನ್ ಮಾಡತಕ್ಕ ಕೆಲಸ ಎಂದರೆ ಗ್ರಾಮನೈರ್ಮಲ್ಯ ಮತ್ತು ಶುದ್ಧವಾಗಿರತಕ್ಕ ಕುಡಿಯುವ ನೀರು ಮತ್ತು ಅದಕ್ಕೂ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿರತಕ್ಕ ಹೆಲ್ತ್ ಡೆಲಿವರಿ ಸಿಸ್ಟಂ ಅಭಿವೃದ್ಧಿ ಪಡಿಸುವುದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೆ ಅವರು ಹೊರಟಿದ್ದಾರೆ.

ಇನ್ನು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ಸಾಮಾನ್ಯವಾದ ಮನುಷ್ಯನಿಗೆ ಮೊದಲನೆಯದಾಗಿ ಸಿಕ್ಕತಕ್ಕಂಥ ಆಸ್ಪತ್ರೆ ಅಂದರೆ ಪ್ರೈಮರಿ ಹೆಲ್ತ್ ಯೂನಿಟ್ ಈಗ ಇವುಗಳನ್ನೆಲ್ಲಾ ಬದಲಾವಣೆ ಮಾಡಿ ಪ್ರೈಮರಿ ಹೆಲ್ತ್ ಸೆಂಟರ್ ಎಂದು ಮಾಡಿದ್ದೇವೆ. ಹದಿನೈದು ಸಾವಿರ ಜನರಿಗೆ ಒಂದು ಪ್ರೈಮರಿ ಹೆಲ್ತ್ ಯೂನಿಟ್ ಇರಬೇಕೆಂದು ಮಾಡಿದ್ದೇವೆ. ಈ ಪ್ರೈಮರಿ ಹೆಲ್ತ್ ಯೂನಿಟ್‌ಗಳ ಆರೋಗ್ಯದ ಬಗ್ಗೆ ಮಾತನಾಡುವುದು ಇರಲಿ, ಅವೇ ಅನಾರೋಗ್ಯವಾಗಿವೆ. ಅಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಅಲ್ಲಿ ಸರಿಯಾದ ಶುಚಿ ಇರುವುದಿಲ್ಲ. ಈ ಪ್ರೈಮರಿ ಹೆಲ್ತ್ ಯೂನಿಟ್‌ಗಳು ಬಹುತೇಕ ಒಂದು ರೀತಿ ಫ್ಯಾಕ್ಟರಿ ಇದ್ದ ಹಾಗೆ ಇವೆ. ಅಲ್ಲಿಗೆ ಡಾಕ್ಟರುಗಳು ೧೦ ಗಂಟೆಗೆ ಬಂದು ೫ ಗಂಟೆಗೆ ಹೊರಟು ಹೋಗುತ್ತಾರೆ. ಈಗ ಪ್ರೈಮರಿ ಹೆಲ್ತ್ ಯೂನಿಟ್‌ಗಳೆಲ್ಲಾ ಪ್ರೈಮರಿ ಹೆಲ್ತ್ ಸೆಂಟರ್ ಆಗಿರತಕ್ಕದ್ದು ತಮಗೆ ಗೊತ್ತಿರುವ ವಿಚಾರ. ಈ ಸೆಂಟರ್‌ಗಳಿಗೆ ಬರತಕ್ಕ ಔಷಧ ಅಲ್ಲಿ ಇರುವುದಿಲ್ಲ, ಕೆಲವು ಕಡೆ ಡಾಕ್ಟರುಗಳು ಇರುವುದಿಲ್ಲ, ಅನೇಕ ಆಸ್ಪತ್ರೆಗಳಲ್ಲಿ ದಾದಿಯರು ಇರುವುದಿಲ್ಲ. ಹೀಗೆ ಹಲವಾರು ತಿಂಗಳುಗಳ ಕಾಲ, ಹಲವಾರು ದಿನಗಳ ಕಾಲ ಈ ರೀತಿಯಲ್ಲಿ ಆಸ್ಪತ್ರೆ ನಡೆಸಿಕೊಂಡು ಹೋಗಿರುವುದು ಇದೆ. ಇನ್ನು ನಮ್ಮ ರಾಜ್ಯದಲ್ಲಿ ೩೦ ಸಾವಿರ ಜನರಿಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್ ಇರಬೇಕೆಂದು ಮಾಡಿದ್ದೇವೆ. ೧೯೭೯-೮೦ನೇ ಇಸವಿಯಲ್ಲಿ ೩೦೦ ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ಮಾಡುತ್ತೇವೆಂದು ಈ ರಿಪೋರ್ಟ್‌ನಲ್ಲಿ ಸಹಿತ ಬಂದಿದೆ. ಇದು ಕೇವಲ ಒಂದು ನೇಮ್ ಬೋರ್ಡ್ ಚೇಂಜ್ ಮಾಡತಕ್ಕದ್ದು ಆಗುತ್ತದೆಯೇ ವಿನಹ ಅದಕ್ಕೆ ಬೇಕಾಗಿರತಕ್ಕ ಸ್ಟಾಫ್, ಬಿಲ್ಡಿಂಗ್ಸ್, ಎಕ್ವಿಪ್‌ಮೆಂಟ್, ವೆಹಿಕಲ್ಸ್ ಇದು ಯಾವುದೂ ಸಹಿತ ಮಾಡಲಿಕ್ಕೆ ಆಗುವುದಿಲ್ಲ. ಈಗ ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಊರಿನದ್ದೇ ಹೇಳುತ್ತೇನೆ. ಬಹಳ ಉತ್ಸಾಹದಿಂದ ನಮ್ಮ ಊರಿನಲ್ಲಿ ೧೯೬೯ರಲ್ಲಿ ಪ್ರೈಮರಿ ಹೆಲ್ತ್ ಯೂನಿಟ್ ಪ್ರಾರಂಭ ಮಾಡಿದ್ದು. ಅದನ್ನು ೧೯೭೩ರಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಮಾಡಿದೆವು. ಅದು ದೊಡ್ಡಮರಳವಾಡಿ ಎಂದು ಆ ಊರಿಗೆ ಜೀಪು ಬಂದು ನಾಲ್ಕು ವರ್ಷಗಳಿಂದ ಹಾಗೆಯೇ ನಿಂತಿದೆ. ಅದಕ್ಕೆ ಡ್ರೈವರ್ ಇಲ್ಲ. ಪ್ರೈಮರಿ ಹೆಲ್ತ್ ಯೂನಿಟ್ ಮತ್ತು ಪ್ರೈಮರಿ ಹೆಲ್ತ್ ಸೆಂಟರ್‌ಗಳು ಯಾವ ರೀತಿ ಕೆಲಸ ಮಾಡುತ್ತವೆ ಎನ್ನುವುದಕ್ಕೋಸ್ಕರ ನಾನು ಇದನ್ನು ಹೇಳುತ್ತಿದ್ದೇನೆ. ಈಗ ತಾವು ಅದನ್ನು ಸರಿಪಡಿಸುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ, ಇನ್ನು ನಮ್ಮ ಕಮ್ಯುನಿಟಿ ಹೆಲ್ತ್ ಸೆಂಟರ್ ಒಂದು ಲಕ್ಷ ಜನಸಂಖ್ಯೆಗೆ ಒಂದು ಇರಬೇಕೆಂದು ಹೇಳುತ್ತೇವೆ. ಇದರ ಬಗ್ಗೆ ನೀವು ಇಲಾಖೆಯ ಕಾರ್ಯದರ್ಶಿಗಳಿಗೆ ಕೇಳಿದರೆ, ಮತ್ತು ಅದರ ಮುಖ್ಯಸ್ಥರಿಗೆ ಕೇಳಿದರೆ, ಕರೆಕ್ಟಾಗಿ ಹೇಳುತ್ತಾರೆ. ಸೆವೆಂತ್ ಪ್ಲಾನ್ ಪೀರಿಯಡ್‌ನಲ್ಲಿ ಐವತ್ತು ಪರ್‌ಸೆಂಟ್ ಕಮ್ಯುನಿಟಿ ಹೆಲ್ತ್ ಸೆಂಟರ್ ಟಾರ್ಗೆಟ್ ಹಾಕಿಕೊಂಡಿದ್ದೇವೆ, ಅದನ್ನು ರೀಚ್

ಆಗಿದ್ದೇವೆ ಎಂದು ಹೇಳುತ್ತಿದ್ದಾರೆ. ಇದು ಪುಸ್ತಕದಲ್ಲಿ ರೀಚ್ ಆಗಿದೆಯೇ ವಿನಹ ವಸ್ತುಸ್ಥಿತಿಯಲ್ಲಿ ಏನೂ ಮಾಡಲಿಕ್ಕೆ ಆಗಿಲ್ಲ ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ಇದರ ಬಗ್ಗೆ ಗಮನಿಸಬೇಕು. ಈ ಪ್ರೈಮರಿ ಹೆಲ್ತ್ ಯೂನಿಟ್, ಪ್ರೈಮರಿ ಹೆಲ್ತ್ ಸೆಂಟರ್, ಕಮ್ಯುನಿಟಿ ಹೆಲ್ತ್ ಸೆಂಟರ್ ಏನಿವೆ ಇವುಗಳ ಬಗ್ಗೆ ತಾವು ಯೋಚನೆಮಾಡಬೇಕು. ಕೇಂದ್ರ ಸರ್ಕಾರ ಸೆವೆಂತ್ ಪ್ಲ್ಯಾನ್ ಪೀರಿಯಡ್‌ನಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಇದನ್ನು ಬಲಪಡಿಸಲಿಕ್ಕೆ ಎಂದು ದುಡ್ಡು ಕೊಡಲಿಕ್ಕೆ ತಯಾರಿದ್ದರು. ಆದರೆ ಫೈನಾನ್ಸ್ ಕಮಿಷನ್‌ನವರು ಇದು ಸರ್‌ಪ್ಲಸ್ ಸ್ಟೇಟ್ ಎಂದು ಹೇಳಿದ್ದರಿಂದ ನಮಗೆ ದುಡ್ಡು ಬರಲಿಲ್ಲ. ಆದ್ದರಿಂದ ನೈನ್ತ್ ಫೈನಾನ್ಸ್ ಕಮಿಷನ್‌ನಲ್ಲಿಯಾದರೂ ಅದನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕಾಗಿದೆ. ಇಲ್ಲದೇ ಹೋದರೆ ಈ ಸೆಂಟರ್‌ಗಳೆಲ್ಲಾ ಹಾಗೆಯೇ ಉಳಿಯುತ್ತವೆ. ಇವುಗಳನ್ನು ಬಲಪಡಿಸುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಯಾವ ಕಾರಣದಿಂದ ಸಾಳ್ವೆಯವರ ಅಧ್ಯಕ್ಷತೆಯಲ್ಲಿದ್ದಂಥ ಫೈನಾನ್ಸ್ ಕಮಿಷನ್ ಅವರು ನಮ್ಮ ಸ್ಟೇಟನ್ನು ಸರ್‌ಪ್ಲಸ್ ಸ್ಟೇಟ್ ಎಂದು ಹೇಳಿದರೋ ನನಗಂತೂ ಅರ್ಥವಾಗಲಿಲ್ಲ. ಇನ್ನು ಪ್ರೈಮರಿ ಹೆಲ್ತ್ ಯೂನಿಟ್ ಮತ್ತು ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಇರತಕ್ಕ ವೈದ್ಯರುಗಳ ಬಗ್ಗೆ ಹೇಳಬೇಕೆಂದರೆ, ಇವರು ಹೇಗೆ ಇದ್ದಾರೆ ಅಂದರೆ ಎರಡು ವರ್ಷಗಳ ಹಿಂದೆ ಹೆಲ್ತ್ ಡೈರೆಕ್ಟರ್ ಗವರ್ನಮೆಂಟ್‌ಗೆ ಒಂದು ಪ್ರಪೋಸಲ್ ಕಳುಹಿಸಿದ್ದಾರೆ. ಏನೆಂದರೆ ಪೋಸ್ಟಿಂಗ್ಸ್ ಮಾಡುವಾಗ ಒಂದು ಪ್ರಿನ್ಸಿಪಲ್ ಫಾಲೋ ಮಾಡಬೇಕೆಂದು. ಡಾಕ್ಟರುಗಳನ್ನು ಪೋಸ್ಟ್ ಮಾಡುವಾಗ ಒಂದು ಪ್ರಿನ್ಸಿಪಲ್ ಫಾಲೋ ಮಾಡಬೇಕು ಎಂದು ಅದು ಏನು ಅದು. ಈಗ ಆರ್ಥೋಪೆಡಿಕ್ಸ್ ಡಾಕ್ಟರ್ಸ್ ಅವರು ಪ್ರೈಮರಿ ಹೆಲ್ತ್ ಸೆಂಟರ್‌ಗೆ ಬರುವುದಿಲ್ಲ ಅವರು ಜನರಲ್ ಆಸ್ಪತ್ರೆಗೆ ಬರುತ್ತಾರೆ. ಇನ್ನು ಕಮ್ಯುನಿಟಿ ಹೆಲ್ತ್ ಸೆಂಟರ್ ಅಂದರೆ ಡೆಂಟಿಸ್ಟ್ ಒಬ್ಬ ಮೆಡಿಸಿನ್ ಕೊಡತಕ್ಕವನು, ಒಬ್ಬ ಸರ್ಜನ್ ಒಬ್ಬ ಓ.ಬಿ.ಜಿ. ಇರಬೇಕಾಗುತ್ತದೆ. ಓ.ಬಿ.ಜಿ.ಗೆ ಅಸಿಸ್ಟೆಂಟ್ ಸರ್ಜನ್ ಅನ್ನು ಹಾಕುತ್ತಾರೆ ಅಥವಾ ಮೇಲೆ ಡಾಕ್ಟರ್ಸ್ ಅನ್ನು ಹಾಕುತ್ತಾರೆ. ಸರ್ಜನಿಗೆ ಡೆಂಟಿಸ್ಟ್ ಹಾಕುತ್ತಾರೆ. ಅದು ಏಕೆಂದರೆ, ಅದು ಒತ್ತಡ ಬಂದಿರುತ್ತದೆ. ಇದು ನಾನು ಆರೋಗ್ಯ ಮಂತ್ರಿಯಾಗಿದ್ದಾಗಲೂ ಅನುಭವಿಸಿದ್ದೇನೆ. ಇದರ ಬಗ್ಗೆ ಈ ಸದನದಲ್ಲಿ ನಾವೆಲ್ಲರೂ ಸೇರಿ ತೀರ್ಮಾನ ಮಾಡತಕ್ಕದ್ದು ಒಳ್ಳೆಯದೆಂದು ನನಗನಿಸುತ್ತದೆ.

ಕೊನೇ ಪಕ್ಷ ಆರೋಗ್ಯ ಇಲಾಖೆಯ ವರ್ಗಾವಣೆಗಳಲ್ಲಿ ನಾವು ಕೈ ಹಾಕಬಾರದು. ಆರೋಗ್ಯ ಮಂತ್ರಿಗಳಿಗೆ ನಾವು ಸಹಕಾರವನ್ನು ಕೊಡಬೇಕಾಗುತ್ತದೆ. ಡಾಕ್ಟರ್‌ಗಳ ವರ್ಗಾವಣೆಯ ಬಗ್ಗೆ ನೀತಿ ನಿಯಮಗಳನ್ನು ಗಾಳಿಗೆ ತೂರಿದ್ದೇವೆ ಯಾವ ವೈದ್ಯರನ್ನು ಎಲ್ಲಿಗೆ ಹಾಕುವುದು ಎನ್ನುವುದು ಗೊತ್ತಾಗುವುದಿಲ್ಲ. ನೀವು ಅಧಿಕಾರದಲ್ಲಿದ್ದರೆ ನಿಮ್ಮ ಹಿಂದೆ ಬರುತ್ತಾರೆ. ನಾವು ಅಧಿಕಾರದಲ್ಲಿದ್ದರೆ ನಮ್ಮ ಹಿಂದೆ ಬರುತ್ತಾರೆ. ಮತ್ತೊಬ್ಬರು ಅಧಿಕಾರಕ್ಕೆ ಬಂದರೆ ಆಗ ನಮಗಿಬ್ಬರಿಗೂ ಪಂಗನಾಮ ಹಾಕುತ್ತಾರೆ. ನಿಮ್ಮ ಕಾರ್ಯದರ್ಶಿಗಳು ಈ ಜಾತಿಯವರು, ಆದಕ್ಕೆ ನಮಗೆ ಅನ್ಯಾಯ ಮಾಡಿದರು ಎಂದು ಜಾತಿಯ ಬಗ್ಗೆ ಬೇರೆಯವರು ಹೇಳುತ್ತಾರೆ. ಇದೇ ಕಾರಣದಿಂದ ನಿಮ್ಮ ನಿರ್ದೇಶಕರು ಅನ್ಯಾಯ ಮಾಡಿದರು ಎಂದು ಹೇಳುತ್ತಾರೆ. ಈ ಜಾತಿ ಪದ್ಧತಿಯೇ ಈ ವರ್ಗಾವಣೆಗಳನ್ನು ಹಾಳು ಮಾಡಿರತಕ್ಕಂಥಾದ್ದು. ಮತ್ತು ಹಣ ಕೂಡ ಈ ಕೆಲಸವನ್ನು ಮಾಡಿದೆ. ಕ್ಯಾಟಗರೈಸೇಷನ್ ಆಫ್ ಪೋಸ್ಟ್ಸ್ ಎಂದು ಏನು ಇದೆ ಇದರ ಪ್ರಿನ್ಸಿಪಾಲ್ ಅನ್ನು ಸರಿಯಾಗಿ ಅನುಸರಿಸದೇ ಹೋದರೇ ರಾಜ್ಯದ ಜನತೆಯ ಆರೋಗ್ಯವನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲವೆಂದು ನಾನು ತಿಳಿದಿದ್ದೇನೆ. ನಿಮಗೆ ೧೮೦ ಜನ ಶಾಸಕರ ಬೆಂಬಲ ನಿಮಗಿದೆ. ಆದ್ದರಿಂದ ಕೆಲಸವನ್ನು ಈ ವರ್ಷವೇ ಮಾಡಬೇಕು. ಇಲ್ಲದಿದ್ದರೆ ಮುಂದೆ ಇದನ್ನು ಮಾಡುವುದಕ್ಕೆ ನಿಮಗೆ ಆಗುವುದಿಲ್ಲ ನಾವು ೫೯ ಜನ ಗೆದ್ದು ಬಂದಾಗ ಏನು ಕೆಲಸ ಮಾಡಿದೆವು ಅದನ್ನು ೧೯೮೭-೮೮ರಲ್ಲಿ ನಾವು ಮಾಡುವುದಕ್ಕಾಗಲಿಲ್ಲ, ಆ ಕಾಲಕ್ಕೆ ನಮ್ಮವರೆ ನಮ್ಮನ್ನು ಹಾಳು ಮಾಡಿದರು. ನಮ್ಮವರೇ ನಮ್ಮ ಕಾಲನ್ನು ಎಳೆಯಲು ಪ್ರಾರಂಭ ಮಾಡಿದರು. ಆ ಕೆಲಸ ನಿಮ್ಮಲ್ಲೂ ಆಗುವುದಕ್ಕೆ ಮೊದಲೇ ಅಂದರೆ ಈ ವರ್ಷವೇ ಮಾಡಬೇಕೆಂದು ಹೇಳುತ್ತೇನೆ ನಾನು ತಮ್ಮ ಬಗ್ಗೆ ಹೇಳುತ್ತಿಲ್ಲ ನೀವು ಎಂತಹವರು ಎಂಬುದು ನನಗೂ ಗೊತ್ತಿದೆ. ನಾನು ಜವಾಬ್ದಾರಿ ಸ್ಥಾನದಿಂದ ಮಾತನಾಡುವಾಗ ನಿಮ್ಮ ಮೇಲೆ ಮಾತನಾಡಿದರೆ ತಪ್ಪಾಗುತ್ತದೆ. ಯಾರೋ ಬೀದಿಯಲ್ಲಿ ಹೋಗುವವರು ಈ ಮಾತನ್ನು ಹೇಳಬಹುದು. ಆದರೆ ರಾಜ್ಯದ ಜನತೆಯ ಆರೋಗ್ಯದ ದೃಷ್ಟಿಯಿಂದ ಯಾವ ಡಾಕ್ಟರ್ ಅನ್ನು ಎಲ್ಲಿಗೆ ನೇಮಕ ಮಾಡಬೇಕೋ ಅಲ್ಲಿಗೆ ಅವರನ್ನು ನೇಮಕ ಮಾಡಿಲ್ಲ. ಈ ವಿಚಾರದ ತಪ್ಪಾಗಿದೆ ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ೮ನೇ ಫೈನಾನ್ಸ್ ಕಮೀಷನ್ ಅವರು ಪೋಸ್ಟ್‌ಗಳನ್ನು ಮಾಡುವಾಗ ನಾವು ಅನೇಕ ಸವಲತ್ತುಗಳನ್ನು ಕಳೆದುಕೊಂಡಿದ್ದೇವೆ. ಮಹಾರಾಷ್ಟ್ರ, ಗುಜರಾತ್,

ರಾಜಸ್ಥಾನ್ ಸರಕಾರದವರು ಹೀಗೆ ನಾಲ್ಕೈದು ಸರ್ಕಾರದವರು ೮ನೇ ಫೈನಾನ್ಸ್ ಕಮಿಷನ್‌ನಿಂದ ಹಣವನ್ನು ಪಡೆದು ಆ ರಾಜ್ಯಗಳ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡತಕ್ಕಂತಹ ವೈದ್ಯರುಗಳಿಗೆ ದಾದಿಯರುಗಳಿಗೆ ವಿಶೇಷವಾದಂತಹ ಭತ್ಯವನ್ನು ಕೊಟ್ಟಿದ್ದಾರೆ, ಅಲ್ಲಿರುವಂತಹ ಬಿಲ್ಡಿಂಗ್ ಇನ್‌ಫ್ರಾಸ್ಟ್ರಕ್ಚರ್ ಅನ್ನು ಇಂಪ್ರೂವ್ ಮಾಡಿದ್ದಾರೆ. ಜೊತೆಗೆ ನಾನ್‌ಪ್ರಾಕ್ಟೀಸಿಂಗ್ ಅಲೋಯನ್ಸ್ ಕೊಡುವುದಕ್ಕೂ ಕೂಡ ಪ್ರಯತ್ನ ಮಾಡಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಇದು ನಿಜಕ್ಕೂ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯವೆಂದು ಹೇಳುತ್ತೇನೆ. ಆದ್ದರಿಂದ ಈ ವಿಚಾರದಲ್ಲಿ ತಾವು ಮುಖ್ಯ ಮಂತ್ರಿಗಳಿಗೆ ತಿಳಿಸಿ ಸಚಿವ ಸಂಪುಟದ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಿ ಈ ೪ ರಾಜ್ಯಗಳಲ್ಲಿ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದಾರೆ ಅದರ ಬಗ್ಗೆ ಸೂಕ್ತವಾದಂತಹ ಮಾಹಿತಿಯನ್ನು ತರಿಸಿ, ಈ ವರ್ಷ ಇಲ್ಲೂ ಅದೇ ರೀತಿ ಮಾಡುವುದು ಅವಶ್ಯಕತೆ ಇದೆ ಎಂದು ನಾನಾದರೂ ತಿಳಿದಿದ್ದೇನೆ. ಇನ್ನು ಈ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಮತ್ತು ಪ್ರೈಮರಿ ಯೂನಿಟ್‌ಗಳ ಕೆಳಗಡೆ ಇರತಕ್ಕಂತಹ ಸಬ್ ಸೆಂಟರ್ಸ್‌ಗಳಿಗೆ ಲೆಕ್ಕಾಚಾರದ ಪ್ರಕಾರ ಮೈದಾನ ಪ್ರದೇಶದಲ್ಲಿ ೫ ಸಾವಿರ ಜನಸಂಖ್ಯೆಗೆ ಒಬ್ಬ ಎಎನ್‌ಎಮ್ ಅನ್ನು ಹಾಕಬೇಕು. ಟ್ರೈಬಲ್ ಏರಿಯಾದಲ್ಲಿ ೩ ಸಾವಿರ ಜನರಿಗೆ ಒಬ್ಬರನ್ನು ಹಾಕಬೇಕೆಂದು ನಿಯಮ ಇದೆ. ಆದರಲ್ಲಿ ೭೫ ಪರ್ಸೆಂಟ್ ಫಿಲ್ ಅಪ್ ಆಗಿರಬಹುದು. ಇನ್ನೂ ೨೫ ಪರ್ಸೆಂಟ್ ಆಗಿಲ್ಲ. ಆದರೆ ನಮ್ಮ ಎ.ಎನ್.ಎಂ.ಗಳು ಹಳ್ಳಿಯಲ್ಲಿ ಇರುವುದೇ ಇಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಎಎನ್‌ಎಮ್.ಗೆ ಕೊಡತಕ್ಕಂತಹ ಔಷಧಿ ಎಷ್ಟು ಎಂದರೆ ೫ ಸಾವಿರ ಜನಸಂಖ್ಯೆ ಇದ್ದರೆ ೨ ಸಾವಿರ ರೂಪಾಯಿಯ ಬೆಲೆ ಬಾಳುವ ಔಷಧಿಯನ್ನು ಒಂದು ವರ್ಷಕ್ಕೆಂದು ಕೊಡುತ್ತೇವೆ. ಅದನ್ನು ಸರಕಾರದ ಮೆಡಿಕಲ್ ಸ್ಟೋರ್ಸ್‌ನಿಂದ ಈಗ ಕಳಿಸಿ ಕೊಡುತ್ತಾರೋ ಅಥವಾ ಜಿಲ್ಲಾ ಪರಿಷತ್ತು ಕಡೆಯಿಂದ ಕಳಿಸಲಾಗುತ್ತಿದೆಯೋ ಎಂಬುದು ನನಗೆ ಸರಿಯಾಗಿ ಗೊತ್ತಿಲ್ಲ. ಇದನ್ನು ತಾವು ಕ್ಲಾರಿಫೈ ಮಾಡಬೇಕು. ಆದರೆ ಇದು ಅಲ್ಲಿಗೆ ವರ್ಷದ ಕೊನೆಯಲ್ಲಿ ಅಂದರೆ ಮಾರ್ಚಿ ತಿಂಗಳಲ್ಲಿ ಹೋಗುತ್ತದೆ.

ಹೀಗೆ ಪ್ರತಿ ವರ್ಷವೂ ಮಾರ್ಚಿ ತಿಂಗಳಲ್ಲಿ ಹೋಗುತ್ತದೆ. ಒಂದೊಂದು ಜಿಲ್ಲೆಗೆ ಒಂದೊಂದು ತಿಂಗಳಲ್ಲಿ ಕೊಡುತ್ತೇವೆಂದು ಹೇಳುತ್ತಾರೆ. ಈ ಔಷಧಿಗಳನ್ನು ಕೊಂಡಮೇಲೆ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಲ್ಲಿ ೧ ವರ್ಷಕಾಲ ಇಟ್ಟರೆ ಅದು ಔಟ್ ಡೇಟೆಡ್ ಆಗುತ್ತದೋ ಮತ್ತೊಂದು ಆಗುತ್ತದೋ ಎಂಬುದನ್ನು ನೀವೇ ನೋಡಬೇಕು. ಆದರೆ ನೀವು ಕೊಂಡುಕೊಳ್ಳತಕ್ಕ ಡ್ರಗ್ಸ್‌ನ್ನು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗಳಿಗೆ ಕಳುಹಿಸಿ ಕೊಡುವ ಕೆಲಸ ಮಾಡಬೇಕು.

ಇನ್ನು ಎ. ಎನ್. ಎಂ. ಗಳು ಬಹಳ ಕೆಲಸವನ್ನು ಮಾಡಬೇಕಾಗುತ್ತದೆ ಅವರು ಫ್ಯಾಮಿಲಿ ಪ್ಲಾನಿಂಗ್ ಕೆಲಸ, ಆ ಕೆಲಸ, ಈ ಕೆಲಸ ಅಂತ ಬಹಳಷ್ಟನ್ನು ಮಾಡಬೇಕಾಗುತ್ತದೆ. ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಹಳ್ಳಿಗಳಲ್ಲಿ ಕಪಲ್ ಸರ್ವೆ ರಿಜಿಸ್ಟರ್ ಎಂದು ಇರುತ್ತದೆ. ನನಗೆ ತಿಳಿದಿರುವಂತೆ ಬಹಳಷ್ಟು ಹಳ್ಳಿಗಳಲ್ಲಿ ಈ ರಿಜಿಸ್ಟರ್ ಇರುವುದಿಲ್ಲ ಅಲ್ಲಿ ಸುಮ್ಮನೆ ಒಂದು ರೆಕಾರ್ಡ್‌ನ್ನು ಇಟ್ಟಿರುತ್ತಾರೆ. ಉತ್ತರ ಕರ್ನಾಟಕದ ಆಸ್ಪತ್ರೆಗಳಲ್ಲಿ ಇದು ವಿಶೇಷವಾಗಿರುತ್ತದೆ. ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಂಡಿರುವವರೂ ಕೂಡ ತಮಗೆ ೩-೪ ಮಕ್ಕಳಿದ್ದರೂ ಸಹಿತ ಇದನ್ನು ಮಾಡಿಸಿ ಕೊಂಡಿದ್ದೇವೆಂದು ಆ ರಿಜಿಸ್ಟರ್‌ನಲ್ಲಿ ಇರುತ್ತದೆ. ಕೇಳಿದರೆ ನಾವೂ ಕೂಡ ಎಲಿಜಬಲ್ ಕಪಲ್ಸ್ ಎಂದು ಹೇಳುತ್ತಾರೆ. ಅಲ್ಲಿ ಈ ರಿಜಿಸ್ಟರ್‌ನಲ್ಲಿ ಅಪ್ ಟುಡೇಟ್ ಮಾಡಿರುವುದಿಲ್ಲ. ಆಸ್ಪತ್ರೆಯವರನ್ನು ಕೇಳಿದರೆ ನಮಗೆ ಪುಸ್ತಕ ಇಲ್ಲ. ಪೆನ್ಸಿಲ್ ಇಲ್ಲ ಎಂದು ಹೇಳುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ತಾವು ಈ ವಿಚಾರದಲ್ಲಿ ಹೆಚ್ಚಿನ ಗಮನವನ್ನು ಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ರೂರಲ್ ಡೆಲಿವರಿ ಸಿಸ್ಟಂನ್ನು ಸುಧಾರಣೆ ಮಾಡಬೇಕೆಂಬ ಮನಸ್ಸಿದ್ದರೆ. ಆಸೆ ಇದ್ದರೆ ದಯವಿಟ್ಟು ತಾವು ಇದನ್ನು ಮಾಡ ಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಚಾರವನ್ನು ಹೇಳಬೇಕೆಂದರೆ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನವರು ಮೊದಲು ಸುಮಾರು ೧೬-೧೭ ಕೋಟಿ ರೂಪಾಯಿಗಳ ಔಷಧಿಗಳನ್ನು ಪರ್ಚೇಸ್ ಮಾಡುತ್ತಿದ್ದರು. ಆದರೆ ಈಗ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಕೇವಲ ೫ ಕೋಟಿ ರೂಪಾಯಿ ಗಳಷ್ಟು ಡ್ರಗ್ಸ್‌ನ್ನು ಮಾತ್ರ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನವರು ಕೊಂಡುಕೊಳ್ಳುತ್ತಾರೆ. ಇನ್ನು ಉಳಿದುದನ್ನು ಜಿಲ್ಲಾ ಪರಿಷತ್ತಿನವರೇ ಕೊಂಡು ಆಸ್ಪತ್ರೆಗಳಿಗೆ ಸಪ್ಲೈ ಮಾಡುತ್ತಿದ್ದಾರೆ. ಈ ಡ್ರಗ್ಸ್‌ನ್ನು ಸಪ್ಲೈ ಮಾಡುವವರಲ್ಲಿ ಕೇವಲ ೫-೬ ಜನ ಮಾತ್ರ ಇದ್ದಾರೆ. ಇವರು ಬೇರೆ ಬೇರೆಯವರ ಹೆಸರಿನಲ್ಲಿ ಡ್ರಗ್ಸ್‌ನ್ನು ಸಪ್ಲೈ ಮಾಡುತ್ತಾರೆ ಆ ಫರ್ಮ್‌ನಲ್ಲಿ ಯಾರಿದ್ದಾರೆ ಎಂದರೆ ಹಿಂದೆ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳೇ ಇದ್ದಾರೆ. ಈ ಫರ್ಮ್‌ನವರು ಅವರನ್ನೇ ನೇಮಕ ಮಾಡಿಕೊಂಡಿದ್ದಾರೆ. ಅಲ್ಲಿಗೆ ಬೇರೆಯವರು ಹೋಗಿ ಸೇರಿಕೊಳ್ಳುವುದಕ್ಕಾಗುವುದಿಲ್ಲ. ಈ ವಿಚಾರ

ನಿಮಗೂ ಗೊತ್ತಾಗುವುದಿಲ್ಲ ನಮಗೂ ಗೊತ್ತಾಗುವುದಿಲ್ಲ. ನಾನು ಹಿಂದೆ ಈ ಇಲಾಖೆಗೆ ೧೮ ತಿಂಗಳ ಕಾಲ ಮಂತ್ರಿಯಾಗಿದ್ದಾಗಲೂ ಸಹ ಇದು ನನಗೆ ಅರ್ಥವಾಗಿರಲಿಲ್ಲ. ನಾನು ಮಂತ್ರಿಗಿರಿಯನ್ನು ಬಿಟ್ಟುಬಂದಮೇಲೆ ಆ ಫರ್ಮ್‌ಗಳಲ್ಲಿ ಇಂಥಿಂಥವರೆಲ್ಲಾ ಇದ್ದಾರೆಂಬುದು ಅರ್ಥವಾಯಿತು. ಆ ಅಧಿಕಾರಿಗಳಿಗೆ ಎಲ್ಲಾ ವಿಚಾರಗಳೂ ಚೆನ್ನಾಗಿ ಗೊತ್ತಿರುತ್ತದೆ. ಟೆಂಡರನ್ನು ಯಾವಾಗ ಕರೆಯುತ್ತಾರೆ, ಎಕ್ಸ್‌ಪರ್ಟ್ಸ್ ಕಮಿಟಿಯಲ್ಲಿ ಯಾರು ಇರುತ್ತಾರೆ, ಹೈಪವರ್ ಕಮಿಟಿಯಲ್ಲಿ ಯಾರು ಇರುತ್ತಾರೆ ಎಂಬುದೆಲ್ಲಾ ಗೊತ್ತಿರುತ್ತದೆ. ಇದರ ಜೊತೆಗೆ ಇನ್ನೊಂದು ಏನಾಗುತ್ತದೆಂದರೆ, ನಮ್ಮ ಸರ್ಕಾರದ ಒಂದು ನೀತಿ ಅವರಿಗೆ ಅನುಕೂಲವಾಗಿದೆ. ಚೀಪೆಸ್ಟ್ ಡ್ರಗ್ಸ್‌ನು ಪರ್ಚೇಸ್ ಮಾಡಬೇಕೆಂದು ಹೈ ಪವರ್ ಕಮಿಟಿಯವರು ಎಕ್ಸ್‌ಪರ್ಟ್ಸ್ ಕಮಿಟಿಯವರು ಸಲಹೆ ಮಾಡಿದ್ದಾರೆ. ಇದರ ಬಗ್ಗೆ ಒಂದು ಸರ್ಕಾರೀ ಆದೇಶ ಕೂಡ ಇದೆ. ನಾನು ತಮಗೆ ಒತ್ತಾಯ ಮಾಡಿ ಹೇಳುತ್ತೇನೆ. ದಯವಿಟ್ಟು ಈ ಆದೇಶವನ್ನು ಮೊದಲು ನಿಲ್ಲಿಸಿ, ಇದನ್ನು ಮೊದಲು ರದ್ದುಮಾಡಿ. ನಾವಾದರೂ ಚೀಪೆಸ್ಟ್ ಡ್ರಗ್ಸ್‌ನ್ನು ಏತಕ್ಕೆ ಪರ್ಚೇಸ್ ಮಾಡಬೇಕು? ನಮ್ಮ ರಾಜ್ಯದಲ್ಲಿರತಕ್ಕ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಕೊಡತಕ್ಕ ಔಷಧಿಗಳ ಗುಣಮಟ್ಟ ಬಹಳ ಕೆಳಮಟ್ಟದಲ್ಲಿದೆ...

ಶ್ರೀಮತಿ ಮನೋರಮಾ ಮಧ್ವರಾಜ್.—ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾದಂತೆ ಔಷಧಿಗಳನ್ನು ಪರ್ಚೇಸ್ ಮಾಡತಕ್ಕ ಕ್ರಮ ಏನಿದೆ ಅದರ ಪ್ರಕಾರ ೭೫ ಪರ್ಸೆಂಟ್‌ನ್ನು ಪಬ್ಲಿಕ್ ಸೆಕ್ಟಾರ್‌ನಿಂದ ಪರ್ಚೇಸ್ ಮಾಡಬೇಕು, ಅವರಲ್ಲಿ ಇಲ್ಲದೇ ಇರುವುದನ್ನು ಪ್ರೈವೇಟ್ ಸೆಕ್ಟಾರ್‌ನಲ್ಲಿ ಖರೀದಿ ಮಾಡ ಬೇಕೆಂದು ನಾವು ಒಂದು ಆದೇಶವನ್ನು ಸಹ ಹೊರಡಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಪರ್‌ಫಾರ್ಮೆನ್ಸ್ ಬಜೆಟ್‌ನ್ನು ನೋಡಿದ್ದೇನೆ. ಅದರಲ್ಲಿ ರೀ ಪ್ಯಾಕಿಂಗ್ ಏಜೆಂಟ್ಸ್ ಎಂದು ಇದ್ದಾರೆ...

ಶ್ರೀಮತಿ ಮನೋರಮಾ ಮಧ್ವರಾಜ್.—ನಮಗೆ ಇದು ಹೊಸದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಆದುದರಿಂದಲೇ ನಾನು ಹೇಳುತ್ತಿರುವುದು. ನಿಮಗೆ ಇದೊಂದೇ ಹೊಸದೇನೂ ಅಲ್ಲ. ಇನ್ನೂ ಬಹಳ ವಿಷಯಗಳು ಹೊಸವು ಇವೆ. ನಿಮ್ಮ ಕಾರ್ಯದರ್ಶಿಯವರಿಗೂ ಹೊಸದು. ಆರೋಗ್ಯ ಇಲಾಖೆಯ ನಿರ್ದೇಶಕರು ಹೊಸದಾಗಿ ಬಂದಿದ್ದಾರೆ. ಅವರು ಬಹಳ ದಿನಗಳ ಕಾಲ ಬೆಳಗಾಂನಲ್ಲಿದ್ದರೆಂದು ಕಾಣುತ್ತದೆ. ಅವರಿಗೂ ಇದು ಹೊಸದೋ, ಏನೋ ಗೊತ್ತಿಲ್ಲ. ಆದರೆ ನೀವು ಮಾತ್ರ ಇದು ನನಗೆ ಹೊಸದು ಎಂದು ಪ್ರಾಮಾಣಿಕತೆಯಿಂದ ಒಪ್ಪಿಕೊಂಡಿದ್ದೀರಿ. ನಾವು ಕೊಂಡುಕೊಳ್ಳತಕ್ಕ ಡ್ರಗ್ಸ್ ಏನಿವೆ ಇದನ್ನು ಟೆಸ್ಟ್ ಮಾಡಿ ಸರಿಯಾಗಿದೆ ಅಥವಾ ಇಲ್ಲ ಎಂದು ಹೇಳತಕ್ಕಂಥ ಡ್ರಗ್ಸ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಏನಿದೆ, ಅದು ಸಂಪೂರ್ಣವಾಗಿ ವಿಫಲವಾಗಿದೆ. ಅವರ ಫರ್‌ಫಾರ್ಮೆನ್ಸ್‌ನ್ನು ನಾನು ನೋಡಿದ್ದೇನೆ. ತಾವು ರೆಕಾರ್ಡ್ಸ್‌ನ್ನು ತೆಗೆದುನೋಡಿ. ಅನಂತರ ನಾನು ತಮಗೆ ಹೇಳುತ್ತೇನೆ. ಇವತ್ತು ಒಂದು ಮಾತಿನಲ್ಲಿ ಹೇಳುವುದಾದರೆ ನಾವು ರೋಗಗಳಿಗೆ ವಿಷವನ್ನು ಕೊಡುತ್ತಿದ್ದೇವೇನೋ ಎಂದು ನನಗೆ ಅನಿಸುತ್ತದೆ. ನಾವು ರೋಗಿಗಳಿಗೆ ಕೊಡತಕ್ಕ ಔಷಧಿಗಳ ಗುಣಮಟ್ಟ ಬಹಳ ಕಡಿಮೆ ಇದೆ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಿಂದ ಕೊಂಡು ಕೊಳ್ಳುವುದನ್ನು ದಯವಿಟ್ಟು ಬಿಡಿ, ನೀವು ಏತಕ್ಕೆ ಹೆದರುತ್ತೀರಿ. ನೀವು ಕಮಿಷನ್ ತೆಗೆದು ಕೊಂಡಿದ್ದೀರೆಂದು ಯಾರಾದರೂ ಹೇಳುತ್ತಾರೆ ಎಂದು ನೀವು ಹೆದರುತ್ತೀರಾ? ಇದು ರಾಜ್ಯದ ೪ ಕೋಟಿ ಜನರ ಜೀವನ್ಮರಣದ ಪ್ರಶ್ನೆ ತಮಗೆ ಹೇಳುತ್ತೇನೆ. ನೀವು ಡ್ರಗ್ಸ್‌ನ್ನು ನೇರವಾಗಿ ಡ್ರಗ್ ಮ್ಯಾನುಫ್ಯಾಕ್ಚರರ್ಸ್‌ನಿಂದಲೇ ಖರೀದಿ ಮಾಡಿ. ರೀ ಪ್ಯಾಕಿಂಗ್ ಏಜೆಂಟ್ಸ್ ಉತ್ತರ ಇಂಡಿಯಾದಿಂದ ಬಹಳ ಜನ ಬಂದಿದ್ದಾರೆ. ಸಬ್-ಸ್ಟ್ಯಾಂಡರ್ಡ್ ಡ್ರಗ್ಸ್‌ನ್ನು ಮಾಡುವವರದ್ದೇ ಒಂದು ದೊಡ್ಡ ಸ್ಕ್ಯಾಂಡಲ್ ಇದೆ. ಬಹಳಷ್ಟು ಕಡೆಗಳಲ್ಲಿ ನಮ್ಮಲ್ಲಿ ಕಾರ್ಖಾನೆಗಳಿವೆ ಎಂದು ಬೋರ್ಡ್‌ಗಳನ್ನು ಹಾಕಿ ಕೊಂಡಿರುತ್ತಾರೆ.

ಒಳಗಡೆ ಹೋಗಿ ನೋಡಿದರೆ ಏನೂ ಸಹಿತ ಇರುವುದಿಲ್ಲ ಅವರು ಎಲ್ಲಿಂದಲೊ ತೆಗೆದುಕೊಂಡು ಬರುತ್ತಾರೆ. ಆ ಬಿಲ್‌ಗಳನ್ನು ಚೆನ್ನಾಗಿ ಮಾಡಲಿಕ್ಕೆ ಖೋಟಾ ನೋಟು ತಯಾರುಮಾಡಲು ಅಚ್ಚು ಗಳನ್ನು ಇಟ್ಟುಕೊಂಡಿರುವಂತೆ ಆ ರೀತಿ ಅಚ್ಚುಗಳನ್ನು ಇಟ್ಟುಕೊಂಡಿರುತ್ತಾರೆ, ನಿಮಗೆ ಯಾವ ಕಂಪನಿಯದು ಬೇಕು. ಪೌಡರ್‌ಬೇಕೋ ಮಾತ್ರೆಗಳು ಬೇಕೋ ಅದನ್ನು ಮಾಡಿ ವಿಷವನ್ನು ಹಾಕಿ ನಮಗೆ ಕಳುಹಿಸಿಕೊಡುತ್ತಾರೆ. ಆದ್ದರಿಂದ ದಯವಿಟ್ಟು ಈ ರಿಪ್ಯಾಕಿಂಗ್ ಏಜೆಂಟ್ ಸಿಸ್ಟಮನ್ನು ನಿಲ್ಲಿಸಬೇಕು. ಈ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಲ್ಲಿ ಒಂದು ವರ್ಷಕ್ಕೆ ೫ ಕೋಟಿ ರೂಪಾಯಿ ಗಳಷ್ಟು ಔಷಧಿಗಳನ್ನು ಪರ್ಚೇಸ್ ಮಾಡುತ್ತಾರೆ. ಈ ವರ್ಷದ ಫರ್‌ಫಾರ್ಮೆನ್ಸ್ ಬಜೆಟ್ ಅನ್ನು ನಾನು ಈಗ ಓದುತ್ತಿದ್ದೇನೆ. ೧೯೮೯–೯೦ರಲ್ಲಿ ಆಯವ್ಯಯ ೨೦೦ ಕೋಟಿ ೬೩ ಲಕ್ಷದ ೬೪ ಸಾವಿರ

ರೂಪಾಯಿಗಳು ಡಿಸೆಂಬರ್ ೧೯೮೦ರ ವರೆಗೆ ಖರ್ಚಾಗಿರುವುದು ಅಂದರೆ ೯ ತಿಂಗಳಲ್ಲಿ ಅಂದರೆ ಮಾರ್ಚ್, ಏಪ್ರಿಲ್ ಮೇ, ಜೂನ್, ಜುಲೈ ಆಗಸ್ಟ್ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಈ ೯ ತಿಂಗಳಲ್ಲಿ ೨ ಕೋಟಿ ೨೬ ಲಕ್ಷ ಅಂದರೆ ಇನ್ನೂ ೧ ಕೋಟಿ ೫೦ ಲಕ್ಷ ಖರ್ಚಾಗಿಲ್ಲ. ಇದು ಇನ್ನು ಮೂರು ತಿಂಗಳಲ್ಲಿ ಬೇಗ ಖರ್ಚಾಗುತ್ತದೆ ದಯವಿಟ್ಟು ಹೇಳಿ ಇದಕ್ಕೆಲ್ಲ ಒಂದು ಅಂಡರ್‌ಸ್ಟ್ಯಾಂಡಿಂಗ್ಸ್ ಇರುತ್ತದೆ. ನೀವು ಇಲಾಖೆಯ ಮಂತ್ರಿಗಳಾಗಿ ದೈವವಶಾತ್ ೨-೩ ವರ್ಷಗಳು ಉಳಿದರೆ ತಮಗೆ ಗೊತ್ತಾಗುತ್ತದೆ ವಿಷಯ ಇಲ್ಲದಿದ್ದರೇ ತಿಳಿಯಲು ಸಾಧ್ಯವೇ ಇಲ್ಲ. ನಂತರ ಇನ್ಯಾರೋ ಬರುತ್ತಾರೆ. ಅವರು ಇದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಪೋರ್ಟ್ ಫೋಲಿಯೋ ಬದಲಾವಣೆ ಆಗಿರುತ್ತದೆ. ಏನು ಮಾಡುತ್ತೀರಿ, ಪ್ರಜಾಪ್ರಭುತ್ವದ ನಮ್ಮ ವ್ಯವಸ್ಥೆ ಆ ರೀತಿ ಇರುತ್ತದೆ. ಅಸ್ಥಿರತಕ್ಕಂಥ ಜನರಿಗೂ ಈ ಏಜೆಂಟ್ಸ್‌ಗೂ ಅವರಿಗೆ ಒಂದು ರೀತಿಯ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ನೀವು ಒಂದು ಕೆಲಸ ಮಾಡಿ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಲ್ಲಿ ಒಬ್ಬ ಅಟೆಂಡರ್ ಇರುತ್ತಾನೆ. ಅವನಿಗೆ ಇರುವಷ್ಟು ಪವರ್ ಒಬ್ಬ ಮಂತ್ರಿಗೆ ಇರುವುದಿಲ್ಲ ೫-೨೦ ವರ್ಷಗಳ ಕಾಲ ಅವನು ಅಲ್ಲಿಯೇ ಕುಳಿತುಕೊಂಡಿರುತ್ತಾನೆ. ನಿಮಗೆವರ್ಗಾವಣೆಯ ಮಾತನಾಡಿದರೆ ತೀರವೈಯಕ್ತಿಕವಾಗಿ ತೆಗೆದು ಕೊಳ್ಳುತ್ತೀರಿ. ಆ ರೀತಿ ತೆಗೆದುಕೊಳ್ಳಬೇಡಿ ನೀವು ತಪ್ಪು ಮಾಡದಿರಬಹುದು ಆದರೆ ಕೆಲವು ಗ್ರೂಪ್ ಕಂಪೆನೀಸ್ ಆ ರೀತಿಕೆಲಸ ಮಾಡುತ್ತಿವೆ ಒಬ್ಬ ಅಟೆಂಡರನ್ನು ಅಲ್ಲಿಂದ ನಮ್ಮ ಡೈರೆಕ್ಟರ್‌ರವರೂತೆಗೆಯು ವುದಕ್ಕೆ ಸಾಧ್ಯವಾಗುವುದಿಲ್ಲ. ಮುಖ್ಯವಾಗಿ ನಾವು ರಾಜ್ಯದ ಜನತೆಯ ಆರೋಗ್ಯದ ಕಡೆಗೆ ಗಮನ ಕೊಡೋಣ ಈ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನ್ನು ಸರಿಮಾಡುವುದಕ್ಕೆ ದಿಟ್ಟವಾದ ಹೆಜ್ಜೆಯನ್ನಿಡ ಬೇಕು. ಈ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರು ಇವನ್ನೆಲ್ಲ ಟೆಸ್ಟ್ ಮಾಡುತ್ತಾರೆ. ಡ್ರಗ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ ಪರ್‌ಫಾರ್ಮೆನ್ಸನ್ನು ತಾವು ಪುಸ್ತಕದಲ್ಲಿ ತೆಗೆದು ಓದಿ ಡ್ರಗ್ ಇನ್‌ಸ್ಪೆಕ್ಟರ್‌ಗಳು ಏನು ಮಾಡುತ್ತಾರೆ. ಎಷ್ಟು ಶಾಂಪಲ್‌ಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಷ್ಟು ಟೆಸ್ಟ್ ಮಾಡಿದ್ದಾರೆ, ಎಷ್ಟು ಕೇಸ್‌ಗಳನ್ನು ಈ ಇಲಾಖೆ ಹುಟ್ಟಿದ ಮೇಲೆ ಹಾಕಿದ್ದಾರೆಂಬುದು ನಿಮಗೆ ಗೊತ್ತಾಗುತ್ತದೆ. ಇವರು ಏನು ಕೆಲಸವನ್ನೇ ಮಾಡುವುದಿಲ್ಲ. ಇವರು ರೀಪ್ಯಾಕಿಂಗ್ ಏಜೆಂಟ್ಸ್ ಜೊತೆಯಲ್ಲಿ ಶಾಮೀಲಾಗಿ ಕೆಲಸ ಮಾಡುತ್ತಿರುತ್ತಾರೆ. ಇದು ಸತತವಾಗಿ ನಡೆದುಕೊಂಡು ಬಂದಿರತಕ್ಕಂಥದ್ದು. ನೀವು ಬೇಕಾದರೆ ತನಿಖೆ ಮಾಡಿ ಈಗ ಏನೋ ಜಿಲ್ಲಾಪರಿಷತ್‌ಗಳಿಗೆ ಬಹಳಷ್ಟು ಅಧಿಕಾರವನ್ನು ಕೊಟ್ಟು ಬಿಟ್ಟಿದ್ದೇವೆ ಬಹಳಷ್ಟು ಪತ್ರಿಕೆಗಳಲ್ಲಿ ಬರುತ್ತಿದೆ, ಡಿ. ಎಚ್. ಓ. ಗಳು ಸರ್ವಸ್ವೆಚ್ಛೆಯಾಗಿ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರ ಗುಣಮಟ್ಟ ಅಲ್ಲ, ಆದರೆ ಹಣದ ದುರುಪಯೋಗವಾಗಿದೆ ಎಂದು ಪತ್ರಿಕೆಗಳಲ್ಲಿ ಬರುತ್ತಿದೆ. ಹಣದ ದುರುಪಯೋಗವೆಂದರೆ ಗುಣಮಟ್ಟ ಕಡಿಮೆಯಾಗಿದೆ ಎಂದು. ಅಲ್ಲಿ ಗುಣಮಟ್ಟ ಕಡಿಮೆಯಾಗಿದೆ ಎಂದು ಹೇಳಿದರೆ ಜನರಿಗೆ ನಾವು ವಿಷವನ್ನು ಕೊಡುತ್ತಿದ್ದೇವೆಂದು ಅವರ ಅರ್ಥ. ಈ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಪ್ರತಿಯೊಂದು ಜಿಲ್ಲೆಯಲ್ಲಿ ಕೆಲಸಮಾಡುವಂತೆ ಮಾಡಿ. ಈ ಜಿಲ್ಲಾಪರಿಷತ್‌ನವರು ಏನು ಔಷಧಿಗಳನ್ನು ಕೊಳ್ಳುತ್ತಾರೆ, ಅದರ ಗುಣಮಟ್ಟದ ಬಗ್ಗೆ ನೀವು ಏನಾದರು ನಿಯಂತ್ರಣವನ್ನು ಹಾಕದೆಹೋದರೆ ಬಹುಶಃ ಇದಕ್ಕಾಗಿ ಏನು ೧೬ ಕೋಟಿ ಹಣವನ್ನು ಖರ್ಚುಮಾಡುತ್ತಿದ್ದೇವೆ, ಇದರ ಪ್ರಯೋಜನ ನಮ್ಮ ರಾಜ್ಯದ ಜನತೆಗೆ ಸಿಗುವುದಿಲ್ಲವೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ಮಾತನ್ನು ಈ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ ಬಗ್ಗೆ ಹೇಳಿಬಿಡುತ್ತೇನೆ. ನಮ್ಮ ಸದಸ್ಯರೆ ಒಬ್ಬರು ಮಂಗಳೂರಿನಲ್ಲಿ ಐ. ವಿ. ಫ್ಲೂಯಿಡ್ ಬೇಕೆಂದರೆ ಸಿಗುವುದಿಲ್ಲವೆಂದು ಹೇಳಿದಾಗ ತಾವು ಉತ್ತರ ಕೊಡುತ್ತಾ, ನಮ್ಮ ಪ್ಲಾಂಟ್‌ಗಳು ಕೆಲಸ ಮಾಡುತ್ತಿಲ್ಲ. ಅವಕ್ಕೋಸ್ಕರವಾಗಿ ಹೊರಗಡೆ ಯಿಂದ ತರಿಸಿಕೊಟ್ಟರೆ ಎರಡು ರೂಪಾಯಿ ಜಾಸ್ತಿಯಾಗಬಹುದು. ಅದಕ್ಕೇನಂತೆ ಎಂದು ಹೇಳಿದಿರಿ ಈ ಇಂಟ್ರಾವೀನಸ್ ಐ.ವಿ. ಫ್ಲೂಯಿಡ್ ಬ್ಯಾಂಕ್‌ಗಳನ್ನು ಜನರಲ್ ಆಸ್ಪತ್ರೆಗಳಲ್ಲಿ ನಾವು ಮಾಡುವುದಕ್ಕೆ ಐ.ವಿ, ಫ್ಲೂಯಿಡ್ ಮ್ಯಾನುಫ್ಯಾಕ್ಚರ್ಸ್‌ದ್ದು ಒಂದು ದೊಡ್ಡ ಲಾಬಿ ಇದೆ.

೨-೫೦ ಪಿ.ಎಂ.

ಈ ಪ್ರೈವೇಟ ಮ್ಯಾನುಫ್ಯಾಕ್ಚರರ್ಸ್ ಐ.ವಿ. ಫ್ಲೂಯಿಡ್ಸ್ ಏನು ತಯಾರು ಮಾಡುತ್ತಾರೆ, ಅಲ್ಲಿಗೆ ಎಷ್ಟು ಸಾರಿ ಡ್ರಗ್ ಕಂಟ್ರೋಲರ್ ಹೋಗಿ ತನಿಖೆ ಮಾಡಿದ್ದಾರೆ ಕೇಳಿ, ಮಂಗಳೂರು ಜನರಲ್ ಆಸ್ಪತ್ರೆಯಲ್ಲಿ ಹೋಗಿ ಇವರು ಕೇಳುತ್ತಾರೆ, ಕ್ವಾಲಿಟಿ ಕಂಟ್ರೋಲ್ ರೂಮ್ಸ್ ನಿಮ್ಮ ಹತ್ತಿರ ಇಲ್ಲ, ಅನಿಮಲ್ ಎಕ್ಸ್‌ಪರಿಮೆಂಟ್ ರೂಮ್ಸ್ ನಿಮ್ಮ ಹತ್ತಿರ ಇಲ್ಲ ನೀವು ಏತಕ್ಕೆ ಐ ವಿ. ಫ್ಲೂಯಿಡ್ಸ್ ಮಾಡುತ್ತೀರಿ ಎಂದು ಕೇಳುತ್ತಾರೆ. ಇದೇ ರೀತಿ ಇವರು ಎಷ್ಟು ಜನ ಪ್ರೈವೇಟ್‌ನವರನ್ನು ಕೇಳಿದ್ದಾರೆ ? ಎಷ್ಟು ಜನರ ಮೇಲೆ ಕೇಸ್ ಹಾಕಿದ್ದಾರೆ? ನಮ್ಮ ಸರ್ಕಾರ ಇದ್ದಾಗ ಎಷ್ಟು ಮಾಡಿದ್ದರು

ದಯಮಾಡಿಟ್ಟು ಅವರನ್ನು ಕೇಳಿ. ನಾನು ಹೇಳುತ್ತೇನೆ ಐ.ವಿ. ಫ್ಲೂಯಿಡ್ಸ್ ಬ್ಯಾಂಕ್‌ಗಳು ಆಸ್ಪತ್ರೆಗಳಲ್ಲಿ ಕೆಲಸ ಮಾಡದೇಹೋದರೆ ಅವರಿಗೆ ಬಿಸಿನೆಸ್ ಜಾಸ್ತಿ ಆಗುತ್ತದೆ. ಅಲ್ಲಿ ಕ್ಲಿಯರ್ ಕಟ್ ಕೊಲ್ಯೂಷನ್ ಇದೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲದೇ ಹೋದರೆ ಜನರಿಗೆ ಬೇಕಾದಂಥ ಆರೋಗ್ಯ ಸುಧಾರಣೆ ಮಾಡತಕ್ಕಂಥ ಐ.ವಿ. ಫ್ಲೂಯಿಡ್ ಕೊಡಲಿಕ್ಕೆ ಸಾಧ್ಯವೇ ಇಲ್ಲ. ಇನ್ನು ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿವೆ. ಮೊದಲನೆಯದಾಗಿ ಲೆಪ್ರಸಿ ಎರಾಡಿಕೇಷನ್, ಇದರಲ್ಲಿ ನಮ್ಮ ಪರ್‌ಫಾರ್ಮೆನ್ಸ್ ಚೆನ್ನಾಗಿಲ್ಲ ಎಂಬುದು ತಾವು ಈಗಾಗಲೇ ರಿವ್ಯೂ ಮಾಡಿದ್ದರೆ ಗೊತ್ತಾಗಿರಬಹುದು. ತಾವು ರಿವ್ಯೂ ಮಾಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಕೆಲವು ಪ್ರೋಗ್ರಾಂಗಳಿವೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ನಮಗೆ ಬರುತ್ತವೆ. ಲೆಪ್ರಸಿ ಎರಾಡಿಕೇಷನ್ ಇರಬಹುದು, ಲ್ಯಾಬೊರೇಟರಿ ಟೆಕ್ನಿಷಿಯನ್ ಟ್ರೈನಿಂಗ್ ಪ್ರೋಗ್ರಾಂಗೋಸ್ಕರ ಇರಬಹುದು, ಟಿ.ಬಿ. ಎರಾಡಿಕೇಷನ್ ಪ್ರೋಗ್ರಾಂಗೆ ಇರಬಹುದು ಇಂಥ ಉದಾರ ಕಾರ್ಯಕ್ರಮಗಳಿಗೆ ಕೇಂದ್ರಸರ್ಕಾರದಿಂದ ಸಾಕಷ್ಟು ಹಣ ಬರುತ್ತದೆ, ನಾವು ಆ ಹಣವನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುತ್ತಿಲ್ಲ. ತಾವು ಮತ್ತು ಸದನ ಮಾನ್ಯ ಅರ್ಥ ಮಂತ್ರಿಗಳ ಮೇಲೆ ಮತ್ತು ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತರಬೇಕು, ಇಲ್ಲದೇಹೋದರೆ ಆಗುವುದಿಲ್ಲ. ಆರ್ಥಿಕ ಇಲಾಖೆಯ ಆಗಿನ ಕಾರ್ಯದರ್ಶಿಗಳ ಹತ್ತಿರ ನಾನು ಪ್ರಯತ್ನ ಮಾಡಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಇದು ಅಕ್ಷಯಪಾತ್ರೆ ಅಲ್ಲ, ದುಡ್ಡು ಕೊಡುವುದಕ್ಕೆ ಹೋಗಿರಿ ಎಂದು ಫೈಲಿನಲ್ಲಿ ಬರೆದರು. ಅವರ ಆಫೀಸಿನಲ್ಲಿ ಮೋಜು ಮಾಡುವುದಕ್ಕೆ ಯಾವರೀತಿ ಖರ್ಚು ಮಾಡುತ್ತಾರೆ. ಎಷ್ಟು ಲೈಟ್‌ಗಳನ್ನು ಹಾಕಿಕೊಳ್ಳುತ್ತಾರೆ, ಎಷ್ಟು ಸ್ಕ್ರೀನ್‌ಗಳನ್ನು ಹಾಕಿಕೊಳ್ಳುತ್ತಾರೆ, ಏರ್‌ಕಂಡೀಷನ್‌ಗೆ ಎಷ್ಟು ಖರ್ಚು ಮಾಡುತ್ತಾರೆ ಅದಕ್ಕೆ ನಾವು ನೀವು ರಿಸ್ಟ್ರಿಕ್ಟ್ ಮಾಡುವುದಕ್ಕಾಗುವುದಿಲ್ಲ. ನಮ್ಮ ಆಫೀಸ್‌ನಲ್ಲಿ ಏನಾದರು ಏರ್ ಕಂಡೀಷನ್ ಹಾಕಿದರೆ ಪತ್ರಿಕೆಗಳಲ್ಲಿ ಹೇಳಿ ಬರೆಸುತ್ತಾರೆ. ನಮ್ಮ ಅಧಿಕಾರಿ ಮಿತ್ರರು ಡೆಲ್ಲಿಗೆ ಹೋಗಬೇಕಾದರೆ ಬೊಂಬಾಯಿ ಮುಖಾಂತರ ಹೋಗುತ್ತಾರೆ. ಡೆಲ್ಲಿಯಿಂದ ಬೆಂಗಳೂರಿಗೆ ಬರಬೇಕಾದರೆ ಮದ್ರಾಸ್ ಮೂಲಕ ಬರುತ್ತಾರೆ. ನಾನು ಹೇಳುತ್ತಿರುವುದು ಅಧಿಕಾರಿಗಳು, ಅದರಲ್ಲೂ ವಿಶೇಷವಾಗಿ ಐ.ಎ.ಎಸ್ ಅಧಿಕಾರಿಗಳ ಬಗ್ಗೆ ಇವರು ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕುಳಿತುಕೊಂಡು ಕೇಂದ್ರಸರ್ಕಾರದಿಂದ ಹಣ ಕೊಡುತ್ತೇವೆಂದು ಹೇಳಿದರೂ ತೆಗೆದುಕೊಂಡಿಲ್ಲ. ಇದರಿಂದ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಆಗಿಲ್ಲ ಏನು ಉತ್ತರ ಕೊಡುತ್ತಾರೆ ಇದಕ್ಕೆ? ನೋಡಿ ಸಾರ್ ಕೇಂದ್ರಸರ್ಕಾರದವರೇನೋ ೧೦೦ಕ್ಕೆ ೧೦೦ರಷ್ಟು ಈಗ ಕೊಡುತ್ತಾರೆ ಮುಂದಿನ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಟೇಟ್ ಮೇಲೆ ಬರ್ಡನ್ ಆಗುತ್ತದೆ ಎಂದು ಹೇಳುತ್ತಾರೆ. ಮುಂದಿನ ಪಂಚವಾರ್ಷಿಕ ಯೋಜನೆ ಬಗ್ಗೆ ನೀವು ಏತಕ್ಕೆ ಯೋಚನೆ ಮಾಡುತ್ತೀರಿ, ಐದು ವರ್ಷದ ನಂತರ ಏನೇನು ಬದಲಾವಣೆಯಾಗುತ್ತದೋ ನೋಡೋಣ ಎಂದು ಹೇಳಿದೆ. ಈ ರೀತಿಯಾಗಿ ಕಳೆದ ೧೦-೧೫ ವರ್ಷಗಳ ಕಾಲದಲ್ಲಿ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಬರತಕ್ಕ ಹಣದಲ್ಲಿ ಸಾಕಷ್ಟು ಅನ್ಯಾಯವಾಗಿದೆ. You must prevail upon th Finance Minist r and the Chief Minister and g t more money and utilise 100% Government of India funds. ಅದಾದರೆ ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯದ ಸುಧಾರಣೆ ನೀವು ಮಾಡಬಹುದು. ಗ್ರಾಮೀಣ ಪ್ರದೇಶದ ಜನರ ಆರೋಗ್ಯ ಸುಧಾರಣೆಗೆ ಇಮ್ಯುನೈಸೇಷನ್ ಪ್ರೋಗ್ರಾಂ ಇದೆ ಅದು ಮಾಡಿದರೆ ಕಾಯಿಲೆಗಳು ಬರುವುದಿಲ್ಲ. ಲಸಿಕೆಗಳ ಕಾರ್ಯಕ್ರಮ ಅದು. ದಡಾರ, ಪೋಲಿಯೋ, ನಾಯಿಕೆಮ್ಮು, ದಿಫ್ತೀರಿಯಾ ಅನೇಕ ಕಾಯಿಲೆಗಳಿವೆ. ಪುಸ್ತಕದಲ್ಲಿ ಪರ್ಫಾರ್ಮೆನ್ಸ್ ಓದಿದರೆ ೧೦೦ ಪರ್ಸೆಂಟ್ ಅಚೀವ್‌ಮೆಂಟಾಗಿದೆ ಎಂದು ಹೇಳುತ್ತಾರೆ. ಪರ್ಫಾರ್ಮೆನ್ಸ್ ರಿಪೋರ್ಟ್ ಪ್ರಕಾರ ೧೦೦ ಪರ್ಸೆಂಟ್ ಅಚೀವ್‌ಮೆಂಟ್ ಆಗಿದ್ದರೆ ಈ ಕಾಯಿಲೆಗಳು ಮತ್ತೆ ಯಾತಕ್ಕೆ ಬರುತ್ತವೆ ? ಸಿಂಪಲ್ ಕ್ವೆಶ್ಚನ್ ಇದು. ೧೦೦ ಪರ್ಸೆಂಟ್ ಅಚೀವ್‌ಮೆಂಟ್ ಆಗಿಲ್ಲ. ವ್ಯಾಕ್ಸಿನ್‌ಗಳನ್ನು ಪ್ರೈಮರಿ ಹೆಲ್ತ್ ಸೆಂಟರ್‌ನಿಂದ ಎ. ಎನ್. ಎಂ. ಗಳು ಕ್ಯಾರಿ ಮಾಡುವಾಗ ಕೋಲ್ಡ್ ಸ್ಟೋರೇಜ್‌ನಲ್ಲಿ ತೆಗೆದುಕೊಂಡು ಹೋಗಬೇಕು. ಒಂದು ಸಲ ನಿಮ್ಮ ಕ್ಷೇತ್ರದಲ್ಲಿಯೇ ಈ ಬಗ್ಗೆ ಟೆಸ್ಟ್ ಮಾಡಿ ನೋಡಿ ನನ್ನ ಕ್ಷೇತ್ರಕ್ಕೆ ನೀವು ಬರುವುದು ಬೇಡ ನಿಮ್ಮ ಕ್ಷೇತ್ರದಲ್ಲಿಯೇ ಟೆಸ್ಟ್ ಮಾಡಿ ನೋಡಿ.

ವ್ಯಾಕ್ಸಿನೇಷನ್ ಕ್ಯಾರಿ ಮಾಡತಕ್ಕ ಬಾಕ್ಸ್ ಅಂದರೆ ಕೋಲ್ಡ್ ಸ್ಟೋರೇಜ್ ಬಾಕ್ಸ್ ಎಷ್ಟು ಚೆನ್ನಾಗಿ ಇರುತ್ತದೆಂಬುದನ್ನು ತಾವು ನೋಡಬೇಕು. ನಾವು ಇನ್ನೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸುಧಾರಣೆ ಮಾಡುವುದಕ್ಕೆ ಆಗಿಲ್ಲ. ತಾವು ದಯಮಾಡಿ ಏನಾದರೂ ಮಾಡಿ ಇದನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆಯನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೊಡುತ್ತಿದ್ದೇನೆ. ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಗ್ರಾಮಾಂತರ

ಪ್ರದೇಶದ ಜನತೆಯ ಆರೋಗ್ಯದಲ್ಲಿ ಏನಾದರೂ ಸುಧಾರಣೆಯಾಗಬೇಕಾದರೆ ತಾವು ಈ ಮಲ್ಟಿ ಸೆಕ್ಟೊರಲ್ ಅಪ್ರೋಚ್ ಅಂದರೆ ವಾಟರ್ ಸಪ್ಲೈ ಸ್ಕೀಮು ಸ್ಯಾನಿಟೇಷನ್ ಮತ್ತು ಪ್ರಿವೆಂಟಿವ್ ಸೈಡ್ ಕೂಡ ಮುಖ್ಯವಾದುದು. ಕ್ಯೂರಿಟಿ ಸೈಡ್‌ಗಿಂತ ಹೆಚ್ಚು ಪ್ರಿವೆಂಟಿವ್ ಸೈಡ್ ಕಡೆ ಕೂಡ ಹೆಚ್ಚು ಗಮನವನ್ನು ಕೊಟ್ಟರೆ ಬಹುಶಃ ನಿಮ್ಮನ್ನು ಈ ರಾಜ್ಯದ ಜನ ಎಂದೆಂದೂ ನೆನೆಸುತ್ತಾರೆ, ಇದ್ದಂತಹ ಸಮಯದಲ್ಲಿ ಒಳ್ಳೆಯ ಕೆಲಸ ಮಾಡಿ ಹೋದರು ಅಂತ. ಆದ್ದರಿಂದ ಅದರ ಕಡೆ ತಾವು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವವಾಗಿ ಹೇಳುತ್ತೇನೆ. ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಹೊಸದಾಗಿ ಮಾಡಬಾರದೆಂದು ಒಂದು ಸರ್ಕಾರದ ಆಜ್ಞೆಯಾಗಿದೆ ಅದನ್ನು ತೆಗೆಯಬೇಕು. ಏನಾಗಿದೆ ಎಂದರೆ ಕೆಲವು ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಂಡರೆ ಪ್ರಬಲವಾದ ರಾಜಕೀಯ ವ್ಯಕ್ತಿಗಳು ಬರುತ್ತಾರೆ. ಯಾವಾಗಲೂ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆ ಹಾಸನ ಜಿಲ್ಲೆಯ ರಾಜಕಾರಿಣಿಗಳ ಕೈಯ್ಯಲ್ಲೇ ಇರುತ್ತದೆ. ಅಂತಹವರ ಪ್ರಭಾವ ಅಲ್ಲ ಜಾಸ್ತಿ ಇದೆ. ಅವರ ಜಿಲ್ಲೆಯಲ್ಲಿನ ಜನರ ಆರೋಗ್ಯದ ಸ್ಥಿತಿಗತಿ ಅದು ಬೇರೆ ವಿಚಾರ ೪-೫ ಕಿಲೋಮೀಟರ್‌ಗಳಿಗೆ ಒಂದೊಂದು ಪ್ರೈಮರಿ ಹೆಲ್ತ್ ಯೂನಿಟ್‌ಗಳು ಇವೆ. ಮಂಡ್ಯ ಜಿಲ್ಲೆಯಲ್ಲೂ ಅಷ್ಟೆ. ಅದಕ್ಕೆ ನನಗೇನೂ ಹೊಟ್ಟೆಕಿಚ್ಚು ಇಲ್ಲ. ಅದನ್ನು ತೆಗೆಯುವುದಕ್ಕೆ ಹೋಗಬೇಡಿ. ಆದರೆ ನಮಗೂ ಮಾಡಿ ಕೊಡಿ ಅಂತ ಕೇಳುತ್ತಿದ್ದೇನೆ. ಸರ್ಕಾರದಲ್ಲಿ ಹೊಸದಾಗಿ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಮಾಡುವುದಿಲ್ಲವೆಂದು ಆಜ್ಞೆ ಮಾಡಿದ್ದಾರೆ. ಅದನ್ನು ಮೊದಲು ರದ್ದು ಮಾಡಬೇಕು. ಅದರ ಬಗ್ಗೆ ಒಂದು ಸರ್ವೆ ಮಾಡಿಸಿ. ಈ ರಾಜ್ಯದಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಆಯಾ ತಾಲ್ಲೂಕಿನ ಜನಸಂಖ್ಯೆಯ ಆಧಾರದ ಮೇಲೆ ಮತ್ತು ದೂರವನ್ನು ಗಮನದಲ್ಲಿಟ್ಟುಕೊಂಡು ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಹೊಸದಾಗಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೊತ್ತು ಮಲೇರಿಯಾ ಫರ್‌ಫಾರ್ಮೆನ್ಸ್ ವರದಿಯನ್ನು ನೋಡಿದಾಗ ಅದು ಪೂರ್ ಪರ್‌ಫಾರ್ಮೆನ್ಸ್ ಎಂದು ನನಗಾದರೂ ಅನ್ನಿಸುತ್ತದೆ. ಈ ಒಂದು ಮಲೇರಿಯಾ ರೋಗ ಬಾರದೆ ಇರುವುದಕ್ಕೆ ಉಪಯೋಗಿಸುವ ಕ್ಲೋರೋಫಿನ್ ಎಂಬ ಔಷಧಿಗೆ ಜನ ಇಮ್ಯೂನ್ ಆಗಿಬಿಟ್ಟಿದ್ದಾರೆ ಅದರಲ್ಲೂ ಗುಲ್ಬರ್ಗ ಹಾಗೂ ಯು.ಕೆ.ಪಿ. ಪ್ರಾಜೆಕ್ಟ್ ಪ್ರದೇಶದಲ್ಲಿ ಇಮ್ಯೂನ್ ಆಗಿಬಿಟ್ಟಿದ್ದಾರೆ. ಆಂಟಿ ಮಲೇರಿಯಾ ಇಂಜಿನೀಯರಿಂಗ್ ವರ್ಕ್ಸ್ ಅಲ್ಲಿ ಪ್ರಾರಂಭ ಮಾಡಬೇಕು ಅದನ್ನು ಮಾಡದಿದ್ದರೆ ಬಹುಶಃ ೧೦-೧೫ ವರ್ಷಗಳಲ್ಲಿ ಗುಲ್ಬರ್ಗ ಹಾಗೂ ರಾಯಚೂರಿನಲ್ಲಿರತಕ್ಕ ರೈತರು ಮಲೇರಿಯಾ ಪೀಡಿತರಾಗಿ ಒಂದು ದೊಡ್ಡ ಕಾಯಿಲೆಯಾಗಿ ಹರಡುವುದರಲ್ಲಿ ಯಾವುದೇ ಒಂದು ಸಂಶಯವಿಲ್ಲ. ಅದರಲ್ಲೂ ಅಚ್ಚುಕಟ್ಟು ಪ್ರದೇಶದಲ್ಲಿ ವಿಶೇಷವಾಗಿ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಯೋಜನೆಯನ್ನು ತಯಾರು ಮಾಡಿ.

ಲೆಪ್ರಸಿ ಫರ್‌ಫಾರ್ಮೆನ್ಸ್ ಅನ್ನು ತಾವು ತೆಗೆದು ನೋಡಿ. ಈ ಯೋಜನೆಗೆ ಕೇಂದ್ರ ಸರ್ಕಾರ ಹಣವನ್ನು ಕೊಡುತ್ತಾರೆ. ಅದಕ್ಕೆ ಹೊಸ ವ್ಯವಸ್ಥೆಯನ್ನೂ ಕೂಡ ಮಾಡಿದ್ದಾರೆ. ಪುನಃ ವರ್ಕರ್ಸ್ ಸ್ಟ್ಯಾಗ್‌ನೆಟ್. ಹೀಗಾಗಿ ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟರೂ ಸಹಿತ ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಮಲೇರಿಯಾ ಫರ್‌ಫಾರ್ಮೆನ್ಸ್‌ನ್ನು ತೆಗೆದು ಕೊಂಡರೆ ಮಲೇರಿಯಾ ಕಾಯಿಲೆ ೧೯೮೮-೮೯ಕ್ಕೆ ಹೋಲಿಸಿದಾಗ ಹಿಂದೆ ಏನು ಇತ್ತು ಅದಕ್ಕೆ ೨.೬ ಪರ್ಸೆಂಟ್ ಜಾಸ್ತಿಯಾಗಿದೆ ಎಂದು ತಮ್ಮ ವರದಿಯಲ್ಲೇ ಕೊಟ್ಟಿದ್ದೀರಿ. ರಾಜ್ಯದಲ್ಲಿ ಮಲೇರಿಯಾ ಕಾಯಿಲೆ ಜಾಸ್ತಿಯಾಗುತ್ತಿರುವುದಕ್ಕೆ ಕಾರಣ ಏನು ಎಂಬುದನ್ನು ತಾವು ಯೋಚನೆ ಮಾಡಬೇಕು.

ಇನ್ನು ಕುಟುಂಬ ಕಲ್ಯಾಣ ಯೋಜನೆ. ಕುಟುಂಬ ಕಲ್ಯಾಣ ಯೋಜನೆ ಬಗ್ಗೆ ವರದಿಯನ್ನು ಬರೆದಿದ್ದಾರೆ. ನನ್ನ ಕೈಯ್ಯಲ್ಲೂ ಇದನ್ನೆ ಒದಿಸಿದರು. "ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಮಾಡಬೇಕಾಗಿರುವ ಸಣ್ಣ ಮತ್ತು ದೊಡ್ಡ ಮತ್ತು ನಿಯತ ಕಾಲಿಕ ಶಿಬಿರಗಳನ್ನು ಕುರಿತ ಯೋಜನೆಯನ್ನು ಹಾಕಿಕೊಂಡು ಅದರಂತೆ ಕಾರ್ಯರೂಪಕ್ಕೆ ತರಲಾಗುತ್ತದೆ ಎಂದು ಇಲ್ಲಿ ಹೇಳಿದ್ದಾರೆ. ಇಲ್ಲಿ 'ಅದರಂತೆ'' ಎಂಬುದನು ಪ್ರತಿ ವರ್ಷವೂ ಬರೆಯುತ್ತಿದ್ದಾರೆ. ಎಲಿ ಬಲ್ ಕಪ್ಪಲ್ಸ್ ಕರೆಸಿ ತರಬೇತಿ ಕೊಟ್ಟಿರತಕ್ಕ ಒಂದೆರಡು ಉದಾಹರಣೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರಬಹುದು. ಏಕೆಂದರೆ ಅಲ್ಲಿಯ ಜನರು ಬುದ್ಧಿವಂತರಿದ್ದಾರೆ. ನಮ್ಮ ಹಾಗೆ ದಡ್ಡರಲ್ಲ. ಆದರೆ ಬಯಲು ಪ್ರದೇಶದಲ್ಲಿ ಎಲ್ಲಿಯಾದರೂ ಒಂದು ಕಡೆ ತೋರಿಸುತ್ತೀರಾ ಎಂಬುದನ್ನು ದಯಮಾಡಿ ತಾವು ಹೇಳಬೇಕು.

ನಮ್ಮ ಪರ್ಸೆಂಟೇಜ್ ಆಫ್ ಗ್ರೋತ್ ರೇಡ್ ಐಡಿಯಲ್ ಸಿಚುಯೇಷನ್ ಪ್ರಕಾರ ೧ ಪರ್ಸೆಂಟ್ ಇರಬೇಕು. ಆದರೆ ನಮ್ಮದು ೨ ಪರ್ಸೆಂಟ್ ಇದೆ. ಆದರೆ ಇದನ್ನು ೧ ಪರ್ಸೆಂಟ್‌ಗೆ ತರುವುದಕ್ಕೆ ಸಾಧ್ಯವೇ ? ಇವತ್ತು ಪ್ರಯತ್ನ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಇನ್ನು ೧೦-೧೫

ವರ್ಷಗಳಲ್ಲಿ ಒಂದು ಪರ್ಸೆಂಟ್‌ಗೆ ತರುವುದಕ್ಕೆ ಸಾಧ್ಯ ಎಂದು ನಾನು ತಿಳಿದಿದ್ದೇನೆ. ಇನ್ನು ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಸರ್ಕಾರಿ ಮೆಡಿಕಲ್ ಸ್ಟೋರ್ಸ್‌ನಲ್ಲಿ ಎಂತೆಂತಹ ಡ್ರಗ್ಸ್ ಮ್ಯಾನುಫ್ಯಾಕ್ಚರರ್ಸ್ ಇದ್ದಾರೆಂದು ನೋಡಿ. ಇವತ್ತು ಕಾನ್‌ಫಾ ಲ್ಯಾಬೊರೇಟರೀಸ್‌ನಲ್ಲಿ ಇರುವವರು ಯಾರು ? ಇಂತಹವರು ಐದಾರು ಜನ ಇಲ್ಲಿದ್ದಾರೆ. ಇವರೆಲ್ಲಾ ನಾರ್ಥ್ ಇಂಡಿಯನ್ಸ್, ಇಲ್ಲಿ ಬಂದು ಸೇರಿಕೊಂಡಿದ್ದಾರೆ.

ಶ್ರೀ ಗೋಪೀನಾಥ ಆರ್. ಸಾಂಡ್ರ.—ಅವರೆಲ್ಲಾ ಬಿದಿಮರು ಇದ್ದಾರೆ. ಸರ್ಕಾರ ಅಂತಹವರ ಮೇಲೆ ಎಚ್ಚರಿಕೆಯಿಂದ ನಿಗಾ ಇಡಬೇಕು. ಅವರೆಲ್ಲಾ ಸಿಂಡಿಕೇಟ್ ಮಾಡಿಕೊಂಡು ಎಲ್ಲಾ ಲಾಭವನ್ನು ಅವರೇ ಕಬಳಿಸುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಮ್ಮದು ಒಂದು ಪಬ್ಲಿಕ್ ಹೆಲ್ತ್ ಲ್ಯಾಬೊರೇಟರೀಸ್ ಇದೆ. ಇದು ನಮ್ಮ ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಆಡಳಿತದಲ್ಲಿ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಗೊತ್ತಿರುವಹಾಗೆ ಕೇಂದ್ರ ಸರ್ಕಾರದವರು ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ಫುಡ್ ಟೆಕ್ನಾಲಜಿಯಲ್ಲಿ ಪರಿಣತಿ ಇರುವವರಿಗೆ ಅಲ್ಲಿ ಇಡಿ ಎಂದು ಹೇಳಿದ್ದಾರೆ. ಆದರೆ ನನಗೆ ತಿಳಿದಿರುವಹಾಗೆ ಅಲ್ಲಿರುವವರೆಲ್ಲಾ ಎಸ್‌ಎಸ್‌ಎಲ್‌ಸಿ ಆದವರೇ ಆಗಿದ್ದಾರೆ. ಈ ಫುಡ್‌ನ್ನು ಎಲ್ಲಿ ಟೆಸ್ಟ್ ಮಾಡಬೇಕು ಹೇಗೆ ಟೆಸ್ಟ್ ಮಾಡಬೇಕೆಂದು ಅವರಿಗೆ ಗೊತ್ತಿಲ್ಲ. ನಿಮಗೆ ಆಶ್ಚರ್ಯ ಆಗಬಹುದು. ಇವತ್ತು ಸ್ವೀಟ್ ಅಂಗಡಿಗಳಲ್ಲಿ ಮಾರುವ ಸ್ವೀಟ್ಸ್ ಮೇಲೆ ಬಿನಾರಿಯನ್ನು ಅಂಟಿಸಿರುತ್ತಾರೆ. ಹಳ್ಳಿಗಳ ಜಾತ್ರೆಗಳಲ್ಲಿನ ಸ್ವೀಟ್ ಅಂಗಡಿಗಳಲ್ಲಿ ಇದನ್ನು ಹೆಚ್ಚು ನಾವು ನೋಡಿದ್ದೇವೆ. ಈಚಿನಾರಿ ಮರ್‌ಕ್ಯುರಿ ಲೇಪನಗೊಂಡದ್ದು ಇದು ವಿಷ ಎಂಬುದು ಎಷ್ಟು ಜನರಿಗೆ ಗೊತ್ತಿದೆ ? ಈ ಸಿಹಿ ತಿಂಡಿಗಳನ್ನು ಪೂರ್ಣ ಬ್ಯಾನ್ ಮಾಡಬೇಕೆಂದು ನಾನು ಹೇಳುತ್ತೇನೆ. ನಮ್ಮ ಅಧಿಕಾರಿಗಳು ಯಾವ ಜಾತ್ರೆಗೆ ಹೋಗಿ, ಯಾವ ಅಂಗಡಿಗಳಿಗೆ ಹೋಗಿ ಈ ಸಿಹಿ ತಿಂಡಿಗಳನ್ನು ಟೆಸ್ಟ್ ಮಾಡಿದ್ದಾರೆಯೆ ಈ ಬಗ್ಗೆ ಏನೂ ನಮ್ಮ ವರದಿಯಲ್ಲಿ ಇಲ್ಲ. ಈ ಬಗ್ಗೆ ತಾವು ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ ? ಅದನ್ನು ಸಹ ಇಲ್ಲಿ ಹೇಳಿಲ್ಲ. ಒಂದು ರೀತಿಯಲ್ಲಿ ಸರ್ಕಾರವೇ ವಿಷ ತಿನ್ನಿ ಬಾಯಿಲೆ ಬರಿಸಿಕೊಳ್ಳಿ ಎನ್ನುವ ಮಟ್ಟಕ್ಕೆ ಹೋಗಿದೆ. ಇವತ್ತು ನಮ್ಮ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಹೆಲ್ತ್ ಆಫೀಸರ್ ಇದ್ದಾರೆ. ಅವರು ಏನಾದರು ಇವತ್ತು ಹೋಟೆಲಿಗೆ ಹೋಗಿ ಅಲ್ಲಿನ ತಿಂಡಿಗಳನ್ನು ನೋಡಿದ್ದಾರೆಯೋ ಇವತ್ತು ಹೋಟೆಲಿನ ತಿಂಡಿಗಳನ್ನು ನೋಡಿಬಿಟ್ಟರೆ ಅಲ್ಲಿ ಖಂಡಿತವಾಗಿ ಊಟ ಮಾಡುವುದಕ್ಕೆ ಮನಸ್ಸು ಬರುವುದಿಲ್ಲ. ಒಳಗೆ ಅಲ್ಲೀ ಹೆಗ್ಗಣ ಸತ್ತುಬಿದ್ದಿರುತ್ತವೆ.

ಶ್ರೀ ವಾಟಾಳ್ ನಾಗಾರಾಜ್.—ನೀವು, ಹೋಟೆಲುಗಳ ಬಗ್ಗೆ ಏಕೆ ಹೇಳುತ್ತೀರಿ ಇಲ್ಲೇ ಸದನದ ಹೊರಗಡೆ ಲಾಂಜ್‌ನಲ್ಲಿ ನಮಗೆ ಕೊಡುವ ತಿಂಡಿಯು ಗುಣಮಟ್ಟ ಏನ್ನೇ ನೋಡಿ. ನಮ್ಮ ಶರೀರ ಏನೋ ಚೆನ್ನಾಗಿ ಇರುವುದರಿಂದ ನಾವು ಅವನ್ನು ತಿಂದು ಬದುಕಿದ್ದೇವೆ. ಇಲ್ಲದಿದ್ದರೆ ಇಷ್ಟು ದಿವಸ ತಿಂದಿದ್ದರಿಂದ ನಮಗೆ ಕಾಲರಾ ಅಥವಾ ಪ್ಲೇಗ್ ಬಂದು ಸತ್ತು ಹೋಗುತ್ತಿದ್ದೆವು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಕಾರ್ಪೊರೇಷನ್ ಆಫೀಸರ್ಸ್ ಇದ್ದಾರಲ್ಲ, ಈ ಭಯಂಕರರು, ಇವರಿಗೆ ಆಗುತ್ತಿರುವುದು ಕಣ್ಣಿಗೆ ಕಾಣಿಸುವುದೇ ಇಲ್ಲ.

ಶ್ರೀ ಗೋಪೀನಾಥ್ ಆರ್ ಸಾಂಡ್ರ.— ಎಲ್ಲರೂ ಮಾಮೂಲು ತೆಗೆದುಕೊಂಡು ಸುಮ್ಮನಿರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇವರೆಲ್ಲಾ ಮಹಾತ್ಮಾಗಾಂಧಿ ರೋಡ್‌ಗೆ ಹೋಗುತ್ತಾರೆ. ಈಗ ಎಲ್ಲಾ ಕಡೆ ಅವೇನೋ ಫಾಸ್ಟ್‌ಫುಡ್ ಅಂಗಡಿಗಳು ಎಂದು ಬಂದಿದೆ. ಇದೆಲ್ಲಾ ಫ್ರಾಡ್ ಯಾರು ಇದನ್ನು ಟೆಸ್ಟ್ ಮಾಡಿದ್ದಾರೆ ? ಬೇಯಿಸಿ ಎಲ್ಲಾ ಮಾಡಿ ಕೊಟ್ಟರೂ ಸಹ ಅನೇಕ ಸಂದರ್ಭದಲ್ಲಿ ವಿಷ ಆಗುತ್ತದೆ. ಇವತ್ತು ಈ ಫಾಸ್ಟ್‌ಫುಡ್ ಅಂಗಡಿಗಳು ನಗರದಲ್ಲಿ ನಾಯಿ ಕೊಡೆಗಳಂತೆ ಹುಟ್ಟಿಕೊಂಡಿವೆ. ಇಂತಹವನ್ನು ಎಷ್ಟು ಟೆಸ್ಟ್ ಮಾಡಿದ್ದೀರಿ ? ಎಷ್ಟು ಕೇಸ್ ಹಾಕಿದ್ದೀರಿ ? ಅವರು ಮಾಮೂಲು ಕೊಡುವುದರಿಂದ ಅವರ ಮೇಲೆ ಕ್ರಮ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಬೆಂಗಳೂರು ನಗರ ಕಾರ್ಪೊರೇಷನ್‌ನವರ ಕಣ್ಣು ಎಲ್ಲಿಗೆ ಬಿದ್ದಿದೆ ? ಕಣ್ಣು ಇಲ್ಲದವರಿಗೆ ಕಾಲು ಇಲ್ಲದವರಿಗೆ ಉದ್ಯೋಗ ಒದಗಿಸಲು ಟೆಲಿಫೋನ್ ಬೂತ್‌ಗಳನ್ನು ಕೊಟ್ಟರೆ ಕಾರ್ಪೊರೇಷನ್‌ನವರು ದೊಡ್ಡ ಶೂರರಂತೆ ಹೋಗಿ ಅವರ ಅಂಗಡಿಗಳನ್ನೆಲ್ಲಾ ಬಂದು ಕಾರ್ಪೊರೇಷನ್ ಆಫೀಸಿನಲ್ಲಿ ಹಾಕಿಕೊಂಡಿದ್ದಾರೆ,

ಈಗ ಅಸೆಂಬ್ಲಿ ನಡೆಯುತ್ತಿದೆ, ಅಲ್ಲಿ ಯಾರಾದರು ಈ ಬಗ್ಗೆ ಪ್ರಸ್ತಾಪ ಮಾಡಬಹುದೆಂದು ಯಾರೋ ಪತ್ರಿಕೆಯವರು ಮಹಾ ದೊಡ್ಡ ಉಪಕಾರ ಮಾಡಿ ಪ್ರಕಟ ಮಾಡಿದ್ದರಿಂದ, ಮತ್ತೆ

ಆಬೂತ್‌ಗಳನ್ನು ಮಹಾತ್ಮಾಗಾಂಧಿ ರಸ್ತೆಯಲ್ಲಿ ಮತ್ತೆ ನಿಲ್ಲಿಸಿದ್ದಾರೆ. ಇದು ಹುಚ್ಚು ದರಬಾರು ? ಇದು ನಿಮಗೆ ಸಂಬಂಧಪಟ್ಟಿದ್ದಲ್ಲ. ಆದ ನಮ್ಮ ಕಾರ್ಪೋರೇಷನ್ ಅಥಾರಿಟಿಯವರ ದೃಷ್ಟಿಕೋನವನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಇದನ್ನು ಉದಾಹರಣೆ ಗೋಸ್ಕರ ತಮಗೆ ಹೇಳುತ್ತಿದ್ದೇನೆ. ಪಬ್ಲಿಕ್ ಹೆಲ್ತ್ ಲ್ಯಾಬೋರೆಟರಿ ಏನು ಕೆಲಸ ಮಾಡುತ್ತಿದೆ ? ಅವರು ಎಷ್ಟು ಕೇಸುಗಳನ್ನು ಹಾಕಿದ್ದಾರೆ ? ಯಾವ್ಯಾವ ಆಕ್ಟ್‌ನ ಕೆಳಗೆ ಕೆಲಸ ಮಾಡುತ್ತಿದ್ದಾರೆ? ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರಿಗೆ ಯಾವ್ಯಾವ ಆಕ್ಟ್‌ಗಳು ಅನ್ವಯ ಆಗುತ್ತವೆ, ಅವರು ಎಷ್ಟು ಕೇಸುಗಳನ್ನು ಪತ್ತೆ ಮಾಡಿದ್ದಾರೆ ? ಯಾವ್ಯಾವ ಇನ್ಸ್‌ಪೆಕ್ಷನುಗಳು ಏನೇನು ಕೇಸುಗಳನ್ನು ತಂದಿದ್ದಾರೆ ? ಎಲ್ಲೆಲ್ಲಿಂದ ಸ್ಯಾಂಪಲ್‌ಗಳನ್ನು ತಂದಿದ್ದಾರೆ ? ಅದು ಹೋಟೆಲ್ ತಿಂಡಿಗಳು ಇರಲಿ, ಫಾಸ್ಟ್ ಫುಡ್ ಸರ್ವಿಸ್ ಇರಲಿ, ಐಸ್‌ಕ್ರೀಮ್ ಪಾರ್ಲರ್ ಇರಲಿ ಅಥವಾ ಬೇರೆ ಏನೇ ಇರಲಿ ಈ ಒಂದು ವಿಚಾರವನ್ನು ಈ ಎಲ್ಲ ವಿವರಗಳನ್ನು ತಾವು ಕೊಡಬೇಕು. ಅದು ಅನಿವಾರ್ಯವಾದರೂ ಹೇಳಬೇಕಾಗಿದೆ. ಮಾನ್ಯ ಮಂಜುನಾಥ್‌ರವರು ಈಗ ಸಭೆಯಲ್ಲಿ ಇಲ್ಲ. ತೆಂಗಿನ ಬೆಲೆ ನಮ್ಮ ರಾಜ್ಯದಲ್ಲಿ ಕಡಿಮೆಯಾಗಿದೆ. ನಮ್ಮ ರಾಷ್ಟ್ರದಲ್ಲಿಯೂ ಕೂಡ ತೆಂಗಿನ ಬೆಲೆ ಕಡಿಮೆಯಾಗಿದೆ. ತೆಂಗನ್ನು ಬೆಳೆಯುವವರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಮಾನ್ಯ ಬಂಗಾರಪ್ಪನವರು ಮೊನ್ನೆ ಒಂದು ಸಭೆಯನ್ನು ಕರೆದಿದ್ದರು. ಮಾನ್ಯ ಹುನುಮೇಗೌಡರು ಮತ್ತು ಮಂಜುನಾಥ್ ಲೋಕಸಭಾಸದಸ್ಯರಾದ ಬಸವರಾಜ್‌ರವರು ಆ ಸಭೆಯಲ್ಲಿದ್ದರು. ಆಗ ಅಲ್ಲಿ ಮಾನ್ಯ ಬಸವರಾಜ್ ಅವರು ಒಂದು ವಿಷಯ ಪ್ರಸ್ತಾಪ ಮಾಡಿದರು. ತೆಂಗಿನ ಹೊಟ್ಟನ್ನು ರಷ್ಯಾಕ್ಕೆ ಕಳುಹಿಸುವುದರಿಂದ ವರ್ಷಕ್ಕೆ ಎರಡು ಮೂರು ಕೋಟಿ ರೂಪಾಯಿಗಳಷ್ಟು ವಿದೇಶಿವಿನಿಮಯ ಬರುತ್ತಿತ್ತು. ತಿಪಟೂರಿನ ಕೆಲವು ಮಹಾಶಯರು ಏನು ಮಾಡಿದ್ದಾರೆಂದರೆ ಭೂಮಿಯ ಒಳಗಡೆ ಇರತಕ್ಕ ಗೆಣಸನ್ನು ತೆಗೆದು ಅವನ್ನು ಒಣಗಿಸಿ ಪುಡಿಮಾಡಿ ಕೊಬ್ಬರಿ ಪುಡಿ ಜೊತೆ ಬೆರೆಸಿ ಕಳುಹಿಸಿಬಿಟ್ಟಿದ್ದಾರೆ. ರಷ್ಯಾ ದೇಶದವರು ನಮಗೆ ಅದು ಬೇಡವೆಂದು ವಾಪಸ್ಸು ಕಳುಹಿಸಿದ್ದಾರೆ. ಇದರಿಂದ ಇಡೀ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ದೊಡ್ಡ ಪರಿಣಾಮ ಬೀರಿದೆ. ಇದನ್ನೆಲ್ಲ ಟೆಸ್ಟ್ ಮಾಡತಕ್ಕವರು ಯಾರು ? ಸಾರ್ವಜನಿಕರು ಉಪಯೋಗ ಮಾಡುವ ಆಹಾರ ಪದಾರ್ಥಗಳನ್ನೆಲ್ಲಾ ಟೆಸ್ಟ್ ಮಾಡತಕ್ಕವರು ನೀವೇ. ನೀವು ಡಾಕ್ಟರುಗಳನ್ನು ಪೋಸ್ಟಿಂಗ್ ಮಾಡುವುದರಲ್ಲಿ ಮತ್ತು ಟ್ರಾನ್ಸ್‌ಫರ್ ಮಾಡುವುದರಲ್ಲಿಯೇ ನೀವು ಮುಳುಗಿ ಹೋಗಬೇಡಿ. ಇದರಿಂದ ನಿಮಗೆ ದೊಡ್ಡ ಕಾಯಿಲೆ ಕೊಡುತ್ತದೆ. ನಿಮ್ಮ ಆರೋಗ್ಯ ಇಲಾಖೆಗೂ ಕಾಯಿಲೆ ಕೊಡುತ್ತದೆ. ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ದಯವಿಟ್ಟು ಇಂತಹ ಕೆಲಸ ಮಾಡುವವರನ್ನು ಪತ್ತೆಮಾಡಿ ಶಿಕ್ಷೆಗೆ ಗುರಿಪಡಿಸಬೇಕು.

ಮತ್ತೊಂದು ಐಸಿಡಿಎಸ್ ಕಾರ್ಯಕ್ರಮವೆಂದು ಇದೆ. ಅದು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸೇರುತ್ತದೆ. ಇದರ ಬಗ್ಗೆ ಸಹ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಸಹ ದೂರುಗಳು ಇವೆ. 1?0 ತಾಲ್ಲೂಕುಗಳಲ್ಲಿ ಐಸಿಡಿಎಸ್ ಪ್ರೋಗ್ರಾಮ್ ಅನ್ನು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಮಾಡುತ್ತಿದ್ದೇವೆ. ಏತಕ್ಕೋಸ್ಕರ ಇವರು ಇದನ್ನು ಮಾಡುತ್ತಿದ್ದಾರೆಂದರೆ ನಮ್ಮ ಮಕ್ಕಳಿಗೆ ಸ್ವಲ್ಪ ಬೆಲ್ಲ ಮತ್ತು ಕಾಳುಗಳ ಉಂಡೆಗಳನ್ನು ಕೊಡುವುದ ಕ್ಕೋಸ್ಕರ. ಇದಕ್ಕೆ ಐಸಿಡಿಎಸ್ ಪ್ರೋಗ್ರಾಮ್ ಎಂದು ಕರೆಯುತ್ತಾರೆ. ಇದು ನನಗೆ ಅರ್ಥ ವಾಗುವುದಿಲ್ಲ. ಇದೂ ಸಹ ಆರೋಗ್ಯ ಇಲಾಖೆಯ ಪರ್‌ಫಾರ್ಮೆನ್ಸ್ ರಿಪೋರ್ಟ್‌ನಲ್ಲಿದೆ. ರಾಜ್ಯ ಪಾಲರ ಆಡಳಿತ ಸಹ ಇದರಲ್ಲಿ ಸೇರಿಕೊಳ್ಳುತ್ತದೆ. ರಾಜ್ಯಪಾಲರ ಆಡಳಿತವೆಂದರೆ ಅಧಿಕಾರಿಗಳದ್ದೇ ಆಡಳಿತ, ಕರ್ನಾಟಕ ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳು ಒಟ್ಟು ೪೫ ಸಾವಿರ ಇವೆ. ಅವುಗಳಲ್ಲಿ ಎಷ್ಟು ಕೇಂದ್ರಗಳಿಗೆ ಭೇಟಿಕೊಟ್ಟಿದ್ದಾರೆಂದರೆ ೨೦ ಸಾವಿರ ಕೇಂದ್ರಗಳಿಗೆ ಮಾತ್ರ ಭೇಟಿ ಕೊಟ್ಟಿದ್ದಾರೆ. ಆ ಮೇಲೆ ರಕ್ಷಣಾ ಚಿಕಿತ್ಸೆ ಪ್ರಗತಿಗೆ ಸೇರಿದ ಪೋಲಿಯೋ. ಡಿಸಿಜಿ, ಡಿಪಿಟಿ ಡಿಟಿ, ದಡಾರ ಮುಂತಾದ ಮಕ್ಕಳಿಗೆ ಕೊಡತಕ್ಕ ಇಂಜಕ್ಷನ್‌ಗಳಿಗೆ ವೆಚ್ಚ ಮಾಡತಕ್ಕದ್ದು ಸಹ ಪೂರ್ತಿಯಾಗಿ ಖರ್ಚಾಗಿಲ್ಲ. ತಾವು ಇದನ್ನು ಓದಿಲ್ಲ ದಯವಿಟ್ಟು ತಾವು ಇದನ್ನು ಓದಿ. ೪? ಪರ್ಸೆಂಟ್ ಅಚೀವ್‌ಮೆಂಟ್. ಐಸಿಡಿಎಸ್‌ನ ಕಾರ್ಯಕ್ರಮಗಳಿಗೆ ಮಾಡಿರತಕ್ಕ ಹಣ ಪೋಲು ಅಲ್ಲದೆ ಮತ್ತೇನು ?- ನಾಚಿಕೆಯಾಗಬೇಕು ಈ ವೈದ್ಯರುಗಳಿಗೆ. ಐಸಿಡಿಎಸ್ ಪ್ರೋಗ್ರಾಮ್‌ನಲ್ಲಿ ಏನು ಕೋಆರ್ಡಿನೇಷನ್ ಮಾಡಬೇಕು, ಅದು ಆಗುತ್ತಿಲ್ಲ. ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಇದೆಲ್ಲ ನನಗೆ ಅರ್ಥವಾಗಿರಲಿಲ್ಲ. ಆದರೆ ಸಮಾಜ ಕಲ್ಯಾಣ ಮಂತ್ರಿಯಾದಾಗ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್‌ನ್ನು ರಿವ್ಯೂ ಮಾಡುವುದಕ್ಕೆ ಕರೆದರೆ, ನಮಗೆ ಜಿಲ್ಲಾಪರಿಷತ್‌ನ ಮುಖ್ಯ ಕಾರ್ಯದರ್ಶಿಯವರು ಕರೆದಿದ್ದಾರೆ, ಜಿಲ್ಲಾಪರಿಷತ್‌ನ ಅಧ್ಯಕ್ಷರು ಕರೆದಿದ್ದಾರೆ, ಅವರು ಕರೆದಿದ್ದಾರೆ ಇವರು ಕರೆದಿದ್ದಾರೆಂದು ಹೇಳಿಕೊಂಡು ಮಂತ್ರಿಗಳು ಹೋದರೆ ಪಂಗನಾಮ, ಅವರು ಬರುತ್ತಲೇ ಇರಲಿಲ್ಲ. ನಾವು ರಿವ್ಯೂಗೆ ಹೋದರೆ ಬರುತ್ತಲೇ ಇರಲಿಲ್ಲ. ಏನು ಮಾಡಿದ್ದೀರಾ ಎಂದು ಕೇಳಿದರೆ ಏನೋ ಅಂಕಿಅಂಶಗಳನ್ನು ಬರೆದು ಕಳುಹಿಸುತ್ತಿದ್ದರು.

ಅದಕ್ಕೆ ಸಹಿ ಸಹ ಹಾಕುತ್ತಿರಲಿಲ್ಲ ಸಹಿ ಹಾಕಿದರೆ ಮತ್ತೆ ನಾವು ಇಲ್ಲಿ ಅದರ ಬಗ್ಗೆ ಕೇಳುತ್ತೇವೆಂದು ಸಹಿ ಹಾಕುತ್ತಲೇ ಇರಲಿಲ್ಲ. ಈ ತರಹ ನಮ್ಮ ಐ. ಸಿ. ಡಿ. ಎಸ್. ಪ್ರೋಗ್ರಾಂ ಕರ್ನಾಟಕದಲ್ಲಿ ನಡೆಯುತ್ತಿದೆ. ಆದ್ದರಿಂದ ತಾವು ಈ ಬಹಳ ಮುಖ್ಯವಾದ ಈ ಡೈರೆಕ್ಟೋರೇಟ್ ಆಫ್ ಮೆಡಿಕಲ್ ಎಜ್ಯುಕೇಶನ್, ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್, ಆಮೇಲೆ ಇಲ್ಲಿರತಕ್ಕಂಥ ದೊಡ್ಡ ದೊಡ್ಡ ಆಸ್ಪತ್ರೆಗಳು, ಇವುಗಳಿಗೆ ಹೆಚ್ಚಿನ ಗಮನ ಕೊಡಬೇಕು. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇದಕ್ಕಿಂತ ಹೆಚ್ಚಿನ ಗಮನವನ್ನು ಈ ರಾಜ್ಯದ ಜನತೆಗೆ ಔಷಧಿ ರೂಪದಲ್ಲಿ ಹೋಗತಕ್ಕಂಥ ವಿಷ ಕೊಡುವುದನ್ನು ನಿಲ್ಲಿಸಬೇಕು. ಮತ್ತೆ ಈ ಗವರ್ನಮೆಂಟ್ ಪಬ್ಲಿಕ್ ಫುಡ್ ಹೆಲ್ತ್ ಇನ್ಸ್ಟಿಟ್ಯೂಟ್ ಅಂತ ಏನಿದೆ, ಇದನ್ನು ಸರಿ ಮಾಡಬೇಕು. ಇದನ್ನು ಮಾಡುವಾಗ ಇದಕ್ಕೆ ವೆಸ್ಟೆಡ್ ಇಂಟರೆಸ್ಟ್ಸ್ ಇರುತ್ತವೆ ಬಹಳ ಒತ್ತಡ ಬರುತ್ತದೆ. ಈಗ ಗವರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನ್ನು ಸರಿಮಾಡಬೇಕೆಂದು ಹೇಳಿದರೆ ಬಹಳ ಒತ್ತಡಗಳು ಬರುತ್ತವೆ. ಈ ಡ್ರಗ್ ಇನ್ಸ್‌ಪೆಕ್ಟರ್‌ಗಳನ್ನು ನೀವು ತಡೆ ಹಾಕಿದ ತಕ್ಷಣ ನೀವು ಹೇಳಬೇಕಾಗುತ್ತದೆ. ಇಲ್ಲಪ್ಪ, ಅಲ್ಲೇ ರಿಟೇನ್ ಮಾಡಿಬಿಡಿ. ಯಾರೋ ಬಂದು ಹೇಳಿದರು ಅಂತ, ಈ ಡ್ರಗ್‌ಶಾಪ್‌ಗಳು ಇವೆಯಲ್ಲ, ಇವುಗಳು ಆಸ್ಪತ್ರೆಗಳ ಪಕ್ಕದಲ್ಲೇ ಇರಬೇಕು. ರೋಗಿಗಳಿಗೆ ಅನುಕೂಲ ಆಗಲಿ ಅಂತಲ್ಲ, ಅಲ್ಲಿ ಒಂದು ವ್ಯವಹಾರ ಇರುತ್ತದೆ. ಈ ಆಸ್ಪತ್ರೆಯವರು ಅದೇ ಡ್ರಗ್‌ಶಾಪ್‌ಗೆ ಹೋಗಬೇಕು. ಅದು ಔಟ್‌ಡೇಟೆಡೋ ಇನ್‌ಡೇಟೆಡೋ ಗೊತ್ತಿಲ್ಲ, ಅದನ್ನು ಪರ್ಚೇಸ್ ಮಾಡುತ್ತಾರೆ. ನಿಮ್ಮ ಡ್ರಗ್ ಕಂಟ್ರೋಲ್ ಡಿಪಾರ್ಟಮೆಂಟ್‌ನವರು ಇಂತಹ ಎಷ್ಟು ಕೇಸುಗಳನ್ನು ಬುಕ್ ಮಾಡಿದ್ದಾರೆ ? ಇದನ್ನು ಸರಿಮಾಡುವುದಕ್ಕೆ ನಾನಾದರೂ ಹೇಳುತ್ತೇನೆ, ತಾವು ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯದ ಸುಧಾರಣೆ ದೃಷ್ಟಿಯಿಂದ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಒಂದು ಔಷಧಿಗಳ ಗುಣಮಟ್ಟ ಸುಧಾರಣೆ ಮಾಡತಕ್ಕದ್ದು, ಎರಡನೇಯದು, ಕೇಂದ್ರ ಸರ್ಕಾರದಿಂದ ಬರತಕ್ಕಂಥ ಗ್ರಾಮಾಂತರ ಪ್ರದೇಶದ ರೋಗಗಳು ಏನಿವೆ, ಅವುಗಳ ಸುಧಾರಣೆಗೆ ಬರತಕ್ಕಂಥ ಹಣದ ನೂರಕ್ಕೆ ನೂರರಷ್ಟು ಉಪಯೋಗ ಮಾಡತಕ್ಕದ್ದು, ಹೊಸ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಪ್ರಾರಂಭ ಮಾಡತಕ್ಕದ್ದು ಮತ್ತು ಈ ನಿರ್ವಹಣೆಯಲ್ಲಿ ಶಿಸ್ತನ್ನು ತರತಕ್ಕದ್ದು. ರೂರಲ್ ಏರಿಯಾಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಸ್ಪೆಷಲ್ ಅಲೋಯನ್ಸ್ ಅಂತ ಕೊಡಿ ಇದರಿಂದ ನಷ್ಟವೇನೂ ಆಗುವುದಿಲ್ಲ. ದಯುವಿಟ್ಟು ನೀವು ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಮತ್ತೊಂದು, ನಾನು ಆರೋಗ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿಗೆ ಸಹಿತ ಒಂದು ಸಂಚಾರಿ ಆಸ್ಪತ್ರೆ ತರಬೇಕೆಂದು ಯೋಚನೆ ಮಾಡಿದ್ದೆ. ಈ ಸಂಚಾರಿ ಆಸ್ಪತ್ರೆಗಳಿಂದ ನಿಜಕ್ಕೂ ಒಳ್ಳೆಯ ಉಪಯೋಗ ಆಗುತ್ತದೆ. ಒಂದು ಸರಿಯಾದ ಲೆಕ್ಕ ಕೂಡ ಇದರಿಂದ ನಿಮಗೆ ಸಿಗುತ್ತದೆ. ಪ್ರತಿ ತಾಲ್ಲೂಕಿನ ೪೦–೫೦ ಗ್ರಾಮಗಳನ್ನು ಆರಿಸಿ ವಾರದಲ್ಲಿ ಇಂತಹ ಹತ್ತು ಹಳ್ಳಿಗಳಿಗೆ ಇಂತಹ ದಿವಸ ಹೋಗಬೇಕೆಂದು ಮಾಡಿದರೆ ಖರ್ಚು ಕಡಿಮೆಯಾಗುತ್ತದೆ. ನಿಮ್ಮ ಪಬ್ಲಿಕ್ ಹೆಲ್ತ್ ಯೂನಿಟ್‌ಗಳಲ್ಲಿರುವ ಅಂದರೆ ತಾಲ್ಲೂಕು ಕೇಂದ್ರಗಳಲ್ಲಿರುವ ಡಾಕ್ಟರುಗಳು ಅಲ್ಲಿಂದಲೇ ಅವರು ಹೋಗಿ ಬರಬಹುದು. ಆದ್ದರಿಂದ ಸಂಚಾರಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಇದರಿಂದ ಖಂಡಿತವಾಗಿಯೂ ಸಹಿತ ಗ್ರಾಮಾಂತರ ಪ್ರದೇಶದ ಜನತೆಗೆ ಹೆಚ್ಚು ಉಪಯೋಗ ಆಗುತ್ತದೆ ಎಂದು ನಾನು ತಿಳಿದಿದ್ದೇನೆ. ಕೇಂದ್ರಸರ್ಕಾರದ ಸಹಕಾರದಿಂದ – ಜನಸಂಖ್ಯೆ ನಿಯಂತ್ರಣ ಮಾಡಲಿಕ್ಕೆ ಇಂಡಿಯನ್ ಪಾಪ್ಯುಲೇಶನ್ ಪ್ರಾಜೆಕ್ಟ್ ಅಂತ ನಾವು ಮಾಡಿದ್ದೇವೆ ೮೦ರಲ್ಲಿ ಅದರ ಅಧ್ಯಾಯ ಮುಗಿದೇ ಹೋಗಿತ್ತು. ರಾಜ್ಯ ಸರ್ಕಾರದವರು ೮೦ರಲ್ಲಿ ಹಣ ಕೊಡುವುದಕ್ಕೆ ಆಗುವುದಿಲ್ಲ ಎಂದು ಬರೆದು ಕಳಿಸಿದ್ದರು. ಆಗ ಕೇಂದ್ರದಲ್ಲಿ ನಮ್ಮವರೇ ಶ್ರೀ ಶಂಕರಾನಂದ ಅವರು ಮಂತ್ರಿಯಾಗಿದ್ದರು. ರಾಜ್ಯಸರ್ಕಾರದ ಸಚಿವ ಸಂಪುಟದ ಒಪ್ಪಿಗೆ ತೆಗೆದುಕೊಂಡು ಮಾಡಿದ್ದಾಯಿತು. ಬೀದರ್, ಗುಲ್ಬರ್ಗಾ, ರಾಯಚೂರು, ಬಿಜಾಪುರ, ಬೆಳಗಾಮ್ ಮತ್ತು ಧಾರವಾಡ ಈ ೬ ಜಿಲ್ಲೆಗಳಿಗೆ ಉಪಯೋಗವಾಗತಕ್ಕಂಥ ಈ ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟ್‌ನಲ್ಲಿ ೭೦ ಕೋಟಿ ರೂಪಾಯಿ ದುಡ್ಡು ಏನಿದೆ, ಇದನ್ನು ಪ್ರತಿಸಾರಿಯೂ ಎರಡು ವರ್ಷ ವಿಸ್ತಾರ ಮಾಡಿ ಎಂದು ಬರೆದಿದ್ದೇನೆ. ಕೇಂದ್ರ ಸರ್ಕಾರ ವಿಸ್ತಾರ ಮಾಡದೇ ಹೋದರೆ ಬೇರೆ ರಾಜ್ಯಗಳು ಕಾದಿರುತ್ತವೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಯಾವುದೋ ಕಾರಣಕ್ಕೆ ದುಡ್ಡು ಕೊಡಲಿಲ್ಲ ಅಥವಾ ನಮ್ಮ ಲೋಕೋಪಯೋಗಿ ಇಲಾಖೆಯವರು ಅಸಿಸ್ಟೆಂಟ್ ಇಂಜಿನೀಯರುಗಳನ್ನು ಕೊಡಲಿಲ್ಲ ಎಂದು ಹೇಳಿ ಈ ಪ್ರಾಜೆಕ್ಟ್ ಡಿಲೇ ಆಗದಹಾಗೆ ಮಾಡಬೇಕು, ಹಿಂದೆ ಆಗಿರುವುದು ಹಾಗೆಯೇ. ಬಿಲ್ಡಿಂಗ್ ಕಾಂಪೋನೆಂಟ್ ಏನಿದೆ, ಅದು ಒಂದು ವರ್ಷದಲ್ಲಿ ಕಟ್ಟಡ ಕಟ್ಟಬೇಕಾಗಿದ್ದರೆ ನಾಲ್ಕೈದು ವರ್ಷವಾದರೂ ಕಟ್ಟುವುದಕ್ಕೆ ಆಗಲಿಲ್ಲ. ದಯುವಿಟ್ಟು ಈ ಪ್ರಾಜೆಕ್ಟನ್ನು ಸಾಧ್ಯವಾದರೆ ಬೇರೆ ಕಡೆಗೂ ವಿಸ್ತರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಯೋಜನಾ ಆಯೋಗದ ಮೇಲೆ, ಕೇಂದ್ರ ಸರ್ಕಾರದ ಮೇಲೆ

ನಾವು ಎಲ್ಲಾ ಒತ್ತಡವನ್ನು ತರೋಣ. ಇದಕ್ಕೆ ಫೈನಾನ್ಸ್ ಡಿಪಾರ್ಟಮೆಂಟ್‌ನ ಅನುಮತಿ ಬೇಕಾಗುತ್ತದೆ. ಅಂದರೆ ಶ್ರೀ ರಾಜಶೇಖರಮೂರ್ತಿಯವರದ್ದು ಒಪ್ಪಿಗೆ ಬೇಕಾಗುತ್ತದೆ. ಇನ್ನು ಡೈರೆಕ್ಟರೇಟ್ ಆಫ್ ಹೆಲ್ತ್ ಸರ್ವಿಸಸ್‌ನಲ್ಲಿ ಟ್ರಾನ್ಸ್‌ಪೋರ್ಟ್ ಡಿವಿಜನ್ ಅಂತ ಇದೆ. ನಾನು ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ,

ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಎಂದು ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ವಿಂಗ್ ಇದೆ. ಈ ಜಿಲ್ಲಾಪರಿಷತ್ ಬಂದಮೇಲೆ ಬಹುತೇಕ ವೆಹಿಕಲ್‌ಗಳು ಬೇರೆ ಕಡೆ ರಿಪೇರಿಯಾಗುತ್ತಿವೆ. ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ಗೆ ಅಲ್ಲಿರತಕ್ಕಂತಾದ್ದು ವೆಹಿಕಲ್ ಮೆಯಿನ್‌ಟೆನೆನ್ಸ್ ಮತ್ತು ರಿಪೇರಿ. ನಮ್ಮ ಪಿ. ಡಬ್ಲ್ಯು. ಡಿ. ಅವರಿಗೆ ಕಳೆದ ೧೫ ವರ್ಷಗಳಲ್ಲಿ ಈ ಡಿಪಾರ್ಟ್‌ಮೆಂಟ್‌ಗೆ ಒಬ್ಬ ಮೆಕಾನಿಕಲ್ ಇಂಜಿನಿಯರನ್ನು ಅಲ್ಲಿಗೆ ಕೊಡುವುದಕ್ಕಾಗಿಲ್ಲ. ಸಿವಿಲ್‌ಸೈಡ್‌ನ ಎಕ್ಸಿಕ್ಯುಟಿವ್ ಇಂಜಿನಿಯರನ್ನು ಕಳುಹಿಸುತ್ತಾರೆ ಇಲ್ಲಿಗೆ ಕಳಿಸಲು ಒಬ್ಬರೂ ಮೆಕಾನಿಕಲ್ ಇಂಜಿನಿಯರ್ ಇಲ್ಲವೇ ? ಆದರೆ ಬೆಂಗಳೂರಿನಲ್ಲಿ ಪೋಸ್ಟಿಂಗ್ಸ್ ಬೇಕು ನೋಡಿ. ಇಲ್ಲಿ ಸ್ವಲ್ಪ ಜಾಗ ಶುಚಿಯಾಗಿದೆ. ಅವಕ್ಯೊಂಸ್ಕರ ಟ್ರಾನ್ ಪೋರ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಜೆನ್ಯೈನ್ ಪಾರ್ಟ್ಸ್ ಹಾಕುವುದಿಲ್ಲ. ಬಹಳ ಅವ್ಯವಹಾರ ನಡೆಯುತ್ತಿದೆ, ಜಿಲ್ಲಾಪರಿಷತ್ ಬಂದಮೇಲೆ, ಅದಕ್ಕೆ ಕೆಲಸ ಇಲ್ಲದಿದ್ದರೆ, ಅದನ್ನು ಕ್ಲೋಸ್ ಮಾಡಿ. ... ತೊಂದರೆ ಇಲ್ಲ. ಅಥವಾ ಬೇರೆ ಕಡೆ ರಿಪೇರಿಗೆ ಕಳುಹಿಸಿಕೊಡಿ. ಇವರು ಏನು ಚಾರ್ಜ್ ಮಾಡುತ್ತಾರೆ. ಅದಕ್ಕಿಂತ ಚೀಪಾಗಿ ಹೊರಗಡೆ ಚೆನ್ನಾಗಿ ಮಾಡಿಕೊಡುತ್ತಾರೆ. ಮತ್ತೆ ನಾವು ಇಡೀ ಸದನದಲ್ಲಿ ಆರೋಗ್ಯ ಇಲಾಖೆಯ ಬಗ್ಗೆ ಪ್ರಶ್ನೆ ಕೇಳಿದಾಗ ತಾವು ಏನು ಹೇಳಿದ್ದೀರಿ ಎಂದರೆ, ಈ ಇಲಾಖೆಯಲ್ಲಿ ೫,೦೬೪ ವೇಕೆನ್ಸಿಗಳು ಇವೆ ಎಂದು ಉತ್ತರವನ್ನು ಬರೆದುಕೊಟ್ಟಿದ್ದೀರಿ. ನಾನು ಅಂದುಕೊಂಡಿದ್ದೇನೆ, ಈ ಪುಸ್ತಕದಲ್ಲಿ ತಪ್ಪು ಅಚ್ಚು ಮಾಡಿದ್ದೀರಾ ಎಂದು ಮೊನ್ನೆ ಉತ್ತರ ಕೊಟ್ಟಾಗ ೫೫೫೨ ಡಾಕ್ಟರಗಳು, ೪೫೭೨ ಸಿಬ್ಬಂದಿವರ್ಗ ಖಾಲಿ ಇವೆ ಎಂದು ಹೇಳಿದ್ದೀರಿ ಆದರೆ ಇದರಲ್ಲಿ ೬೪೫೬ ವೇಕೆನ್ಸಿಗಳು ಖಾಲಿ ಇವೆಯೆಂದು ಹೇಳಿದ್ದೀರಿ, ಇದರಲ್ಲಿ ಯಾವುದು ಸರಿಯೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮ ಆರೋಗ್ಯ ಇಲಾಖೆಯಲ್ಲಿ ಏನಾದರೂ ಸುಧಾರಣೆ ಆಗಬೇಕೆಂದರೆ ಈ ವೇಕೆನ್ಸಿಗಳನ್ನು ತುಂಬಬೇಕು. ಇದು ಮಾಡದೇಹೋದರೆ ಆಗುವುದಿಲ್ಲ. ಈಗ ಸರ್ಜನ್ ವೇಕೆನ್ಸಿ ೧೧೬ ಎಂದು ಬರೆದಿದ್ದೀರಿ ಇದು ಪ್ರಮೋಷನ್ ಮೇಲೆ ಆಗತಕ್ಕಂಥಾದ್ದು, ಇವರನ್ನು ಏನಾದರು ನೇರವಾಗಿ ಅಪಾಯಿಂಟ್ ಮಾಡಿಕೊಳ್ಳುತ್ತೀರಾ? ಆರೋಗ್ಯ ಇಲಾಖೆಯಲ್ಲಿ ಪ್ರಮೋಷನ್ ಫೈಲ್ ಮೂವ್ ಆಗುವುದಕ್ಕೆ ಪ್ರಾರಂಭವಾಯಿತು ಎಂದಕ್ಷಣ, ಆ ಫೈಲ್ ಎಳೆದುಕೊಂಡು ಹೋಗುವುದಕ್ಕೆ ಬರುತ್ತಾರೆ, ನೀವು ಇದಕ್ಕೆ ಹೆದರಬೇಡಿ. ಧೈರ್ಯಮಾಡಿ, ಒಂದು ತಪ್ಪಾದರೂ ಪರವಾಯಿಲ್ಲ, ಆದರೆ ನಾಲ್ಕು ಜನಕ್ಕೆ ಉಪಯೋಗವಾಗಲಿ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹಾಗೂ ತಾಲ್ಲೂಕು ಸ್ಥಳಗಳಲ್ಲಿ ವೇಕೆಂಟ್ ಆಗಿರತಕ್ಕಂಥ ಪೋಸ್ಟ್‌ಗಳು ಫಿಲಪ್ ಆಗುತ್ತವೆ. ದಯಮಾಡಿ ಈ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹ ಮಾಡುತ್ತೇನೆ. ಮತ್ತೆ ನಿನ್ನೆದಿನ ಇದೇ ಸಭೆಯಲ್ಲಿ ಹೇಳಿದ್ದೀರಿ. ೧೯೦ ಜನ ವೈದ್ಯರುಗಳು ಸರ್ಕಾರದ ಪರವಾನಗಿ ಇಲ್ಲದೆ ವಿದೇಶಕ್ಕೆ ಹೋಗಿದ್ದಾರೆಂದು. ಇವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇದು ಬಹಳ ಕಷ್ಟದ ಕೆಲಸ, ಇದಕ್ಕೆ ಒತ್ತಡ ಬರುತ್ತವೆ. ಆದರೂ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್. ಎನ್. ನಾಯಕ್.—ನಾವು ಇಷ್ಟು ದೊಡ್ಡ ಮೆಜಾರಿಟಿ ಇಟ್ಟುಕೊಂಡು ಬಲವಾದ ಸರ್ಕಾರ ಇರುವಾಗ ಡಾಕ್ಟರುಗಳೂ ಸರ್ಕಾರಿ ನೌಕರರೇ ಆದರೂ ಸಹ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರೆ, ನಾವು ಬಲಾಢ್ಯರಲ್ಲವೆಂದು ಅರ್ಥವಾಗುತ್ತದೆ. ಮಾನ್ಯ ಸಿಂಧ್ಯರವರು. ನಾವು ಬಲಾಢ್ಯರಲ್ಲವೆಂದು ಟೀಕೆ ಮಾಡುತ್ತಾರೆ. ಮಾನ್ಯಮಂತ್ರಿಗಳು ಅವರ ವಿಚಾರದಲ್ಲಿ ನಾಳೆಯೇ ಕ್ರಮ ತೆಗೆದುಕೊಳ್ಳಬೇಕು. ತೆಗೆದುಕೊಳ್ಳುತ್ತಾರೆ, ಏಕೆ ಆಗುವುದಿಲ್ಲ. ಒಂದುವೇಳೆ, ಒತ್ತಡ ತಂದರೆ, ಅಂಥವರ ಹೆಸರನ್ನು ಇಲ್ಲಿ ಹೇಳಿ. ನಾನು ತಂದರೆ ನಮ್ಮದೂ ಹೇಳಿ. ಪಬ್ಲಿಕ್‌ಗೆ ಬರಲಿ. ನಾವು ಯಾವ ಜನರಿಗೆ ಸಹಾಯ ಮಾಡುತ್ತೇವೆಂಬುದು ಸಾರ್ವಜನಿಕರಿಗೆ ಗೊತ್ತಾಗಲಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ವೈದ್ಯರುಗಳ ಪೈಕಿ ಯಾರು ವಿದೇಶಕ್ಕೆ ಹೋಗಿದ್ದಾರೆ, ಅವರೆಲ್ಲರೂ ಅಸಿಸ್ಟೆಂಟ್ ಸರ್ಜನ್ಸ್ ಅಲ್ಲ ಅಥವಾ ನನಗೆ ಗೊತ್ತಿರುವಹಾಗೆ ಡೆಪ್ಯುಟಿ ಸರ್ಜನ್ಸ್ ಸಹ ಅಲ್ಲ. ಇವರೆಲ್ಲರೂ ಸರ್ಕಾರದ ಲೆಕ್ಕದಲ್ಲಿ ಎಂ. ಬಿ. ಬಿ. ಎಸ್. ಡಿಗ್ರಿ ತೆಗೆದುಕೊಂಡಿದ್ದಾರೆ. ಸರ್ಕಾರದ ಲೆಕ್ಕದಲ್ಲಿ ಪೋಸ್ಟ್ ಗ್ರಾಜುಯೇಷನ್ ಮಾಡಿಕೊಂಡಿದ್ದಾರೆ. ಅಸಿಸ್ಟೆಂಟ್ ಪ್ರೊಫೆಸರ್ಸ್ ಪ್ರೊಫೆಸರ್ಸ್ ಆಗಿ ಹೋಗಿದ್ದಾರೆ. ಹಣ ಸಂಪಾದನೆಗಾಗಿ ಇವರು ಈ ರಾಜ್ಯಕ್ಕೆ ದ್ರೋಹ ಮಾಡಿದ್ದಾರೆ. ನಿವೃತ್ತಿಯ ನಂತರ ಹೋಗಲಿ ಇಲ್ಲವೇ ರಾಜಿನಾಮೆ ಕೊಟ್ಟು ಹೋಗಲಿ. ಇವರ ಮೇಲೆ ನಾನು ಕ್ರಮ ತೆಗೆದುಕೊಂಡಾಗ ನನ್ನ ಮೇಲೆ ದೊಡ್ಡ ಆರೋಪಗಳನ್ನು ಮಾಡುತ್ತಿದ್ದರು. ಕೆಲವರು ಆ

ಸಂದರ್ಭದಲ್ಲಿ ನನ್ನ ಸ್ಥಾನವನ್ನೇ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿದರು, ಆರೋಗ್ಯ ಸಚಿವರು ಈ ವಿಷಯದಲ್ಲಿ ದಿಟ್ಟ ನಿಲುವು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಜಿಲ್ಲಾ ಆಸ್ಪತ್ರೆಗಳು, ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್ ಕೆಳಗಡೆ ಬರತಕ್ಕ ಆಸ್ಪತ್ರೆಗಳು ಏನಿವೆ, ಇಲ್ಲಿಗೆ ರೋಗಿಗಳ ಜೊತೆಯಲ್ಲಿ ಬರತಕ್ಕ ಪೋಷಕರು ಏನಿದ್ದಾರೆ ಇವರುಗಳಿಂದ ಆಸ್ಪತ್ರೆಗಳನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕಾಗುತ್ತಿಲ್ಲ. ಈಗ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಏನು ಒಂದು ಧರ್ಮಶಾಲೆಯನ್ನು ಮಾಡಿಸಿದ್ದಾರೆ, ಅಲ್ಲಿಗೆ ಹೋಗಿ ನೋಡಿದರೆ ಒಂದು ಕಡೆ ಬಹಳ ದುಃಖವಾಗುತ್ತದೆ, ಇಷ್ಟೊಂದು ಕ್ಯಾನ್ಸರ್ ರೋಗಿಗಳು ಇದ್ದಾರೆಯೋ ಎಂದು. ಅದು ಬಡವರಿಗೇ ಈ ರೋಗ ಬಂದಿದೆಯಲ್ಲಾ ಎಂದು.

೩-೨೦ ಪಿ. ಎಂ.

ಕ್ಯಾನ್ಸರ್ ಖಾಯಿಲೆ ಬಂತು ಎಂದರೆ ಸಾಯುವುದೇ. ಎರಡು ಮೂರು ನಾಲ್ಕು ವರ್ಷ ಬದುಕಬಹುದು ಅಷ್ಟೇ, ಆದರೆ ಅವರ ಜೊತೆಯಲ್ಲಿ ಪೋಷಕರು ಏನು ಬರುತ್ತಾರೆ, ಅವರು ಬಹಳ ಬಡವರು. ಬಡವರಿಗೆ ಸಹಾಯ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ, ಅದಕ್ಕೋಸ್ಕರ ಧರ್ಮಶಾಲೆ ಪ್ರಾರಂಭ ಮಾಡಿದರು ಆ ಕೀರ್ತಿ ಡಾ. ಭಾರ್ಗವ ಅವರಿಗೆ ಹೋಗಬೇಕು. ಅವರು ಪ್ರಾಮಾಣಿಕವಾದ ಪ್ರಯತ್ನ ಮಾಡಿದರು. ಆದ್ದರಿಂದ ನಾವು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ, ವಿಕ್ಟೋರಿಯಾ, ಬೌರಿಂಗ್ ಇಂತಹ ಎಲ್ಲ ಆಸ್ಪತ್ರೆಗಳಲ್ಲಿ ಇಂತಹ ಧರ್ಮಶಾಲೆಗಳನ್ನು ತೆರೆಯಬೇಕು. ಇದಕ್ಕಾಗಿ ದುಡ್ಡು ಕೊಡುವವರು ಇದ್ದಾರೆ. ಜಾಗ ಇದೆ. ಏತಕ್ಕೆ ಇದನ್ನು ಕಟ್ಟಬಾರದು? ಆದುದರಿಂದ ಎಲ್ಲಾ ಕಡೆಗಳಲ್ಲೂ ಧರ್ಮಶಾಲೆಗಳನ್ನು ಪ್ರಾರಂಭ ಮಾಡತಕ್ಕ ಪ್ರಯತ್ನವನ್ನು ತಾವು ಮಾಡಬೇಕೆಂದು ಕೇಳುತ್ತೇನೆ. ಇನ್ನು ಮೇಜರ್ ಆಸ್ಪತ್ರೆಗಳಲ್ಲಿರತಕ್ಕಂಥ ಎಮರ್ಜೆನ್ಸಿ ವಾರ್ಡ್‌ಗಳ ಬಗ್ಗೆ ಹೇಳಬೇಕೆಂದರೆ, ೧೦ ಜನ ಪೇಷೆಂಟ್ಸ್ ಬಂದರೆ ರಷ್ ಆಗುತ್ತದೆ. ಆಗ ಡಾಕ್ಟರ್ಸ್ ಕಂಗಾಲಾಗುತ್ತಾರೆ. ಅವರಿಗೆ ಏನು ಮಾಡಬೇಕೆಂದು ಗೊತ್ತಾಗುವುದಿಲ್ಲ. ಈ ಬೆಂಕಿ ಅಪಘಾತಗಳು, ಕಟ್ಟಡಗಳ ಮೇಲಿಂದ ಬೀಳತಕ್ಕಂಥಾ ಅಪಘಾತಗಳು, ನಮ್ಮ ಕೆ ಎಸ್ ಆರ್ ಟಿ.ಸಿ. ಹಾಗೂ ಇತರ ವಾಹನಗಳಿಂದ ಬಿದ್ದು ಆಗುವ ಅಪಘಾತಗಳ ಬಗ್ಗೆ ಹೇಳುವುದಕ್ಕೇ ಭಯವಾಗುತ್ತದೆ. ಅಪಘಾತಕ್ಕೆ ಒಳಗಾದವರು ಬಂದ ತಕ್ಷಣ ಟ್ರೀಟ್‌ಮೆಂಟ್ ಮಾಡಬೇಕೆಂದರೆ ಅಲ್ಲಿ ಜಾಗವೇ ಇಲ್ಲ. ಬೆಂಗಳೂರಿನಲ್ಲಿ ಸಂಜಯಗಾಂಧಿ ಮೆಮೋರಿಯಲ್ ಆಕ್ಸಿಡೆಂಟ್ ಕಾಂಪ್ಲೆಕ್ಸ್ ಮಾಡಿದೆವು. ಅದೂ ಕೂಡಾ ಸಾಕಾಗುವುದಿಲ್ಲ. ಇದು ಬೆಂಗಳೂರಿಗೆ ಸೀಮಿತವಾಗಿರತಕ್ಕಂಥದ್ದು ಅಲ್ಲ. ಬೆಂಗಳೂರಿನಿಂದ ಹಿಡಿದು ಬೆಳಗಾಂವರೆಗೆ, ಕೊಡಗಿನವರೆಗೆ, ಮೈಸೂರಿನಲ್ಲಿ ಹೀಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇದು ಆಗಬೇಕು. ಎಮರ್ಜೆನ್ಸಿ ವಾರ್ಡ್‌ಗಳಲ್ಲಿ ಬೆಡ್ ಸ್ಟ್ರೆಂಥ್ ಜಾಸ್ತಿ ಮಾಡಿ ಅಡಿಷನಲ್ ಡಾಕ್ಟರ್ಸ್ ಅನ್ನು ಪೋಸ್ಟ್ ಮಾಡಬೇಕು. ಇಲ್ಲದೇ ಹೋದರೆ ಆಗುವುದಿಲ್ಲ. ಇದನ್ನು ದಯವಿಟ್ಟು ಈ ವರ್ಷದಲ್ಲೇ ತಾವು ಮಾಡುತ್ತೀರೆಂದು ನಾನು ತಿಳಿದಿದ್ದೇನೆ. ಇನ್ನು ಎರಡು ಸಂಕ್ಷೇಪವಾದ ವಿಚಾರಗಳು. ಒಂದು ನಮ್ಮ ಮೆಡಿಕಲ್ ಕಾಲೇಜುಗಳಲ್ಲಿರುವ ಫೋರಾನ್ಸಿಕ್ ಡಿಪಾರ್ಟ್‌ಮೆಂಟ್ಸ್. ಈ ಡಿಪಾರ್ಟ್‌ಮೆಂಟ್‌ಗಳಲ್ಲಿ ಬಹಳ ಅವ್ಯವಹಾರ ನಡೆಯುತ್ತದೆ. ಬಹಳ ಅವ್ಯವಹಾರಗಳು ನಡೆಯುತ್ತವೆ. ಫೋರಾನ್ಸಿಕ್ ಡಿಪಾರ್ಟ್‌ಮೆಂಟ್‌ಗಳಲ್ಲಿ ರಿಪೋರ್ಟ್‌ಗಳನ್ನು ಕೊಡುತ್ತಾರೆ. ಇದು ಸತ್ಯಕ್ಕೆ ಸಾವಿರಾರು ಮೈಲಿ ದೂರವಿರುವ ರಿಪೋರ್ಟ್‌ಗಳನ್ನು ಕೊಡುತ್ತಾರೆ. ಅದನ್ನು ಟ್ರೈಟ್ ಮಾಡಬೇಕು. ಜಾಸ್ತಿ ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಹೇಳಿದರೆ ತಪ್ಪಾಗಬಹುದು. ಆದರೆ ಕೊಲೆ ಮಾಡಿರತಕ್ಕಂಥ ಅನೇಕ ಕೇಸ್‌ಗಳಲ್ಲಿ ಕೊಲೆ ಮಾಡಿಲ್ಲ ಎಂದು ಹೇಳಿಬಿಡುತ್ತಾರೆ, ಕೊಲೆ ಮಾಡದೇ ಇರುವವರ ಮೇಲೆ ಕೊಲೆ ಕೇಸ್‌ಗಳು ಬರುತ್ತವೆ. ನಾವು ಫೊರಾನ್ಸಿಕ್ ಡಿಪಾರ್ಟ್‌ಮೆಂಟ್ ಮೇಲೆ ಡಿಪೆಂಡ್ ಆಗಿದ್ದೇವೆ. ಎಲ್ಲಾ ಮೆಡಿಕಲ್ ಕಾಲೇಜುಗಳಲ್ಲಿಯೂ ಈ ವ್ಯವಹಾರಗಳು ನಡೆಯುತ್ತಿವೆ. ಕೆಲವು ಪೋಲೀಸ್ ಅಧಿಕಾರಿಗಳು ಕೆಲವು ಫೊರಾನ್ಸಿಕ್ ಡಿಪಾರ್ಟ್‌ಮೆಂಟ್‌ನವರು ಸೇರಿಕೊಂಡು ಜನಗಳ ಮರ್ಡರ್ ಅನ್ನು ಒಟ್ಟಿನಲ್ಲಿ ಮಾಡುತ್ತಿದ್ದಾರೆ, ಈ ಫೊರಾನ್ಸಿಕ್ ಡಿಪಾರ್ಟ್‌ಮೆಂಟ್‌ನ್ನು ನೀವು ಟ್ರೈಟ್ ಮಾಡಬೇಕೆಂದು ಆಗ್ರಹಪಡಿಸುತ್ತೇನೆ. ಇನ್ನು ಹಳ್ಳಿಗಳಲ್ಲಿ ಮಾಡತಕ್ಕಂಥ ಪೋಸ್ಟ್ ಮಾರ್ಟಮ್ ಏನಿದೆ: ಇದೊಂದು ದೊಡ್ಡ ಅಧ್ವಾನ. ಡಾಕ್ಟರ್ಸ್‌ದು ತಪ್ಪು ಎಂದು ನಾನು ಹೇಳುವುದಿಲ್ಲ. ನಮ್ಮ ಕಾನೂನೇ ಹಾಗೆ ಇದೆ. ಈ ಕಾನೂನನ್ನು ರಾಜ್ಯ ಸರಕಾರ ಅಥವಾ ಈ ಸದನ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಪೋಸ್ಟ್ ಮಾರ್ಟಮ್ ಕಾನೂನು ಬದಲಾವಣೆ ಮಾಡುವುದು ಕೇಂದ್ರ ಸರಕಾರ. ಕೆಲವು ಎಥಿಕ್ಸ್, ಕೆಲವು ನಾರ್ಮ್ಸ್ ಎಲ್ಲಾ ಇದಕ್ಕೆ ಇಟ್ಟುಕೊಂಡಿದ್ದಾರೆ. ಅದೇ ಮೆಡಿಕಲ್ ಎಥಿಕ್ಸ್‌ನಲ್ಲಿ ಮೆಡಿಕಲ್ ನಾರ್ಮ್ಸ್‌ನಲ್ಲಿ ಮತ್ತು ಪ್ರಾಕ್ಟೀಸ್‌ನಲ್ಲಿ ಇಲ್ಲ. ೬ ಘಂಟೆಯ ನಂತರ ಪಿ. ಎಮ್. ಮಾಡಬಾರದು ಹಳ್ಳಿಗಳಲ್ಲಿ ಯಾರೋ ಒಬ್ಬ ಸತ್ತ,

ಯಾವುದೋ ಒಬ್ಬ ಮಹಿಳೆ ಬಾವಿಗೆ ಬಿದ್ದಳು ಎಂದರೆ ಡಾಕ್ಟರ್ಸ್ ಎರಡು ದಿನ ಮೂರು ದಿನ ಓಡಿ ಹೋಗುತ್ತಾರೆ. ಅವರನ್ನು ಕರೆದುಕೊಂಡು ಬರುವುದೇ ಒಂದು ದೊಡ್ಡ ಕಷ್ಟ. ಇದಕ್ಕೆ ಒಂದು ಸಮಿತಿ ಮಾಡಿ. ಕಾನೂನು ತಜ್ಞರನ್ನು ಹಾಕಿ. ಫೋರಾನ್ಸಿಕ್ ಡಿಪಾರ್ಟ್‌ಮೆಂಟ್‌ನವರನ್ನು ಹಾಕಿ. ಅಲ್ಲಿ ಎಲ್ಲರೂ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಒಳ್ಳೆಯವರೂ ಇದ್ದಾರೆ ಅವರನ್ನೆಲ್ಲಾ ಸೇರಿಸಿ ಸಮಿತಿ ಮಾಡಿ ಹೊಸ ಕಾನೂನು ಮಾಡಬೇಕೆಂದು ಹೇಳಿದರೆ, ಒಂದು ಮಸೂದೆಯನ್ನು ಮಾಡಿ ಈ ಸದನದಲ್ಲಿ ಮಂಡನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮೆಡಿಕಲ್ ಎಜುಕೇಷನ್ ಬಗ್ಗೆ ನಾವು ಬಹಳವಾಗಿ ಮಾತನಾಡುತ್ತೇವೆ. ನಮ್ಮ ರಾಜ್ಯದಲ್ಲಿ ದೊಡ್ಡ ಅನ್ಯಾಯ ನಡೆಯುತ್ತಿದೆ ಎಂದು ಹೇಳುತ್ತೇವೆ. ಇದನ್ನು ಯಾರು ಇನ್‌ಸ್ಪೆಕ್ಟ್ ಮಾಡುವವರು ಎಂದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಎಂದು ಹೇಳಿದ ತಕ್ಷಣ ಅವರು ಸ್ವರ್ಗದಿಂದ ಬಂದಿರತಕ್ಕಂಥವರು ಎಂದು ನಾವು ತಿಳಿದುಕೊಂಡಿದ್ದೇವೆ. ಇವರು ಹೇಳುವುದೇ ವೇದ ವಾಕ್ಯ ಎಂದು ತಿಳಿದುಕೊಂಡಿದ್ದೇವೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಇನ್‌ಸ್ಪೆಕ್ಟರ್ಸ್‌ನ ಇಂಟಿಗ್ರಿಟ್‌ಏನಿದೆ ಅದನ್ನೇ ಇವತ್ತು ಸಸ್ಪೆಕ್ಟ್ ಮಾಡಬೇಕಾಗಿದೆ. ಯಾರು ಯಾರನ್ನೋ ಇನ್‌ಸ್ಪೆಕ್ಟರ್ ಆಗಿ ಹಾಕುತ್ತಾರೆ. ಯಾರಿಗೆ ಯಾವ ರೀತಿ ಬೇಕೋ ಆ ರೀತಿ ಅವರು ಬರೆದು ಕೊಡುತ್ತಾರೆ. ಈ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಿ. ಏಕೆಂದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಕೊಡತಕ್ಕ ರಿಪೋರ್ಟ್ ಸರಿಯಾದ್ದು ಏನಲ್ಲ. ಅದನ್ನು ಪ್ರಧಾನ ಮಂತ್ರಿಗಳಿಗೂ ಸಹ ಹೇಳುವವನಿದ್ದೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನಲ್ಲಿ ಇವೊತ್ತು ಫ್ರಾಗ್ ನಡೆಯುತ್ತಿದೆ. ಅವರು ಹೇಳುವುದೆಲ್ಲ ಸರಿಯಿಲ್ಲವೆಂದು ನಾನು ಹೇಳಿದ್ದೇನೆ. ಏನೋ ನಮ್ಮ ರಾಜ್ಯದ ಮೇಲೆ ದೊಡ್ಡದಾದ ಪ್ರಯತ್ನ ಮಾಡುತ್ತಿದ್ದಾರೆ. ವ್ಯವಹಾರ ಮಾಡತಕ್ಕ ಜನ ಅಲ್ಲೂ ಸಹಿತ ಇದ್ದಾರೆ. ಬಹಳ ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಇನ್ಸ್‌ಪೆಕ್ಟರ್‌ಗಳು ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಬಂದು ಹಣವನ್ನು ಕೇಳತಕ್ಕದ್ದು, ಸೀಟ್‌ಗಳನ್ನು ತೆಗೆದುಕೊಳ್ಳತಕ್ಕದ್ದು ನಡೆಯುತ್ತಿದೆ, ಇದನ್ನು ಸರಿಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕೆಂಬುದನ್ನು ತಾವು ಯೋಚನೆ ಮಾಡಬೇಕು.

ಇನ್ನು ಬ್ಲಡ್ ಬ್ಯಾಂಕ್‌ಗಳ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ನಮ್ಮ ಸರ್ಕಾರದ ಆಸ್ಪತ್ರೆಗಳ ಬಗ್ಗೆ ಎಲ್ಲಾ ಟೀಕೆ ಮಾಡುತ್ತಾರೆ. ಆದರೆ ಹೊರಗಡೆ ಇದಕ್ಕಿಂತ ಕೆಟ್ಟಿದೆ. ಏನೇನೋ ಕಾಯಿಲೆ ಇರತಕ್ಕ ಬಡವರ ರಕ್ತವನ್ನು ತೆಗೆದುಕೊಂಡು ನಮಗೆ ಮಾರುತ್ತಾರೆ. ಇದನ್ನು ಕಂಟ್ರೋಲ್ ಮಾಡಲು ಆಗುತ್ತಾ ಇಲ್ಲ. ಇದಕ್ಕೆ ಒಂದು ಹೊಸ ಕಾನೂನನ್ನು ಮಾಡಿ ಈ ಬ್ಲಡ್ ಬ್ಯಾಂಕುಗಳು ಸ್ಟ್ರಿಕ್ಟ್ ಆಗಿ ಕಾನೂನಿನ ಕೆಳಗಡೆ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು. ಏತಕ್ಕೆಂದರೆ ಏಡ್ಸ್ ರೋಗ ಹೆಚ್ಚಾಗುತ್ತಿದೆ. ನಿಮ್ಮ ವರದಿಯಲ್ಲಿ ಕರ್ನಾಟಕದಲ್ಲಿ ೧೬ ಜನಕ್ಕೆ ಏಡ್ಸ್ ರೋಗ ಬಂದಿದೆಯೆಂದು ಹೇಳಿದ್ದಾರೆ. ಇದು ನಿಜಕ್ಕೂ ನಮಗೆಲ್ಲಾ ಭಯ ಹುಟ್ಟಿಸುವಂತಹ ಒಂದು ರೋಗ ಆಗಿದೆ.

ಶ್ರೀ ಜಿ. ರಾಜೂಗೌಡ.—ಒಟ್ಟು ೩೩ ಪ್ರಕರಣಗಳು ನಡೆದು ಅದರಲ್ಲಿ ಒಬ್ಬರು ಸತ್ತಿದ್ದಾರೆಂದು ವರದಿಯಲ್ಲಿ ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಐ ಹ್ಯಾಮ್ ಸಾರಿ, ನಾನು ಕರೆಕ್ಟ್ ಮಾಡಿಕೊಳ್ಳುತ್ತೇನೆ. ಏಡ್ಸ್ ಕಾಯಿಲೆಯನ್ನು ಕಂಟ್ರೋಲ್ ಮಾಡಬೇಕೆಂದರೆ ಬ್ಲಡ್ ಬ್ಯಾಂಕುಗಳ ಮೇಲೆ ಒಂದು ರೆಗ್ಯುಲೇಷನ್ ಅನ್ನು ತೆಗೆದುಕೊಂಡು ಬರಬೇಕು. ಅದನ್ನು ಯಾವ ರೀತಿ ಮಾಡುತ್ತೀರಿ ಎಂಬುದನ್ನು ಯೋಚನೆ ಮಾಡಿ ಪರಿಣಿತರ ಜೊತೆಯಲ್ಲಿ ಕುಳಿತು ತಾವು ಇದರ ಬಗ್ಗೆ ಒಂದು ನಿಯಂತ್ರಣವನ್ನು ಮಾಡಲು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಿಮ್ಮ ಮೇಲೆ ಒತ್ತಾಯಪಡಿಸುತ್ತೇನೆ. ಇತ್ತೀಚಿನ ದಿನಗಳಲ್ಲಿ ದೊಡ್ಡ ದೊಡ್ಡ ನಗರದಲ್ಲಿ ಮಾಡರ್ನ್ ಡಯಾಗ್ನಿಸ್ಟಿಕ್ ಲ್ಯಾಬೋರೇಟರಿಗಳು ಹುಟ್ಟಿಕೊಳ್ಳುತ್ತಿವೆ. ಕೆಲವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಗುಣಶೀಲ ನರ್ಸಿಂಗ್ ಹೋಂ, ನಿಜವಾಗಿ ಈ ರಾಷ್ಟ್ರಕ್ಕೆ ಹೆಮ್ಮೆತರತಕ್ಕ ಕೆಲಸ ಮಾಡುತ್ತಿದೆ ಡಾ॥ ಗುಣಶೀಲರವರು ನಿಜವಾಗಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದನ್ನು ನಾನು ಮೆಚ್ಚುತ್ತೇನೆ. ಆದರೆ ಬೇರೆ ಕೆಲವು ನರ್ಸಿಂಗ್ ಹೋಂಗಳಲ್ಲಿ ಈ ರೀತಿಯ ಅಲ್‌ಟ್ರಾ ಮಾಡ್ರನ್ ಡಯಾಗ್ನಿಸ್ಟಿಕ್ಸ್ ಉಪಕರಣಗಳನ್ನು ತಂದಿದ್ದೇವೆಂದು ಹೇಳಿ ಜನರಿಂದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇವರ ಮೇಲೆ ಯಾವರೀತಿಯ ನಿಯಂತ್ರಣವೂ ಇಲ್ಲ. ಎಷ್ಟು ಬೇಕಾದರೂ ಇವರು ಚಾರ್ಜ್ ಮಾಡಬಹುದು. ಯಾರೋ ಒಬ್ಬರಿಗೆ ಲಿವರ್ ಪ್ರಾಬ್ಲಮ್ ಇರುತ್ತದೆ. ಒಂದು ಸ್ಕ್ಯಾನಿಂಗ್ ಮಾಡಿಸಬೇಕು. ಅವರು ೮೦೦ ರೂಪಾಯಿಯನ್ನು ಕೇಳಿದರೂ ಕೊಡಬೇಕು. ಈ ಡಯಾಗ್ನಿಸ್ಟಿಕ್ ಲ್ಯಾಬೋರೇಟರಿಗಳನ್ನು ದೊಡ್ಡ ದೊಡ್ಡ ಆಸ್ಪತ್ರೆಗಳ ಪಕ್ಕದಲ್ಲಿ ಇಟ್ಟಿದ್ದಾರೆ. ಇಂತಹವರ ಹೆಸರುಗಳನ್ನು ನಾನು ಹೇಳಲು ಹೋಗುವುದಿಲ್ಲ, ಇದರ ಮೇಲೆ ಏನಾದರೂ ರೆಗ್ಯುಲೇಷನ್ ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಿ, ಇದಕ್ಕೆ ಏನಾದರೂ ಕಾನೂನನ್ನು

ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಿ. ಕೆಲವು ನರ್ಸಿಂಗ್ ಹೋಂಗಳಲ್ಲಿ ಸುಲಿಗೆ ಮಾಡುತ್ತಿದ್ದಾರೆ. ಆದರೆ ಎಲ್ಲಾ ನರ್ಸಿಂಗ್ ಹೋಂಗಳಲ್ಲೂ ಈ ರೀತಿ ಮಾಡುತ್ತಿದ್ದಾರೆಂದು ನಾನು ಹೇಳುತ್ತಿಲ್ಲ. ಈ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡತಕ್ಕ ದಾದಿಯರಿಗೆ ೧೫೦ ರಿಂದ ೨೦೦ ರೂಪಾಯಿ ಸಂಬಳವನ್ನು ಕೊಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಎಕ್ಸಾರ್ಬಿಟೆಂಟ್ ರೇಟ್ಸ್ ಅನ್ನು ಚಾರ್ಜ್ ಮಾಡುತ್ತಾರೆ. ರೋಗಿ ಸಾಯುವ ಸ್ಥಿತಿಗೆ ಬಂದಾಗ ಎಸ್. ಎನ್. ಆರ್ ಕೆ. ಆರ್. ಆಸ್ಪತ್ರೆ ಮುಂತಾದ ದೊಡ್ಡ ಆಸ್ಪತ್ರೆಗಳಿಗೆ ಸೇರಿಸಿ ಎಂದು ಹೇಳುತ್ತಾರೆ. ಪಾಪ ಸರ್ಕಾರೀ ವೈದ್ಯರನ್ನು ನಾವು ಬಾಯಿಗೆ ಬಂದ ಹಾಗೆ ಬೈದು ಟೀಕೆ ಮಾಡುತ್ತೇವೆ. ಆದ್ದರಿಂದ ತಾವು ಇದರ ಬಗ್ಗೆ ಸಹ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಡ್ರಗ್ಸ್ ಮೆನಾಸ್ ಬಗ್ಗೆ ಯಾರು ಯೋಚನೆ ಮಾಡುತ್ತಿಲ್ಲ. ಇದರ ಬಗ್ಗೆ ಸಹ ತಾವು ಸ್ವಲ್ಪ ಯೋಚನೆ ಮಾಡಬೇಕು. ಇನ್ನು ಭಾರತೀಯ ವೈದ್ಯಕೀಯ ಪದ್ಧತಿಯಲ್ಲಿ ಕೆಲವು ಒಳ್ಳೆಯ ಔಷಧಿಗಳಿವೆ. ಆದರೆ ನಮ್ಮ ಜನಗಳಿಗೆ ಏನಾಗಿದೆಯೆಂದರೆ ಅಲೋಪತಿ ಬಗ್ಗೆ ಹುಚ್ಚು ಬಹಳ ಇದೆ. ಅದನ್ನು ಅವರು ಬಹಳವಾಗಿ ಹಚ್ಚಿಕೊಂಡು ಬಿಟ್ಟಿದ್ದಾರೆ. ಆಯುರ್ವೇದಿಕ್ ಆಸ್ಪತ್ರೆಗೆ ಹೋಗುವವನು ಸೆಕೆಂಡ್ ಗ್ರೇಡ್ ಸಿಟಿಸನ್ ಅನ್ನುವ ಸ್ಥಿತಿಯಲ್ಲಿದೆ. ಕಣ್ಣಿಗೆ ಸಂಬಂಧಪಟ್ಟ ಹಾಗೆ ದೃಷ್ಟಿಕೋನವನ್ನು ಹೆಚ್ಚು ಮಾಡತಕ್ಕ ಪ್ರಯೋಗ ಕಳೆದ ೫-೧೦ ವರ್ಷಗಳಿಂದ ಯೋಗಾಸನ ಥೆರೆಪಿ ಮೂಲಕ ನಡೆಯುತ್ತಿದೆ. ಅನೇಕ ಕಾಯಿಲೆಗಳನ್ನು ಈ ಮೂಲಕ ವಾಸಿ ಮಾಡಲಾಗುತ್ತಿದೆ. ಡಯಾಬಿಟಿಸ್‌ಗೆ ಮಾಡ್ರನ್ ಮೆಡಿಸನ್‌ಗಳು ಕೇವಲ ಕಂಟ್ರೋಲ್ ಮಾಡಬಹುದೆ ವಿನಾಃ ವಾಸಿ ಮಾಡಲು ಆಗುವುದಿಲ್ಲ. ಆದರೆ ಯೋಗಾಸನ ಮತ್ತು ಯೋಗ ಥೆರೆಪಿ ಮೂಲಕ ಇದನ್ನು ಮಾಡಬಹುದೆಂದು ಹೇಳುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಇದನ್ನು ಜಾರಿಗೆ ತರಲಿಕ್ಕೆ ಆಗುತ್ತದೆಯೋ ಎಂದು ತಾವು ಯೋಚನೆ ಮಾಡಬೇಕು. ಅದನ್ನು ಮಾಡಿದರೆ ನನಗನ್ನಿಸುತ್ತದೆ, ನಾವು ನಮ್ಮ ರಾಜ್ಯದ ಜನತೆಯ ಬಹಳ ದೊಡ್ಡ ಉಪಕಾರ ಮಾಡಿದ ಹಾಗೆ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಭಾರತೀಯ ವೈದ್ಯಕೀಯ ಪದ್ಧತಿಯಲ್ಲಿ ಯೋಗಾಸನ ಒಂದು, ಮತ್ತೆ ಇನ್ನೂ ಕೆಲವು ಕಾಯಿಲೆಗಳನ್ನು ಪೂರ್ತಿಯಾಗಿ ಗುಣಪಡಿಸಬಹುದು. ಉದಾಹರಣೆಗೆ ಜಾಂಡಿಸ್.

ಜಾಂಡೀಸ್‌ಗೆ ಯಾವ ಇಂಗ್ಲೀಷ್ ಮೆಡಿಸನ್ ಅನ್ನು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಆಯುರ್ವೇದಿಕ್ ಔಷಧಿಯನ್ನೇ ಉಪಯೋಗಿಸಬೇಕಾಗುತ್ತದೆ. ಇಂತಹ ಒಂದು ಎರಡು ಮೂರು ರೋಗಗಳಿಗೆ ಹೆಚ್ಚಿನ ಪ್ರಚಾರ ಕೊಟ್ಟು ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಮಾಡಿದರೆ ಮಾತ್ರ ರಾಜ್ಯದ ಜನತೆಗೆ ಹೆಚ್ಚಿನ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿ ಕ್ಯಾನ್ಸರ್ ಕಾಯಿಲೆಗೆ ಆಸ್ಪತ್ರೆಯನ್ನು ಮಾಡಿದ್ದೇವೆ. ಹೃದಯ ರೋಗಕ್ಕೆ ಆಸ್ಪತ್ರೆಯನ್ನು ಮಾಡಿದ್ದೇವೆ. ಆದರೆ ಮಕ್ಕಳಿಗೆ ಸಂಬಂಧಪಟ್ಟಂತೆ ಆಸ್ಪತ್ರೆ ಇಲ್ಲ. ಚಿಲ್ಡ್ರನ್ಸ್ ಹೆಲ್ತ್ ಇನ್‌ಸ್ಟಿಟ್ಯೂಟ್ ಒಂದನ್ನು ನಾವು ಮಾಡುವುದಕ್ಕೆ ಆಗಲಿಲ್ಲ. ಅದನ್ನು ಈದಿನ ಘೋಷಣೆ ಮಾಡುತ್ತೀರಾ ಎಂದು ನಾನು ಬಹಳ ಆಸೆಯನ್ನಿಟ್ಟುಕೊಂಡಿದ್ದೇನೆ. ಹಿಂದೆ ಈ ಬಗ್ಗೆ ಒಂದು ಸಮಿತಿಯನ್ನು ನಮ್ಮ ಸರ್ಕಾರ ಇದ್ದಾಗ ಮಾಡಿದ್ದೆವು. ಈ ಮಕ್ಕಳ ಆಸ್ಪತ್ರೆ ಬೆಂಗಳೂರಿನಲ್ಲಿ ಆಗಬಹುದು, ಮೈಸೂರಿನಲ್ಲಿ ಆಗಬಹುದು, ಅಥವಾ ಹುಬ್ಬಳ್ಳಿಯಲ್ಲಿ ಆಗಬಹುದು ಎಲ್ಲಾದರೂ ಒಂದು ಕಡೆ ಶುರು ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಮಾಡಿ ಎಂದರೆ ಈ ಕಡೆ ಜನ ನಮ್ಮ ಮೇಲೆ ಸಿಟ್ಟಿಗೇಳುತ್ತಾರೆ. ತಾವು ಬೇಕಾದರೆ ಹುಬ್ಬಳ್ಳಿಯಲ್ಲಿ ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಇವತ್ತು ಚಿಲ್ಡ್ರನ್ಸ್ ಹೆಲ್ತ್ ಇನ್‌ಸ್ಟಿಟ್ಯೂಟ್ ಮಾಡತಕ್ಕಂಥ ಅಗತ್ಯ ಬಹಳ ಇದೆ. ಅದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಹೃದಯ ರೋಗಕ್ಕೆ ಸಂಬಂಧಪಟ್ಟಂತೆ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಏನಿದೆ. ಅಲ್ಲಿ ತುಂಬಾ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಬಹಳ ಜನರು ಹೃದಯ ರೋಗಿಗಳು ಬರುತ್ತಾರೆ. ಆದರೆ ಅವರಿಗೆ ಬೆಡ್ಸ್ ಕಡಿಮೆ ಇರುವುದರಿಂದ ಬಹಳ ತೊಂದರೆಯಾಗುತ್ತಿದೆ. ಅಲ್ಲಿ ವೈದ್ಯರು ಸರಿ ಇಲ್ಲವೆಂದು ನಾನು ಹೇಳುತ್ತಿಲ್ಲ ನಾನು ಹೇಳುತ್ತಿರುವುದೇನೆಂದರೆ ಅಲ್ಲಿ ಬೆಡ್ಸ್ ಸ್ಟ್ರೆಂತ್ ಬಹಳ ಕಡಿಮೆ ಇದೆ. ಅದನ್ನು ತಾವು ಈ ಸಾರಿ ಹೆಚ್ಚು ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ತಾವು ಅಲ್ಲಿಗೆ ಹೋಗಿ ಶಂಕುಸ್ಥಾಪನೆಯನ್ನು ಸಹ ಮಾಡಿ ಬಂದಿದ್ದೀರಿ. ತಾವು ಅವರಿಗೆ ಈ ವರ್ಷ ಒಂದು ಐದು ಕೋಟಿ ರೂಪಾಯಿಗಳನ್ನು ಕೊಡಿ. ಅದರಿಂದ ಈ ಕರ್ನಾಟಕ ರಾಜ್ಯದ ಜನತೆಗೆ ಉಪಯೋಗವಾಗುತ್ತದೆ. ಅದು ಒಳ್ಳೆಯ ಸಂಸ್ಥೆ. ಇದು ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಅಲ್ಲ ಇಡೀ ಕರ್ನಾಟಕ ರಾಜ್ಯದಿಂದ ಅಲ್ಲಿಗೆ ಜನ ಬರುತ್ತಾರೆ. ಮತ್ತೆ ಅದು ಕೇವಲ ಆಸ್ಪತ್ರೆ ಅಲ್ಲ. ಅಲ್ಲಿ ಉನ್ನತ ಶಿಕ್ಷಣ ಮಾಡಲಿಕ್ಕೆ ಬೇಕಾದ ಅವಕಾಶ ಕೂಡ ಇದೆ. ಇದನ್ನು ತಾವು ಗಮನದಲ್ಲಿಟ್ಟು

ಕೊಂಡು ಹಣ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಸಂಜಯ ಗಾಂಧಿ ಆಸ್ಪತ್ರೆ ಕಾಂಪ್ಲೆಕ್ಸ್ ಏನು ಇದೆ ಅದನ್ನು ಪ್ರಾರಂಭ ಮಾಡಿರತಕ್ಕಂಥ ಕಾನ್ಸೆಪ್ಟ್ ಅನ್ನು ನಾವು ಮರೆತಿದ್ದೇವೆ. ಅದು ಒಂದು ಜನರಲ್ ಆಸ್ಪತ್ರೆ ಆಗಿ ಹೋಗಿದೆ. ಎಲ್ಲಿಯಾದರೂ ಆಕ್ಸಿಡೆಂಟ್ಸ್ ಆದರೆ ಸಾಕು ಹೊತ್ತು ಕೊಂಡು ಹೋಗಿ ಸಂಜಯ ಗಾಂಧಿ ಆಕ್ಸಿಡೆಂಟ್ಸ್ ಕಾಂಪ್ಲೆಕ್ಸ್‌ಗೆ ಹಾಕುತ್ತೇವೆ. ಅದಕ್ಕೆ ಒಂದು ಹೊಸ ದಾದ ಕಾನ್ಸೆಪ್ಟ್ ಇದೆ. ಆ ಕಾನ್ಸೆಪ್ಟ್ ಏನೆಂದರೆ ಬೆಂಗಳೂರು ನಗರದಲ್ಲಿ ಎಲ್ಲಿಯಾದರೂ ಆಕ್ಸಿಡೆಂಟ್ಸ್ ಆದರೆ ತಕ್ಷಣ ಅಲ್ಲಿಗೆ ತೆಗೆದುಕೊಂಡು ಹೋಗಬೇಕು. ಅದಕ್ಕೆ ಅಲ್ಲಿ ಒಂದು ವೈರ್‌ಲೆಸ್ ಸಿಸ್ಟಂ ಇರಬೇಕು. ನಂತರ ೮–೧೦ ಅಂಬುಲೆನ್ಸ್ ವ್ಯಾನ್ಸ್ ಇರಬೇಕು ಆಕ್ಸಿಡೆಂಟ್ಸ್ ಆದ ತಕ್ಷಣ ಒಂದು ಗಂಟೆ ಗೋಲ್ಡನ್ ಅವರ್ ಏನಿದೆ ಆ ಸಮಯದಲ್ಲಿ ಆಕ್ಸಿಡೆಂಟ್ ಆದವರನ್ನು ಕರೆದುಕೊಂಡು ಬಂದರೆ ಅವರು ಸಾಯುವುದನ್ನು ತಪ್ಪಿಸಬಹುದು ಅಥವಾ ಹೆಚ್ಚು ಅಂಗವಿಕಲರಾಗುವುದನ್ನಾದರೂ ಕೊನೆಯ ಪಕ್ಷ ತಪ್ಪಿಸಬಹುದು. ಕೊನೆಯ ಪಕ್ಷ ಕ್ರಿಪಲ್ಡ್ ಆಗುವುದನ್ನಾದರೂ ತಪ್ಪಿಸಬಹುದು. ಜನರಲ್ ಆಸ್ಪತ್ರೆಯಲ್ಲಿ ಇದ್ದಂತೆ ಮಾಡಲು ಆ ಸಂಜಯಗಾಂಧಿ ಆಸ್ಪತ್ರೆಯನ್ನು ಪ್ರಾರಂಭ ಮಾಡಿದ್ದು ಅಲ್ಲ. ಯಾವ ದೃಷ್ಟಿಯಿಂದ ಅದನ್ನು ಮಾಡಿದ್ದು ಎಂದರೆ It is an elevated hospital. Unfortunately it has become Orthopaedics Department like any other Hospital. ಅವರನ್ನು ರೀಹ್ಯಾಬಿಲಿಟೇಟ್ ಮಾಡತಕ್ಕಂಥ ಗೋಲ್ಡನ್ ಅವರ್ ಏನಿದೆ ಆ ಗೋಲ್ಡನ್ ಅವರ್‌ನಲ್ಲಿ ಆಕ್ಸಿಡೆಂಟ್ಸ್ ಆದವರನ್ನು ಕರೆದುಕೊಂಡು ಬಂದರೆ ಟ್ರೀಟ್‌ಮೆಂಟ್ ಮಾಡುವುದಕ್ಕೆ ಅನುಕೂಲ ವಾಗುತ್ತದೆ ಮತ್ತು ಅವರ ಪ್ರಾಣವನ್ನು ಸಹ ಉಳಿಸಬಹುದು. ಈ ಆಸ್ಪತ್ರೆಗೆ ತಾವು ಹೆಚ್ಚು ಹಣ ಕೊಡುತ್ತೀರಿ ಎಂದು ನಾನು ನಂಬಿದ್ದೇನೆ. ತಾವು ಹೆಚ್ಚು ಹಣ ಕೊಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ಆ ಸಂಜಯಗಾಂಧಿ ಆಕ್ಸಿಡೆಂಟ್ಸ್ ಅಂಡ್ ರೀಹ್ಯಾಬಿಲಿಟೇಷನ್ ಕಾಂಪ್ಲೆಕ್ಸ್ ಅದ ಶೌಚಾಗಾರದಲ್ಲಿ ಇದೆ. ಆ ಬಗ್ಗೆ ತಾವು ಗಮನ ಕೊಡಬೇಕೆಂದು ನಾನು ಈಗಾಗಲೇ ತಮಗೆ ಹೇಳಿದ್ದೇನೆ. ಇನ್ನು ಮಾನ್ಯ ಆರೋಗ್ಯ ಮಂತ್ರಿಗಳನ್ನು ಬೆಯುವುದಿಲ್ಲ. ಸರ್ಕಾರ ಹಿಂದುಳಿದವರ್ಗಗಳ ಬಗ್ಗೆ ಬಡವರ ಬಗ್ಗೆ ಅನುಕಂಪ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಸುಧಾರಣೆ ಕಡೆ ಗಮನ ಕೊಟ್ಟಿಲ್ಲ. ತಾವು ಕೇವಲ ಔಷಧಿ ಮಾರಾಟ ಮಾಡತಕ್ಕಂಥಾದ್ದು ಮತ್ತು ಔಷಧಿ ಕೊಂಡುಕೊಳ್ಳತಕ್ಕಂಥಾದ್ದು ವೈದ್ಯರನ್ನು ನೇಮಕ ಮಾಡಿಕೊಳ್ಳತಕ್ಕಂಥಾದ್ದು ಅದಕ್ಕಿಂತ ಮುಖ್ಯವಾಗಿ preventive aspects ಏನಿದೆ, ಹೆಲ್ತ್ ಡೆಲಿವರಿ ಸಿಸ್ಟಂ ಏನಿದೆ, ಲೋಯರ್ ಲೆವೆಲ್‌ನಲ್ಲಿ ಲೋಯಸ್ಟ್ ಮ್ಯಾನ್ ಯಾರು ಬರುತ್ತಾರೋ ಅವರಿಗೆ ಉಪಯೋಗ ಆಗ ತಕ್ಕಂಥ ಸೂತ್ರವನ್ನು ಈ ರಾಜ್ಯದಲ್ಲಿ ಜಾರಿಗೆ ತರಬೇಕು. ಈಗ ಏನು ಈ ಪದ್ಧತಿ ನಿದ್ದೆ ಮಾಡುತ್ತಿದೆ. ಅದನ್ನು ತಾವು ಬಡಿದೆಬ್ಬಿಸಬೇಕು. ಅದನ್ನು ಮಾಡಿದರೆ ನಮ್ಮ ರಾಜ್ಯದ ಜನತೆಯ ಸುಧಾರಣೆ ಯಾಗುತ್ತದೆ, ಅವರ ಆರೋಗ್ಯ ಸುಧಾರಿಸುತ್ತದೆ ಎಂದು ನಾನು ನಂಬಿದ್ದೇನೆ ಆ ಪ್ರಯತ್ನವನ್ನು ತಾವು ಮಾಡಬೇಕೆಂದು ಹೇಳಿ ಈ ಬೇಡಿಕೆಗಳಿಗೆ ನಾನು ನನ್ನ ಒಪ್ಪಿಗೆಯನ್ನು ಕೊಡದೆ ನನ್ನ ಮಾತನ್ನು ಮುಗಿಸುತ್ತೇನೆ.

† ಡಾ. ಎಲ್. ಮಲಕರೆಡ್ಡಿ (ಯಾದ್‌ಗೀರ್).—ಮಾನ್ಯ ಉಪಾಧ್ಯಕ್ಷಿಣಿಯವರೇ ೧೯೯೦–೯೧ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಗಳ ಬೇಡಿಕೆಗಳಿಗೆ ನನ್ನ ಬೆಂಬಲ ಸೂಚಿಸುತ್ತಾ ಕೆಲವು ಮಾತುಗಳನ್ನು ಆಡಲಿಚ್ಛಿಸುತ್ತೇನೆ ಮಾತಾಡುವವರು ಇನ್ನೂ ಬಹಳ ಇದ್ದಾರೆ. ಸಮಯ ಬಹಳ ಸೀಮಿತವಾಗಿದೆಯೆಂದು ಸೂಚನೆ ಬಂತು ಆದರೂ ಸಹ ಸ್ವಲ್ಪ ಸಮಯದಲ್ಲಿ ಈ ಖಾತೆಯ ಬಗ್ಗೆ ನನ್ನ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಸನ್ಮಾನ್ಯ ಶಾಸಕರಾದ ಶ್ರೀ ಸಿಂಧ್ಯಾ ಅವರು ಬಹಳ ವಿಶಾಲವಾಗಿ ಮಾತನಾಡಿದರು ಏಕೆಂದರೆ ಅವರು ಮಂತ್ರಿಯಾಗಿ ಅವರು ಈ ಖಾತೆಯನ್ನು ನಿರ್ವಹಿಸಿ ಕೆಲಸ ಮಾಡಿದ್ದರಿಂದ ಅವರಿಗೆ ಪ್ರತ್ಯಕ್ಷ ಅನುಭವ ಮಾಹಿತಿಗಳು ಅವರಿಗೆ ಸಾಕಷ್ಟು ಇರುವುದ ರಿಂದ ಚೆನ್ನಾಗಿ ವಿಶ್ಲೇಷಿಸಿ ಮಾತನಾಡಿದರು ಮತ್ತು ಅವರು ವಿರೋಧ ಪಕ್ಷದಲ್ಲಿರುವುದರಿಂದ ಅನೇಕ ಲೋಪದೋಷಗಳು ಅವರ ಕಿವಿಗೆ ಮುಟ್ಟುತ್ತವೆ. ನಾನೂ ಕೂಡ ಮೊಲ್ಮನೆಯಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದಾಗ ರಾಜ್ಯದ ನಾನಾ ಕಡೆಯಿಂದ ಏನು ನಾನಾ ಲೋಪದೋಷಗಳು ಈ ಖಾತೆಯಲ್ಲಿವೆ ಅವು ನನ್ನನ್ನು ಮುಟ್ಟುತ್ತಿದ್ದುವು. ಆಗ ನಾನು ಸಹ ಸುದೀರ್ಘವಾಗಿ ಈ ಖಾತೆಯ ಬಗ್ಗೆ ಮಾತಾಡು ತ್ತಿದ್ದೆ ನಾನು ವೈದ್ಯನಾದ್ದರಿಂದ ಮತ್ತು ನನ್ನ ಆಯುಸ್ಸವಿಡಿ ಪ್ರಮುಖವಾದ ಆಸ್ಪತ್ರೆಗಳಲ್ಲಿ ಮತ್ತು ಮೆಡಿಕಲ್ ಕಾಲೇಜ್‌ಗಳಲ್ಲಿ ಕೆಲಸಮಾಡಿದ್ದರಿಂದ ನನ್ನ ಮಾತಿ ನಗತ್ತು ಸ್ವಲ್ಪ ಬೇರೆ ರೀತಿಯಲ್ಲಿ ಇರುತ್ತದೆ. ಸನ್ಮಾನ್ಯ ಸಿಂಧ್ಯಾ ಅವರು ಪ್ರಾಥಮಿಕ ಆರೋಗ್ಯಕ್ಕೆ ಸ್ವಲ್ಪ ಒತ್ತು ಕೊಟ್ಟು ಮಾತ ನಾಡಿದರು ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳಲ್ಲಿ ಆರೋಗ್ಯ ಖಾತೆ ಬಹಳ ಗಣನೀಯ ಪಾತ್ರವನ್ನು ವಹಿಸಬೇಕಾಗುತ್ತದೆ, ಶಿಕ್ಷಣ ಖಾತೆ ಜೊತೆಗೆ ಆರೋಗ್ಯ ಖಾತೆ ಸಹ ಸೇರುತ್ತದೆ. ಯಾವುದೇ ಸಂಸ್ಥೆ ಉತ್ತಮವಾಗಿ ಕೆಲಸ ಮಾಡಬೇಕಾದರೆ ಎರಡು ಕಾಂಪನೆಂಟ್ ಇರುತ್ತವೆ ಒಂದು ಹ್ಯೂಮನ್

ಕಾಂಪನೆಂಟ್ ಫ್ಯಾಕ್ಟರ್, ಇನ್ನೊಂದು ಇನ್‌ಫ್ರಾಸ್ಟ್ರಕ್ಚರಲ್ ಫೆಸಿಲಿಟೀಸ್, physical facilities that are provided to deliver the goods. ಇವೆರಡೂ ಬೇಕು. ನಾವು ಎಷ್ಟೇ ಸೌಲಭ್ಯ ಸೌವಲತ್ತು ಒದಗಿಸಿಕೊಟ್ಟರೂ ಕೂಡ ಎಂತಹ ಗುಣಮಟ್ಟದ ಸಲಕರಣೆಗಳನ್ನು ಒದಗಿಸಿ ಕೊಟ್ಟರೂ ಕೂಡ ಕೆಲಸ ಮಾಡುವವರು ಚೆನ್ನಾಗಿ ಕೆಲಸ ಮಾಡದಿದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಮತ್ತು ಇಚ್ಛಿತ ಫಲ ಕೊಡುವುದಿಲ್ಲ. ಅದರ ಅಪಕೀರ್ತಿಗೆ ಸರ್ಕಾರ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ನನಗೆ ಅನಿಸುವುದೇನೆಂದರೆ ನಾವು ಸಂಸ್ಥೆಗಳನ್ನು ಪ್ರಾರಂಭ ಮಾಡುವುದರಲ್ಲಿ ಬಹಳ ಉತ್ಸಾಹ ತೋರುತ್ತೇನೆ ನಾನು ಎಂಎಲ್‌ಎ ಇದ್ದಾಗ ನನ್ನ ಇಷ್ಟು ಕ್ಷೇತ್ರದಲ್ಲಿ ಪಿಹೆಚ್‌ಸಿ ಆಗಬೇಕು, ಇಷ್ಟಿಷ್ಟು ಕಾಲೇಜ್‌ಗಳು ಆಗಬೇಕು ಎಂದು ಸರ್ಕಾರವನ್ನು ಕಾಡಿಸಿ ಪೀಡಿಸಿ ಈ ಸಂಸ್ಥೆಗಳನ್ನು ಪ್ರತಿಷ್ಠೆಗಾಗಿ ತೆಗೆದುಕೊಳ್ಳುತ್ತೇವೆಯೇ ವಿನಾ ಅದರಿಂದ ಪ್ರಯೋಜನ ಸಿಗತಕ್ಕ ಎಷ್ಟರಮಟ್ಟಿಗೆ ಸಾಮಾನ್ಯ ಜನರಿಗೆ ಸಿಗುತ್ತದೆಂಬುದನ್ನು ನಾವು ವಿಚಾರ ಮಾಡುವುದಿಲ್ಲ. ನನ್ನ ೧೨ ವರ್ಷಗಳ ಸಾರ್ವಜನಿಕ ಪ್ರೊಫೆಸರ್ ಜೀವನದಲ್ಲಿ ಕಾಲಿಡುವುದಕ್ಕೆ ಮೊದಲು ಗುಲ್ಬರ್ಗದಲ್ಲಿರುವ ಮೆಡಿಕಲ್ ಕಾಲೇಜ್‌ನಲ್ಲಿ ಪ್ರೊಫೆಸರ್ ಆಗಿದ್ದೆ ಅಷ್ಟು ಉನ್ನತ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸಾರ್ವಜನಿಕ ಜೀವನಕ್ಕೆ ಕಾಲಿಡಲು ತೀರ್ಮಾನಿಸಿದಾಗ ಬಹಳ ಜನರು ನೀನು ತಪ್ಪು ಮಾಡುತ್ತಿದ್ದೀಯಾ ಎಂದರು ಆದರೆ ನನಗೆ ಅಲ್ಲಿ ಕೆಲಸ ಮಾಡುವುದಕ್ಕೆ ಬಹಳ ಸ್ಕೋಪ್ ಕೇಷನ್ ಇತ್ತು ನಮ್ಮ ಅನುಭವ ನಮ್ಮ ವಿದ್ಯೆ ವ್ಯರ್ಥವಾಗುತ್ತಿದೆ ಎಂದು ನನಗೆ ಅನಿಸಿದ ಕಾರಣ ಆ ಕೆಲಸ ಬಿಟ್ಟೆ ಜನರಿಗೆ ಸೇವೆ ಸಲ್ಲಿಸಬೇಕೆಂದು ಸಂಸ್ಥೆಗಳನ್ನು ನಾವು ಸ್ಥಾಪನೆ ಮಾಡುತ್ತೇವೆ. ಆದರೆ ನಾವು ಯಾವ ರೀತಿಯಿಂದ ಆಸೆ ಮಾಡುತ್ತೇವೆ. ಆ ರೀತಿಯಿಂದ ಸೇವೆ ಮಾಡುವುದಕ್ಕಾಗುವುದಿಲ್ಲ ಏಕೆ ಹೀಗಾಗುತ್ತದೆ ಎಂದರೆ ನಾವು ಯಾವುದೋ ಆದರ್ಶದ ದೃಷ್ಟಿ ಇಟ್ಟುಕೊಂಡು ಅದನ್ನು ಮಾಡಲು ಹೊರಡುತ್ತೇವೆ ಆವರೆ ನಮ್ಮ ಆದರ್ಶಕ್ಕೆ ಅಗತ್ಯವಾದ ಶಕ್ತಿ ಮತ್ತು ಹಣ ನಮ್ಮಲ್ಲಿ ಇದೆಯೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಅಡ್ವಾನ್ಸ್ಡ್ ಕಂಟ್ರೀಸ್‌ನಲ್ಲಿ ಇಂತಿಂಥ ಸಂಸ್ಥೆಗಳಿವೆ, ಇಂತಿಂಥ ಫೆಸಿಲಿಟೀಸ್ ಕೊಡುತ್ತಾರೆಂದು ತಿಳಿದು ಬಂದು ಅದೇ ರೀತಿ ಇಲ್ಲೂ ಪ್ರಾರಂಭ ಮಾಡುತ್ತೇವೆ. ಈಗ ನಾವು ಹೆಲ್ತ್ ಡೆಲಿವರಿ ಸಿಸ್ಟಂ ಎಂದು ಪ್ರಾರಂಭ ಮಾಡಿದ್ದೇವೆ ಇದರ ಮೂಲ ಸ್ವರೂಪವೇನು ಎಂಬುದನ್ನು ತಿಳಿಸಲು ಪ್ರಯತ್ನ ಮಾಡುತ್ತೇನೆ. ಏಕೆಂದರೆ ಈ ಮನೆ ಸಾಕಷ್ಟು ಸಂಪತ್ತನ್ನು ಗಳಿಸಿಕೊಡುವಂತಹ ಜವಾಬ್ದಾರಿಯನ್ನು ಹೊಂದಿದೆ ಆದ್ದರಿಂದ ಯಾವ ಬಾಬ್ತಿಗೆ ಯಾವ ಖಾತೆಗೆ ಆದ್ಯತೆ ಕೊಟ್ಟು ಹಣ ಕೊಡಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಆರೋಗ್ಯ ಸೇವೆಯನ್ನೇ ಮೂರು ಭಾಗವಾಗಿ ವಿಂಗಡಣೆ ಮಾಡಬಹುದು.

ಅದರಲ್ಲಿ ಪ್ರೈಮರಿ ಹೆಲ್ತ್ ಕೇರ್ ಸಿಸ್ಟಂ ಒಂದು ನಾನು ಸ್ವಲ್ಪ ಅರ್ಬಿಟ್ರರಿಯಾಗಿ ಮಾಡುತ್ತಿದ್ದೇನೆ. ಅದು ತಾತ್ವಿಕವಾಗಿ ಲಿಖಿತದಲ್ಲಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಸೆಕೆಂಡರಿ ಹೆಲ್ತ್ ಕೇರ್ ಸಿಸ್ಟಂ ಟರ್ಷರಿ ಹೆಲ್ತ್ ಕೇರ್ ಸಿಸ್ಟಂ ಎಂದು ಹೇಳಿ ಮೂರು ಭಾಗವಾಗಿ ನಾನು ಮಾಡುತ್ತೇನೆ. ಪ್ರೈಮರಿ ಹೆಲ್ತ್ ಕೇರ್ ಸಿಸ್ಟಂನಲ್ಲಿ. ಪ್ರೈಮರಿ ಹೆಲ್ತ್ ಸಬ್ ಸೆಂಟರ್ ಎಂದು ಮಾಡಿದ್ದೇವೆ. ಅಲ್ಲಿ ಡಾಕ್ಟರ್ ಇರುವುದಿಲ್ಲ. ಪ್ರತಿಯೊಂದು ಪ್ರೈಮರಿ ಹೆಲ್ತ್ ಸಬ್ ಸೆಂಟರ್‌ನಲ್ಲಿ ಇಬ್ಬರು ಕೆಲಸ ಮಾಡುತ್ತಾರೆ. ಒಬ್ಬರು ಹೆಲ್ತ್ ವಿಸಿಟರ್. ಅವನು ಆ ವರ್ಕರ್ ಮೇಲೆ ಇರುತ್ತಾರೆ, ಅವನ ಕೆಲಸ ಏನೆಂದರೆ ಮಲೇರಿಯಾ ಖಾಯಿಲೆಯನ್ನು ನೋಡುವುದು, ಕಮ್ಯೂನಿಕೇಬಲ್ ಡಿಸೀಸ್ ಇದ್ದರೆ ಅದನ್ನು ಐಡೆಂಟಿಫೈ ಮಾಡಿ ಡಾಕ್ಟರ್‌ರವರಿಗೆ ತಿಳಿಸುವುದು. ಆ ಹೆಲ್ತ್ ಪ್ರೈಮರಿ ಸಬ್ ಸೆಂಟರ್‌ನಲ್ಲಿ ಇನ್ನೊಬ್ಬರು ಎ. ಎನ್. ಎಂ ಎಂದು ಇರುತ್ತಾರೆ. ಆ ಹೆಂಗಸಿನ ಕೆಲಸ ಏನೆಂದರೆ ಗರ್ಭಿಣಿ ಹೆಣ್ಣು ಮಕ್ಕಳನ್ನು ನೋಡುವುದು ಮತ್ತು ಚಿಕ್ಕ ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳುವುದು ಗರ್ಭಿಣಿಗೆ ಆರೋಗ್ಯದ ಬಗ್ಗೆ ಉಪದೇಶ ನೀಡುವುದು, ಯಾವ ರೀತಿ ಆರೋಗ್ಯವನ್ನು ಕಾಪಾಡಿಕೊಂಡು ಹೋಗಬೇಕೆಂದು ತಿಳಿಸುವುದು, ಮತ್ತು ಮಗುವನ್ನು ಯಾವ ರೀತಿ ನೋಡಿಕೊಳ್ಳಬೇಕು, ಅದನ್ನು ಕಲಿಸಿಕೊಡುತ್ತಾರೆ. ಮತ್ತು ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳುತ್ತಾರೆ. ಇಂಥ ಆರು ಪ್ರೈಮರಿ ಹೆಲ್ತ್ ಸಬ್ ಸೆಂಟರ್ಸ್ ಏನು ಇರುತ್ತದೆ, ಅದರ ಮೇಲೆ ಇಬ್ಬರು ನಿಗ್ರಹಣ ಮಾಡುವವರು ಇರುತ್ತಾರೆ. ಹೆಲ್ತ್ ಇನ್ಸ್‌ಪೆಕ್ಟರ್ ಮತ್ತು ಹೆಲ್ತ್ ವಿಸಿಟರ್ ಎಂದು ಒಬ್ಬರು ಗಂಡಸರು ಮತ್ತು ಒಬ್ಬರು ಹೆಂಗಸರು ಇರುತ್ತಾರೆ. ಆ ಆರು ಸಬ್ ಸೆಂಟರ್‌ಗೆ ಪ್ರೈಮರಿ ಹೆಲ್ತ್ ಸೆಂಟರ್ ಎಂದು ತಿಳಿದುಕೊಂಡು ನಾವು ಸ್ಥಾಪನೆ ಮಾಡುತ್ತೇವೆ. ಅಂದರೆ ಮೂವತ್ತು ಸಾವಿರ ಜನಸಂಖ್ಯೆಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್ ಇರುತ್ತದೆ. ಅದರ ಕೆಳಗಡೆ ಆರು ಸಬ್ ಸೆಂಟರ್ ಇರುತ್ತದೆ. ಇವರೆಲ್ಲರೂ ಕೂಡಾ ಸೇರಿಕೊಂಡು ಜನರ ಆರೋಗ್ಯವನ್ನು ಮೂಲಮಟ್ಟದಲ್ಲಿ ನಿಗ್ರಹಣೆ ಮಾಡಬೇಕು. ಇಂಥವು ಆರು ಸೆಂಟರ್ ಮೇಲೆ ಒಂದು ಕವ

ಎಂದು ಮಾಡುತ್ತೇವೆ. ಈ ಕಮ್ಯೂನಿಟಿ ಹೆಲ್ತ್ ಸೆಂಟರ್‌ನಲ್ಲಿ ಆರು ಪ್ರೈಮರಿ ಹೆಲ್ತ್ ಸೆಂಟರ್ಸ್ ಬರುತ್ತದೆ. ಪ್ರೈಮರಿ ಹೆಲ್ತ್ ಸಬ್ ಸೆಂಟರ್, ಪ್ರೈಮರಿ ಹೆಲ್ತ್ ಸೆಂಟರ್ ಮತ್ತು ಕಮ್ಯೂನಿಟಿ ಹೆಲ್ತ್ ಸೆಂಟರ್. ಇವು ಮೂರನ್ನು ಕೂಡಿಸಿ ಮಿನಿಮಮ್ ನೀಡ್ಸ್ ಪ್ರೋಗ್ರಾಮ್ ಎಂದು ಕರೆಯುತ್ತೇವೆ ಆರೋಗ್ಯದ "ಕನಿಷ್ಟ ಪೂರೈಕೆಯ ವ್ಯವಸ್ಥೆ" ಎಂದು ಹೇಳುತ್ತೇನೆ. ಈ ಆರೋಗ್ಯದ ಕನಿಷ್ಟ ಪೂರೈಕೆಯ ವ್ಯವಸ್ಥೆಯನ್ನು ನಾವು ಸರ್ಕಾರದ ವತಿಯಿಂದ ಇದನ್ನು ಜನರಿಗೆ ಮಾಡಿಕೊಡುತ್ತೇವೆ. ಈಗ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಆರು ಬೆಡ್ ಫೆಸಿಲಿಟೀಸ್ ಇರಬೇಕು ಎಂದು ಇದೆ. ನಮ್ಮಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಎಷ್ಟಿದೆ ಎಂದರೆ ೧೧೪೨ ಪ್ರೈಮರಿ ಹೆಲ್ತ್ ಸೆಂಟರ್ ಇದೆ. ಆದರೆ ನಾವು ಈ ಪ್ರತಿಯೊಂದು ೧೧೪೨ ಪ್ರೈಮರಿ ಹೆಲ್ತ್ ಸೆಂಟರ್ ಇದ್ದರೆ, ಆರು ಬೆಡ್ ಫೆಸಿಲಿಟೀಸ್ ಕೊಡಬೇಕು, ಸೀರಿಯಸ್ ಪೇಷೆಂಟ್ಸ್ ಬಂದರೆ ಅವರಿಗೆ ಜಾಗ ಎಲ್ಲಿ ಮಾಡಬೇಕು? ಅವರನ್ನು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೋ ಜಿಲ್ಲೆಯ ಹೆಡ್ ಕ್ವಾರ್ಟರ್ಸ್‌ಗೋ ಕಳುಹಿಸಿ ಕೊಡಬೇಕು. ಅದಕ್ಕಾಗಿ ಮೂಲಭೂತವಾಗಿ ಅವರಿಗೆ ವೈದ್ಯಕೀಯ ಸಹಾಯ ಸಿಗಲಿ, ಖಾಯಿಲೆ ಗಂಭೀರ ಇದ್ದವರಿಗೆ ಸಹಾಯ ಸಿಗಲಿ, ಗಂಭೀರ ಸ್ವರೂಪದ ರೋಗಿಗಳು ಇದ್ದವರಿಗೆ ಆ ದೃಷ್ಟಿಯಿಂದ ಆರು ಬೆಡ್‌ಗಳನ್ನು ಕೊಡಬೇಕು. ಆದರೆ ನಮ್ಮಲ್ಲಿ ಎಷ್ಟಿದೆ ? ೨೭೫ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಬೆಡ್‌ಗಳು ಇದೆ. ಎಷ್ಟು ಗ್ಯಾಪ್ ಇದೆ ? ಅದಕ್ಕಾಗಿ ನಾನು ಹೇಳುವುದು, ನಾವು ಸಂಸ್ಥೆಗಳನ್ನು ಸ್ಥಾಪನೆ ಮಾಡುತ್ತೇವೆ, ಎಂದು ಹೇಳಿ ಈಗ ಏನಾಗಿದೆ ಎಂದು ಹೇಳಿದರೆ ಹಣೆಬರಹ ಎಂದು ಕೇಳಿದರೆ ಒಬ್ಬ ಡಾಕ್ಟರ್‌ನ್ನು ಅಪಾಯಿಂಟ್ ಮಾಡುತ್ತೇವೆ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿಯೋ ಅಥವಾ ಪ್ರೈಮರಿ ಹೆಲ್ತ್ ಯೂನಿಟ್‌ನಲ್ಲಿ ಮಾಡುತ್ತೇವೆ. ಪ್ರೈಮರಿ ಹೆಲ್ತ್ ಯೂನಿಟ್ ಸ್ಕೀಮ್ ಎಂದು ಇಟ್ಟುಕೊಳ್ಳಬೇಕು ಎಂದು ಮಾಡಿದ್ದೇನೆ ಕ್ರಮೇಣ ಇನ್ನು ೬೨೫ ಪ್ರೈಮರಿ ಹೆಲ್ತ್ ಯೂನಿಟ್‌ನ್ನು ಅಪ್‌ಗ್ರೇಡ್ ಮಾಡುತ್ತೇವೆ. ವರ್ಷೇ ವರ್ಷ ೪೦೦-೫೦೦ ಈ ತರಹ ಮಾಡುತ್ತಿದ್ದೇವೆ. ಎರಡು ಮೂರು ವರ್ಷದಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಆಗುತ್ತದೆ. ಈಗ ಏನಾಗಿದೆ ಎಂದರೆ ಒಬ್ಬ ಡಾಕ್ಟರಿಗೆ ಅಲ್ಲಿ ಆಪಾಯಿಂಟ್ ಮಾಡಿ ಜನರಿಗೆ ಪರೀಕ್ಷೆ ಮಾಡಿ ಹೊಟ್ಟೆ ಹೊರೆದುಕೊಳ್ಳಪ್ಪ ರೊಕ್ಕ ಗಳಿಸು ಎಂದು ಹೇಳಿ ಪ್ರೈಮರಿ ಹೆಲ್ತ್ ಸೆಂಟರನ್ನು ಅವರ ಕೈಗೆ ಕೊಟ್ಟು ಹಾಗೆ ಆಗಿದೆ ಇದಕ್ಕಿಂತ ಹೆಚ್ಚಾಗಿ ಏನೂ ಆಗಿಲ್ಲ. ಅವರಿಗೆ ಬೆಡ್ಸ್ ಫೆಸಿಲಿಟೀಸ್ ಇಲ್ಲ. ಅವರಿಗೆ ಕ್ವಾರ್ಟರ್ಸ್ ಕೂಡಾ ಇಲ್ಲ. ಯಾವ ಒಬ್ಬ ವ್ಯಕ್ತಿಗೆ ಉಚ್ಚವಾದ ಪದವಿಯನ್ನು ಪಡೆದುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಅಲ್ಲಿ ಹೋಗಿ ಕೆಲಸ ಮಾಡಲಿ ಬಾಯಿ ಮುಚ್ಚಿಕೊಂಡು ಇರುವ ಪರಿಸ್ಥಿತಿಯಲ್ಲಿ ಇರುವುದಕ್ಕಾಗುತ್ತದೆಯೋ ? ನಾವು ಅನುಕೂಲತೆಯನ್ನು ಒದಗಿಸಿಕೊಡದೆ ಇದ್ದಾಗ ಯಾವ ರೀತಿ ಕೆಲಸ ಮಾಡಬಹುದು. ಒಂದುಕಡೆ ನಾವು ಯೋಚನೆಯನ್ನು ಮಾಡುತ್ತಿದ್ದೇವೆ. ಪ್ರತಿಯೊಂದು ಹಳ್ಳಿಯಲ್ಲಿಯೂ ನಿವೇಶನ ಇಲ್ಲದೇ ಇದ್ದವರಿಗೆ ನಿವೇಶನ ಕೊಡಬೇಕು, ಮನೆ ಇಲ್ಲದಿದ್ದರೆ ಮನೆಯನ್ನು ಕೊಡಬೇಕು ಎಂದು ಹೇಳಿ ನೂರಾರು ಕೋಟಿ ರೂಪಾಯಿಗಳನ್ನು ಮಾಡುತ್ತೇವೆ. ಆದರೆ ಇನ್ನೊಂದು ಕಡೆ ಯಾವ ಜನಾಂಗವನ್ನು ಬೆಳೆಸುವುದಕ್ಕೆ ಯಾವ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ನಾವು ಅನುಕೂಲತೆಗಳನ್ನು. ಒದಗಿಸಿಕೊಟ್ಟು ಸಹಾಯ ಮಾಡಬೇಕು. ಅಂಥ ಖಾತೆಯಾಗಿ ಇರುವಂತಹ ಈ ಎಜುಕೇಷನ್ ಮತ್ತು ಹೆಲ್ತ್ ಇನ್‌ಸ್ಟಿಟ್ಯೂಷನ್‌ಗಳು ಪ್ರತಿಯೊಂದು ಹಳ್ಳಿಗಳಲ್ಲಿಯೂ ಇರುವುದಿಲ್ಲ. ಒಂದೊಂದು ಹಳ್ಳಿಯಲ್ಲಿ ಮಾತ್ರ ಇರುತ್ತದೆ. ಮೂವತ್ತು ಸಾವಿರ ಜನಸಂಖ್ಯೆಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್‌ನ್ನು ಮಾಡಿ ಆ ಆರೋಗ್ಯ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ವೈದ್ಯರಿಗೆ ಒಂದು ಕ್ವಾರ್ಟರ್ಸ್‌ನ್ನು ಕೊಡಲಿಲ್ಲ ಎಂದರೆ ಯಾವ ಆದ್ಯತೆಯ ಕೆಲಸವನ್ನು ನಾವು ಮಾಡುತ್ತಿದ್ದೇವೆ ? ಮತ್ತೆ ಇದನ್ನು ಏತಕ್ಕೆ ಪ್ರಾರಂಭ ಮಾಡಬೇಕು ? ಪ್ರೈಮರಿ ಹೆಲ್ತ್ ಸೆಂಟರ್ ಎಂದು ಏತಕ್ಕೆ ಮಾಡಬೇಕು ? ಇದು ನಮ್ಮ ಕರ್ತವ್ಯ, ಇದನ್ನು ಮಾಡಿದರೆ ಸರಿಯಾಗಿ ಮಾಡಬೇಕು. ಇದಕ್ಕೆ ಅಷ್ಟು ಹಣವೇನೂ ಖರ್ಚಾಗುವುದಿಲ್ಲ. ವಸತಿಯ ಸಲುವಾಗಿ ನಾವು ಹೌಸಿಂಗ್‌ನ ಸಲುವಾಗಿ ಎಷ್ಟು ಖರ್ಚು ಮಾಡುತ್ತೇವೆಯೋ. ಅಷ್ಟೊ ಸಹ ಖರ್ಚಾಗುವುದಿಲ್ಲ.

ಸೆಂಟ್ರಲ್ ಗವರ್ನಮೆಂಟ್‌ನವರ ಸಹಾಯ ಕೂಡ ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ ಸಿಗುತ್ತದೆ. ಕೇಂದ್ರ ಸರ್ಕಾರದಿಂದ ಅನೇಕ ರೀತಿಯಿಂದ ಸಹಾಯ ಒದಗಿ ಬರುತ್ತದೆ. ಆದ್ದರಿಂದ ಸರ್ಕಾರಕ್ಕೆ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಹೊಸ ವರ್ಷ ಪ್ರಾರಂಭ ಆಗಿದೆ. ಅನೇಕ ಬೇಡಿಕೆಗಳು ಬರುತ್ತವೆ. ಜಿಲ್ಲಾ ಪರಿಷತ್‌ನ ಸಭೆಯಲ್ಲಿ ಕೂಡ ನಾವು ಶಾಸಕರಾಗಿ ಅಲ್ಲಿನ ಚರ್ಚೆಯಲ್ಲಿ ಭಾಗವಹಿಸಿದ್ದೇವೆ, ಅಲ್ಲಿ ಕೂಡ ಪ್ರತಿಷ್ಠೆ ಮೇಲೆ ಒತ್ತಡದ ಮೇಲೆ ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ಸ್ಯಾಂಕ್ಷನ್ ಮಾಡುತ್ತಾರೆ, ಮತ್ತೆ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡುವುದಿಲ್ಲ. ಮೊನ್ನೆ ನಡೆದ ಚರ್ಚೆಯಲ್ಲಿ ಕಂಡು ಬಂದ ವಿಷಯ ಏನು ಅಂದರೆ, ಯಾದಗಿರಿ ನಗರದಿಂದ ಎರಡು ಕಿಲೋ

ಮೀಟರ್ ದೂರದಲ್ಲಿರುವ ಒಂದು ಸಣ್ಣ ಹಳ್ಳಿಗೆ ಪಿ.ಹೆಚ್.ಸಿ. ಸ್ಯಾಂಕ್ಷನ್ ಮಾಡಬೇಕು ಅಂದಾಗ ಗಂಟೆಗಟ್ಟಲೆ ಚರ್ಚೆ ಆಗಿದೆ. ಆದರೆ ಯಾವ ಹಳ್ಳಿ ಯಾದಗಿರಿಯಿಂದ ೨೨ ಕಿಲೋ ಮೀಟರ್ ದೂರ ಇದೆ, ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಅನುಮತಿ ಕೊಡಲಿಕ್ಕೆ ಯಾರೂ ತಯಾರು ಇಲ್ಲ. ಈ ರೀತಿ ಅಸ್ತವ್ಯಸ್ತವಾಗಿರುವಂಥ ವ್ಯವಸ್ಥೆಯನ್ನು ದಯಮಾಡಿ. ತಾವು ಸರಿಪಡಿಸಬೇಕು. ತಾವು ಅಧಿಕಾರ ವನ್ನು ಹೊಸದಾಗಿ ವಹಿಸಿಕೊಂಡಿದ್ದೀರಿ. ಆದ್ದರಿಂದ ತಮ್ಮ ಸಮಯ ಅವಶ್ಯಕ ವಿಷಯಗಳಲ್ಲಿ ಮತ್ತು ಚರ್ಚೆಗಳಲ್ಲಿ ಸದ್ವಿನಿಯೋಗ ಆಗಬೇಕು. ಆ ರೀತಿ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಅನಾವಶ್ಯಕ ವಿಷಯಗಳನ್ನು ಬದಿಗೊತ್ತಿ, ವಿಶೇಷತಃ ಅವಶ್ಯಕ ವಿಷಯಗಳ ಕಡೆಗೆ ಲಕ್ಷ್ಯ ಕೊಡಬೇಕು. ಅತ್ತ ಕಡೆಗೆ ಕೊಡುತ್ತೀರಿ ಎಂದು ತಿಳಿದಿದ್ದೇನೆ. ಒಂದು ಕಾಲೇಜಿನ ಪ್ರಿನ್ಸಿಪಾಲ್ ಅಥವಾ ಸೂಪರಿಂಟೆಂಡೆಂಟ್ ಅವರಿಗೆ ಎಲ್ಲಾ ಕೆಲಸಗಳನ್ನು ಸುಧಾರಿಸಿಕೊಂಡು ಹೋಗಿ ಆದರ್ಶವಾದಿ ಎಂದು ಹೇಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇಂತಹ ಸಾವಿರಾರು ಇನ್‌ಸ್ಟಿಟ್ಯೂಷನ್‌ಗಳ ಅಧಿಕಾರಿ ತಾವಿದ್ದೀರಿ. ಆದರೂ ಡೈರೆಕ್ಟ್ ರೆಸ್ಪಾನ್ಸಿಬಿಲಿಟಿ ನಿಮಗೆ ಇದೆ ಎಂದು ನಾನು ಹೇಳುವುದಿಲ್ಲ. The sense of direction that we give is important. What is important is the leadership that is provided is more important than the physical supervision or inspection that each of the institutions function under your care. ಆದ್ದರಿಂದ ಸನ್ಮಾನ್ಯ ಮಂತ್ರಿಗಳಲ್ಲಿ ಮಾನ್ಯ ಸಭಾಧ್ಯಕ್ಷರ ಮುಖಾಂತರ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಮೊದಲು ವಿದ್ಯಾವಂತರ ಕೊರತೆ ಇತ್ತು. ಆದರೆ ಈಗ ವಿದ ವಂತರ ಕೊರತೆ ಇಲ್ಲ. ತಾಂತ್ರಿಕ ಜ್ಞಾನವನ್ನು, ಅನುಭವವನ್ನು ಪಡೆದವರ ಕೊರತೆ ಇಲ್ಲ. ಆದ್ದರಿಂದ ಮೊದಲು ಎಲ್ಲೆಲ್ಲಿ ಕೊರತೆ ಇದೆ, ಅಲ್ಲಿ ಒದಗಿಸಿಕೊಡಿ ಪ್ರೈಮರಿ ಸಬ್ ಸೆಂಟರ್‌ಸ್‌ಗಳಲ್ಲಿ ಕೆಲಸ ಮಾಡತಕ್ಕವರು ಅಂದರೆ ಎಎನ್‌ಎಂ ಮತ್ತು ಹೆಲ್ತ್ ವಿಸಿಟರ್ಸ್. ಹೆಲ್ತ್ ವಿಜಿಟರ್ಸ್‌ದ್ದು ೭೧೫ ವೆಕೆನ್ಸಿಗಳು ಇದೆ ಮತ್ತು ಎ.ಎನ್.ಎಂ. ಗಳದ್ದು ೭೨೮ ವೆಕೆನ್ಸಿಗಳು ಇದೆ. ಈಗ ಹೆಲ್ತ್ ವರ್ಕರ್ಸ್ ಮತ್ತು ಎಎನ್‌ಎಂ ಅವರ ಕೆಲಸ ಬಹಳ ಗುರುತರವಾದ ಮತ್ತು ನಾಜೂಕಾದ ಕೆಲಸ. ಹಳ್ಳಿ ಹಳ್ಳಿಯಲ್ಲಿ ಈ ಹೆಣ್ಣು ಮಕ್ಕಳು ತಿರುಗಾಡುತ್ತಾರೆ. ಮಾನ್ಯ ಸಿಂಧ್ಯರವರು ಹೇಳುತ್ತಿದ್ದರು. ಐ. ಪಿ. ಪ್ರಾಜೆಕ್ಟ್‌ನಲ್ಲಿ ಕೇಂದ್ರದಿಂದ ಸಾಕಷ್ಟು ಹಣ ಬರುತ್ತಿತ್ತು, ಆದರೆ ಅದನ್ನು ನಾವು ಉಪಯೋಗ ಮಾಡಲಿಲ್ಲ. ಕೊನೆಗೆ ಈ ಖಾತೆ ಅವರ ಕೈಯಲ್ಲಿ ಬಂದಾಗ ಸಾಕಷ್ಟು ಪ್ರಯತ್ನ ಮಾಡಿ ಕೆಲಸ ಮಾಡಿದ್ದೇನೆ ಎಂದು ಹೇಳಿದರು. ಅವರು ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಕೂಡ ೭,೮೯೩ ಸಬ್ ಸೆಂಟರ್‌ಗಳು ಮಾತ್ರ ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ಅದರಲ್ಲಿ ಕೇವಲ ೨೫೦೦ ಸಬ್ ಸೆಂಟರ್‌ಗಳಿಗೆ ಮಾತ್ರ ನಾವು ಕ್ವಾರ್ಟರ್ಸ್ ಕೊಟ್ಟಿದ್ದೇವೆ. ಆದ್ದರಿಂದ ಎ.ಎನ್.ಎಂ. ಏನು ಮಾಡುತ್ತಾರೆ. ಅವರು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇರುತ್ತಾರೆ, ಅಥವಾ ಎಲ್ಲಿ ಸುರಕ್ಷಿತವಾಗಿರಬಹುದೋ ಅಲ್ಲಿರುತ್ತಾರೆ. ಕೆಲಸದ ನಿಮಿತ್ತ ಆ ಪತ್ರಿಗಳಲ್ಲಿದ್ದು ಕೆಲಸ ಮಾಡುತ್ತಾರೆ, ಸಂಬಳ ತಗೆದುಕೊಳ್ಳುತ್ತಾರೆ. ಹಳ್ಳಿಯಲ್ಲಿ ಇದ್ದು ಕೆಲಸ ಮಾಡುವುದಕ್ಕೆ ಯಾರೂ ತಯಾರು ಇಲ್ಲ. ಯಾಕೆಂದರೆ ಹಳ್ಳಿಯಲ್ಲಿ ಕ್ವಾರ್ಟರ್ಸ್ ಇಲ್ಲ. ಎರಡು ರೂಮಿನ ಒಂದು ಕ್ವಾರ್ಟರ್ಸ್ ಹಳ್ಳಿಯಲ್ಲಿ ಕಟ್ಟಿಸಿಕೊಡುವುದಕ್ಕೆ ಏನು ತೊಂದರೆ ಇದೆ. ಒಂದೊಂದು ಹಳ್ಳಿಗೆ ೨೦-೩೦ ಮನೆ ಕಟ್ಟಿಸುವುದಕ್ಕೆ ಏನೂ ತೊಂದರೆ ಇಲ್ಲ ಎಂದು ಹೌಸಿಂಗ್ ಮಿನಿಸ್ಟರ್ ಅವರು ಆಶ್ವಾಸನೆ ಕೊಟ್ಟರು. ಆದ್ದರಿಂದ ಐದು ಸಾವಿರ ಜನಸಂಖ್ಯೆ ವ್ಯಾಪ್ತಿಗೆ ಬರತಕ್ಕ ಸಬ್ ಸೆಂಟರ್ಸ್‌ನಲ್ಲಿ ಎರಡು ರೂಮುಗಳಿರುವ ಒಂದು ಕ್ವಾರ್ಟರ್ಸ್ ಅನ್ನು ಆದ್ಯತೆಯ ಮೇಲೆ ಕಟ್ಟಿಸಿ ಕೊಡಬೇಕು. ತಾವು ಇನ್ನೂ ೫೨೯೩ ಸಬ್ ಸೆಂಟರ್ಸ್‌ಗೆ ಕ್ವಾರ್ಟರ್ಸ್ ಕಟ್ಟಿಸಬೇಕು. ಅದರಲ್ಲಿ ೫-೬ ನೂರು ಎಎನ್‌ಎಂಗಳು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಲ್ಲಿರುತ್ತಾರೆ. ಮತ್ತೆ ಕೆಲವರು ತಾಲ್ಲೂಕ್ ಕೇಂದ್ರಗಳಲ್ಲಿ ಇರುತ್ತಾರೆ. ಆದ್ದರಿಂದ ಕನಿಷ್ಟ ಪಕ್ಷ ನಾಲ್ಕು ಸಾವಿರ ಕ್ವಾರ್ಟರ್ಸ್‌ಗಳನ್ನು ಕಟ್ಟಿಸುವಂತಹ ಯೋಜನೆಯನ್ನು ಹಾಕಿಕೊಳ್ಳಬೇಕು. ತಮ್ಮ ಕರ್ತವ್ಯ ಇದರಲ್ಲಿ ಏನು ಎಂಬ ಬಗ್ಗೆ ನಾನು ಮಾಹಿತಿ ಕೊಡುತ್ತಿದ್ದೇನೆ. ಇನ್ನು ಮುಂದೆ ಈ ಹೆಲ್ತ್ ವರ್ಕರ್ ಮತ್ತು ಎಎನ್‌ಎಂ ಹೆಲ್ತ್ ವಿಸಿಟರ್ ಮತ್ತು ಹೆಲ್ತ್ ಇನ್ಸ್‌ಪೆಕ್ಟರ್ಸ್‌ಗಳು ಇವರುಗಳು ಏನು ಇದ್ದಾರೆ, ಇವರುಗಳು ಹಳ್ಳಿಯಲ್ಲಿನ ಜನರ ಅಜ್ಞಾನ ಮತ್ತು ಅವರಲ್ಲಿರತಕ್ಕ ಅನಕ್ಷರತೆಯ ಪ್ರಯೋಜನ ಪಡೆದು, ಬಹಳಷ್ಟು ದುರುಪಯೋಗ ಮಾಡುತ್ತಿದ್ದಾರೆ.

೩.೫೦ ಪಿ. ಎಂ.

ಅದರ ಕಡೆ ಕೂಡ ತಾವು ಸ್ವಲ್ಪ ಗಮನಕೊಡಬೇಕು. ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಕೆಲಸ ಮಾಡತಕ್ಕಂಥ ಉಚ್ಚ ಅಧಿಕಾರಿಗಳೇ ತನ್ನ ಸಂಸ್ಥೆಯನ್ನು ದುರುಪಯೋಗ ಮಾಡಿಕೊಂಡಿದ್ದರ ಬಗ್ಗೆ ಒಂದು ಸುದೀರ್ಘವಾದ ಪತ್ರವನ್ನು ಮಾನ್ಯ ಮಂತ್ರಿಗಳಿಗೆ ಬರೆದಿದ್ದೇನೆ. ಅದರ ನೆನಪು ಅವರಿಗೆ ಇದೆಯೋ ಇಲ್ಲವೊ ಗೊತ್ತಿಲ್ಲ. ಆದರೆ ಅವರ ಡೆಪ್ಯುಟಿ ಸೆಕ್ರೆಟರಿಯವರು ನನಗೆ ಫೋನ್ ಮಾಡಿ ಹೇಳಿದರು. ನಿಮ್ಮ ಕಡೆಯಿಂದ ಪತ್ರ ಬಂದಿದೆ ಅದನ್ನು ವಿಚಾರ ಮಾಡುತ್ತಾ ಇದ್ದೇವೆ ಎಂದು ಹೇಳಿದರು. ಎಲೆಕ್ಷನ್ ಆದ ೨-೩ ತಿಂಗಳಲ್ಲಿ ನಾನು ಸುದೀರ್ಘವಾದ ಪತ್ರವನ್ನು ತಮಗೆ ಬರೆದಿದ್ದೆ. ನಾನು ಮೆಡಿಕಲ್ ಸಂಸ್ಥೆಯಲ್ಲಿ ಕೆಲಸ ಮಾಡಿರುವುದರಿಂದ ನಾನು ನಿಕಟವಾಗಿ ಮಾಹಿತಿ ತಿಳಿದುಕೊಂಡು ಪತ್ರ ಬರೆದಿದ್ದೆ. ಅದರ ಬಗ್ಗೆ ತಮ್ಮ ಕಡೆಯಿಂದ ನನಗೆ ಉತ್ತರ ಬಂದಿಲ್ಲ. ಆದರೂ ತಮ್ಮ ಇಲಾಖೆಯ ಡೆಪ್ಯುಟಿ ಸೆಕ್ರೆಟರಿಯವರ ಕಡೆಯಿಂದ ಪತ್ರ ಬಂದಿದೆ, ನಾವು ವಿಚಾರ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಈ ರೀತಿ ಉಚ್ಚ ಅಧಿಕಾರಿಗಳೇ ಮಿಸ್‌ಯೂಸ್ ಮಾಡಿ ಮಾಲ್‌ಪ್ರಾಕ್ಟೀಸ್ ಮಾಡಿ ಹಣ ಗಳಿಸುತ್ತಾರೆಂದರೆ ನಾವೇಕೆ ಮಾಡಬಾರದು ಎನ್ನತಕ್ಕಂಥ ಫೀಲಿಂಗ್ಸ್ ಇತರರಲ್ಲಿ ಬೆಳೆಯುತ್ತದೆ. ತಾವು ಏನು ಬೇಸಿಕ್ ಡ್ರಗ್ಸ್ ಕೊಡುತ್ತೀರಿ, ಗರ್ಭಿಣಿಯರಿಗೆ ಕೊಡತಕ್ಕಂಥ ಐರನ್ ಟ್ಯಾಬ್ಲೆಟ್ಸ್, ಮಕ್ಕಳಿಗೆ ಕೊಡತಕ್ಕಂಥ ವಿಟಮಿನ್ ಎ ಟ್ಯಾಬ್ಲೆಟ್ ಏನಿವೆ ಇವನ್ನೆಲ್ಲಾ ಅನೇಕ ಕಡೆ ಪುಕ್ಕಟೆ ಕೊಡುತ್ತಾರೆ, ಕೆಲವು ಕಡೆ ಪುಕ್ಕಟೆ ಕೊಡುತ್ತಾರೆ, ಎಲ್ಲಾ ಕಡೆ ರೊಕ್ಕ ತೆಗೆದುಕೊಂಡು ಕೊಡುತ್ತಾರೆ ಎಂದು ಹೇಳುತ್ತಾ ಇಲ್ಲ. ಆದರೆ ಅನೇಕ ಕಡೆ ಇದನ್ನು ದುರುಪಯೋಗ ಮಾಡುತ್ತಾ ಇದ್ದಾರೆ. ಇದರ ಬಗ್ಗೆ ತಾವು ವಿಶೇಷವಾಗಿ ಕಾಳಜಿವಹಿಸಿ ಇದರಲ್ಲಿ ಯಾವ ರೀತಿ ಶಿಸ್ತಿನ ವಿಚಾರಕ್ಕೆ ಗುರಿ ಮಾಡುತ್ತೀರಿ ಅಥವಾ ಯಾವ ರೀತಿ ಇದನ್ನು ಸುಧಾರಣೆ ಮಾಡುತ್ತೀರಿ ಎನ್ನುವುದು ತಮಗೇ ಬಿಟ್ಟದ್ದು. ತಮ್ಮ ಜವಾಬ್ದಾರಿ ಬಹಳ ಗುರುತರವಾದುದು ಮತ್ತು ಬಹಳ ಡೆಲಿಕೇಟಾಗಿರತಕ್ಕಂಥಾದ್ದು. ಅಂತಹ ಜವಾಬ್ದಾರಿ ತಮ್ಮ ಮೇಲಿದೆ. ಆದ್ದರಿಂದ ದಯಮಾಡಿ ಈ ಕಡೆ ತಾವು ಗಮನಹರಿಸಬೇಕು. ಮೊದಲು ಆರೋಗ್ಯ ಸಂಸ್ಥೆಗಳಲ್ಲಿ ಜನರು ಸುತ್ತುವರಿಯುತ್ತಿದ್ದರು. ಈಗ ಹಳ್ಳಿಯ ಜನರ ಸಲುವಾಗಿ ಕೆಲಸ ಮಾಡುತ್ತಿದ್ದೇವೆ. ಹೆಲ್ತ್ ಇನ್ಸ್‌ಪೆಕ್ಟರ್ಸ್. ಎಎನ್‌ಎಂ. ಹೆಲ್ತ್ ವರ್ಕರ್ಸ್ ಅಲ್ಲೇ ಇರುವಂತೆ ಮಾಡಬೇಕು ಈ ಕಡೆ ತಾವು ಹೆಚ್ಚಿನ ಲಕ್ಷ್ಯಕೊಡಬೇಕು ಏಕೆಂದರೆ. ಅವರಿಗೆ ಕ್ವಾರ್ಟರ್ಸ್‌ಕೊಟ್ಟು ಅಲ್ಲೇ ಇರುವಂತೆ ಮಾಡಿದರೆ ಅವರು ಮಿಸ್‌ಯೂಸ್ ಮಾಡುವುದಿಲ್ಲ. ಆದರೆ ಅವರು ವಾರಕ್ಕೊಮ್ಮೆ ವಿಸಿಟ್ ಮಾಡುತ್ತಾರೆ ಅವರೂ ಕೂಡ ಒಬ್ಬ ಡಾಕ್ಟರ್ ಹಾಗೆ ಕೆಲಸ ಮಾಡುತ್ತಾ ಇದ್ದಾರೆ. ಅವರಿಗೆ ಯಾವ ರೀತಿಯ ಭಯ ಇಲ್ಲ. ಅವರ ಇರುವಿಕೆ ಅಲ್ಲೇ ಇದ್ದರೆ ಜನರ ಹೆದರಿಕೆ ಇರುತ್ತದೆ. ಅದಕ್ಕಾಗಿ ಭಯ ಪಡಬೇಕಾಗುತ್ತದೆ. ಅವರು ಎಂದೂ ಮಿಸ್‌ಯೂಸ್ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಅವರು ಅಲ್ಲೇ ವಾಸಮಾಡಿಕೊಂಡು ಇರಲಿಕ್ಕೆ ಒಂದು ಉತ್ತಮವಾದ ವ್ಯವಸ್ಥೆ ಮಾಡತಕ್ಕಂಥ ಕಡೆ ತಾವು ವಿಶೇಷವಾಗಿ ಗಮನಹರಿಸಿ ಕೆಲಸ ತೆಗೆದುಕೊಳ್ಳಬೇಕು. ನಾನು ಆಗಲೇ ಹೇಳಿದ ಹಾಗೆ ಪ್ರೈಮರಿ ಹೆಲ್ತ್ ಸೆಂಟರ್ ಅದರ ಮೇಲೆ ಕಮ್ಯುನಿಟಿ ಹೆಲ್ತ್ ಸೆಂಟರ್ ಎಂದು ಇದೆ. ಇದರಲ್ಲಿ ೩೦ ಪರ್ಸೆಂಟ್ ಇದೆ. ಬರೀ ಕಮ್ಯುನಿಟಿ ಹೆಲ್ತ್ ಸೆಂಟರ್ ಎಂದು ತಾತ್ವಿಕವಾಗಿ ಈ ಸ್ಕೀಮನ್ನು ನಾವು ಸ್ವೀಕಾರ ಮಾಡಿದ್ದೇವೆ. ಈಗ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದ್ದೇವೆ. ಎರಡು ಸಾವಿರ ವರ್ಷದ ಅಂತ್ಯಕ್ಕೆ, ಅಂದರೆ ೨೦ನೇ ಶತಮಾನದ ಮುಕ್ತಾಯಕ್ಕೆ ಅಂದರೆ ಅದು ಇನ್ನು ೧೦ ವರ್ಷಗಳಲ್ಲಿ ಮುಕ್ತಾಯವಾಗುತ್ತದೆ, ಅಷ್ಟರಲ್ಲಿ ಆಲ್ಮಾ ಆಲ್ಟಾ ಡಿಕ್ಲೆರೇಷನ್ ಸ್ವೀಕಾರ ಮಾಡಿದ್ದೇನೆ. ಏನೆಂದರೆ, ಎಲ್ಲ ರೀತಿಯ ಆರೋಗ್ಯ ಸೌಲಭ್ಯ ಪ್ರತಿಯೊಂದು ಹಳ್ಳಿಗೆ ಮುಟ್ಟುವಂತೆ ನಾವು ಮಾಡುತ್ತೇವೆ ಎಂದು ಕಮಿಟ್‌ಮೆಂಟ್ ಮಾಡಿದ್ದೇವೆ. ಅದು ಮುಟ್ಟಬೇಕಾದರೆ ಈ ಸ್ಕೀಮ್‌ನಿಂದಲೇ ಮುಟ್ಟಬೇಕು. ಹೆಲ್ತ್ ಸೆಂಟರ್, ಕಮ್ಯುನಿಟಿ ಹೆಲ್ತ್ ಸೆಂಟರ್ ಮೂಲಕವೇ ಜನರಿಗೆ ಮುಟ್ಟಬೇಕು. ಈ ವ್ಯವಸ್ಥೆ ಮೂಲಕ ಮುಟ್ಟಬೇಕಾದರೆ ಯಾವ ರೀತಿ ಉತ್ತಮವಾದ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿದೆ. ಪ್ರೈಮರಿ ಹೆಲ್ತ್ ಸೆಂಟರ್ ಬಗ್ಗೆ ಹೇಳುವಾಗ ಹಳ್ಳಿಯ ಉದ್ಧಾರದ ಬಗ್ಗೆ ನಾವು ಬಹಳ ಮಾತನಾಡುತ್ತೇವೆ. ಪಾಪ ಅವರು ಮುಗ್ಧ ರೀತಿಯಿಂದ ನಮ್ಮನ್ನು ನಂಬಿ ನಮ್ಮ ಪಕ್ಷಗಳಿಗೆ ಓಟನ್ನು ಕೊಡುತ್ತಾರೆ. ನಾವು ಆರಿಸಿ ಬರುತ್ತೇವೆ, ಐದು ವರ್ಷ ಕಾಲಹರಣ ಮಾಡುತ್ತೇವೆ. ಆದರೆ ನಿಜವಾಗಿಯೂ ಪ್ರಾಮಾಣಿಕತನದಿಂದ ನಾವು ಏನು ಮಾಡುತ್ತಾ ಇದ್ದೇವೆ ಎನ್ನುವುದರ ಬಗ್ಗೆ ಗಮನಹರಿಸಬೇಕು. ನಾನು ಆಗಲೇ ಹೇಳಿದೆ, ಒಂದು ಸಾವಿರ ಸೆಂಟರ್ಸ್ ಮೇಲೆ ಇದೆ, ಪ್ರತಿಯೊಂದು ಸೆಂಟರಿಗೆ ಆರು, ಬೆಡ್ ಕೊಡಬೇಕು ಎಂದು ನಾವು ಹೇಳಿದೆವು. ಒಂದು ಸೆಂಟರಿಗೆ ೬ ಬೆಡ್ ಕೊಡಬೇಕು ಎಂದು ಕಾನೂನಿನಲ್ಲಿದೆ. ವಚನ ಕೂಡ ಕೊಟ್ಟಿದ್ದೇವೆ. ಆದರೆ ನೀವು ಬೆಡ್ಸ್ ಕೊಟ್ಟಿರತಕ್ಕಂಥ ಕೇವಲ ೨೭೫, ಸಾವಿರ ಸೆಂಟರ್ಸ್‌ಗೆ.

ಆದರೆ ಪಟ್ಟಣದಲ್ಲಿ ರೇಷಿಯೋ ಏನಿದೆ ನೋಡಬೇಕು. ರೂರಲ್ ಪಾಪುಲೇಷನ್ ಐದು ಸಾವಿರ ಜನ ಸಂಖ್ಯೆಗೆ ಒಂದು ಬೆಡ್ ಇಲ್ಲ ೫ ಸಾವಿರ ರೂರಲ್ ಪಾಪುಲೇಷನ್ ಅಂದರೆ ಪ್ರೈಮರಿ ಹೆಲ್ತ್ ಸಬ್ ಸೆಂಟರ್ ಎಂದು ಮಾಡಿದ್ದೇವಲ್ಲ ಆ ಒಂದು ಪಾಪುಲೇಷನ್‌ಗೆ ಒಂದು ಬೆಡ್ ಇಲ್ಲ. ಆದರೆ ಪಟ್ಟಣದಲ್ಲಿರ ತಕ್ಕವರಿಗೆ ೫೦೦ ಜನರಿಗೆ ಒಂದು ಬೆಡ್ ಇದೆ. ಇದು ಎಂತಹ ವಿಪರ್ಯಾಸ. ಇದು ಹತ್ತುಪಟ್ಟು ಹೆಚ್ಚಿಗೆ ಆಯಿತು. ೫೦೦ ಜನಸಂಖ್ಯೆಗೆ ಒಬ್ಬ ಡಾಕ್ಟರ್ ಇರಬೇಕು ಎಂದು ಹೇಳುತ್ತಾರೆ, ಅದು ಮುಟ್ಟಲಿಕ್ಕೆ ಸಾಧ್ಯವಿಲ್ಲ ಅದು ಬೇಡ. ಈಗ ಎಗ್ಸಿಸ್ಟಿಂಗ್ ಸಿಸ್ಟಂ ಏನಿದೆ ಅದರ ಮುಖಾಂತರವೇ ಮುಟ್ಟಬೇಕು ಆದರೆ ಸಾಧ್ಯವಿಲ್ಲ. ಈಗ ಪ್ರೈಮರಿ ಹೆಲ್ತ್ ಸೆಂಟರ್ಸ್ ಏನೇನು ಫೆಸಿಲಿಟೀಸ್ ಕೂಡ ಬೇಕು ಎಂದು ಇದೆ. ಆ ಸಂಸ್ಥೆಗೆ ಒಳ್ಳೆಯ ಬಿಲ್ಡಿಂಗ್ ಬೇಕು ಮತ್ತು ಡಾಕ್ಟರ್‌ಗೆ ನರ್ಸ್‌ಗೆ ಒಳ್ಳೆಯ ಕ್ವಾಟರ್ಸ್ ಬೇಕು. ಒಳ್ಳೆಯ ಉತ್ತಮವಾದ ಅನುಭವ ಹೊಂದಿದ ಕ್ವಾಲಿಫಿಕೇಷನ್ ಇರತಕ್ಕ ಸ್ಟಾಫ್ ಬೇಕು. ಲ್ಯಾಬೊರೇಟರಿ ಫೆಸಿಲಿಟೀಸ್ ಬೇಕು. ಈಗ ಲ್ಯಾಬೊರೇಟರಿ ಫೆಸಿಲಿಟೀಸ್ ಎಲ್ಲಿದೆ? ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ, ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಸಹ ಈ ಲ್ಯಾಬೊರೇಟರಿ ಫೆಸಿಲಿಟೀಸ್ ಇಲ್ಲ.

ಅದಕ್ಕಾಗಿಯೇ ನಾನು ಕೆಲಸ ಮಾಡುತ್ತಿದ್ದ ಶಿಕ್ಷಣ ಸಂಸ್ಥೆ ಬಿಟ್ಟು ನಾನು ಹೊರಗೆ ಬಂದೆ. ಮೆಡಿಕಲ್, ಟೀಚಿಂಗ್ ಕಾಲೇಜ್, ಆಸ್ಪತ್ರೆ, ಗುಲ್ಬರ್ಗ, ಇಲ್ಲಿ ನಾನು ಶಿಕ್ಷಕನಾಗಿ ದಕ್ಷತೆಯಿಂದ ಕೆಲಸ ಮಾಡಿದ್ದೇನೆ. ಅಲ್ಲಿ ಸಹ ಅದೇ ಹಣೇಬರಹ ಎಲ್ಲಾ ಕಡೆ ಇದೇ ಹಣೇಬರಹ. ಪ್ರೈವೇಟ್ ನರ್ಸಿಂಗ್ ಹೋಂಗೆ ಹೋಗಿ ಇನ್ವೆಸ್ಟಿಗೇಷನ್ ಮಾಡಿಸಿಕೊಂಡು ಬರಬೇಕು, ಅಲ್ಲಿ ಸಹ ಕೆಲವು ಆಗುತ್ತದೆ. ಕೆಲವು ಆಗುವುದಿಲ್ಲ. ಡಿಸ್ಟ್ರಿಕ್ಟ್ ಲ್ಯಾಬೋರೇಟರಿಯಲ್ಲಿ ಏನೂ ಆಗುವುದಿಲ್ಲ. ತಾಲ್ಲೂಕಿನಲ್ಲಿಯೂ ಏನೂ ಆಗುವುದಿಲ್ಲ. ಇನ್ನು ಪ್ರೈಮರಿ ಹೆಲ್ತ್ ಸೆಂಟರುಗಳಲ್ಲಿ ಲ್ಯಾಬೋರೇಟರಿ ಇರಬೇಕೆಂದರೆ ಹೇಗೆ ಸಾಧ್ಯ? ಜಿಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಸೌಕರ್ಯಗಳು ಇಲ್ಲ. ಅಲ್ಲಿ ಬ್ಲಡ್ ಪ್ರಷರ್ ಅಪರೇಟರ್ಸ್ ಇರುವುದಿಲ್ಲ; ಅಕ್ಸಿಜನ್ ಸಿಲಿಂಡರ್ ಇರುವುದಿಲ್ಲ. ಆಪರೇಷನ್ ಮಾಡ ಬೇಕಾದರೆ ಇನ್‌ಸ್ಟ್ರುಮೆಂಟ್ಸ್ ಇರುವುದಿಲ್ಲ. ಇಂಥ ಒಂದು ಅವ್ಯವಸ್ಥೆ ಇದೆ. ಇದನ್ನೆಲ್ಲಾ ಎಂದು ಸುಧಾರಿಸುತ್ತೀರಿ ಪ್ರತಿವರ್ಷ ಅಧಿವೇಶನ ಬರುತ್ತೆ; ನಾವು ಮಾತನಾಡುತ್ತೇವೆ. ನೀವು ಕೇಳುತ್ತೀರಿ. ಯಾಂತ್ರಿಕವಾಗಿ ಇದು ನಡೆಯುತ್ತಿದೆ. ಆದರೆ ಸುಧಾರಣೆ ಮಾತ್ರ ಆಗುತ್ತಿಲ್ಲ. ಸುಧಾರಣೆ ಮಾಡುವುದಕ್ಕೆ ಸಾಧ್ಯ ಇದೆ. ನಾನು ಕೂಡ ಮಾಡಿ ತೋರಿಸಿದ್ದೇನೆ. ನಾನೂ ಕೂಡ ಚಿಕ್ಕಪುಟ್ಟ ಜವಾಬ್ದಾರಿಗಳನ್ನು ಸಾರ್ವಜನಿಕ ಜೀವನದಲ್ಲಿ ವಹಿಸಿಕೊಂಡು ಮಾಡಿದ್ದೇನೆ. ನಾನು ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದು ಹೊರಗೆ ಏತಕ್ಕೆ ಬಂದೆ ಎಂದು ಹೇಳಿದೆ; ಅದರ ರಹಸ್ಯ ಹೇಳುತ್ತೇನೆ. ಆ ಕಾಲೇಜಿನಲ್ಲಿ ಮೇ ಜೂನ್ ತಿಂಗಳಲ್ಲಿ ಪಗಾರ ಕೊಡಲಿಕ್ಕೆ ರೊಕ್ಕ ಇರುತ್ತಿರಲಿಲ್ಲ. ಅದಕ್ಕಾಗಿ ರಾಜೀನಾಮೆ ಕೊಟ್ಟು ಹೊರ ಬಂದೆ. ಸುದೈವವಶಾತ್ ಆ ಸಂಸ್ಥೆಯ ಅಧ್ಯಕ್ಷ ಕೂಡ ಆದೆ. ೧೯೭೮ನೇ ಇಸವಿಯಲ್ಲಿ ಸಿಂಡಿಕೇಟ್ ಬ್ಯಾಂಕ್‌ನಿಂದ ೫ ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಸಂಬಳ ಕೊಡುತ್ತಿದ್ದ. ಹೆಚ್. ಕೆ. ಜಿ. ಸೊಸೈಟಿಯ ಆಶ್ರಯದಲ್ಲಿ ಸುಮಾರು ೩೫ ಸಂಸ್ಥೆಗಳು ಇದ್ದವು ನಾನು ಅಧ್ಯಕ್ಷನಾದ ಮೇಲೆ ಒಂದು ವರ್ಷದಲ್ಲಿ ಇದ್ದ ಸಾಲ ತೀರಿಸಿ; ೪ ಹೊಸ ಸಂಸ್ಥೆಗಳನ್ನು ಪ್ರಾರಂಭ ಮಾಡಿ, ೫೩ ಲಕ್ಷ ರೂಪಾಯಿ ಉಳಿಸಿದ್ದೇನೆ. ಇದರಲ್ಲಿ ೫ ಲಕ್ಷ ರೂಪಾಯಿ ಬೆಲೆಯ ಪತ್ರ ಪುಸ್ತಕಗಳನ್ನು ಕೊಂಡು ಕೊಂಡೆವು, ೧೨ ಲಕ್ಷ ರೂಪಾಯಿ ಇನ್‌ಸ್ಟ್ರುಮೆಂಟ್ಸ್ ಕೊಂಡುಕೊಂಡೆವು, ೫೮ ಮಂದಿ ಹೊಸ ಸಿಬ್ಬಂದಿ ನೇಮಕ ಮಾಡಿದೆ, ಅಲ್ಲಿ ಅಷ್ಟು ಕೊರತೆ ಇತ್ತು ನಾನು ಚಾಲೆಂಜ್ ಕೊಟ್ಟು ಮೊದಲಿದ್ದ ಕೆಲಸಕ್ಕೆ ರಾಜಿನಾಮೆ ಕೊಟ್ಟು ನಂತರ ಅಧ್ಯಕ್ಷನಾಗಿ ಯಾವ ರೀತಿ ಕೆಲಸ ಮಾಡ ಬೇಕೆಂದು ಮಾಡಿ ತೋರಿಸಿದೆ. ಇದನ್ನು ಮಾಡಬೇಕಾದರೆ, ಸೆನ್ಸ್ ಆಫ್ ಡೈರೆಕ್ಷನ್ಸ್ ಇರಬೇಕು. ನಮ್ಮಲ್ಲಿ ಸಂಪತ್ತು ಸಾಕಷ್ಟು ಇದೆ, ಇದ್ದ ಸಂಪತ್ತಿನಲ್ಲಿಯೇ ಸಾಕಷ್ಟು ಕೆಲಸ ಮಾಡಬಹುದು. ಅದಕ್ಕೆ ಪೊಲಿಟಿಕಲ್ ವಿಲ್ ಬೇಕಾಗುತ್ತದೆ ಸೆನ್ಸ್ ಆಫ್ ಡೈರೆಕ್ಷನ್ ಬೇಕಾಗುತ್ತದೆ. ಸಣ್ಣ ಸಣ್ಣ ವಿಷಯದಲ್ಲಿ ಕಾಲಹರಣ ಮಾಡಿದಾಗ, ಜನ ನಗುತ್ತಾರೆ. ಅದೇ ಪ್ರಿನ್ಸಿಪಾಲರು ನನ್ನ ಕೈಕೆಳಗೆ ಕೆಲಸ ಮಾಡಿದ್ದಾರೆ. ಅದೇ ಸಿಬ್ಬಂದಿ ನನ್ನ ಕೈಕೆಳಗೆ ಕೆಲಸ ಮಾಡಿದ್ದಾರೆ ಆ ಸಂಸ್ಥೆ ಅಷ್ಟು ಊರ್ಜಿತಾ ವಸ್ಥೆಗೆ ಏತಕ್ಕೆ ಬಂತು? ಒಂದೆರಡು ವರ್ಷಗಳಲ್ಲಿಯೇ ಉತ್ತಮ ಕಾಲೇಜು ಎಂದು ಪರಿಗಣಿ ಸಲ್ಪಟ್ಟಿತು. ಡೆಮಾಕ್ರಸಿಯಲ್ಲಿ ಸಾಕಷ್ಟು ಅನುಕೂಲ ಇದೆ. ಯಾರೂ ಕೂಡ ಸಫರ್ ಆಗಬೇಕಾಗಿಲ್ಲ, ಯಾರೂ ತ್ಯಾಗ ಮಾಡಬೇಕಾಗಿಲ್ಲ. ಅತ್ಯಂತ ಸುಖಮಯ ಜೀವನವನ್ನು ನಡೆಸಿ ನಾವು ಕೆಲಸ ಮಾಡಬಹುದು. ಸುಖದಲ್ಲಿ ಸುಖಮಯ ಜೀವನ ಮಾಡಬಹುದು. ಇವತ್ತು ಕ್ವಾಟರ್ಸ್ ಕೊಡುತ್ತೀರಿ, ಸಾವಿರಾರು ರೂಪಾಯಿ ಸಂಬಳ ಕೊಡುತ್ತೀರಿ. ನಾನು ನೌಕರಿಗೆ ಸೇರಿದಾಗ, ೨೫೦ ರೂಪಾಯಿ ಪಗಾರ ಇತ್ತು ಇವತ್ತು ೩೦೦೦ ರೂಪಾಯಿ ಕನಿಷ್ಟ ಪಗಾರ ಸಿಗುತ್ತದೆ, ನಾವು ವಿದ್ಯಾವಂತರಾಗಿ ಬಡದೇಶದ

ಬಡ ಜನರ ಬಗ್ಗೆ ಅಲಕ್ಷ್ಯ ತೋರಿಸುವುದು ಸರಿಯಲ್ಲ. ನಾವು ಬೇರೆಯವರನ್ನು ಮೆಚ್ಚಿಸುವುದು ಬೇಡ ನಮ್ಮ ಆತ್ಮ ಸಾಕ್ಷಿಯನ್ನಾದರೂ ಮೆಚ್ಚಿಸುವಂತೆ ಕೆಲಸ ಮಾಡಬೇಕಾಗುತ್ತದೆ. ರೊಕ್ಕದ ಕೊರತೆ ಇದೆ ಅದಿಲ್ಲ ಇದಿಲ್ಲ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ರೊಕ್ಕ ಸಾಕಷ್ಟು ಇದೆ. ಆದರೆ ಕೆಲಸ ಮಾಡತಕ್ಕ ಮನೋವೃತ್ತಿ ಸರಿಯಾಗಿದ್ದಾಗ ಈ ಸಂಪತ್ತಿನಲ್ಲಿ ಸದುಪಯೋಗ ಆಗಿ ಉತ್ತಮ ಮಟ್ಟದ ಸೇವೆಯನ್ನು ಜನರು ಮೆಚ್ಚುವಂತಹ ರೀತಿಯಲ್ಲಿ ಕೆಲಸ ಮಾಡಬಹುದು. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಒಬ್ಬ ರೋಗಿಗೆ ಅಥವಾ ಒಬ್ಬ ವ್ಯಕ್ತಿಗೆ ೧೦ ಪೈಸೆ ಖರ್ಚು ಮಾಡುತ್ತಿದ್ದೇವೆ ಪಟ್ಟಣದಲ್ಲಿ ವಾಸ ಮಾಡತಕ್ಕ ಒಬ್ಬ ಪ್ರಜೆಯ ಮೇಲೆ ಒಂದು ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಈ ಎಲ್ಲಾ ಅಂಕಿ ಸಂಖ್ಯೆಗಳನ್ನು ಸಂಬಂಧಪಟ್ಟ ಇಲಾಖೆಯವರು ನಮ್ಮ ಅವಗಾಹನೆಗೆ ಇರಲಿ ಎಂದು ಕೊಡುತ್ತಾರೆ. ಅದನ್ನು ನಾವು ಉಪಯೋಗ ಮಾಡುವುದಿಲ್ಲ. ಟೈಂ ಆಯಿತು, ಎಂದು ಮನೆಗೆ ಹೋಗುತ್ತೇವೆ. ಜನರ ಸೇವೆಯನ್ನು ಸರಿಯಾಗಿ ಮಾಡಬೇಕೆಂಬ ಮನೋಭಾವನೆ ಯಾರಿಗೂ ಇಲ್ಲ, ಇವತ್ತು ೫೨೪ ಜನ ವೈದ್ಯರು ನಮ್ಮಲ್ಲೇ ಬರದೇ ಇದ್ದಾಗ, ಎ. ಎನ್. ಎಂ. ಮತ್ತು ಹೆಲ್ತ್ ವಿಸಿಟರ್ಸ್‌ನಿಂದ ಯಾವ ರೀತಿಯ ಕೆಲಸವನ್ನು ನಿರೀಕ್ಷೆ ಮಾಡುತ್ತೀರಿ ? ವರ್ಗಾವಣೆ ವಿಚಾರದಲ್ಲಿ ನಾವು ಯಾರೂ ಇಂಟರ್‌ಫಿಯರ್ ಆಗುವುದಿಲ್ಲ ಎಂದು ಮಾನ್ಯ ಸಿಂಧ್ಯ ಅವರು ಮಾತನಾಡುವಾಗ ಮಾನ್ಯ ಮಂತ್ರಿಗಳಿಗೆ ಹೇಳಿದರು. ಅದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ. What is the meaning of democracy ? Aren't we directly responsibl through this Legislature to the people ? It is the legislator, who has talks with the people. He s directly accountab e. to know what is going on in his constituency, he is the main person, who is in a position to know That. ಆ ವೈದ್ಯ ಯಾವರೀತಿ ಕೆಲಸ ಮಾಡುತ್ತಾನೆ. ಅಲ್ಲಿ ಕೆಲಸ ಮಾಡತಕ್ಕಂತಹವರು ತಮ್ಮ ಕರ್ತವ್ಯ ಮಾಡುತ್ತಾರೋ ಇಲ್ಲವೋ ಎನ್ನುವುದು ಅವನಿಗೆ ಗೊತ್ತಿರುತ್ತದೆ. ಅವನ ಬಗ್ಗೆ ರಿಪೋರ್ಟ್ ತಂದು ಕೊಡತಕ್ಕದ್ದು ನಮ್ಮ ಕರ್ತವ್ಯ. ನಾವು ವಾರ್ನಿಂಗ್ ಕೊಟ್ಟರೂ ಕೂಡ ಆತ ಕೆಲಸವನ್ನು ಮಾಡದೇ ಇದ್ದಾಗ ಅದನ್ನು ತಮ್ಮ ಲಕ್ಷ್ಯಕ್ಕೆ ತಂದು ಆತನನ್ನು ಅಲ್ಲಿಂದ ವರ್ಗಾವಣೆ ಮಾಡಿಸುವುದು ನಮ್ಮ ಕರ್ತವ್ಯ. ಇದು ಡೆಮಾಕ್ರಟಿಕ್ ರೆಸ್‌ಪಾನ್‌ಸಿಬಿಲಿಟಿ ಇಲ್ಲದೇ ಹೋದರೆ ಅಧಿಕಾರಿಗಳಿಗೆ ಹೇಗೆ ಗೊತ್ತಾಗಬೇಕು. ಸೆಕ್ರಟರಿಗಳಿಗೆ ಹೇಗೆ ಗೊತ್ತಾಗಬೇಕು. ನಾನು ಸೆಕ್ರೆಟರಿಯವರ ವಿಷಯ ಹೇಳುತ್ತೇನೆ. ಒಂದು ಸಾರಿ ಒಂದು ಇನ್‌ಫರ್‌ಮೇಷನ್ ನನಗೆ ಬಂತು. ಮೂರು ವರ್ಷಗಳಿಂದಲೂ ಒಂದು ಕಡೆ ಹೆಚ್ಚ ಸೇವೆ ಮಾಡಿದ್ದರೆ ಅವರನ್ನು ಬದಲಾವಣೆ ಮಾಡಬೇಕೆಂದು ನಿಯಮ ಇದೆ. ನಾನು ನಿಮ್ಮಲ್ಲಿ ಬಹಳ ಕಡಿಮೆ ಬರುತ್ತೇನೆ. ಬಂದರೂ ಕೂಡ ಒಂದು ಮಾತನ್ನು ಹೇಳಲ್ಲ. ಮೊದಲು ನಾನು ಯಾವುದೇ ಮಂತ್ರಿಗಳ ಹತ್ತಿರ ಬರಬೇಕಾದರೂ ಬಹಳಷ್ಟು ತೂಕ ಮಾಡಿ ಯೋಚನೆ ಮಾಡಿ ಬರುತ್ತೇನೆ ನಾನು ಮೊದಲು ಯಾದ್‌ಗಿರಿಯಲ್ಲಿ ಇದ್ದೆ. ಗುಲ್ಬರ್ಗ ನಂತರ ಯಾದ್‌ಗಿರಿ ಒಂದು ದೊಡ್ಡ ಪಟ್ಟಣ. ಅಲ್ಲಿ ದವಾಖಾನೆ ಇದೆ. ಅಲ್ಲಿ ಜನರಿಗೆ ಉತ್ತಮ ಸೇವೆ ಸಿಕ್ಕುತ್ತದೆ ಏಕೆಂದರೆ ನಾನು ಕೂಡ ಆ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೇನೆ, ಉತ್ತಮ ರೀತಿಯಲ್ಲಿ ಜನರಿಗೆ ಒಂದು ಸೇವೆ ಕೊಡೋಣ ಎನ್ನುವ ದೃಷ್ಟಿಯಲ್ಲಿ ನೋಡಿದರೆ. ಅಲ್ಲಿ ಒಬ್ಬ ಸರ್ಜನ್ ಇಲ್ಲ. ೬೦ ಬೆಡ್ ಆಸ್ಪತ್ರೆ ಇದೆ ಅಲ್ಲಿ ಒಬ್ಬ ಸರ್ಜನ ಇಲ್ಲ. ನಿಮ್ಮ ಹೆಲ್ತ್ ಸೆಕ್ರೆಟರಿಗೆ ನಾನು ಮೂರು ಸಾರಿ ಭೇಟಿ ಮಾಡಿ ಕೇಳಿದೆ. ನಿಮಗೆ ನಾನು ಭೇಟಿಯಾಗಲಿಲ್ಲ, ಅವರಿಗೆ ನಾನು ಏತಕ್ಕೆ ಭೇಟಿಯಾದೆ ಅಂದರೆ, ೫ ವರ್ಷ ಕೆಲಸ ಮಾಡಿದವರು ಇದ್ದರು, ಡಿಸ್ಟ್ರಿಕ್ಟ್ ಹಾಸ್ಪಿಟಲ್‌ನಲ್ಲಿ. ಏಕೆಂದರೆ, ಒಬ್ಬ ವೈದ್ಯನಿಗೆ ಎಲ್ಲ ಜಿಲ್ಲೆಗಳಲ್ಲಿ ಕೆಲಸ ಮಾಡಬೇಕೆಂದೇನೂ ಇಲ್ಲ. ನಾನು ಜಿಲ್ಲೆಯ ಲೆವೆಲ ನಲ್ಲಿ ಕೆಲಸ ಮಾಡತಕ್ಕವನಿಗೆ ಕನ್‌ವಿನ್ಸ್ ಮಾಡಿದೆ ಏಕೆಂದರೆ ನಾನು ಅಲ್ಲಿ ಛೇರ್‌ಮನ್ ಇದ್ದೆ ಅವನಿಗೆ ಎಂ.ಎಸ್. ಸೀಟು ಕೊಟ್ಟಿದ್ದೆ. ಅದಕ್ಕೆ ಅವನಿಗೆ ತಿಳಿಸಿ ಹೇಳಿದೆ. ಉತ್ತಮವಾದ ಅನುಕೂಲತೆಗಳನ್ನು ಬಿಟ್ಟು ಅನಾನುಕೂಲತೆಗಳು ಇರತಕ್ಕಂಥ ಕಡೆ ನಾನು ಸೇವೆ ಮಾಡಿದ್ದೇನೆ, ಗುಲ್ಬರ್ಗ ಬಿಟ್ಟು ಯಾದಗಿರಿಗೆ ಬಂದು ಸೇವೆ ಮಾಡಲಿಕ್ಕೆ ತಯಾರು ಇಲ್ಲ ಅಂದರೆ ಹೇಗೆ ಎಂದು ಹೇಳಿ ಅವನಿಗೆ ಒಪ್ಪಿಸಿ. ಅವನು ಯಾದಗಿರಿಯಲ್ಲಿ ಸರ್ಜನ್ ಆಗಿ ಕೆಲಸ ಮಾಡಲಿಕ್ಕೆ ತಯಾರು ಆದಾಗ, ನಾಲ್ಕು ಶಿಫಾರಸ್ಸುಗಳನ್ನು ತಮ್ಮಲ್ಲಿ ತಂದೆ. ತಾವು ಇನ್ನೂ ಲೇಟ್ ಇದೆ ಎಂದು ಹೇಳಿದಿರಿ. ನಾನು ಅವರಿಗೆ ಮೂರು ಸಲ ಭೇಟಿಯಾಗಿದ್ದೆ. ಆ ಕೆಲಸ ಆಗಲಿಲ್ಲ. ಈಗ ಹೇಳಲಿಕ್ಕೆ ಹೋದರೆ, ಟ್ರಾನ್ಸ್‌ಫರ್ ಬ್ಯಾನ್ ಇದೆ ಎಂದು ಹೇಳುತ್ತಾರೆ. ಇವೊತ್ತು ವರ್ಗಾವಣೆಯ ಬಗ್ಗೆ ಶಾಸಕರು ಕೈ ಹಾಕಬಾರದು ಎಂದು ಮಾನ್ಯ ಸಿಂಧ್ಯ ಅವರು ಹೇಳಿದರು. ಗುಲ್ಬರ್ಗದಲ್ಲಿ ಮತ್ತು ಯಾದಗಿರಿಯಲ್ಲಿರತಕ್ಕ ವ್ಯವಸ್ಥೆ ಅವರಿಗೆ ಏನು ಗೊತ್ತಿರುತ್ತದೆ ನಾವು ಹೇಳಿದರೆ ತಾನೇ ಗೊತ್ತಾಗುವುದು. What is the maning of democracy ? In this system, democratic

Government is one, which is responsive to the people's needs and difficulties ಈ ರೆಸ್ಪಾನ್ಸೀವ್‌ವರ್ಡ್ ಇದ್ದಿದ್ದಿಲ್ಲ ಅಂದರೆ ಡೆಮಾಕ್ರಸಿಗೆ ಅರ್ಥವೇ ಇಲ್ಲ. ಪ್ರತಿಯೊಬ್ಬ ಶಾಸಕರು ಒಂದೇ ರೀತಿ ಇರುತ್ತಾರೆ ಎಂದು ಯಾರೂ ತಿಳಿದುಕೊಳ್ಳಬಾರದು. ಎಲ್ಲಾ ಶಾಸಕರು ಒಳ್ಳೆಯವರೇ ಇರುತ್ತಾರೆ. ೬೦ ಬೆಡ್ ಇರತಕ್ಕಂಥ ಆಸ್ಪತ್ರೆಗೆ ಒಬ್ಬ ಸರ್ಜನ್ ಇಲ್ಲ ಅಂದರೆ ಇದುಎಂತಹ ವ್ಯವಸ್ಥೆ ಅದು ಹೀನಾಯಮಾನವಾದ ಸ್ಥಿತಿಯಲ್ಲಿರುತ್ತದೆ. ಒಂದು ಸಣ್ಣಪುಟ್ಟ ಆಪರೇಷನ್ ಆದರೂ ಕೂಡ ಜನರು ಗುಲ್ಬರ್ಗಕ್ಕೆ ಹೋಗಬೇಕಾಗುತ್ತದೆ. ಇದು ಯಾವ ತರಹದ ಬ್ಯಾನ್, ತಾವು ವಾರ್ ಫುಟ್‌ನಲ್ಲಿ ಕೆಲಸ ಮಾಡಬೇಕು. ಜನರಿಗೆ ತಾವು ಉತ್ತಮವಾದ ಸೇವೆಯನ್ನು ಕೊಡಲಿಕ್ಕೆ ನಮ್ಮ ಕಡೆಯಿಂದ ಸಲಹೆಗಳನ್ನು ತೆಗೆದುಕೊಂಡು ಅದರ ಬಗ್ಗೆ ಪ್ರಯತ್ನ ಮಾಡಬೇಕು. ಇದು ಬಹಳ ಸೂಕ್ಷ್ಮವಾದ ಖಾತೆ ಇದೆ. ಅದಕ್ಕಾಗಿ ದಯಮಾಡಿ ಸ್ವಲ್ಪ ತಾವು ಲಕ್ಷ್ಯ ಕೊಟ್ಟು ಈ ಕಡೆ ಕೆಲಸ ಮಾಡಿದ್ದೇ ಆದರೆ ಒಳ್ಳೆಯ ಹೆಸರು ತಾವು ಪಡೆಯುತ್ತೀರಿ. ತಾವು ಹೆಣ್ಣು ಮಕ್ಕಳು ಇದ್ದೀರಿ. ತಮಗೆ ಹೆಣ್ಣು ಹೃದಯ ಇದೆ. ಒಳ್ಳೆಯ ಮನೋಭಾವ ಇದೆ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ದಯಮಾಡಿ ಏನೋ ಒಂದು ಕಿರಿಕಿರಿ ಕೊಡುತ್ತಾರೆ ಶಾಸಕರು ಎಂದು ತಿಳಿದುಕೊಂಡು ಅನ್ಯಥಾ ಭಾವಿಸಬಾರದು ಆ ರೀತಿ ಯಾರೂ ಮಾಡುವುದಿಲ್ಲ. ಜನರಿಂದ ಬರತಕ್ಕ ಕಂಪ್ಲೆಂಟ್‌ಗಳನ್ನು ತಿಳಿದುಕೊಂಡು ಬಂದು ನಾವು ತಮ್ಮ ಹತ್ತಿರ ಹೇಳುತ್ತೇವೆ. ಈಗ ಅಲ್ಲಿ ಒಬ್ಬ ಲೇಡಿ ಡಾಕ್ಟರು ಇದ್ದರು ಈಗ ಅವರನ್ನು ಷಿಫ್ಟ್ ಮಾಡಿದ್ದೀರಿ. ಈಗ ಮತ್ತೆ ನಮಗೆ ಹೇಳುತ್ತೀರಿ ನೀವು ಒಬ್ಬ ಲೇಡಿ ಡಾಕ್ಟರ್ ತೆಗೆದುಕೊಂಡುಬನ್ನಿ ನಾನು ಪೋಸ್ಟ್ ಮಾಡುತ್ತೇನೆ ಎಂದು. ಇಂತಹವರನ್ನು ನೇಮಕಮಾಡಿ ಎಂದರೆ ಬ್ಯಾನ್ ಇದೆ ಎಂದು ಹೇಳುತ್ತೀರಿ. ಇದು ಏನು ವಿಪರ್ಯಾಸ ಎಂದು ನನಗೆ ಅರ್ಥವಾಗುತ್ತಿಲ್ಲ ಮೊದಲೇ ಸಿಸ್ಟಮ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾವೇನಾದರೂ ಸುಧಾರಣೆಯಾಗಬೇಕೆಂದು ಸೂಚನೆ ಕೊಟ್ಟರೆ ಅದಕ್ಕೆ ಉತ್ತರ ಇಲ್ಲ. ಅಂಥಾದ್ದರಲ್ಲಿ ನಾವು ಯಾವ ರೀತಿ ಕೆಲಸ ಮಾಡಬೇಕು, ನಾವು ಜನರಿಗೆ ಏನು ಹೇಳಬೇಕು ಇನ್ನು ದೊಡ್ಡ ದೊಡ್ಡ ಮಟ್ಟದಲ್ಲಿ, ಶಾಸಕರು ಆಶ್ವಾಸನೆ ಕೊಡುತ್ತಾರೆ. ಹೋಗುತ್ತಾರೆ. ತಮ್ಮ ತಮ್ಮ ಕರ್ತವ್ಯ ಮಾಡಿಕೊಳ್ಳುತ್ತಾರೆಂದು ಉನ್ನತ ಮಟ್ಟದಲ್ಲಿ ಟೀಕೆಟಿಪ್ಪಣಿಗಳು ನಮಗೆ ಕೇಳಿಬರುತ್ತದೆ. ಸೇವೆ ಮಾಡಲಿಕ್ಕೆ ಈ ತರಹದ ತೊಡಕುಗಳು ಬರುತ್ತವೆ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನನ್ನ ಮಟ್ಟಿಗೆ ಹೇಳುವುದಾದರೆ ಪ್ರಾಮಾಣಿಕತೆಯ ಕೊರತೆ ಇದೆ. ಕಳಕಳಿಯ ಕೊರತೆ ಇದೆ. ಕರ್ತವ್ಯ ನಿಷ್ಠೆಯ ಕೊರತೆ ಇದೆ. ಉಳಿದ ಯಾವ ಕೊರತೆಯೂ ಇಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ.

೧೨ ವರ್ಷದಿಂದ ನಾನು ಸಾರ್ವಜನಿಕ ರಂಗದಲ್ಲಿ ಕೆಲಸ ಮಾಡಿ ಅನುಭವವನ್ನು ಪಡೆದಿರುತ್ತೇನೆ. ಆ ಒಂದು ಅನುಭವವಾದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ವಿಲ್ ಪವರ್ ಬೇಕು ಪ್ರಾಮಾಣಿಕತೆಯ ಕಳಕಳಿ ಬೇಕು. ಇನ್ನು ನಾನು ಮೆಡಿಕಲ್ ಕಾಲೇಜಿನ ಬಗ್ಗೆ ಕೆಲವು ಮಾತನ್ನು ಹೇಳಬೇಕೆಂದಿದ್ದೇನೆ. ಏಕೆಂದರೆ ನಾನು ಅಲ್ಲಿ ಸ್ವಲ್ಪ ದಿವಸ ಕೆಲಸ ಮಾಡಿದಾತಕೆ ಅನುಭವವನ್ನು ಪಡೆದಿದ್ದು ಅಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದೇನೆ. ಆದುದರಿಂದ ಈ ಮೆಡಿಕಲ್ ಕಾಲೇಜುಗಳ ಸಂಸ್ಥೆಗಳ ಬಗ್ಗೆ ನನಗೆ ಸ್ವಲ್ಪ ಅಧಿಕಾರ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಕರ್ನಾಟಕ ಜನತೆಗೆ ಎಂತಹ ಮೋಸ ಮಾಡುತ್ತಿದ್ದೇವೆನ್ನುವುದಕ್ಕೆ ನಾನು ನಿದರ್ಶನವನ್ನು ಕೊಡುತ್ತೇನೆ. ಹಿಂದೆ ನಾನೂ ಕೂಡ ಮೆಡಿಕಲ್ ಕಾಲೇಜಿನ ಛೇರ್ಮನ್ ಆಗಿದ್ದೆ. ಅಲ್ಲಿ ಒಂದು ವಿಷ ವೃತ್ತ ಇದೆ ಎಂದು ನನಗೆ ಗೊತ್ತಿಲ್ಲ ಆ ವಿಷ ವೃತ್ತಕ್ಕೆ ನಾನು ಒಳಗಾಗಿಲ್ಲ. ಏಕೆ? I am part and parcel of the system. ನೀವು ಏತಕ್ಕೆ ಈ ವಿಷ ವೃತ್ತಕ್ಕೆ ಒಳಗಾಗುತ್ತೀರಿ ಎಂದು ನನಗೆ ಅರ್ಥವಾಗುವುದಿಲ್ಲ. ಖಾಸಗಿ ಮೆಡಿಕಲ್ ಕಾಲೇಜುಗಳ ಸೀಟುಗಳ ಬಗ್ಗೆ ಹೇಳುವುದಾದರೆ, ಇದರಲ್ಲಿ ಮ್ಯಾನೇಜ್‌ಮೆಂಟ್‌ನವರದ್ದು ಏನೂ ತಪ್ಪಿಲ್ಲ; ನೂರಕ್ಕೆ ನೂರರಷ್ಟು ತಪ್ಪು ಸರಕಾರದ್ದು ಇದೆ. ಹಿಂದೆ ನಾನು ಚೇರ್ಮನ್ ಆಗಿದ್ದಾಗ ಬೆಂಗಳೂರಿನಿಂದ ನನಗೆ ದೂರವಾಣಿ ಬರುತ್ತಿತ್ತು ನಾವು ಲಿಸ್ಟ್ ಕಳಿಸುತ್ತಿದ್ದೇವೆ ಇವರನ್ನು ಅಡ್ಮಿಟ್ ಮಾಡಬೇಕೆಂದು; ಆಗ ನಾನು ಅವರಿಗೆ ಹೇಳುತ್ತಿದೆ ಅಡ್ಮಿಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು. ವಿಶ್ವವಿದ್ಯಾನಿಲಯದಲ್ಲಿ ಇಷ್ಟು ಸೀಟ್ ಸ್ಯಾಂಕ್ಷನ್ ಆಗಿವೆ. ಅದಕ್ಕಿಂತ ಹೆಚ್ಚು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದೆ. I am an academician myself. I cannot go against my conscience. I can't go against it. ಒಮ್ಮೆ ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಯಿಂದ ದೂರವಾಣಿ ಕರೆ ಬಂತು. ಆಗ ನಾನು ಮೀಟಿಂಗ್‌ನಲ್ಲಿ ಇದ್ದೆ. ಆ ಸಮಿತಿಯ ಸದಸ್ಯರು ಮುಖ್ಯ ಮಂತ್ರಿಗಳ ಕಛೇರಿಯಿಂದ ದೂರವಾಣಿ ಕರೆ ಬಂದಿದೆ.

ಅದನ್ನು ಪರಿಗಣನೆ ಮಾಡಿ ಇಲ್ಲದಿದ್ದರೆ ನಮಗೆ ತೊಂದರೆ ಬರುತ್ತದೆ ಎಂದು ಹೇಳಿದರು. ತೊಂದರೆ ಬರದಂತೆ ನಾನು ನೋಡಿಕೊಳ್ಳುತ್ತೇನೆ. ನಾನು ಶಾಸಕನಾಗಿದ್ದೇನೆ; ನೀವು ಭಯಪಡಬೇಡಿ ಎಂದು ಅವರಿಗೆ ಹೇಳಿದೆ. ನಂತರ ನಾನು ಬೆಂಗಳೂರಿಗೆ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳನ್ನು ಕಂಡು ಮಾತನಾಡಿದೆ. ಆಗ ಅವರು ಬೇರೆ ಕಾಲೇಜಿನವರು ೧೦ ಹೇಳಿದರೆ ೨೦ ಮಾಡುತ್ತಿದ್ದಾರೆ ನೀವು ಏತಕ್ಕೆ ಮಾಡಲಿಲ್ಲವೆಂದು ಕೇಳಿದರು? ಆಗ ನಾನು ಇದ್ದ ಕಷ್ಟವನ್ನು ಹೇಳಿದೆ. ಆಗ ಅವರು ನನ್ನ ಬೆನ್ನು ತಟ್ಟಿದರೆ ಮುಂದೆ ಅವರು ನನ್ನನ್ನು ಮೇಲ್ಮನೆಯ ಉಪಸಭಾಪತಿಯನ್ನಾಗಿ ಕೂಡ ಮಾಡಿದರು. ಪ್ರಾಮಾಣಿಕರಾಗಿ ಕೆಲಸ ಮಾಡುವವರಿಗೆ ಪ್ರತಿಯೊಂದು ಕಡೆಯಲ್ಲೂ ಕೂಡ ಬೆಲೆ ಇದ್ದೇ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಯಾವ ಮುಖ್ಯ ಮಂತ್ರಿಯೂ ನೀನು ಕರಪ್ಟ್ ಆಗು ಎಂದು ಹೇಳುವುದಿಲ್ಲ. ಆರೋಗ್ಯ ಮಂತ್ರಿಗಳೂ ಕೂಡ ಹೇಳುವುದಿಲ್ಲ. ಯಾವುದೇ ಒತ್ತಡಕ್ಕೆ ಒಳಗಾಗದೇ ಸರಿಯಾಗಿ ಪ್ರಾಮಾಣಿಕವಾಗಿ ಕೆಲಸಮಾಡಿದರೆ ತಪ್ಪುಗಳು ಬಹಳ ಕಡಿಮೆಯಾಗುತ್ತವೆ. ಈ ಮನೆಯಲ್ಲಿ ಬಹಳ ದೊಡ್ಡ ಜವಾಬ್ದಾರಿ ಇದೆ. ಇದಕ್ಕಿಂತ ದೊಡ್ಡ ಮನೆ ಇಡೀ ಕರ್ನಾಟಕದಲ್ಲಿ ಇಲ್ಲ. ಆ ಕಡೆ ಇರಬಹುದು ಇಲ್ಲವೇ ಈ ಕಡೆ ಇರಬಹುದು ಎಲ್ಲ ಸದಸ್ಯರಿಗೂ ಜವಾಬ್ದಾರಿ ಇರುತ್ತದೆ. ಈ ಹಿಂದೆ ನನ್ನ ಸದಸ್ಯತ್ವ ಮುಗಿದು ಬೀಳ್ಕೊಡಿಗೆ ಸಮಾರಂಭ ನಡೆದ ದಿವಸ ಹೇಳಿದೆ. ಏನೆಂದರೆ ನಮಗೆ ಸ್ವಾತಂತ್ರ್ಯ ಬಂದಾಗ ೨ ಸಾವಿರ ಕೋಟಿ ಈ ದೇಶದ ಬಜೆಟ್ ಆಗಿತ್ತು ಆದರೆ ಈಗ ೩೦ ಸಾವಿರ ಕೋಟಿ ಬಜೆಟ್ ಆಗಿದೆ. ಹಾಗೆಯೇ ಕಷ್ಟಗಳೂ ಕೂಡ ಜಾಸ್ತಿಯಾಗಿವೆ. ಬಡತನದ ರೇಖೆಯ ಕೆಳಗೆ ೪೦ ಪರ್ಸೆಂಟ್‌ನಷ್ಟು ಜನರು ಇದ್ದಾರೆ. ಮೊದಲು ಅಷ್ಟು ಇರಲಿಲ್ಲ. ಸ್ಟೇಟ್. ಸೆಂಟ್ರಲ್ ಎಲ್ಲಾ ಸೇರಿದರೆ ೮೦ ಸಾವಿರ ಕೋಟಿ ಬಜೆಟ್ ಆಗುತ್ತದೆ, Wrong people are in the right places. Wrong people are heading right places ೮೦ ಸಾವಿರ ಕೋಟಿಗೆ ಇನ್ನೂ ೮೦ ಸಾವಿರ ಕೋಟಿಯನ್ನು ಸೇರಿಸಿ ಖರ್ಚು ಮಾಡಿದರೂ ಕೂಡ ಅವರು ಹಾಗೆಯೇ ಇರುತ್ತಾರೆ, ಇವತ್ತು ಜನರಿಗೆ ಸಾಕಷ್ಟು ಅನುಕೂಲಗಳನ್ನು ಕೊಟ್ಟಿದ್ದೇವೆಂಬ ಕಾರಣದಿಂದ ನಾವು ಶಾಸಕರಾಗಿದ್ದೇವೆ ಮತ್ತು ಲೀಡರ್ಸ್ ಆಗಿದ್ದೇವೆ ಆದ್ದರಿಂದ ಈ ಸ್ಥಾನಕ್ಕೆ ಕಳಂಕ ತರದೆ ಈ ಸಭೆಯಲ್ಲಿ ಜನತೆಗೆ ಅನುಕೂಲವಾಗತಕ್ಕಂತಹ ರೀತಿಯಲ್ಲಿ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದಿನ ಜನತಾ ಸರಕಾರ ೮೩ ರಲ್ಲಿ ಅಧಿಕಾರಕ್ಕೆ ಬಂದಾಗ ಮಾನ್ಯ ಸಿಂಧ್ಯರವರು ಆರೋಗ್ಯ ಸಚಿವರಾಗಿದ್ದಾಗ ಪ್ರೈವೇಟ್ ಮೆಡಿಕಲ್ ಕಾಲೇಜಿನಲ್ಲಿ ಕ್ಯಾಪಿಟೇಷನ್ ಫೀಯನ್ನು ೧೫೦೦ ರೂಪಾಯಿ ಇದ್ದುದನ್ನು ೫೦೦೦ಕ್ಕೆ ಏರಿಸಿದರು ಈಗ ಅವರು ಇಲ್ಲಿ ಇಲ್ಲ ಹೊರಗೆ ಹೋಗಿದ್ದಾರೆ. ಇದರ ಅವಶ್ಯಕತೆ ಏನಿತ್ತು ಹಿಂದೆ ನಾನು ಚೇರ್ಮನ್ ಆಗಿದ್ದಾಗ ಒಮ್ಮೆ ಮಾನ್ಯ ಸಿಂಧ್ಯರವರ ಮನೆಗೆ ಹೋಗಿ ಇದರ ಬಗ್ಗೆ ವಿಚಾರ ಮಾಡಿದೆ. ಆಗ ಅವರು ಹೇಳಿದರು. ತಾವು ಚೇರ್ಮನ್ ಆಗಿದ್ದೀರಿ. ಹೇಳಿ ಕಳುಹಿಸಿದ್ದರೆ ನಾನೆ ನಿಮ್ಮ ಮನೆಗೆ ಬರುತ್ತಿದ್ದೆ ಎಂದು ಹೇಳಿದರು. ನಾನು ಚೇರ್ಮನ್ ಆಗಿದ್ದಾಗ ೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ತೆಗೆದುಕೊಂಡ 'ಫಿ' ಜಾಸ್ತಿ ಎಂದು ಒಬ್ಬೊಬ್ಬ ಹುಡುಗನಿಗೂ ವಾಪಸ್ ಮಾಡಿದೆ. ಆ ಕಮಿಟ್‌ಮೆಂಟ್ ನನ್ನಲ್ಲಿ ಇತ್ತು. ನಾನು ಅಲ್ಲಿ ಚೇರ್‌ಮನ್ ಇದ್ದಾಗ ೧೫ ನೂರು 'ಫಿ' ಇತ್ತು. ಅದೂ ಕೂಡ ಜಾಸ್ತಿ ಎಂದು ವಾಪಸ್ ಮಾಡಿದೆ. ಖಾಸಗೀ ಮೆಡಿಕಲ್ ಕಾಲೇಜ್‌ಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಮಕ್ಕಳಿಗೆ ಅನ್ಯಾಯ ಆಗಬಾರದೆಂದು ಆ ರೀತಿ ಮಾಡಿದೆ. ಆದರೆ ಮಾನ್ಯ ಸಿಂಧ್ಯಾ ಅವರು ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ವರ್ಷಕ್ಕೆ ೧೫ ನೂರು ಇದ್ದ 'ಫಿ' ಅನ್ನು ೫ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದರು.

ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಓದತಕ್ಕವರೆಲ್ಲರೂ ಶ್ರೀಮಂತರ ಮಕ್ಕಳೇ ಏನು? ಬಡವರ ಮಕ್ಕಳೂ ಇರುವುದಿಲ್ಲವೇನು? ಬಡವರ ಮಕ್ಕಳು ಇಲ್ಲಿ ಓದಬಾರದೇನು? ಅವರು ಯಾವ ರೀತಿಯಿಂದ ೫ ಸಾವಿರ ರೂಪಾಯಿ ಫೀಸನ್ನು ಕಟ್ಟಬೇಕು? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಯಾವ ಕಮಿಟಿಯವರು ಇದನ್ನು ಸಬ್ಮಿಟ್ ಮಾಡಿದ್ದಾರೆಂಬುದನ್ನು ಹೇಳಿ ಶಾಸಕರಲ್ಲಿ ತಪ್ಪಿಲ್ಲವೇ? ಮೆಡಿಕಲ್ ವಿಚಾರದಲ್ಲಿ ನಾನು ತಿಳಿದುಕೊಂಡಿದ್ದೇನೆ. ಅಕಡೆಮಿಕ್ ಕೌನ್ಸಿಲ್‌ನಲ್ಲಿ ನಾನು ಕೆಲಸ ಮಾಡಿದ್ದೇನೆ. ನನ್ನನ್ನು ಈ ಬಗ್ಗೆ ಒಬ್ಬರಾದರೂ ಕೇಳಿದ್ದೀರಾ? Ther was a committee for abolition of capitation fees headed by Sri Issar ಅವರು ಕಮಿಟಿ ರಿಪೋರ್ಟನ್ನು ಕೊಟ್ಟರು, ಗೌರ್ನರ್ ಅದಕ್ಕೆ ಅಪ್ರೂವಲ್ ಕೊಟ್ಟರು. ರಾಜ್ಯದಲ್ಲಿ ಇದರ ಬಗ್ಗೆ ಗಡಿಬಿಡಿ ನಡೆಯಿತು. ಇದು ಮಕ್ಕಳ ಮೇಲೆ ಭಾರವಾಗುತ್ತಿದೆ. ಇದನ್ನು ವಿಚಾರ ಮಾಡಬೇಕೆಂದು ಮನವಿಗಳು ಬಂದುವು. ಇದಕ್ಕೆ ನಮ್ಮ ಕಾಂಗ್ರೆಸ್ ಲೀಡರ್ಸ್ ಹೇಳಿದರು ನಮ್ಮ ಸರ್ಕಾರ ಇದನ್ನು ಅಬಾಲಿಷ್ ಮಾಡುತ್ತೇವೆ ಎಂದು. ಆದರೆ ಈ ವರ್ಷ ನೀವು ಏನು ಮಾಡಿದಿರಿ? ಹಿಂದೆ ಅವರು ಏನು ಮಾಡಿದ್ದರು, ಅದನ್ನೇ ನೀವೂ ಸಹ ಕಂಟಿನ್ಯೂ ಮಾಡಿದಿರಿ. ಇವತ್ತು ನಾನು ಒಂದು ಮಾತನ್ನು ಹೇಳುತ್ತೇನೆ, ನಾವು ಜನರಿಗೆ ಎಂಥ ದ್ರೋಹವನ್ನು ಬಗೆಯುತ್ತಿದ್ದೇವೆ, ಎಂಬುದು

ಗೊತ್ತೇ? ನಿಮ್ಮ ಮ್ಯಾನಿಫೆಸ್ಟೋದಲ್ಲಿ ಸ್ಪಷ್ಟವಾಗಿ ಹೇಳಿದಿರಿ. ನಾವು ಕ್ಯಾಪಿಟೇಷನ್ ಫೀಸನ್ನು ಅಬಾಲಿಷ್ ಮಾಡುತ್ತೇವೆ ಅಂತ. ಈಗ ಮಾನ್ಯ ಮುಖ್ಯ ಮಂತ್ರಿಗಳು ಇದ್ದಿದ್ದರೆ ಬಹಳ ಚೆನ್ನಾಗಿರಂತ್ತಿತ್ತು. ನಾನು ಕ್ಯಾಪಿಟೇಷನ್‌ಗೆ ಸಂಬಂಧಪಟ್ಟಂತೆ ಮೆಡಿಕಲ್‌ಬೋರ್ಡ್‌ನ ಛೇರ್ಮನ್ ಆಗಿದ್ದಾಗಿನಿಂದಲೇ ಈ ಕ್ಯಾಪಿಟೇಷನ್ ಫೀಸನ್ನು ಅಬಾಲಿಷ್ ಮಾಡಬೇಕೆಂದು ಭಾಷಣ ಮಾಡಿದ್ದೇನೆ. ನನ್ನ ಮಿತ್ರರಿಗೂ ನಾನು ಹೇಳಿದ್ದೇನೆ. ಇದು ಒಂದು ಸಿಸ್ಟಂ ಆಗಿದೆ ಇದನ್ನು ಸರ್ಕಾರ ಒಪ್ಪಿಕೊಂಡಿದೆ, ಈ ಸಿಸ್ಟಂನಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ, ಅದೇ ರೀತಿ ಈ ಸಿಸ್ಟಂನ ಮುಖಾಂತರವೇ ಕ್ಯಾಪಿಟೇಷನನ್ನು ಅಬಾಲಿಷ್ ಮಾಡಲು ನಾನು ಪ್ರಯತ್ನ ಮಾಡುತ್ತಿದ್ದೇನೆಂದು ಹೇಳಿದೆ. ಈ ಕ್ಯಾಪಿಟೇಷನ್ ಸಿಸ್ಟಂನ್ನು ತೆಗೆದು ಹಾಕಬೇಕೆಂದು ನಾನು ಭಾಷಣ ಮಾಡಿದ್ದೇನೆ ಇದನ್ನು ತಾವು ರೆಕಾರ್ಡ್‌ನಲ್ಲಿ ನೋಡಬಹುದು. ನಮ್ಮಲ್ಲಿ ಈಗ ಡಾಕ್ಟರ್‌ಗಳಿಗೆ ಏನಾದರು ಕೊರತೆ ಇದೆಯೇ ? ಏತಕ್ಕೆ ಇಷ್ಟೊಂದು ಮೆಡಿಕಲ್ ಕಾಲೇಜುಗಳು ನಮಗೆ ಬೇಕು ? ನಿನ್ನೆಯ ದಿವಸ ಇದೇ ಸದನದಲ್ಲಿ ಮಾನ್ಯ ಆರೋಗ್ಯ ಸಚಿವೆಯವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಡಿಸೋಜಾರವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಏನೆಂದರೆ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿದೆ ಅಂತ. ನಾವು ಸಾರ್ವಜನಿಕರಿಗೆ ಮತ್ತು ನಮ್ಮ ಕ್ಷೇತ್ರದ ಜನರಿಗೆ ಎಂಥ ಮೋಸ ಮಾಡುತ್ತಿದ್ದೇವೆಂಬುದನ್ನು ನಾನು ಹೇಳುತ್ತಿದ್ದೇನೆ. ಇದನ್ನು ನಾವು ತೂಕ ಮಾಡಿ ನೋಡಬಹುದು. ನಾವು ಜನರಿಗೆ ದ್ರೋಹ ಮಾಡಬಾರದು. ಇಲ್ಲಿ ಏನು ಕೊಟ್ಟಿದ್ದೀರಿ ಎಂದರೆ, ಬೆಂಗಳೂರು ಮೆಡಿಕಲ್ ಕಾಲೇಜಿನ ಸ್ಟ್ರೆಂಗ್ತ್ ೨೦೦, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ೧೭೫, ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ೧೩೦, ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ೧೩೦ ಅಂತ. ಪ್ರೈವೇಟ್ ಮೆಡಿಕಲ್ ಕಾಲೇಜಿಗೆ ಬರುವವರನ್ನು ನಾವು ನೋಡಿದ್ದೇವೆ. ಕಸ್ತೂರ್‌ಬಾ ಮೆಡಿಕಲ್ ಕಾಲೇಜು, ಮಂಗಳೂರು ಇಲ್ಲಿ ೨೫೦ ಸ್ಟ್ರೆಂಗ್ತ್ ಇದೆ. ಅಂದರೆ ೫೦ ಸೀಟ್ಸ್ ಹೆಚ್ಚಿಗೆ ಇದೆ. ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲಿ ೨೫೦ ಸ್ಟ್ರೆಂಗ್ತ್ ಇದೆ. ನಾನು ತಮಗೆ ಕೇಳುತ್ತೇನೆ, ಒಬ್ಬ ಹುಡುಗನಿಗೆ ೭ ಬೆಡ್ಸ್‌ನಂತೆ ಇರಬೇಕು. ಅದರ ಪ್ರಕಾರ ಈ ಎರಡು ಮೆಡಿಕಲ್ ಕಾಲೇಜುಗಳು ಏನಿವೆ, ಇವೆರಡರಿಂದ ಎಷ್ಟು ಹಾಸಿಗೆಗಳು ಇರಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದೀರಾ ? ನಿಮ್ಮ ಪ್ರಕಾರ ಒಂದೊಂದು ಕಾಲೇಜಿಗೆ ೧೭೫೦ ಬೆಡ್ಸ್ ಇರಬೇಕು. ನಾನು ತಮಗೆ ಹೇಳುತ್ತೇನೆ, ಇವತ್ತು ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ೧೭೫೦ ಬೆಡ್ಸ್ ಇರುವುದೇ ಆದರೆ ನಾನು ಶಾಶ್ವತವಾಗಿ ಈ ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಯಾವ ಅಧಿಕಾರಿಯಾದರೂ ಅಲ್ಲಿ ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದಾರೆಯೇ ? ಈ ಮನೆಯಲ್ಲಿ ಒಬ್ಬ ಮೆಡಿಕಲ್ ವಿಚಾರ ಗೊತ್ತಿರತಕ್ಕ ಮನುಷ್ಯ ಇದ್ದಾನೆ, ಅಕೆಡೆಮಿಕ್ ಕೌನ್ಸಿಲ್‌ನಲ್ಲಿ ಕೆಲಸ ಮಾಡಿರತಕ್ಕ ವ್ಯಕ್ತಿ ಇದ್ದಾನೆ. ಆತನನ್ನು ಈ ಬಗ್ಗೆ ಕೇಳಬೇಕೆಂಬ ತಾಳ್ಮೆಯೂ ಸರ್ಕಾರಕ್ಕೆ ಇಲ್ಲ. ನಾನು ಈ ವಿಚಾರವನ್ನು ಇಲ್ಲಿ ಕೇಳುವುದಿಲ್ಲ. ಇಲ್ಲಿ ಕೇಳಿದರೆ ತಪ್ಪಾಗುತ್ತದೆ. ನಾನು ನಿಮ್ಮ ಛೇಂಬರ್‌ಗೆ ಬಂದು ಮಾತನಾಡತಕ್ಕ ಪರಿಪಾಠ ಇಟ್ಟುಕೊಂಡಿದ್ದೇನೆ. ಇಲ್ಲಿ ಏಕೆ ಮಾತನಾಡಬಾರದೆಂದರೆ ನಾನು ರೂಲಿಂಗ್ ಪಾರ್ಟಿಯವನು. ಆದರೂ ನಾನು ಇಲ್ಲಿ ಮಾತನಾಡಬೇಕಾಗಿ ಬಂದಿರುವುದರಿಂದ ಮಾತನಾಡುತ್ತಿದ್ದೇನೆ. ಇಲ್ಲಿ ಎಲ್ಲರೂ ಬಹಳ ಒಳ್ಳೆಯ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅದಕ್ಕೆ ನೀವು ಉತ್ತರವನ್ನೂ ಕೊಡುತ್ತಿದ್ದೀರಿ. ಆದರೆ ಅದರ ಬಗ್ಗೆ ವಿವೇಚನೆಯನ್ನೇ ಮಾಡುತ್ತಿಲ್ಲ. ನೀವು ಮಂಗಳೂರಿನ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನಲ್ಲಿ ೨೫೦ ವಿದ್ಯಾರ್ಥಿಗಳಿದ್ದಾರೆಂದು ಹೇಳಿರುವುದರಿಂದ ಅದರ ಪ್ರಕಾರ ಅಲ್ಲಿ ೧೭೫೦ ಬೆಡ್ಸ್ ಇವೆಯೇ ಎಂದು ನಾನು ತಮ್ಮನ್ನು ಕೇಳುತ್ತೇನೆ. ತಮಗೂ ಗೊತ್ತಿದೆ ಇವತ್ತು ನಿಮ್ಮಲ್ಲಿ ವಿಕ್ಟೋರಿಯಾ ಆಸ್ಪತ್ರೆ ಇದೆ. ೧೦೦೦ ಹಾಸಿಗೆ ಇರತಕ್ಕ ಆಸ್ಪತ್ರೆಯನ್ನು ಮೇನ್‌ಟೇನ್ ಮಾಡಬೇಕಾದರೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಹೇಳುತ್ತೀರಾ ? ಅಷ್ಟು ಹಣದ ವ್ಯವಸ್ಥೆ ಅವರಲ್ಲಿದೆಯೇ? ನಿಮ್ಮ ಪ್ರಕಾರವೇ ಸುಮಾರು ೬ ಕೋಟಿ ರೂಪಾಯಿಗಳು ಅವರಿಗೆ ಬೇಕಾಗುತ್ತದೆ. ಅಲ್ಲಿಗೆ ಎಷ್ಟು ಜನ ರೋಗಿಗಳು ಬರುತ್ತಿದ್ದಾರೆ ? ಗುಲ್ಬರ್ಗಾ ಮೆಡಿಕಲ್ ಆಸ್ಪತ್ರೆಯಲ್ಲಿ ೭೦೦ ಬೆಡ್ಸ್ ಇದ್ದರೂ ಕೂಡ ಎಫೆಕ್ಟೀವ್ ಪೇಷಂಟ್ಸ್ ೫೦೦–೬೦೦ ಕೂಡ ಇರುವುದಿಲ್ಲ. ೧೭೫೦ ಬೆಡ್ಸ್ ಎಲ್ಲಿಂದ ಬರುತ್ತದೆ. ಇದೇನು ಗಗನ ಕುಸುಮವೇ ? ಇದೇನು ಗಂಧರ್ವ ನಗರವೇ ? ಇದು ಏತಕ್ಕೆ ಹೀಗಾಗಿದೆ ಎಂದರೆ ಯಾರೂ ಕೂಡ ಇನ್‌ಸ್ಪೆಕ್ಷನ್ ಮಾಡುವುದಿಲ್ಲ. ಹೆಲ್ತ್ ಸೆಕ್ರೆಟರಿ ಇರುತ್ತಾರೆ ಅಡಿಷನಲ್ ಸೆಕ್ರೆಟರಿ ಇರುತ್ತಾರೆ, ಇನ್ನೂ ಬೇರೆ ಬೇರೆ ಅಧಿಕಾರಿಗಳು ಇರುತ್ತಾರೆ. ಆದರೆ ಅವರೆಲ್ಲಾ ಏನು ಮಾಡುತ್ತಾರೆ ? ಮಾನ್ಯ ರಾಚಯ್ಯನವರು ಬಹಳ ಒಳ್ಳೆಯ ಮಂತ್ರಿಯಾಗಿದ್ದರು I really compliment him with all my heart. The whole of Karnatatka must compliment the Ex-Health

Minister. ಅಂಥ ಪ್ರಾಮಾಣಿಕ ಜನರು ಕೂಡ ನಮ್ಮ ಜೊತೆಯಲ್ಲಿ ಇದ್ದರು. ಇಲ್ಲವೆಂದು ಹೇಳಬಾರದು. ಅತ್ಯಂತ ಒಳ್ಳೆಯವರಿದ್ದರು. ಆವಾಗ ಏನು ಮಾಡಿದರು ಗೊತ್ತೇ. ಎಲ್ಲ ಮ್ಯಾನೇಜ್‌ಮೆಂಟ್‌ನವರು ಅವರನ್ನು ಬೈಪಾಸ್ ಮಾಡಿ ಕೆಲಸ ಮಾಡಿದರು. ಅವರು ಇದನ್ನು ತಡೆಗಟ್ಟುವ ಪ್ರಯತ್ನ ಮಾಡಿದರು. ನನಗೆ ಗೊತ್ತು. ಏತಕ್ಕೆಂದರೆ ಅವರು ನನಗೆ ಬಹಳ ಬೇಕಿದ್ದವರು. ಅವರನ್ನು ಪೂರ್ಣವಾಗಿ ಬೈಪಾಸ್ ಮಾಡಿದರು, ಅದನ್ನು ಮಾಡಿದಂತವರು ನಾವೇ, ಇವತ್ತು ಅವರು ಹೋಗಿದ್ದಾರೆ. ಜನರು ಅವರನ್ನು ಬೇಡ ಎಂದು ಕಳುಹಿಸಿರುವುದರಿಂದ ನಾವು ಬಂದು ಅವರಿಗೆ ಹೇಳುತ್ತಿದ್ದೇವೆ. ನಾವು ಯಾರೂ ಬುದ್ಧಿವಂತರೆಂದು ತಿಳಿದುಕೊಳ್ಳಬೇಡಿ. ಕರ್ನಾಟಕದಲ್ಲಿ ಬುದ್ಧಿವಂತರು ಬಹಳ ಜನರು ಇದ್ದಾರೆ. ಆದರೆ ನೀವು ಒಳ್ಳೆಯ ಕೆಲಸ ಮಾಡಿದರೆ ಅಪ್ರಿಷಿಯೇಟ್ ಮಾಡುವವರಿದ್ದಾರೆ. ಇನ್ನು ಐದು ವರ್ಷ ಏತಕ್ಕೆ ೧೫ ವರ್ಷಗಳ ಕಾಲ ಆಡಳಿತ ಮಾಡಬಹುದು. ಆಮೇಲೆ ದಾವಣಗೆರೆ ೨೫೦ ಬೆಳಗಾವಿ ೧೭೫ ಒಂದು ಸಮಿತಿ ಮಾಡಿ ನೋಡೋಣ ? ನಾನು ಛಾಲೇಂಜ್ ಮಾಡಿದ್ದೇನೆ. ಇದನ್ನು ಯಾರಿಗೋಸ್ಕರ ಮಾಡುತ್ತಿದ್ದೀರಿ? ಕೇವಲ ಜನರಿಗಷ್ಟೆ ಮೋಸ ಮಾಡುತ್ತಿಲ್ಲ. ಮಕ್ಕಳಿಗೂ ಮೋಸ ಮಾಡುತ್ತಿದ್ದೀರಿ. ಡೆಮಾನ್‌ಸ್ಟ್ರೇಷನ್ ಮಾಡಬೇಕಾದರೆ ಒಬ್ಬ ಹುಡುಗನಿಗೆ ೭ ಬೆಡ್ ಬೇಕು. ಇಷ್ಟು ಕಡಿಮೆ ಬೆಡ್‌ಗಳಿದ್ದರೆ ಯಾವ ರೀತಿ ಅವರು ಡೆಮಾನ್‌ಸ್ಟ್ರೇಷನ್ ಮಾಡಬಹುದು. ಇದು ಅವ್ಯವಸ್ಥೆಯಲ್ಲವೇ? ಇದರಿಂದ ಏನಾಗುತ್ತದೆ, ಪರೀಕ್ಷೆ ಮಾಡುವುದರೊಳಗೆ ರೋಗಿ ಸತ್ತು ಹೋಗುತ್ತಾನೆ. ಆಗ ಆ ಆಸ್ಪತ್ರೆಗೆ ಯಾರು ಬರುವುದಿಲ್ಲ ಅಂದರೆ ಬರೇ ಕೇವಲ ಡೆಮಾನ್ ಸ್ಟ್ರೇಷನ್ ಆಗುತ್ತದೆ ಹೊರತಾಗಿ ಪ್ರಾಕ್ಟಿಕಲ್ ಆಗಿ ಟ್ರೈನಿಂಗ್ ಏನೂ ಆಗುವುದಿಲ್ಲ. ಇದರಿಂದಾಗಿ ಮಕ್ಕಳಿಗೆ ಮೋಸ ಮಾಡಿದಂತಾಗುವುದಿಲ್ಲವೇ? ನಮ್ಮ ಮಕ್ಕಳಿಗೆ ಟ್ರೈನಿಂಗ್ ಕೊಡಬೇಕಾದರೆ ಇಂಥ ಆಸ್ಪತ್ರೆಗಳನ್ನು ಉಪಯೋಗಿಸಬಹುದೆ ? ಆದರೂ ಕೂಡ ಜನರಿಗೆ ಒಂದು ಕ್ವಾಲಿಫಿಕೇಶನ್ ಬೇಕಾದರೆ ಇಂತಹ ಕಾಲೇಜ್‌ಗಳನ್ನು ಹುಡುಕಿಕೊಂಡು ಬರುತ್ತಾರೆ. ನಿಮ್ಮ ಯೋಜನೆಯ ಪ್ರಕಾರ ಇಲ್ಲಿ ಪ್ರವೇಶ ಕೊಡತಕ್ಕಂಥ ಅಂಕಿ ಸಂಖ್ಯೆಗಳನ್ನು ಕೇಳಿದ್ದಾರೆ. ಮಾನ್ಯ ಶಿವಾನಂದ ಕೌಜಲಗಿಯವರು. ಅವರ ಪ್ರಶ್ನೆ ರೀಚ್ ಆಗಿದೆಯೋ ಇಲ್ಲವೋ ನನಗೆ ಗೊತ್ತಾಗಿಲ್ಲ. ರೀಚ್ ಆಗಲಿಲ್ಲವೆಂದು ಕಾಣಿಸುತ್ತದೆ. ಅವರು ಬಹಳ ಉತ್ತಮವಾದ ಪ್ರಶ್ನೆಯನ್ನು ಕೇಳಿದರು; ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕರ್ನಾಟಕದ ಹುಡುಗರು ಎಷ್ಟು ಹೊರಗಿನವರು ಎಷ್ಟು ಎಂದು ಕೇಳಿದ್ದಕ್ಕೆ ಕರ್ನಾಟಕದ ಹುಡುಗರು ೨,೬೧೯, ಹೊರಗಿನವರು ೧೨೭ ಮಂದಿ ಎಂದು ಹೇಳಿದ್ದಾರೆ. ಏತಕ್ಕೆಂದರೆ ಬೇರೆ ಬೇರೆ ರಾಜ್ಯಗಳವರು ಬರುತ್ತಾರೆ. ಮ್ಯೂಚ್ಯುಯಲ್ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ಆದರಂತೆ ಅವರು ಬರಬೇಕು. ಅವರೂ ನಮ್ಮ ಭಾರತ ದೇಶದವರೇ. ಈಗ ಖಾಸಗಿ ವೈದ್ಯ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳು ೩,೬೧೯ ಇದ್ದರೆ, ಹೊರ ರಾಜ್ಯದ ಮತ್ತು ಪರ ರಾಷ್ಟ್ರದ ವಿದ್ಯಾರ್ಥಿಗಳು ಎಷ್ಟೆಂದರೆ ೫,೪೭೪. ಏತಕ್ಕೆ ? ನೀವು ಹೊರರಾಜ್ಯ ಪರರಾಜ್ಯ ಬೇರೆ ರಾಜ್ಯದ ಮಕ್ಕಳಿಗೆ ಸೀಟ್‌ಗಳನ್ನು ಕೊಡುವುದರ ಮೂಲಕ ನೀವು ಏತಕ್ಕೆ ಅಪಕೀರ್ತಿಗೆ ಗುರಿಯಾಗುತ್ತೀರಿ ? ಆ ಪಾಪಕ್ಕೆ ಏತಕ್ಕೆ ನೀವು ಹೊಣೆಗಾರರಾಗುತ್ತೀರಿ. ಬರೇ ೪-೫ ಸೀಟಿನ ಸಲುವಾಗಿ. ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿ ನೀವು ಕುಳಿತಿದ್ದೀರಿ. ನೀವು ಸೀಟ್‌ಗಳನ್ನು ಕೊಡುವುದರಿಂದ ಶಾಸಕರು ಕೇಳುವುದಕ್ಕೆ ಬರುತ್ತಾರೆ. ಇಲ್ಲದಿದ್ದರೆ ಯಾರೂ ಬರುವುದಿಲ್ಲ. ಈಗ ನಾನು ಕೂಡ ೧೯೮೭ನೇ ಇಸವಿಯಲ್ಲಿ ಅಧ್ಯಕ್ಷನಾಗಿದ್ದೆ. ನಮ್ಮ ಡಿಸ್‌ಕ್ರಿಷನ್ ಕೋಟಾ ಹತ್ತು ಇದರೆ ಅದರಲ್ಲಿ ಸರ್ಕಾರಕ್ಕೆ ೨-೩ ಸೀಟ್‌ಗಳನ್ನು ಕೊಡುವುದಕ್ಕೆ ಬರುತ್ತದೆ. ೧೯೮೭ರ ನಂತರ ಈ ರೀತಿ ಅನಾಹುತಕ್ಕೆ ಏತಕ್ಕೆ ಈಡಾಯಿತು. ಇಷ್ಟೆಲ್ಲ ಸೀಟು ಏತಕ್ಕೆ ? ಗುಲ್ಬರ್ಗ ಮೆಡಿಕಲ್ ಕಾಲೇಜ್‌ನಲ್ಲಿ ೧೦೦ ಸೀಟು ಇದ್ದುದು ೧೫೦ ಆಯಿತು. ಕಳೆದ ೩-೪ ವರ್ಷಗಳಿಂದ ಅದು ೨೦೦ಕ್ಕೆ ಹೆಚ್ಚು ಮಾಡಿದ್ದಾರೆ. ಅದಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ೧೯೭೮ನೇ ಇಸವಿಯಲ್ಲಿ ಕರ್ನಾಟಕದ ಎಲ್ಲ ಕಾಲೇಜ್‌ಗಳನ್ನು ಡೀ ರೆಕಗ್‌ನೈಸ್ ಮಾಡಿದರು. ಈಗ ಡೀ ರೆಕಗ್‌ನೈಸ್ ಮಾಡುವಂತ ಜನರು ಯಾರು ಇದ್ದಾರೆ ? ಅಂತಹ ಪ್ರಾಮಾಣಿಕ ಮನುಷ್ಯ ಯಾರೂ ಇಲ್ಲ. ನಾನು ಒಂದು ಸಾರಿ ದೆಹಲಿಗೆ ಹೋಗಿ ಏನ್ರಿ ಇಂಥ ಅವ್ಯವಹಾರಗಳು ನಡೆಯುತ್ತಿದ್ದರೂ ಏತಕ್ಕೆ ಕಣ್ಣು ಮುಚ್ಚಿ ಕುಳಿತುಕೊಂಡಿದ್ದೀರಿ ಎಂದು ಕೇಳಿದೆ. ಆಗ ಆ ಚೈರ್ಮನ್‌ಗೆ ಬಹಳ ಸಂತೋಷವಾಯಿತು. ಆ ಪುಣ್ಯಾತ್ಮ ಈಗ ರಿಟೈರ್ ಆಗಿದ್ದಾನೆ. ಈ ಬಗ್ಗೆ ಕಂಪ್ಲೈಂಟ್ ಕೊಟ್ಟ ಮೇಲೆ ಅದನ್ನು ಉಪಯೋಗ ಮಾಡಿಕೊಂಡು ಮೆಡಿಕಲ್ ಕಾಲೇಜ್‌ಗಳಿಗೆ ಭೇಟಿ ಕೊಟ್ಟು ಅವರ ಸಂಗಡ ವ್ಯವಹಾರ ಮಾಡಿ, ಒಂದೊಂದು ಮೆಡಿಕಲ್ ಕಾಲೇಜ್‌ನಿಂದ ೨-೨ ಸೀಟ್ ತೆಗೆದುಕೊಂಡು ೪-೫ ಲಕ್ಷ ರೂಪಾಯಿಗಳನ್ನು ಮಾಡಿಕೊಂಡು ಅತ ಹೊರಟು ಹೋದ. The Indian Medical Council is in collusion with all the private medical colleges ಇದಕ್ಕೆ ಹೊಣೆಗಾರರು ಯಾರು ? ಪ್ರೈವೇಟ್ ಮೆಡಿಕಲ್ ಕಾಲೇಜ್‌ನವರೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಏತಕ್ಕೆಂದರೆ ನೀವು ಏತಕ್ಕೆ ಗೌರ್ನಮೆಂಟ್ ಕಡೆಯಿಂದ

ಲಿಸ್ಟ್ ಕಳಿಸಿ ಕೊಡುತ್ತೀರಿ ? ಗವರ್ನ್‌ಮೆಂಟ್ ಕಡೆಯಿಂದ ೧೦ ಸೀಟ್ ಕೊಡಿ ಎಂದು ಲಿಸ್ಟ್ ಕಳುಹಿಸಿ ಕೊಟ್ಟರೆ ಅವರು ೨೦ ಮಾಡುತ್ತಾರೆ. ಏತಕ್ಕೆಂದರೆ ಮಲಕರೆಡ್ಡಿಯನ್ನು ಪ್ಲೇಸ್ ಮಾಡ ಬೇಕಾಗಿರುತ್ತದೆ. ಅಥವಾ ಕೌಜಲಗಿಯವರನ್ನು ಪ್ಲೇಸ್ ಮಾಡಬೇಕಾಗಿರುತ್ತದೆ. Why you are giving it to any legislator or anybody for that matter. ಶಾಸನಬದ್ಧವಾಗಿ ಯಾರಿಗೆ ಕೊಡಬೇಕೋ ಅವರಿಗೆ ಕೊಡಿ, ಇಲ್ಲದಿದ್ದರೆ ಬಿಟ್ಟುಬಿಡಿ.

೪–೨೦ ಪಿ. ಎಂ.

ನೀವು ಹತ್ತು ಅಕ್ರಮವಾಗಿ ಮಾಡಿ ಎಂದರೆ ಅವರು ೨೦ ಮಾಡಿರುತ್ತಾರೆ. ಅಂದರೆ ಒಟ್ಟು ೩೦ ಆಗುತ್ತದೆ. ಗುಲ್ಬರ್ಗ ಮೆಡಿಕಲ್ ಕಾಲೇಜಿನದು ಅದೇ ಕೇಸ ಆಯಿತು. ಹಿಂದೆ ಸರ್ಕಾರದವರು ಮಾಡಿರಬಹುದು. ಆದರೆ ಈಗ ನೀವು ಕೂಡ ಅದೇ ಮಾಡುತ್ತಾ ಇದ್ದೀರಿ. ಇನ್ನಾರ್ ಕಮಿಟಿ ವರದಿ ಬಂತು. ಅದನ್ನು ಏನು ಮಾಡಿದರು? ಮೆಡಿಕಲ್ ಕಾಲೇಜ್‌ಗಳಲ್ಲಿ ಕೋಟ್ಯಾಂತರ ರೂಪಾಯಿ ಲೂಟಿ ನಡೆಯುತ್ತಿದೆ. ನಾನು ಲಕ್ಷ ಎಂದು ಹೇಳುತ್ತಿಲ್ಲ. ಇಷ್ಟೆಲ್ಲಾ ಅಕ್ರಮವಾಗಿ ನಡೆಯುತ್ತಿದೆ. ಕರ್ನಾಟಕದ ಮಕ್ಕಳಿಗೆ ೧೯೮೯ರಲ್ಲಿ ಮತ್ತು ಅದಕ್ಕಿಂತ ಮೊದಲು ಎಷ್ಟು ಕೊಡು ತ್ತಿದ್ದರು ? ಇನ್ನಾರ್ ಕಮಿಟಿ ರಿಪೋರ್ಟನ್ನು ಇಂಪ್ಲಿಮೆಂಟ್‌ಅನ್ನು ಗೌರ್ನರ್ ಸಾಹೇಬರು ಮಾಡಿದರು ಏಕೆಂದರೆ ಅವರಿಗೆ ನಾಲೆಡ್ಜ್ ಇರಲಿಲ್ಲ. ಅವರು ಎಂಥ ಬುದ್ಧಿವಂತರೋ ಗೊತ್ತಾಗಲಿಲ್ಲ. ಅವರು ತಜ್ಞರನ್ನು ಕರೆಸಿಕೇಳಬೇಕಾಗಿತ್ತು. ಆಗ ಅವರು ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವಂತಹ ಐಡಿಯಾ ಕೊಡುತ್ತಿದ್ದರು. ಮೊದಲು ಕರ್ನಾಟಕದ ಮಕ್ಕಳಿಗೆ ಅಥವಾ ಲೋಕಲ್ ಜಿಲ್ಲೆಯವರಿಗೆ ೧೫ ಸಾವಿರ ರೂಪಾಯಿವರೆಗೆ ನಾವು ಮೆಡಿಕಲ್ ಸೀಟು ಕೊಡುತ್ತಿದ್ದೆವು. ಬಡ ಮಕ್ಕಳಿಗೆ ಅಥವಾ ದುರ್ಬಲ ರಾಗಿರುವವರಿಗೆ ಮ್ಯಾಗ್ಸಿಮಂ ಎಂದರೆ ೧೦ ಸಾವಿರ ರೂಪಾಯಿ ಮಾತ್ರ ತೆಗೆದುಕೊಂಡು ಸೀಟು ಕೊಡುತ್ತಿದ್ದೆವು. ೨೫ ಸಾವಿರ ರೂಪಾಯಿ ನಾವು ಯಾವಾಗಲೂ ತೆಗೆದುಕೊಂಡೇ ಇಲ್ಲ. ಆಗಿನ ಕಾಲಕ್ಕೆ ೧೦ ಸಾವಿರ ಆದರೆ ಈಗಿನ ಕಾಲಕ್ಕೆ ಅದು ೨೨ ಸಾವಿರ ರೂಪಾಯಿ ಎಂದರೆ ಬಹಳ ಆಯಿತು. ಈಗ ಕರ್ನಾಟಕ ಮೆಡಿಕಲ್ ಕಾಲೇಜ್ ಛೇರ್ಮನ್ ಮಗನೇ ಇದ್ದರೂ ಅವನು ಎಂಥ ಸಮಾಜ ಸೇವಾ ಕಾರ್ಯಕರ್ತ ಇರಲಿ ಅವನಿಗೆ ಸೀಟು ಕೊಟ್ಟರೆ ಅವನು ೧ ಲಕ್ಷ ೨೫ ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಕ್ಯಾಪಿಟೇಷನ್ ಅಬಾಲಿಷ್ ಮಾಡುತ್ತೇವೆ ಎಂದು ಹೇಳುತ್ತೀರಿ. ೧೯೮೯ರವರೆಗೆ ನಾನೇ ಶಿಫಾರಸ್ಸು ಮಾಡಿ ೨೦ ಸಾವಿರ ರೂಪಾಯಿಗೆ ಕೊಡಿಸಿದ್ದೇನೆ. ಗುಲ್ಬರ್ಗ ಕಾಲೇಜಿನಲ್ಲಿ ೪೦ ಸೀಟುಗಳನ್ನು ನಾನೇ ಕೊಡಿಸಿದ್ದೇನೆ. ಮಕ್ಕಳು ಹಡೆಯಬೇಕಾದರೆ ಮಂಗಳ ಸೂತ್ರ ಬೇಕಂತೆ ಅದರಂತೆ ಮಂಗಳ ಸೂತ್ರ ಸಿಕ್ಕಿತು ಈಗ ನೀವೇ ಸರ್ಕಾರದಿಂದ ಆರ್ಡರ್ ಜಾರಿ ಮಾಡಿದ್ದೀರಿ. ಕರ್ನಾಟಕದ ಮಕ್ಕಳಿಗೆ ಪ್ರತಿ ವರ್ಷ ೨೫ ಸಾವಿರ ಎಂದು ನೀವೇ ನಿಗದಿ ಮಾಡಿದ್ದೀರಿ. ಮತ್ತು ಫೀಸ್ ೫ ಸಾವಿರ. ಎಲ್ಲಾ ಕೂಡಿದರೆ ನಾಲ್ಕು ವರ್ಷಕ್ಕೆ ೧ ಲಕ್ಷ ೩೦ ಸಾವಿರ ರೂಪಾಯಿ ಆಯಿತು. ಗುಲ್ಬರ್ಗದಲ್ಲಿ ಜರ್ನಲಿಸ್ಟ್ ಮಗ ಬಂದಿದ್ದ. ನಾನು ಬಡಪ್ರಾಣಿ, ನನ್ನ ಮಗ ಇಂಜಿನಿಯರಿಂಗ್ ಓದಬೇಕು ಎಂದು ಹೇಳುತ್ತಿದ್ದಾನೆ ಎಂದು ಬಂದ, ಗವರ್ನಮೆಂಟ್ ರೂಲ್ ಮಾಡಿದೆ, ೮ ಸಾವಿರ ರೂಪಾಯಿ ಫೀ ಕೊಡಬೇಕು, ನಾನೇನು ಮಾಡಲೀ ಎಂದೆ. ಅಂದರೆ ನಾಲ್ಕು ವರ್ಷಕ್ಕೆ ೩೨ ಸಾವಿರ ರೂಪಾಯಿ ಕೊಡಬೇಕು. ಮೊದಲು ೬ ಸಾವಿರ ರೂಪಾಯಿ ಕೊಡುತ್ತಾ ಇದ್ದರೆ ಈಗ ೩೨ ಸಾವಿರ ರೂಪಾಯಿ ಕೊಡಬೇಕು ಒಂದು ಸಾವಿರ ೬ ಸಾವಿರ ರೂಪಾಯಿ ಇದ್ದದ್ದು ಈಗ ೫ ವರ್ಷಕ್ಕೆ ೧ ಲಕ್ಷ ೩೨ ಸಾವಿರ ರೂಪಾಯಿ ಕೊಡಬೇಕು. ಇದು ಕ್ಯಾಪಿಟೇಷನ್ ಅಬಾಲಿಷ್ ಮಾಡಿದಹಾಗೆ ಆಯಿತಾ ? ದಯವಿಟ್ಟು ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ. ಸರಿಪಡಿಸಿ. ಇಲ್ಲದಿದ್ದರೆ ನಮ್ಮ ಮಕ್ಕಳಿಗೆ ತುಂಬಲಾರದ ಹಾನಿಯಾಗುತ್ತದೆ. ಮತ್ತು ಘೋರ ಪಾಪ ಮಾಡಿದಂತಾಗುತ್ತದೆ. ಜನತಾದವರು ಒಂದು ಗ್ರೇಡೇಷನ್ ಮಾಡಿದ್ದರು ೧೦ ಸೀಟು ಮ್ಯಾನೇಜ್‌ಮೆಂಟ್ ಡಿಸ್ಕ್ರಿಷನ್ ಇನ್ನುಳಿದ ೧೦ ಸೀಟು ೫೧ ಸಾವಿರ ರೂಪಾಯಿನದು. ಲಾಸ್ಟ್ ಕ್ಯಾಟಗರಿ ಸೀಟು ೧ ಲಕ್ಷ ೬೦ ಸಾವಿರ ರೂಪಾಯಿ ಎಂದು ಮಾಡಿದ್ದರು. ಈಗ ಲಾಸ್ಟ್ ಕ್ಯಾಟಗಿರಿ ಸೀಟು ಎಷ್ಟಾಗುತ್ತದೆ ಗೊತ್ತಾ ? ೨ ಲಕ್ಷ ೯೭ ಸಾವಿರ ರೂಪಾಯಿ ಅಂದರೆ ಸುಮಾರು ೩ ಲಕ್ಷ ರೂಪಾಯಿ ಆಗುತ್ತದೆ. ಊಟವನ್ನು ಹೀಗೆ ಮಾಡಿದರೂ ಹೊಟ್ಟೆ ತುಂಬುತ್ತೆ, ಹೀಗೆ ಮಾಡಿದರೂ ಹೊಟ್ಟೆ ತುಂಬುತ್ತದೆ. (ನೇರವಾಗಿ ಮತ್ತು ಬಳಸಿಕೊಂಡು ಎಂದು ಕೈ ಸನ್ನೆ ಮಾಡಿ ತೋರಿಸಿದರು.) ಕ್ಯಾಪಿಟೇಷನ್ ನಿಲ್ಲಿಸಿ ಈಗ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ. ಇನ್ನಾರ್ ಕಮಿಟಿ ಮಾಡಿದ್ದೀರಿ. ಎಂಥ ಇನ್ನಾರೋ ನನಗಂತೂ ಅರ್ಥವಾಗುತ್ತಿಲ್ಲ. ೩ ಲಕ್ಷಕ್ಕೆ ಒಂದು ಸೀಟು ಎಂದರೆ ಯಾವುದಿದು ? ಶ್ರೀಮತಿ ಇಂದಿರಾಗಾಂಧಿಯ ವರು ಪ್ರಧಾನ ಮಂತ್ರಿಗಳಾಗಿದ್ದಾಗ ಎಕಲಾಜಿಕಲ್ ಕಾನ್‌ಫರೆನ್ಸ್‌ನಲ್ಲಿ ಅಟೆಂಡ್ ಆಗುವುದಕ್ಕೆ ಜಿನಿವಾಕ್ಕೆ

ಹೋಗಿದ್ದರಂತೆ. ಅಲ್ಲಿ ಡಬ್ಲ್ಯು. ಎಚ್. ಒ.ರವರು ಮೇಡಮ್‌ಗೆ ಹೇಳಿದರಂತೆ, ಇಂಡಿಯಾಕ್ಕೆ ಕೊಡುತ್ತಿರುವ ಗ್ರ್ಯಾಂಟ್ಸ್ ಕಡಿಮೆ ಮಾಡಬೇಕಾಗುತ್ತದೆ. ಏಕೆಂದರೆ ಅಲ್ಲಿ ಮೆಡಿಕಲ್ ಕಾಲೇಜ್ ಸೀಟುಗಳನ್ನು ಹರಾಜು ಮಾಡುತ್ತಿದ್ದೀರಿ, ಈ ರೀತಿಯಾದರೆ ಸ್ಟ್ಯಾಂಡರ್ಡ್ ಆಫ್ ಎಜುಕೇಷನ್ ಸರಿಯಿರುವುದಿಲ್ಲ, ಅದರಿಂದ ಗುಣಮಟ್ಟ ಕಡಿಮೆಯಾಗುತ್ತದೆ, ಆದ್ದರಿಂದ ಗ್ರ್ಯಾಂಟ್ ಕೊಡುವುದಿಲ್ಲ ಎಂದು ಹೇಳಿದರಂತೆ. ಆಗ ನಾನೂ ಒಂದು ಸಂಸ್ಥೆಯ ಅಧ್ಯಕ್ಷನಾಗಿದ್ದೆ. ೧೯೮೨ನೇ ಇಸವಿಯಲ್ಲಿ ಸರ್ಕಾರದ ಒಂದು ಆಜ್ಞೆಯನ್ನು ಹೊರಡಿಸಿದ್ದೀರಿ. ಪ್ರತಿಯೊಂದು ಮ್ಯಾನೇಜ್‌ಮೆಂಟಿನವರೂ ನಿಮ್ಮ ನಿಮ್ಮ ಆಸ್ಪತ್ರೆಗಳನ್ನು ಕಟ್ಟಿಸಿಕೊಳ್ಳಬೇಕು, ಸರ್ಕಾರೀ ಆಸ್ಪತ್ರೆಗಳನ್ನು ಉಪಯೋಗ ಮಾಡಬಾರದು ಎಂದು. ಎಷ್ಟು ಮೆಡಿಕಲ್ ಕಾಲೇಜುಗಳವರು ಆಸ್ಪತ್ರೆಗಳನ್ನು ಮಾಡಿಕೊಂಡಿವೆ ? ಆ. ಜಿ. ಒ. ತರಿಸಿ ಟೇಬಲ್ ಮೇಲಿಡಬೇಕು. ಆದಕ್ಕಾಗಿ ಸರ್ಕಾರದ ಸೀಟುಗಳನ್ನು ಕಡಿಮೆ ಮಾಡಿದರು. ಆಗ ಸರ್ಕಾರದ ಮೆರಿಟ್ ಸೀಟು ೬೫ ಕೊಡುತ್ತಿದ್ದರು. ಈಗ ೪೭ಕ್ಕೆ ಬಂದಿದೆ. ಏತಕ್ಕೆ ಕಡಿಮೆ ಮಾಡಿಕೊಂಡಿರಿ ? ಸೀಟು ಮ್ಯಾನೇಜ್‌ಮೆಂಟಿಗೆ ಹೆಚ್ಚಾದರೆ ರೊಕ್ಕ ಹೆಚ್ಚು ಸಿಗುತ್ತದೆ, ಅದರಿಂದ ಆಸ್ಪತ್ರೆ ಕಟ್ಟಿಸಿಕೊಳ್ಳಬಹುದು ಎಂದು ಸರ್ಕಾರದ ಸೀಟುಗಳನ್ನು ಕಡಿಮೆ ಮಾಡಿಕೊಂಡರು ೨೦೦ ಬೆಡ್ ಆಸ್ಪತ್ರೆ ಕಟ್ಟಬೇಕಾದರೆ ೧೯೮೨ನೇ ಇಸವಿಯಲ್ಲಿ ೧೫ ನೂರು ಕೋಟಿ ರೂಪಾಯಿ ಬೇಕಾಗಿತ್ತು. ಹಣ ಇಲ್ಲದಿದ್ದರೆ ಅವರು ಸ್ಟಾಫ್ ಸ್ಯಾಲರಿ ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ೩೫ ಸೀಟು ಬದಲು ೬೦ ಸೀಟು ಮಾಡಿ ಅಷ್ಟು ಡೊನೇಷನ್ ಸೀಟು ಕೊಟ್ಟರೆ ೫ ವರ್ಷಗಳಲ್ಲಿ ಸುಸಜ್ಜಿತವಾದ ದವಾಖಾನೆಯನ್ನು ಕಟ್ಟಿಸಬಹುದು ಎಂದು ಮಾಡಿದ್ದರು. ೧೦೦ ಪರ್ಸೆಂಟ್ ಸೀಟು ಕೊಡಬೇಕು ಎಂದು ಮೊದಲು ಗೌರ್ನಮೆಂಟಿನಲ್ಲಿ ಕರಾರಿತ್ತು. ಎಲ್ಲಿದೆ ಅದು ಈಗ? ಕರ್ನಾಟಕದ ಮಕ್ಕಳಿಗೆ ೧೦ ಸಾವಿರ ರೂಪಾಯಿ ಸೀಟನ್ನು ೧ ಲಕ್ಷ ೩೦ ಸಾವಿರ ಮಾಡಿದ್ದೀರಿ. ಯಾರು ಕೊಡುತ್ತಾರೆ ಅಷ್ಟು ಹಣ ? ಅಷ್ಟು ಶ್ರೀಮಂತಿಕೆ ನಮ್ಮಲ್ಲಿದೆಯೇ ? ನನ್ನ ಮಕ್ಕಳಿದ್ದಾರೆ ಇಬ್ಬರು. ಅವರು ಪಿ. ಜಿ. ಕೋರ್ಸ್ ಓದಬೇಕಾದರೆ ಮೂರು ನಾಲ್ಕು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಯಾರು ದುಡ್ಡು ಕೊಡುತ್ತಾರೆ ? ನೀವು ಜವಾಬ್ದಾರಿ ವಹಿಸುತ್ತೀರಾ ? ನಮ್ಮಂಥವರ ಗತಿಯೇ ಹೀಗಾದರೆ ಸಾಮಾನ್ಯ ಜನರ ಗತಿ ಏನು? ಜನರು ರೋಷಗೊಂಡರೆ ಸರ್ಕಾರ ಅಪಕೀರ್ತಿಗೆ ಗುರಿ ಆಗಬೇಕಾಗುತ್ತದೆ. ಈ ತತ್ವವನ್ನು ಒಬ್ಬರೂ ಅರ್ಥ ಮಾಡಿಕೊಂಡಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಕಳಕಳಿ ಇದೆ. ಆದಕ್ಕಾಗಿ ತಾವು ಅವರಗಮನಕ್ಕೆ ತರಬೇಕು, ಎಂದು ಇದನ್ನು ರಿವೈಸ್ ಮಾಡಿಸಲೇಬೇಕು. ೧೯೮೮ರ ಸ್ಟೇಟಸ್ಕ್ಕೊ ಹೋಗಲೇಬೇಕು. ಇಲ್ಲದಿದ್ದರೆ ಭಯಂಕರವಾದ ಪರಿಣಾಮ ಎದುರಿಸಬೇಕಾಗುತ್ತದೆ. ಇದಕ್ಕೆ ಇಡೀ ಸದನ ಸಹಕಾರ ಕೊಡಬೇಕಾಗುತ್ತದೆ ಬೆಡ್‌ಗಳ ಸಂಖ್ಯೆಗೂ ಸ್ಟೂಡೆಂಟ್ಸ್ ಸಂಖ್ಯೆಗೂ ಒಂದಕ್ಕೊಂದು ಪರಸ್ಪರ ಸಂಬಂಧ ಇರಬೇಕು. ಮೆಡಿಕಲ್ ಕಾಲೇಜು ಆಸ್ಪತ್ರೆಗೂ ಕಮ್ಯೂನಿಟಿ ಹೆಲ್ತ್‌ಸೆಂಟರ್‌ಗೂ ಏನು ವ್ಯತ್ಯಾಸ ಇದೆ ? ಅಲ್ಲಿ ಕೇವಲ ನಾಲ್ಕು ಸ್ಪೆಷಾಲಿಟಿ ಇರುತ್ತದೆ. ಮೆಡಿಸನ್, ಸರ್ಜರಿ, ಗೈನಕಾಲಜಿ ಮತ್ತು ಪೀಡಿಯಾಟ್ರಿಕ್. ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ೧೭ ಸ್ಪೆಷಾಲಿಟಿ ಇರುತ್ತದೆ. ಮೆಡಿಕಲ್ ಕಾಲೇಜುಗಳಲ್ಲಿ ಸ್ಪೆಷಲ್ ಸಿಸ್ಟಂ ಆಫ್ ಹೆಲ್ತ್ ಡೆಲಿವರಿ, ಸೂಪರ್ ಸ್ಪೆಷಾಲಿಟಿ ಕೂಡ ಇರುತ್ತದೆ. ಅತ್ಯಂತ ಉತ್ತಮತರಬೇತಿ ಪಡೆದ ವೈದ್ಯರುಗಳಿರುತ್ತಾರೆ. ಆದರೆ ಅಲ್ಲಿನ ಗತಿ ಏನಾಗಿದೆ ? ಅಲ್ಲೂ ಪ್ರೈಮರಿ ಹೆಲ್ತ್ ಸೆಂಟರ್ ಗತಿಯೇ ಆಗಿರುತ್ತದೆ. ಒಂದು ನಯಾಪೈಸೆ ಉಪಯೋಗ ಇಲ್ಲ. ದೊಡ್ಡ ದೊಡ್ಡ ಷಾಪಿಂಗ್ ಸೆಂಟರ್ಸ್ ಇರುತ್ತದೆ. ಗುಲ್ಬರ್ಗ ಪ್ರಿಸ್ಕ್ರಿಪ್‌ಷನ್ ಇರುತ್ತದೆ. ಪರಿಸ್ಥಿತಿ ಹೇಳಬೇಕಾದರೆ ಅಲ್ಲಿ ನನಗೆ ಒಂದು ಸಾರಿ ಆಕ್ಸಿಡೆಂಟಾಗಿತ್ತು. ತಕ್ಷಣ ಆಸ್ಪತ್ರೆಗೆ ಹೋದೆ. ಅಲ್ಲಿ ಸ್ಟೆರೈಯಿಲ್ ಡ್ರೆಸ್ಸಿಂಗ್ ಮಾಡಲಿಕ್ಕೆ ಮೆಟೀರಿಯಲ್ಸ್ ಇಲ್ಲ. ಟೀಚಿಂಗ್ ಹಾಸ್ಪಿಟಲ್ ಅದು, ಆಪರೇಷನ್ ಮಾಡಿಸಬೇಕಾದರೆ ಆಕ್ಸಿಜನ್ ಇಲ್ಲ. ಪ್ರೈವೇಟ್ ಆಸ್ಪತ್ರೆಗೆ ಹೋಗಿ ಎಂದು ಹೇಳಿದರು.

ಹೀಗೆ ಗುಲ್ಬರ್ಗಾ ಆಸ್ಪತ್ರೆಯಲ್ಲಿ ಜೀವನಾವಶ್ಯಕ ಡ್ರಗ್ಸ್ ಒಂದೂ ಇಲ್ಲ. ದವಾಖಾನೆಯಲ್ಲಿ ಬರೀ ಪ್ರಿಸ್ಕ್ರಿಪ್‌ಷನ್ಸ್ ಬರೆದುಕೊಡುತ್ತಾರೆ. ಆದರೆ ದವಾಖಾನ್ ಮುಂದೆ ೧೨ ಪ್ರೈವೇಟ್ ಡ್ರಗ್ಸ್ ಸ್ಟೋರ್ಸ್ ಇದ್ದು ಅಲ್ಲ ಪ್ರತಿಯೊಬ್ಬರೂ ದಿನಕ್ಕೆ ೭-೮ ಸಾವಿರ ರೂಪಾಯಿ ಬಿಸಿನೆಸ್ ಮಾಡುತ್ತಿದ್ದಾರೆ. ಅಂದರೆ ದವಾಖಾನೆಯಲ್ಲಿ ಏನೂ ಇಲ್ಲ ಎಂದಾಯಿತು. ಏಕೆ ಇಂತಹ ಕೆಲಸ ಮಾಡುತ್ತಿದ್ದೀರಿ ? ಸಿಂಪಲ್ ಆಪರೇಷನ್‌ಗೆ ಆಕ್ಸಿಜನ್ ಇಲ್ಲ ಎಂದರೆ ಮತ್ತೆ ಆಪರೇಷನ್ ಹೇಗೆ ಆಗುತ್ತದೆ ? ನನ್ನಂತಹ ಶ್ರೀಮಂತರು ಪ್ರೈವೇಟ್ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿಸಿಕೊಂಡರೆ ಬಡವರಾದವರು ಏನು ಮಾಡಬೇಕು ? ನಾಳೆ ನನಗೆ ಓಟು ಕೊಡುವವರು ಯಾರು ? ಅಲ್ಲಿ ೬೦ ಪರ್ಸೆಂಟ್ ಬಡವರು ಇದ್ದಾರೆ. ಈ ಸಿಸ್ಟಮ್ ಮುಖಾಂತರ ನಾವು ಏನು ಕೆಲಸ ಮಾಡುತ್ತಿದ್ದೇವೆ. ಇವತ್ತು ನಮ್ಮಲ್ಲಿ ೧೭ ಮೇಜರ್ ಹಾಸ್ಪಿಟಲ್ ಹಾಗೂ ೧೩ ಡಿಸ್ಟ್ರಿಕ್ಟ್ ಹಾಸ್ಪಿಟಲ್ಸ್ ಇದ್ದು ಇವೆಲ್ಲಾ ಆಸ್ಪತ್ರೆ ಇವತ್ತು ಸುವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಏಕೆ ಮಾಡುವುದಕ್ಕಾಗುವುದಿಲ್ಲ ? ಇವತ್ತು ನಮ್ಮಲ್ಲಿ ತಜ್ಞರ ಕೊರತೆ ಇಲ್ಲ.

ನಮ್ಮಲ್ಲಿ ಅತ್ಯಂತ ಉತ್ತಮ ತಜ್ಞರು ಇದ್ದಾರೆ. ಇವತ್ತು ಸೀನಿಯರ್ ಮಂದಿ ಯಾರಿದ್ದಾರೆ ಅವರನ್ನು ರಿಟೈರ್ ಮಾಡಿ. ಮತ್ತೆ ನೀವು ಭಾರ್ಗವ ಅವರನ್ನು ಏಕೆ ರಿಟೈರ್ ಮಾಡಿದಿರಿ ? ಭಾರ್ಗವ ಅವರು ನನಗೆ ಪ್ರೊಫೆಸರ್ ಆಗಿದ್ದರು, ನಾನು ಅವರ ಸ್ಟೂಡೆಂಟ್. ಅವರು ಉತ್ತಮ ಮನುಷ್ಯ. ಅವರನ್ನು ರಿಟೈರ್ ಮಾಡಿದ್ದೀರಿ. ಕಾರಣ ಅವರು ಯಾರ ಮನೆ ಬಾಗಿಲು ಕಾಯುವುದಿಲ್ಲ. ಯಾರು ಸರ್ಕಾರಿ ವ್ಯವಸ್ಥೆಯಲ್ಲಿ ಹಣ ಮಾಡಿಕೊಳ್ಳುತ್ತಾರೋ, ಅವರನ್ನು ಮುಂದುವರಿಸುತ್ತೀರಿ. ಇವತ್ತು ಪ್ರೈಮರಿ ಹೆಲ್ತ್ ಸೆಂಟರ್‌ಗಳು, ಡಾಕ್ಟರ್‌ಗಳು ತಮ್ಮ ಪ್ರೈವೇಟ್ ಪ್ರಾಕ್ಟೀಸ್ ಮಾಡಿಕೊಳ್ಳುವುದಕ್ಕೆ ಉತ್ತಮ ಸ್ಥಳಗಳಾಗಿವೆ. ನಾವು ಅವರಿಗೆ ಉತ್ತಮ ಇನ್‌ಸ್ಟಿಟ್ಯೂಷನ್ಸ್ ಕಟ್ಟಿಸಿಕೊಟ್ಟಿದ್ದೇವೆ. ಅವರೂ ೫೦-೬೦ ಸಾವಿರ ಕೊಟ್ಟು ಬಂದಿರುತ್ತಾರೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಹಿಂದೆ ನಾವು ಡಾಕ್ಟರ್ಸ್ ಸೆಲೆಕ್ಟ್ ಮಾಡುವ ಕಾಲಕ್ಕೆ, ನಾವು ಸೆಲೆಕ್ಷನ್ ಮಾಡಿಸಿಕೊಳ್ಳಲು ಪಿಎಸ್‌ಸಿನಲ್ಲಿ ೫೦ ಸಾವಿರ ಕೊಟ್ಟರೂ ಸೆಲೆಕ್ಟ್ ಮಾಡಿಲ್ಲ, ನೀವು ನೌಕರಿ ಕೊಡಿ ಎಂದು ನಮ್ಮ ಹತ್ತಿರ ಬಂದಿದ್ದರು. ೧೯೭೭ರ ಹಿಂದೆ ಹೀಗೆ ನಮ್ಮ ಹತ್ತಿರ ಬರುತ್ತಿದ್ದರು. ಇವತ್ತು ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಕಟ್ಟಿದ ಸಂಸ್ಥೆಗಳನ್ನು ಅವರ ಕೈಗೆ ಕೊಟ್ಟಿದ್ದೇವೆ. ಆ ಒಂದು ವ್ಯವಸ್ಥೆ ಇವತ್ತು ಆಗುವುದು ಬೇಡ. ನಾನು ಬೆಳಿಗ್ಗೆ ನಿಯಮ ೩೩೪ರ ಕೆಳಗೆ ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲಿಲ್ಲ. ಹೇಗಿದ್ದರೂ ಸಂಜೆ ಇಲಾಖೆ ಬಗ್ಗೆ ಚರ್ಚೆಯಲ್ಲಿ ಮಾತನಾಡುವ ಎಂದು ಆಗ ಸುಮ್ಮನಾದೆ. ಇವತ್ತು ಡಾ. ರಾಜೀವ ಶೆಟ್ಟಿಯವರು ಡೈರೆಕ್ಟರ್ ಇದ್ದಾರೆ. ಅವರು ಒಳ್ಳೆಯವರೇ ಇರಬಹುದು. ನಾನು ಇಲ್ಲಿ ಯಾರನ್ನೂ ನಿಂದನೆ ಮಾಡುವುದಿಲ್ಲ. ನಾವು ಯಾಂತ್ರಿಕವಾಗಿ ಏಕೆ ಕೆಲಸ ಮಾಡುತ್ತಿದ್ದೇವೆ ? ನಮಗೆ ಗೊತ್ತಾಗುತ್ತಿಲ್ಲ. ಆರನೇ ಲಿಸ್ಟ್ ಆಗಿದೆ, ಸೆಲೆಕ್ಷನ್ಸ್ ಆಯಿತು. ನಾವು ಎಲ್ಲಾ ಪೇಪರ್‌ನಲ್ಲಿ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಇದು ಅತ್ಯಂತ ನೂರಕ್ಕೆ ನೂರು ಪರ್ಸೆಂಟ್ ಸುಳ್ಳು. ೫ನೇ ಲಿಸ್ಟ್ ಪೇಪರ್‌ನಲ್ಲಿ ಕೊಟ್ಟಿದ್ದು ನಿಜ. ಆದರೆ ೬ನೇ ಲಿಸ್ಟ್ ಕೊಟ್ಟಿಲ್ಲ. ಎಕ್ಸಾಮ್ ಯಾರಿಗೆ ಮಾಡಿದ್ದೀರಿ ? ಡಾ. ರುದ್ರಪ್ಪ ಮತ್ತು ಡಾ. ಚೆನ್ನಪ್ಪನವರು ಇದ್ದಾಗ ೧೫ನೇ ಡಿಸೆಂಬರ್‌ಗೆ ಗೆರೆ ಎಳೆಯುತ್ತಿದ್ದರು. ಅಲ್ಲಿಗೆ ಅಡ್ಮಿಷನ್ಸ್ ಕ್ಲೋಸ್ ಆಗುತ್ತಿತ್ತು. ಆ ಕೆಲಸ ಮಾಡಿ ನೀವು. ಹಿಂದಿನವರು ಯಾವ ರೀತಿ ಮಾಡಿದ್ದಾರೆ ಹಾಗೆ ಮಾಡಿ. ಡೈರೆಕ್ಟರ್ ಆಫ್ ಮೆಡಿಕಲ್ ಎಜ್ಯುಕೇಷನ್ ಆಗಿ ಯಾವಾಗ ರಾಜೀವಶೆಟ್ಟಿ ಬಂದರೋ, ಅಲ್ಲಿಂದ ಸತ್ಯನಾಶ ಆಗಿ ಈಗ ಅಧೋಗತಿಗೆ ಹೋಗುತ್ತಿದೆ. ನಾನೂ ಕೂಡಾ ಸೆಲೆಕ್ಷನ್ ಕಮಿಟಿಯಲ್ಲಿ ಮೆಂಬರ್ ಆಗಿ ಆ ಚೇಂಬರ್‌ನಲ್ಲಿ ಕೂತು ಕೆಲಸ ಮಾಡಿದ್ದೇನೆ. ಮೆಡಿಕಲ್ ಸೀಟ್‌ಗೆ ೧೫ನೇ ಆಗಸ್ಟ್ ಅಥವಾ ೧೫ನೇ ಸೆಪ್ಟೆಂಬರ್‌ಗೆ ಗೆರೆ ಎಳೆಯಲಾಗುತ್ತಿತ್ತು. ಈಗ ಜನವರಿ ಎಂದು ಮಾಡಿದ್ದೀರಿ. ಇವತ್ತು ಆಡಳಿತದಲ್ಲಿ ಯಾವ ಗಂಡುಮಟ್ಟ ಜನರು ನಿರೀಕ್ಷಣೆ ಮಾಡಬಹುದು ? ಹೀಗಾದರೆ ಏನು ಮಾಡಬೇಕು ? ಎಲ್ಲಾ ಅಸ್ತವ್ಯಸ್ತ. ೧೨ ತಿಂಗಳೂ ಅಡ್ಮಿಷನ್. ಇದರಿಂದ ನಮಗೆ ನಾಚಿಕೆಯಾಗುವುದಿಲ್ಲವೇ ? ಇವತ್ತು ಪ್ರೈಮರಿ ಸ್ಕೂಲ್‌ನಲ್ಲಿ ಒಂದು ಗೆರೆ ಇದೆ. ಆದರೆ ಮೆಡಿಕಲ್ ಕಾಲೇಜ್‌ಗಳಲ್ಲಿ ೧೨ ತಿಂಗಳೂ ಅಡ್ಮೀಷನ್ಸ್ ಇದೆ. Are you not ashamed ? I have to low down my head in perpetual shame... ಇವತ್ತು ಪ್ರೈಮರಿ ಶಾಲೆಗಳಲ್ಲಿ ೧೫ನೇ ಆಗಸ್ಟ್ ಬಂತು ಎಂದರೆ ಅಡ್ಮಿಷನ್ಸ್ ಬಂದ್ ಮಾಡುತ್ತಾರೆ. ಅನಂತರ ಕೇಳಿದರೆ ಡಿಡಿಪಿಐ ಮತ್ತು ಸಿಪಿಐ ನವರಿಂದ ಪರ್ಮೀಷನ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇವತ್ತು ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ೧೨ ತಿಂಗಳೂ ಅಡ್ಮೀಷನ್ಸ್ ನಡೆಯುತ್ತಿದೆ. ನಿಮ್ಮ ರೂಲ್ಸ್ ರೆಗ್ಯುಲೇಷನ್ಸ್ ಬಗ್ಗೆ ಈಗಾಗಲೇ ಒಬ್ಬರು ಕೋರ್ಟಿಗೆ ಹೋಗಿದ್ದಾರೆ. ಇವತ್ತು ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಏನು ಫೆಸಲಿಟೀಸ್ ಕೊಟ್ಟಿದ್ದೀರಿ ಅವರ ಬಗ್ಗೆ ಸ್ವಲ್ಪ ರೂಲ್ಸ್ ಏನಿದೆ ಅದನ್ನು ಓದುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಹೇಳಿ. ಆ ನಂತರ ನನಗೆ ತಾವು ಉತ್ತರ ಕೊಡಿ. ನಾನೂ ಕೂಡಾ ಆ ಸ್ಥಾನದಲ್ಲಿ ಕೂತು ಕೆಲಸ ಮಾಡಿದ್ದೇನೆ. ಮನಸ್ಸಿಗೆ ಬಂದ ಹಾಗೆ ಅಡ್ಮಿಷನ್ ಮಾಡುತ್ತೀರಾ ? ವರ್ಷದ ೧೨ ತಿಂಗಳೂ ಅಡ್ಮಿಷನ್‌ಗೆ ಅವಕಾಶ ಇರುತ್ತದೆ. They keep on postponing the admissions right upto next academic year and whoever highest bidder they come and join. ಅದಕ್ಕೆ ಅವರು ಹೊಣೆಗಾರರಲ್ಲ. ವಿಧಾನಸೌಧ ಇದಕ್ಕೆ ಹೊಣೆಗಾರಿಕೆಯಾಗಿದೆ. ಏಕೆಂದರೆ ೧೨ ತಿಂಗಳೂ ನಾವು ಚೀಟಿಯನ್ನು ಕಳುಹಿಸುತ್ತಿದ್ದೇವೆ. ಇದು ಮಾನ್ಯ ಸಿಂಧ್ಯಾರವರಿಗೆ ಇದು ಗೊತ್ತಿಲ್ಲವೇ ? ೧೨ ತಿಂಗಳೂ ನೀವು ಚೀಟಿಯನ್ನು ಕಳುಹಿಸುತ್ತಿದ್ದರೆ, ೧೨ ತಿಂಗಳೂ ಅವರು ಅಡ್ಮಿಷನ್ ಮಾಡುತ್ತಿದ್ದಾರೆ. Are you not ashamed ? Why did you allow such admissions ? ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಂಡು ಅಕ್ರಮವಾಗಿ ೨೦೦ ಸೀಟುಗಳನ್ನು ಕೊಡುವುದು. ನೀವೇ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ೫ ಸಾವಿರ ಸೀಟುಗಳನ್ನು ಪರದೇಶದವರಿಗೆ ಕೊಡುತ್ತೇವೆಂದು ನೀವೇ ಒಂದು ಹೇಳಿಕೆ ಕೊಟ್ಟಿದ್ದೀರಿ. ಯಾರ ಹಿತಕ್ಕಾಗಿ ಇದನ್ನು ಮಾಡುತ್ತಿದ್ದೀರಿ ? ೬ ಲಕ್ಷ ರೂಪಾಯಿಗಳನ್ನು

ಕೊಟ್ಟು ಸೀಟು ತೆಗೆದುಕೊಳ್ಳುತ್ತಾರೆ. ಯಾವಾಗ ಸೀಟು ತೆಗೆದುಕೊಳ್ಳುತ್ತಾರೆಂದರೆ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಸೀಟು ತೆಗೆದುಕೊಳ್ಳುತ್ತಾರೆ. ರೆಕಾರ್ಡ್ ತೆಗೆಸಿ ನೋಡಿ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಅಡ್ಮಿಷನ್ ಮಾಡಿದ್ದಾರೆ. ೧೨ ತಿಂಗಳು ಅಡ್ಮಿಶನ್ ಮಾಡಿದ್ದಾರೆ, ೭ನೇ ತಿಂಗಳ ಪರೀಕ್ಷೆ ಸೆಪ್ಟೆಂಬರ್‌ನಲ್ಲಿ ಮಾಡುತ್ತಾರೆ. ೨೦೦ ರೂಪಾಯಿ ಪರೀಕ್ಷೆ ಶುಲ್ಕ ತೆಗೆದುಕೊಂಡ ಮೇಲೆ ಅವರಿಗೆ ನೀವು ಟೆಲಿಗ್ರಾಮ್ ಕಳಿಸುವುದಕ್ಕಾಗುವುದಿಲ್ಲವೇ. ಹಳ್ಳಿಗಳಿಗೆ ಪತ್ರಿಕೆಗಳು ಬರುವುದಿಲ್ಲ. ಅವರು ಏತಕ್ಕಾಗಿ ೨೦೦ ರೂ.ಗಳನ್ನು ಕೊಟ್ಟಿರುತ್ತಾರೆ ? ಪತ್ರಿಕೆ ನೋಡಿಕೊಂಡು ಪರೀಕ್ಷೆಗೆ ಬರಲಿ ಅಂದರೆ, ಅವರು ಪತ್ರಿಕೆಗಳನ್ನು ಓದುವುದಿಲ್ಲ. ಪತ್ರಿಕೆಗಳನ್ನು ಅವರು ಏತಕ್ಕೆ ನೋಡಬೇಕು ? ಟೆಲಿಗ್ರಾಂ ಕಳಿಸುವ ಪರಿಪಾಠ ಇಲ್ಲ ಎಂದು ಹೇಳಿದರೆ, ಅದು ತಪ್ಪಾಗುತ್ತದೆ. ನಾನೂ ಕೂಡ ಅಧಿಕಾರದಲ್ಲಿದ್ದೆ. ಆಗ ಭಾರತ ದೇಶದ ಮೂಲೆಮೂಲೆಗೆ ಟೆಲಿಗ್ರಾಂಗಳನ್ನು ಕಳುಹಿಸಿದ್ದೆ. ೨೦೦ ರೂಪಾಯಿ ಶುಲ್ಕವನ್ನು ಏತಕ್ಕೆ ತೆಗೆದುಕೊಳ್ಳಬೇಕು ? ತೆಗೆದುಕೊಂಡ ಮೇಲೆ ಟೆಲಿಗ್ರಾಮ್ ಕಳುಹಿಸಬೇಕಾಗುತ್ತದೆ. ಹಳ್ಳಿಗಳಿಗೆ ಪತ್ರಿಕೆಗಳು ಎಲ್ಲಿ ಹೋಗುತ್ತವೆ ? ೨೫ನೇ ತಾರೀಖು ಲಾಸ್ಟ್ ಡೇಟ್ ಎಂದು ನೋಟೀಸ್ ಬೋರ್ಡ್‌ನಲ್ಲಿ ಹಾಕುತ್ತಾರೆ. ಪ್ರೈವೇಟ್ ಕಾಲೇಜುಗಳಲ್ಲಿ ೨ಲಕ್ಷ ೩ಲಕ್ಷ ೪ಲಕ್ಷ ರೂಪಾಯಿಗಳನ್ನು ಕೊಟ್ಟು ಸೀಟು ತೆಗೆದುಕೊಳ್ಳುತ್ತಾರೆ. ಅಂದರೆ ಅವು ಬಹಳ ಅಮೂಲ್ಯವಾದ ಸೀಟುಗಳು. ನಿಮ್ಮ ಸರ್ಕಾರದಲ್ಲಿ ಪುಕ್ಕಟೆ ಸೀಟುಗಳು ಸಿಗುವುದಿಲ್ಲ. ಏತಕ್ಕೆ ಅವರನ್ನು ವಂಚಿತರನ್ನಾಗಿ ಮಾಡುತ್ತೀರಿ ? ಇಂತಹ ಕೇಸ್‌ಗಳು ೧೨ ಎಂದು ಉತ್ತರ ಕೊಟ್ಟಿದ್ದೀರಿ. ೧೨ ಅಲ್ಲ ೭೦–೮೦ ಹುಡುಗರಿದ್ದಾರೆ. ಆ ೭೦–೮೦ ಹುಡುಗರು ಅವರೆಲ್ಲರೂ ಕೂಡ ನನ್ನ ರೂಮಿಗೆ ಬಂದಿದ್ದರು. ನಾನು ಸರ್ಕಾರಕ್ಕೆ ಈ ಬಗ್ಗೆ ಕಿರಿಕಿರಿ ಮಾಡಬಾರದೆಂದು ನಿಯಮ ೩೩೪ರ ಕೆಳಗೆ ಪ್ರಸ್ತಾಪ ಮಾಡಿದೆ. ನಾವು ಸರ್ಕಾರಕ್ಕೆ ದಿನದಿನವೂ ಕಿರಿಕಿರಿ ಉಂಟುಮಾಡುವುದು ಚಲೋ ಅಲ್ಲವೆಂದು ಆ ರೀತಿ ಮಾಡಿದ್ದೇನೆ. ತಾವು ಹೊಸದಾಗಿ ಅಧಿಕಾರ ವಹಿಸಿಕೊಂಡಿದ್ದೀರಿ. ನಿಮಗೆ ತೊಂದರೆ ಕೊಡಬಾರದೆಂದು ನಿಯಮ ೩೩೪ರ ಕೆಳಗೆ ಉತ್ತರವನ್ನು ಸರ್ಕಾರದಿಂದ ಬಯಸಿದೆ. ಇವನ್ನು ಸರಿಪಡಿಸಬೇಕು. ಡೇಟ್ ಎಕ್ಸ್‌ಟೆನ್‌ಷನ್ ಮಾಡಿದ್ದೇವೆಂದು ಟೆಲಿಗ್ರಾಮ್ ಕಳುಹಿಸಿ. ಇಲ್ಲದಿದ್ದರೆ ಅವರ ಹಣವನ್ನು ವಾಪಸ್ಸು ಕೊಡಿ. ಪತ್ರಿಕೆಗಳಲ್ಲಿ ಪ್ರಕಟ ಮಾಡಿದ್ದೇವೆಂದು ಹೇಳುವುದು ಸರಿಯಲ್ಲ. ಎಲ್ಲರೂ ಸಂಸ್ಥೆಗಳ ಗುಣಮಟ್ಟವನ್ನು ನಿರೀಕ್ಷೆ ಮಾಡುತ್ತಾರೆ, ಸಂಸ್ಥೆಗಳ ಗುಣಮಟ್ಟ ಸರಿಯಿದ್ದರೆ ಡಿಸ್ಟ್ರಿಕ್ಟ್ ಆಸ್ಪತ್ರೆಗಳ ಗುಣಮಟ್ಟ ಸುಧಾರಿಸುತ್ತದೆ. ಆಗ ಪ್ರೈಮರಿ ಹೆಲ್ತ್ ಸೆಂಟರ್, ಸಬ್ ಸೆಂಟರ್ಸ್‌ಗಳು ಸಹ ಸುಧಾರಿಸುತ್ತವೆ. ಮಿನಿಮಮ್ ನೀಡ್ಸ್ ಪ್ರೋಗ್ರಾಮ್‌ಗಳು ಏನಿವೆ, ಅವುಗಳನ್ನು ಜಾರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾನು ಮಾತನಾಡಲಿಕ್ಕೆ ತಾವು ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೀರಿ. ತಮ್ಮ ಔದಾರ್ಯವನ್ನು ದುರುಪಯೋಗ ಮಾಡಿಕೊಳ್ಳದೆ. ಬೇರೆ ಬೇರೆ ವಿಷಯಗಳನ್ನು ತಿಳಿಸಿ ಮಾತನಾಡುವವರು ಇದ್ದಾರೆ. ಮಂತ್ರಿಗಳು ನಾನು ಹೇಳಿದ್ದನ್ನೆಲ್ಲ ಬಹಳ ಶಾಂತರೀತಿಯಿಂದ ಕೇಳಿದ್ದಾರೆ. ಅದನ್ನು ಕಾರ್ಯಾಚರಣೆಗೆ ತರುತ್ತಾರೆನ್ನುವ ವಿಶ್ವಾಸವನ್ನು ಹೊಂದಿ ಮತ್ತೊಮ್ಮೆ ಸಚಿವರು ಏನು ತಮ್ಮ ಇಲಾಖೆಯ ಬೇಡಿಕೆಗಳನ್ನು ಮಂಡಿಸಿದ್ದಾರೆ, ಅವುಗಳಿಗೆ ಬೆಂಬಲವನ್ನು ಸೂಚಿಸಿ ತಮಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದಿವಸ ಮಾನ್ಯ ಆರೋಗ್ಯ ಸಚಿವೆಯವರು ತಮ್ಮ ಇಲಾಖೆಯ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಇದನ್ನು ವಿರೋಧಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನನಗಿಂತ ಹಿಂದೆ ಮಾತನಾಡಿದಂಥ ಡಾ: ಮಲಕರೆಡ್ಡಿಯವರು ಸ್ವತ: ವೈದ್ಯರಾಗಿದ್ದು ಮತ್ತು ವಿದ್ಯಾರ್ಥಿಗಳನ್ನು ವೈದ್ಯಕೀಯ ಕಾಲೇಜುಗಳಲ್ಲಿ ಸೇರಿಸಿಕೊಳ್ಳುವಾಗ ನಡೆಯುತಕ್ಕಂಥ ವ್ಯವಹಾರಗಳನ್ನು ಬಹಳ ಚೆನ್ನಾಗಿ ವರ್ಣನೆ ಮಾಡಿದ್ದಾರೆ. ನಾನೂ ಈ ವಿಚಾರದಲ್ಲಿ ಮಾತನಾಡಬೇಕೆಂದು ಇದ್ದೆ. ಆದರೆ ನಾನು ಮಾತನಾಡಿದರೆ ಅವರು ಮಾತನಾಡಿದ್ದೆಲ್ಲ ಎಲ್ಲಿ ಕಲುಷಿತವಾಗುತ್ತದೋ ಎಂಬ ಕಾರಣದಿಂದ ಕೆಲವು ವಿಚಾರಗಳನ್ನು ನಾನೂ ಮಾತನಾಡುವುದಿಲ್ಲ. ಅದೇ ರೀತಿಯಲ್ಲಿ ನನ್ನ ಸ್ನೇಹಿತರಾದ ಶ್ರೀ ಸಿಂಧ್ಯಾರವರೂ ಕೂಡ ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ನಾನು ಆರೋಗ್ಯ ಇಲಾಖೆಯ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಆರೋಗ್ಯ ಇಲಾಖೆಯಲ್ಲಿ ಈ ಔಷಧಿಗಳನ್ನು ಕೊಂಡುಕೊಳ್ಳತಕ್ಕಂಥ ಒಂದು ಕೆಲಸವನ್ನು ಇತ್ತೀಚೆಗೆ ಜಿಲ್ಲಾ ಪರಿಷತ್ತುಗಳಿಗೆ ವಹಿಸಿದ್ದೀರಿ. ಇದಕ್ಕಿಂತ ಮೊದಲು ಶೇಕಡಾ ೫೦ ರಷ್ಟು ಔಷಧಿಗಳನ್ನು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿರತಕ್ಕಂಥ ಇಲಾಖೆಯ ಮೂಲಕ ಖರೀದಿ ಮಾಡುವಂತಹ ಅಧಿಕಾರಿ ಸಂಬಂಧಪಟ್ಟಂತಹ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಇತ್ತು. ಈಗ ಸಂಪೂರ್ಣವಾಗಿ ಜಿಲ್ಲಾ ಪರಿಷತ್ತುಗಳಿಗೆ ಶೇಕಡಾ ನೂರಕ್ಕೆ ನೂರರಷ್ಟು ಈ ಅಧಿಕಾರ ನೀಡಿದ್ದಾರೆ. ಕಾರಣ ಏನೆಂದರೆ ಈ ಒಂದು ಇಲಾಖೆ

ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಆಗಿದೆ. ಈಗ ಸ್ವಲ್ಪಮಟ್ಟಿಗಾದರೂ ಕೂಡ ಜಿಲ್ಲಾ ಪರಿಷತ್ತುಗಳಿಗೆ ಈ ಕೆಲಸ ವಹಿಸಿದ ಮೇಲೆ ಅಲ್ಲಿ ಕೇಳತಕ್ಕಂಥ ಜನ ಇದ್ದಾರೆ. ಅಲ್ಲಿ ಏನು ನಡೆಯುತ್ತದೆ, ಏನು ಆಗುತ್ತದೆ ಎಂದು ಕೇಳತಕ್ಕ ಜಿಲ್ಲಾ ಪರಿಷತ್ತಿನ ಸದಸ್ಯರಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನಡೆದಂತೆ ಎಲ್ಲಾ ಕಡೆ ನಡೆಯುತ್ತಿದೆ ಎಂದು ನಾನು ಹೇಳುವುದಿಲ್ಲ. ಆದರೆ ಈ ಬಗ್ಗೆ ಕೇಳತಕ್ಕಂಥವರು ಕೂಡ ಇದ್ದಾರೆ. ಏಕೆಂದರೆ ನಮ್ಮ ಕೋಲಾರ ಜಿಲ್ಲಾ ಪರಿಷತ್ತಿನಲ್ಲಿ ಏನು ನಡೆದಿದೆಯೆಂದು ತಿಳಿಯಲು ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಾರೆ. ಅದರ ವಿಚಾರಣೆ ಮಾಡುತ್ತಿದ್ದೇವೆ, ವಿಚಾರಣೆ ಪೂರ್ತಿಯಾಗಿಲ್ಲ. ಅಲ್ಲಿ ನೋಡಿದಾಗ ಅದ್ಭುತವಾದ ಆಶ್ಚರ್ಯಗಳು ನನಗೆ ಗೋಚರವಾಯಿತು. ನನಗೆ ಸಾಕಷ್ಟು ಅನುಭವ ಕೂಡ ಇದೆ. ಈ ಸಭೆಯಲ್ಲಿ ೧೫ ವರ್ಷಗಳಿಂದ ಕೆಲಸ ಮಾಡಿದ್ದೇನೆ ಆಡಳಿತದಲ್ಲಿ ಕೂಡ ಇದ್ದೆ ಆದರೆ ಈ ರೀತಿಯಾದಂಥ ವ್ಯವಸ್ಥೆ, ಈ ರೀತಿಯಾದಂಥ ಆಶ್ಚರ್ಯಗಳು ನಮ್ಮ ಸರ್ಕಾರದ ಆಡಳಿತದಲ್ಲಿ ನಡೆಯುತ್ತಿದೆ ಎನ್ನತಕ್ಕದ್ದನ್ನು ಕಣ್ಣಾರೆ ಕಂಡಾಗ ನನಗೆ ಆಶ್ಚರ್ಯವಾಯಿತು. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ ಈ ಜಿಲ್ಲಾ ವೈದ್ಯಾಧಿಕಾರಿಯಾಗಿರತಕ್ಕಂಥವರು ಕೆಲವು ಭಾಗಗಳಲ್ಲಿ ಇಂತಿಷ್ಟು ಹಣವನ್ನು ಔಷಧಿಗೆ ಖರ್ಚು ಮಾಡಬಹುದು ಮತ್ತು ಇಂತಿಷ್ಟು ಹಣವನ್ನು ಬೇರೆಯದಕ್ಕೆ ಖರ್ಚು ಮಾಡಬಹುದೆಂದು ನಿಗದಿಸಿದ್ದಾರೆ. ಹೀಗೆ ಇಂತಿಷ್ಟು ಹಣ ಖರ್ಚು ಮಾಡಬಹುದು ಎಂದು ಜಿಲ್ಲಾ ವೈದ್ಯಾಧಿಕಾರಿಗಳಿಗೆ ತಾವು ಅಧಿಕಾರ ಕೊಟ್ಟಿದ್ದೀರಿ. ಅದರಲ್ಲಿ ಏನಿದೆ ಎಂದು ಮೊದಲು ನನಗೆ ಅರ್ಥವಾಗಲಿಲ್ಲ. ಮಾನ್ಯ ಸಿಂಧ್ಯಾರವರು ಇದನ್ನು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಅವರೂ ಸಹ ಮಂತ್ರಿಗಳಾಗಿದ್ದರು ಅಟ್ ಎ ಟೈಮ್ ೫ ಸಾವಿರ ರೂಪಾಯಿಗೆ ಔಷಧಿಗಳನ್ನು ಕೊಂಡುಕೊಳ್ಳುವುದು ಅಂತ ಇದೆ. ನಾನು ವಿಚಾರಣಾ ಸಮಿತಿಯ ಅಧ್ಯಕ್ಷನಾಗಿದ್ದಾಗ ಅಟ್ ಎ ಟೈಮ್ ಎಂದರೆ ಏನೆಂದು ತಿಳಿದುಕೊಂಡೆ. ಒಂದು ದಿವಸದಲ್ಲಿ ೫೦ ಸಪ್ಲೈ ಆರ್ಡರ್ ಹಾಕಿದರೂ ಕೂಡ ಅಂದರೆ ೫೦x೫ = ೨½ ಲಕ್ಷ ರೂಪಾಯಿಗಳಷ್ಟು ಔಷಧಿಗಳನ್ನು ಒಂದೇ ದಿವಸ ಕೊಂಡುಕೊಂಡರೂ ಕೂಡ ಅದು ಅಟ್ ಎ ಟೈಮ್ ಆಗುತ್ತದೆ. ಈ ಇಲಾಖೆಯಲ್ಲಿ ಈ ಪದ್ಧತಿ ಯಾವತ್ತಿನಿಂದ ಜಾರಿಯಲ್ಲಿದೆಯೋ ನನಗೆ ಗೊತ್ತಿಲ್ಲ. ಆದರೆ ಇದು ಸಾಂಗೋಪಾಂಗವಾಗಿ ಮೊದಲಿನಿಂದಲೂ ಈ ರೀತಿ ನಡೆದುಕೊಂಡು ಬಂದಿದೆ. ಮತ್ತೆ ಎಂತಹ ಔಷಧಿ ಕೊಂಡುಕೊಳ್ಳುತ್ತಾರೆ ಎಂದರೆ ಅದು ಆಶ್ಚರ್ಯವಾಗುತ್ತದೆ. ನಾವು ಪತ್ರಿಕೆಗಳಲ್ಲಿ ಆಗಾಗ ಓದುತ್ತಿರುತ್ತೇವೆ. ಡೇಟ್ ಎಕ್ಸ್‌ಪೈರ್ ಆಗಿರತಕ್ಕಂಥ ಔಷಧಿಗಳು ಇಂಥ ಆಸ್ಪತ್ರೆಗಳಲ್ಲಿದ್ದವು ಎಂದು ನೋಡಿರುತ್ತೇವೆ ಇದಕ್ಕೆ ಕಾರಣ ಏನೆಂದರೆ. ಈ ಎಕ್ಸ್‌ಪೈರ್ಡ್ ಡೇಟ್‌ಗೆ ಯಾವುದು ಕೊನೆಯಲ್ಲಿ ಇರುತ್ತದೆ, ಎಂದರೆ ಎಕ್ಸ್‌ಪೈರ್ ಡೇಟ್‌ಗೆ ೧೫ ದಿವಸ, ಒಂದು ತಿಂಗಳು, ಎರಡು ತಿಂಗಳು ಇರುತ್ತದೆ. ಅಂತಹ ಔಷಧಿಗಳನ್ನು ಈ ಆಸ್ಪತ್ರೆಗಳಿಗೆ ತಂದು ಡಂಪ್ ಮಾಡಿ ಅವರ ಹಣ ತೆಗೆದುಕೊಂಡು ಹೋಗುತ್ತಾರೆ. ಇದರ ಬಗ್ಗೆ ರಾಜ್ಯದಾದ್ಯಂತ ವಿಚಾರಣೆ ಆಗಬೇಕು. ಇದರಿಂದಾಗಿ ಸಾಕಷ್ಟು ಹಣ, ಅದರಲ್ಲೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡುವುದರಲ್ಲಿ ಸಾಕಷ್ಟು ಹಣ ಈ ಒಂದು ಪದ್ಧತಿಯಿಂದ ಲೂಟಿ ಆಗಿದೆ. ನೀವು ಅದರ ವರದಿಯನ್ನು ತರಿಸಬೇಕು. ಯಾವ ಯಾವ ಜಿಲ್ಲಾ ವೈದ್ಯಾಧಿಕಾರಿಗಳು ಈ ಕಾನೂನಿನಲ್ಲಿರತಕ್ಕ ಲೋಪವನ್ನು ಉಪಯೋಗಿಸಿಕೊಂಡು, ಎಷ್ಟೆಷ್ಟು ಲಕ್ಷ ರೂಪಾಯಿಗಳ ಔಷಧಿಗಳನ್ನು ಈ ರೀತಿಯಾಗಿ ತರಿಸಿದ್ದಾರೆ ಎನ್ನುವುದನ್ನು ದಯವಿಟ್ಟು ನಾಳೆ ಉತ್ತರ ಕೊಡುವಾಗ ಕೊಡುವುದಕ್ಕೆ ಸಾಧ್ಯವಾಗದಿದ್ದರೂ ಸಹಿತ, ನೀವು ಸ್ವತಃ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿ, ಇಲ್ಲಿ ಆಗಿರತಕ್ಕ ಬೃಹದಾಕಾರದ ಭ್ರಷ್ಟಾಚಾರವನ್ನು, ಬೃಹದಾಕಾರದ ಅನ್ಯಾಯವನ್ನು ವಿಚಾರಣೆ ನಡೆಸಬೇಕು ಮತ್ತು ಅದರ ವಿವರವನ್ನು ಈ ಸಭೆಗೆ ತಿಳಿಸಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಮತ್ತೆ ಇವತ್ತಿನದಿವಸ ಈ ಇಲಾಖೆಯಲ್ಲಿ ಎಲ್ಲಾ ಇದೆ. ಇಲ್ಲಿ ನೀವೇ ಕೊಟ್ಟಿರತಕ್ಕ ಪುಸ್ತಕದಲ್ಲಿ ಎಷ್ಟು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದೀರಿ. ಅದಕ್ಕೆ ನಾನು ಈ ಇಲಾಖೆಯಲ್ಲಿ ಎಲ್ಲಾ ಇದೆ ಎಂದು ಹೇಳಿದೆ. ಕೋಟ್ಯಾಂತರ ರೂಪಾಯಿಗಳು ಔಷಧಿಗಾಗಿ ಖರ್ಚಾಗುತ್ತಿದೆ. ಆದರೆ ಈ ಔಷಧಿ ಕೊಡತಕ್ಕಂಥ ವೈದ್ಯರುಗಳು ಅಲ್ಲಿ ಇಲ್ಲ; ಇದು ಒಂದು ರೀತಿಯ ಗಾಬರಿ ಹುಟ್ಟಿಸತಕ್ಕ ಪರಿಸ್ಥಿತಿ ಇಲ್ಲಿದೆ. ಈಗಾಗಲೇ ಇದರ ಬಗ್ಗೆ ಚರ್ಚೆ ಕೂಡ ಕೆಲವು ಸಂದರ್ಭಗಳಲ್ಲಿ ಆಗಿದೆ. ಹಿಂದೆ ಕೆಲವು ಆಸ್ಪತ್ರೆಗಳಲ್ಲಿ ಅದರಲ್ಲೂ ಬಳ್ಳಾರಿ ಆಸ್ಪತ್ರೆಯಲ್ಲಿ ಯಾವ ಯಾವ ಸ್ಥಾನಗಳು ಖಾಲಿ ಇವೆಯೆಂದು ತಾವು ಹೇಳಿದ್ದೀರಿ. ಇವತ್ತು ಅಸಿಸ್ಟೆಂಟ್ ಸರ್ಜನ್‌ಗಳ ಹುದ್ದೆಗಳು ಒಟ್ಟು ೧೨೧ ಇವೆ; ಹಾಲಿ ಕೆಲಸ ಮಾಡುತ್ತಿರುವವರು ಕೇವಲ ೫ ಜನ ಮಾತ್ರ, ಇನ್ನು ಖಾಲಿ ಇರುವ ಹುದ್ದೆಗಳು ೧೧೬. ಈ ರೀತಿ ೫ ಜನ ಅಸಿಸ್ಟೆಂಟ್ ಸರ್ಜನ್ ಇಟ್ಟುಕೊಂಡು, ೧೧೬ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು, ಔಷಧಿ ಏನು ಮಾಡುತ್ತೀರಿ? ಕಾಂಪೌಂಡರ್ ಅಥವಾ ನರ್ಸ್ ಔಷಧಿ ಕೊಡುವುದಕ್ಕಾಗುತ್ತದೆಯೇ? ಅದೇರೀತಿ ಹೆಲ್ತ್ ಆಫೀಸರ್

ಕಮ್ ಅಸಿಸ್ಟೆಂಟ್ ಸರ್ಜನ್‌ಗಳ ಹುದ್ದೆಗಳು ೩೬೩೦ ಇರುವುದು. ನಾವು ಈ ವಾರ್ಷಿಕ ವರದಿಗಳನ್ನು ನೋಡಿದಾಗ, ಇವುಗಳಲ್ಲಿ ಕೊಡತಕ್ಕ ಅಂಕಿಸಂಖ್ಯೆಗಳು ಎಷ್ಟರಮಟ್ಟಿಗೆ ಸರಿಯಾಗಿದೆಯೋ ಗೊತ್ತಿಲ್ಲ. ಹೆಲ್ತ್ ಆಫೀಸರ್‌ಗಳ ಹುದ್ದೆಗಳು ೩೬೩೦ ಇದ್ದು, ಈಗ ಹಾಲಿ ಕೆಲಸ ಮಾಡುತ್ತಿರುವವರು ೩೩೦೫; ಖಾಲಿ ಇರುವುದು ೩೨೫. ಉಳಿದ ಹುದ್ದೆಗಳ ವಿವರಗಳೂ ಇಲ್ಲಿವೆ. ಆದರೆ ಅವೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಈ ಹುದ್ದೆಗಳ ಬಗ್ಗೆ ತಾವು ಇದೇ ಸದನದಲ್ಲಿ ಉತ್ತರ ಕೊಟ್ಟಿದ್ದೀರಿ. ತಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಎಷ್ಟು ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದೀರಿ. ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಇರಲಿ ಅಥವಾ ಬೇರೆ ಯಾವುದೇ ಜಿಲ್ಲೆ ಇರಲಿ. ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡುತ್ತಿರುವಾಗ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸಿ ಕೊಡಬೇಕಾಗುತ್ತದೆ. ಇದನ್ನು ಕೊಡತಕ್ಕ ಪ್ರಯತ್ನ ಇವತ್ತು ಆಗಿಲ್ಲ. ''ವೈದ್ಯರು ಇಲ್ಲದ ಆಸ್ಪತ್ರೆ, ಉಪಾಧ್ಯಾಯರು ಇಲ್ಲದ ಶಾಲೆ'' ಇವುಗಳಿಗೆ ನಾವು ಪ್ರಖ್ಯಾತರಾಗಿದ್ದೇವೆ. ವೈದ್ಯರು ಇಲ್ಲದೇ ಆಸ್ಪತ್ರೆಗಳನ್ನು ನಡೆಸುವುದರಲ್ಲಿ, ಉಪಾಧ್ಯಾಯರು ಇಲ್ಲದ ಶಾಲೆಗಳನ್ನು ನಡೆಸುವುದರಲ್ಲಿ ನಾವು ಅತ್ಯಂತ ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆದಿದ್ದೇವೆ. ಈ ವಿಚಾರವನ್ನು ಮತ್ತೊಂದು ಸಂದರ್ಭದಲ್ಲಿ ಹೇಳುತ್ತೇನೆ. ದಯವಿಟ್ಟು ನೀವು ಬೇಗನೆ ವೈದ್ಯರನ್ನು ನೇಮಿಸುವ ಕೆಲಸವನ್ನು ಮಾಡಬೇಕು, ಪಿ.ಎಸ್.ಸಿ.ಗೆ ಕಳುಹಿಸಿದರೆ, ಇದು ತುಂಬಾ ತಡವಾಗುತ್ತದೆ. ನೀವು ಇನ್ನೂ ಪಿ.ಎಸ್.ಸಿ.ಗೆ ಬರೆಯದೇ ಇದ್ದರೆ, ನೀವು ಬರೆದು ಅವರು ಪ್ರಕಟಣೆ ಮಾಡಿ, ಅಪ್ಲಿಕೇಷನ್ಸ್ ಪ್ರೊಸೆಸ್ ಮಾಡಿ, ಸಂದರ್ಶನ ಮಾಡಿ, ಪುನಃ ನೇಮಕ ಮಾಡಬೇಕಾದರೆ ಈ ವರ್ಷದಲ್ಲಿ ಇದು ಸಾಧ್ಯವಿಲ್ಲ. ಇದಕ್ಕೆ ಪಿ.ಎಸ್.ಸಿ.ನವರಿಗೆ ಕಾಲಾವಕಾಶ ಕೊಡಬೇಕಾಗುತ್ತದೆ. ಕಾನೂನು ಪ್ರಕಾರ ನಿಯಮಗಳನ್ನು ಅವರು ಪಾಲನೆ ಮಾಡಬೇಕಾಗುತ್ತದೆ. ಈ ನಿಯಮಾವಳಿಗಳನ್ನು ಪಾಲನೆ ಮಾಡುವುದರೊಳಗಾಗಿ ಕನಿಷ್ಟ ಒಂದು ವರ್ಷವಾಗುತ್ತದೆ. ಆದ್ದರಿಂದ, ದಯಮಾಡಿ, ಕೇಂದ್ರ ಸರ್ಕಾರದಲ್ಲಿ ಕೆಲವು ನಿಯಮಗಳನ್ನು ಮಾಡಿಕೊಂಡು, ಕೆಲವು ಸಂದರ್ಭದಲ್ಲಿ ಎಮರ್ಜೆನ್ಸಿ ರಿಕ್ರೂಟ್‌ಮೆಂಟ್‌ಗಳನ್ನು ಮಾಡಿದ್ದಾರೆ. ಎಸ್.ಸಿ. ಮತ್ತು ಎಸ್.ಟಿ. ವೇಕೆನ್ಸಿಗಳನ್ನು ತುಂಬುವುದಕ್ಕೆ ಯಾವ ರೀತಿಯಾದ ನೀತಿಯನ್ನು ಅನುಸರಿಸುತ್ತಿದ್ದಾರೋ, ಅದೇ ರೀತಿಯಾದ ನೀತಿಯನ್ನು ನೀವೂ ಕೂಡ ಅನುಸರಿಸಿ, ಈ ಖಾಲಿ ಹುದ್ದೆಗಳನ್ನು ತುಂಬಬೇಕು. ತಾವು ಇದನ್ನು ಪಿ.ಎಸ್.ಸಿ.ಗೆ ಕಳುಹಿಸಿದರೆ ಆಗುವುದಿಲ್ಲ. ಇಲಾಖೆಯ ಮಟ್ಟದಲ್ಲಿಯೇ ತಾವು ಒಂದು ಸಮಿತಿಯನ್ನು ಏರ್ಪಾಡು ಮಾಡಿದರೆ, ಇದು ಶೀಘ್ರವಾಗಿ ಆಗುತ್ತದೆ. ಎಲ್ಲಾ ರಿಸರ್ವೇಷನ್‌ಗಳನ್ನೂ ಕೂಡ ರೋಸ್ಟರ್ ಪದ್ಧತಿಗನುಸಾರವಾಗಿ, ಪಿ.ಎಸ್.ಸಿ.ನವರು ಏನು ರೂಲ್ಸ್ ಅನುಸರಿಸುತ್ತಾರೆ, ಅದೇ ರೂಲ್ಸ್‌ನ್ನು ಅನುಸರಿಸಿ, ಇಲಾಖಾ ಸಮಿತಿಯಿಂದ ರಿಕ್ರೂಟ್‌ಮೆಂಟ್ ಮಾಡುವುದರಿಂದ, ಜಾಗ್ರತೆಯಾಗಿ, ಗ್ರಾಮಾಂತರ ಪ್ರದೇಶಗಳಿಗೆ ವೈದ್ಯರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ತಾವು, ಇದು ಜಾಗ್ರತೆಯಾಗಿ ಆಗಬೇಕಾಗಿರುವ ಕಾರಣ, ಈ ಸಲಹೆಯನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ನೀಡಿದ್ದೇನೆ.

೪.೫೦ ಪಿ.ಎಂ.

ನಮ್ಮ ಸ್ನೇಹಿತರಾದ ಸಿಂಧ್ಯಾರವರು ಬೆಂಗಳೂರು ಹಾಗೂ ಬೇರೆ ಕಡೆ ಇರತಕ್ಕಂಥ ಆಹಾರ ಮತ್ತು ಜಲ ವಿಶ್ಲೇಷಣಾ ವಿಭಾಗಗಳ ಬಗ್ಗೆ ಮಾತನಾಡಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ, ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರೋ ಏನೋ ಗೊತ್ತಿಲ್ಲ. ವಿಶ್ಲೇಷಣೆ ಮಾಡಿರತಕ್ಕಂಥ ಸಂದರ್ಭಗಳು ಎಷ್ಟು ಎಂಬುದರ ಬಗ್ಗೆ ಒಂದು ಕೋಷ್ಟಕದಲ್ಲಿ ತಾವು ಹೇಳಿದ್ದೀರಿ. ೧೯೮೯ ಏಪ್ರಿಲ್ ನಿಂದ ೧೯೮೯ನೇ ಡಿಸೆಂಬರ್‌ರವರೆಗೆ ಪಡೆದ ಮಾದರಿಗಳ ಸಂಖ್ಯೆ ಬಗ್ಗೆ ಹೇಳಿದ್ದೀರಿ. ಖಾಸಗಿ ಆಹಾರ ಮಾದರಿಗಳು ೧೧೦೭. ಸರ್ಕಾರದ ಸಂಸ್ಥೆಗಳಿಂದ ಬಂದ ಆಹಾರದ ಮಾದರಿಗಳು ೬೨, ಸರ್ಕಾರಿ ಆಸ್ಪತ್ರೆಗಳಿಂದ ಬಂದ ಆಹಾರದ ಮಾದರಿಗಳು ೧೨೫, ಈ ರೀತಿಯಾಗಿ ಸುಮಾರು ನೀವು ವಿಶ್ಲೇಷಣೆ ಮಾಡಿರತಕ್ಕಂಥದ್ದು ಕೇವಲ ೭೪೫. ನಾನು ವೈದ್ಯ ಅಲ್ಲ. ಇದರ ಬಗ್ಗೆ ಹೆಚ್ಚು ಗೊತ್ತಿಲ್ಲ. ನನ್ನ ಆರೋಗ್ಯ ಕಾಪಾಡಿಕೊಳ್ಳುವುದನ್ನು ಬಿಟ್ಟರೆ ನನಗೆ ಏನೂ ಹೆಚ್ಚಿಗೆ ಗೊತ್ತಿಲ್ಲ. ಪ್ರಿವೆನ್‌ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್ ಎಂಬ ಗಾದೆ ಮಾತನ್ನು ಕೇಳಿದ್ದೇನೆ ಇಲ್ಲಿ ಇದು ಕೆಲಸ ಮಾಡಿಲ್ಲ. ಇದರಿಂದ ಸಾಕಷ್ಟು ಜನತೆಗೆ ಖಾಯಿಲೆಗಳು ಹರಡತಕ್ಕಂಥ ಸಂದರ್ಭ ಇದೆ. ಯಾವ ಸಂಸ್ಥೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತೋ ಈ ಪ್ರಿವೆನ್‌ಷನ್ ಬಗೆ ಅತ್ಯಂತ ಚಾಕಚಕ್ಯತೆಯಿಂದ ಮತ್ತು ಅತ್ಯಂತ ದಕ್ಷತೆಯಿಂದ ಕೆಲಸ ಮಾಡಬೇಕಾಗಿತ್ತೋ ಆ ಸಂಸ್ಥೆಯ ಚಿತ್ರ ಇದು. ಔಷಧಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ. ಈ ಒಂದು ಸಂಸ್ಥೆ ಸರಿಯಾದ ರೀತಿಯಲ್ಲಿ ನಡೆದರೆ ಕೋಟ್ಯಾಂತರ ರೂಪಾಯಿಗಳನ್ನು ಔಷಧಿಗೆ ಖರ್ಚು ಮಾಡಬೇಕಾದ ಅವಶ್ಯಕತೆ ಇಲ್ಲ. ಆ ವಿಚಾರ

ನನಗಿಂತ ಹೆಚ್ಚು ಡಾಕ್ಟರ್‌ಗಳಿಗೆ ಗೊತ್ತಿದೆ. ಇಷ್ಟೆಲ್ಲಾ ಇದ್ದರೂ ಖಾಯಿಲೆಗಳು ಬರುತ್ತವೆ. ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಆದರೆ ಅದನ್ನು ತಡೆಗಟ್ಟಬೇಕಾಗಿರತಕ್ಕಂಥ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಖಾಯಿಲೆಗಳು ಬರತಕ್ಕಂಥ ಪ್ರಮಾಣವನ್ನು ಕಡಿಮೆ ಮಾಡಬಹುದು. ಈ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ಮತ್ತೊಂದು ವಿಚಾರ ಇದೆ. ಬಹಳ ಆಶ್ಚರ್ಯಕರವಾಗಿರತಕ್ಕಂಥ ವಿಚಾರವನ್ನು ಇಲ್ಲಿ ತಮ್ಮ ಗಮನಕ್ಕೆ ತರುವುದು ಏನೆಂದರೆ ಸರ್ಕಾರ ತಯಾರಿಸುವ ಸಾರಾಯಿ ಮತ್ತು ಹೆಂಡದ ಗುಣಮಟ್ಟ ಮತ್ತು ಅವುಗಳಲ್ಲಿರುವ ಕಲಬೆರಕೆ ಪ್ರಮಾಣವನ್ನು ನಿರ್ಧರಿಸುವ ಸಲುವಾಗಿ ಅವುಗಳ ವಿಶ್ಲೇಷಣೆಯನ್ನು ಕೈಗೊಳ್ಳುತ್ತಿದ್ದೇವೆಂದು ಹೇಳಿದ್ದೀರಿ. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಕ್ಸೈಸ್ ಡಿಮ್ಯಾಂಡ್ ಬಂದಾಗ ನಾನು ಮಾತನಾಡುತ್ತೇನೆ. ಬರುವ ತಿಂಗಳಿಂದ ಹೆಂಡದ ಮಾರಾಟ ರದ್ದಾಗಿದೆ. ನೀವು ಕೊಟ್ಟಿರುವ ಕಾರಣ ಏನೆಂದರೆ ಇದು ಕಲಬೆರಕೆ ಆಗುತ್ತಿದೆ, ಅದನ್ನು ತಡೆಗಟ್ಟುವುದು ಕಷ್ಟ ಎಂದು ಕಾರಣ ಕೊಟ್ಟಿದ್ದೀರಿ ಹೆಂಡದ ಮಾರಾಟದಲ್ಲಿ ಕಲಬೆರಕೆ ಬೃಹದಾಕಾರವಾಗಿ ನಡೆಯುತ್ತಿದೆ, ಇಲ್ಲಿ ಎಷ್ಟು ಹೆಂಡದ ಸ್ಯಾಂಪಲ್ಸ್ ಟೆಸ್ಟ್ ಮಾಡಿರುತ್ತೀರಿ. ಎಷ್ಟು ಸಾರಾಯಿ ಸ್ಯಾಂಪಲ್ಸ್ ಟೆಸ್ಟ್ ಮಾಡಿರುತ್ತೀರಿ ? ಲೆಕ್ಕ ಕೊಟ್ಟಿಲ್ಲ. ಲೆಕ್ಕ ಕೊಟ್ಟಿದ್ದರೆ ಬಹಳ ಸ್ವಾರಸ್ಯಕರವಾದ ಅಂಶಗಳು ಹೊರಗೆ ಬರುತ್ತಿದ್ದವು. ಅದನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಂತೂ ಇದರ ಮಾರಾಟವನ್ನು ರದ್ದು ಮಾಡಿರುವುದನ್ನು ಸಂಪೂರ್ಣವಾಗಿ ನಾನು ಸ್ವಾಗತಿಸುತ್ತೇನೆ. ಮುಂದೆ ಇದಕ್ಕೆ ಅವಕಾಶ ಇಲ್ಲದ ಹಾಗೆ ಆಗುತ್ತದೆ. ಸಾರಾಯಿ ಬಗ್ಗೆ ಕೂಡಾ ನೀವು ಉತ್ತರ ಕೊಡುವಾಗ ಅಥವಾ ಬೇರೆ ಸಂದರ್ಭದಲ್ಲಿ ಅದರ ಗುಣಮಟ್ಟ ಯಾವ ರೀತಿ ಇದೆ ಎಂಬುದನ್ನು ಹೇಳಬೇಕು. ಏಕೆಂದರೆ ಜವಾಬ್ದಾರಿ ಹೊತ್ತಿರತಕ್ಕಂಥ ಈ ಸಂಸ್ಥೆ ಸರಿಯಾಗಿ ಕೆಲಸ ಮಾಡಲಿಲ್ಲ ಎಂದರೆ ಜನ ಹಾಳಾಗುತ್ತಾರೆ, ಸಾಯುತ್ತಾರೆ. ಆದ್ದರಿಂದ ಇದರ ವಿವರಗಳನ್ನು ತಿಳಿಸಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇವೆ.

ಇನ್ನು ರಾಸಾಯನಿಕ ಪರೀಕ್ಷಕರ ಪ್ರಯೋಗಾಲಯದ ಸಾಧನೆ ಏನೆಂದರೆ ಬಂದ ಮಾದರಿಗಳ ಸಂಖ್ಯೆ : ೨೨೨, ವಿಶ್ಲೇಷಿಸಿದ ಮಾದರಿಗಳ ಸಂಖ್ಯೆ : ೨೨೨, ಈ ದೇಶದಲ್ಲಿ ಎಲ್ಲ ಪರಿಪಕ್ವವಾಗಿದೆ ಎಂದು ಇದರಿಂದ ಅರ್ಥವಾಗುತ್ತದೆ. ಇದನ್ನು ತಾವು ಒಪ್ಪುತ್ತೀರಾ ? ಇದು ಬಹಳ ಸ್ವಾರಸ್ಯಕರವಾಗಿದೆ ಏತಕ್ಕೆಂದರೆ ಬಂದ ಮಾದರಿಗಳ ಸಂಖ್ಯೆ ಹಾಗೂ ವಿಶ್ಲೇಷಿಸಿದ ಮಾದರಿಗಳ ಸಂಖ್ಯೆ ಎರಡೂ ಸಹ ೨೨೨ ಆಗಿದೆ. ಈ ಸಂಸ್ಥೆಗಳು ಏನಿವೆ, ಇವು ಜನರ ಆರೋಗ್ಯದ ಮೇಲೆ ಅನಾಹುತ ಮಾಡುತ್ತಿವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ಹೆಚ್ಚಿನ ಶ್ರದ್ಧೆಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ೨೫ ಸಾವಿರ ರೂಪಾಯಿ ಜನತೆಯಿಂದ ವಂತಿಕೆ ಬಂದರೆ ಪಿ.ಹೆಚ್.ಯು ಗಳನ್ನು ಕೊಡುತ್ತೇವೆಂದು ಹಾಗೂ ೫೦ ಸಾವಿರ ವಂತಿಕೆ ಬಂದರೆ ಅದನ್ನು ಪಿ.ಹೆಚ್.ಸಿ. ಮಾಡುತ್ತೇವೆಂದು ಹೇಳುವಂತಹ ಒಂದು ಸರ್ಕಾರದ ನೀತಿ ಇದೆ. ಈಗ ಅದು ಶೇಕಡಾ ೫೦ರಷ್ಟು ಎಂದು ಮಾರ್ಪಾಡು ಆಗಿದೆ. ಅನೇಕ ಕಡೆ ಇವತ್ತು ಹಣ ಕಟ್ಟಿ ಅನೇಕ ವರ್ಷಗಳು ಆಗಿವೆ. ನನ್ನ ಕ್ಷೇತ್ರದಲ್ಲಿ ಒಂದೆರಡು ಕಡೆ ಹಣ ಕಟ್ಟಿದ್ದಾರೆ. ನಾನು ಹಳ್ಳಿಗಳಿಗೆ ಹೋಗುವ ಹಾಗೆ ಇಲ್ಲ. ನಮ್ಮ ಆಸ್ಪತ್ರೆ ವಿಚಾರ ಏನಾಯಿತೆಂದು ಕೇಳುತ್ತಾರೆ, ಆಗ ನಮಗೆ ಉತ್ತರ ಕೊಡಲು ಆಗುತ್ತಿಲ್ಲ. ಸರ್ಕಾರದವರು ಮಾಡಲಿಲ್ಲ ಎಂದು ಹೇಳುವುದು. ಆದರೆ ದುರಾದೃಷ್ಟವಶಾತ್ ಮೊನ್ನೆಯವರೆಗೆ ನಾವೇ ಸರ್ಕಾರವನ್ನು ನಡೆಸುತ್ತಿದ್ದವು. ನಮ್ಮ ಸರ್ಕಾರ ಇದ್ದಾಗ ಏತಕ್ಕೆ ಮಾಡಲಿಲ್ಲವೆಂದು ಕೇಳುತ್ತಿದ್ದರು, ಆದರೆ ಈಗ ಬೇರೆ ಸರ್ಕಾರ ಇರುವುದರಿಂದ ಅವರು ಮಾಡಿಲ್ಲವೆಂದು ನಾವು ಹೇಳಿ ತಪ್ಪಿಸಿಕೊಳ್ಳಬೇಕಾಗಿದೆ. ಆದರೆ ತಪ್ಪಿಸಿಕೊಳ್ಳತಕ್ಕದ್ದು ನಮ್ಮ ಕರ್ತವ್ಯ ಅಲ್ಲ. ನಮ್ಮ ಕರ್ತವ್ಯ ಏನೆಂದರೆ ಜನಗಳಿಗೆ ಇರತಕ್ಕ ಸಮಸ್ಯೆಗಳನ್ನು ಬಗೆಹರಿಸತಕ್ಕದ್ದು ನಮ್ಮ ಕರ್ತವ್ಯ. ಅದರಲ್ಲಿ ನಾವು ವಿಫಲವಾದಾಗ ನಾವು ಈ ಸ್ಥಾನದಲ್ಲಿರಲು ಅರ್ಹರಲ್ಲ. ಆ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ನಾವು ಇವರ ಬಗ್ಗೆ ಏನಾದರೂ ಒಂದು ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕು. ಎಲ್ಲೆಲ್ಲಿ ಹಣ ಕೊಟ್ಟಿದ್ದಾರೆ, ಎಲ್ಲಿ ಜಾಗ ಕೊಟ್ಟಿದ್ದಾರೆ, ಅಥವಾ ಎಲ್ಲಿ ಜಾಗ ಕೊಡುವುದಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ, ಅಂತಹ ಕಡೆಗಳಲ್ಲಿ ಇವುಗಳನ್ನು ಸ್ಥಾಪನೆ ಮಾಡಲು ಏನಾದರೂ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಆರೋಗ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಇಲಾಖೆಯಲ್ಲಿ ಅನೇಕ ವಾಹನಗಳು ಇವೆ, ನೀವು ಯಾವ ಜಿಲ್ಲೆಯ ವೈದ್ಯಾಧಿಕಾರಿಗಳ ಕಛೇರಿಗೆ ಹೋದರೂ ಆ ಕಛೇರಿಯ ಆವರಣದಲ್ಲಿ ಅನೇಕ ವಾಹನಗಳು ನಿಂತಿರುತ್ತವೆ. ವಾಹನಗಳ ಒಂದು ಸಾಗರವನ್ನೇ ನಾವು ಕಾಣಬಹುದಾಗಿದೆ. ಅದೇ ರೀತಿ ಬೆಂಗಳೂರಿನಲ್ಲೂ ನಿರ್ದೇಶಕರು ಹಾಗೂ ಜಂಟಿನಿರ್ದೇಶಕರ ಕಛೇರಿಗಳ ಮುಂದೆ ವಾಹನಗಳ ಒಂದು ಸಾಗರವನ್ನು ನಾವು ಕಾಣಬಹುದಾಗಿದೆ. ರಾಜ್ಯದಲ್ಲಿರುವ ಪ್ರತಿ ಜಿಲ್ಲಾ ವೈದ್ಯಾಧಿಕಾರಿಯವರ ಕಛೇರಿಯಲ್ಲಿ ಏನೇನು

ಅವ್ಯವಹಾರ ನಡೆಯುತ್ತದೆಂಬುದನ್ನು ನಾನು ವಿವರವಾಗಿ ಹೇಳುವುದಿಲ್ಲ. ನನ್ನ ಅಧ್ಯಕ್ಷತೆಯಲ್ಲಿ ಕೋಲಾರ ಜಿಲ್ಲಾಪರಿಷತ್ತಿನವರು ಒಂದು ವಿಚಾರಣೆ ಸಮಿತಿಯನ್ನು ಔಷಧಗಳ ಖರೀದಿ ಬಗ್ಗೆ ನೇಮಿಸಿದ್ದಾರೆ. ಆದರ ವಿಚಾರಣೆ ಈಗ ನಡೆಯುತ್ತಿದೆ. ಅಲ್ಲಿ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ವಿಚಾರಣೆ ಮಾಡಿ ಒಂದು ವರದಿಯನ್ನು ಕೊಡಲಿದ್ದೇವೆ. ನಂತರ ಅದು ಸರ್ಕಾರಕ್ಕೆ ಬರುತ್ತದೆ. ನಂತರ ಏನುಕ್ರಮ ತೆಗೆದುಕೊಳ್ಳುತ್ತೀರೋ ನೋಡೋಣ. ಆದರೆ ಆಶ್ಚರ್ಯ ಏನೆಂದರೆ ಕೆಲವು ನೇಮಕಗಳು ಆಗಿವೆ. ಎಲೆಕ್ಟ್ರಿಕಲ್ ಇಂಜಿನಿಯರ್ ಬಂದು ಇದ್ದಕ್ಕಿದ್ದ ಹಾಗೆ ಆಟೋಮೊಬೈಲ್ ಇಂಜಿನಿಯರ್ ಆಗಿ ಬಿಡುತ್ತಾರೆ. ಈ ರೀತಿ ನೇಮಕಗಳು ನಡೆದಿವೆ. ಸದ್ಯ ಪ್ರಾಣಿಗಳ ಡಾಕ್ಟರನ್ನು ಮನುಷ್ಯರ ಡಾಕ್ಟರ್ ಆಗಿ ನೇಮಕ ಮಾಡಲು ಇನ್ನೂ ಪ್ರಯತ್ನ ನಡೆದಿಲ್ಲ. ಅದು ಯಾವಾಗ ಆಗುತ್ತದೋ ಗೊತ್ತಿಲ್ಲ. ಆ ರೀತಿ ಏನಾದರು ಆದರೆ ಒಂದು ರೀತಿಯಲ್ಲಿ ವಾಸಿ, ಕಾರಣವೇನೆಂದರೆ ಕೊನೆಯ ಪಕ್ಷ ಪ್ರಾಣಿಗಳ ಡಾಕ್ಟರ್‌ಗೆ ಸಿರಂಜ್ ಹಿಡಿದುಕೊಳ್ಳುವುದಕ್ಕೆ ಆದರೂ ಬರುತ್ತದೆ. ಆದರೆ ಏನೇನು ಅರ್ಹತೆ ಇಲ್ಲದೆ ಇರತಕ್ಕಂಥ ವೈದ್ಯರನ್ನು ಇನ್ನು ಮುಂದೆ ನೇಮಿಸುತ್ತೀರೋ ಏನೋ ಗೊತ್ತಿಲ್ಲ. ಈ ರೀತಿಯಾಗಿ ಅನೇಕ ಕಡೆ ದುರ್ ವ್ಯವಹಾರಗಳು ಇವತ್ತು ನಡೆಯುತ್ತಿವೆ. ಅದು ವಾಹನಗಳ ರಿಪೇರಿಯಲ್ಲಿ ಆಗಿರಬಹುದು, ಬೇರೆ ಬೇರೆ ಕಡೆ ಇರಬಹುದು. ಆ ಸಂಖ್ಯೆ ನಿಮ್ಮ ಇಲಾಖೆಯಲ್ಲಿ ಸಾಕಷ್ಟು ಇದೆ. ನಿಮ್ಮ ಇಲಾಖೆಯಲ್ಲಿ ಸಾವಿರಾರು ವಾಹನಗಳ ರಿಪೇರಿ ಆಗಬೇಕಾಗಿದೆ ಅವಕ್ಕೆ ಒಂದು ಸರಿಯಾದ ವ್ಯವಸ್ಥೆ ಇಲ್ಲದೆ ಇರುವ ಕಾರಣ ಅಲ್ಲಿಗೆ ಆಟೋಮೊಬೈಲ್ ಇಂಜಿನೀಯರ್ ಅನ್ನು ಅಥವಾ ಮೆಕ್ಯಾನಿಕಲ್ ಇಂಜಿನೀಯರ್ ಅನ್ನು ನೇಮಕ ಮಾಡಬೇಕು. ಅದು ಬಿಟ್ಟು ಎಲೆಕ್ಟ್ರಿಕಲ್ ಇಂಜಿನೀಯರ್ ಅನ್ನು ನೇಮಕ ಮಾಡಿ ಮೆಕ್ಯಾನಿಕಲ್ ಕೆಲಸ ಮಾಡು ಎಂದರೆ ಹೇಗೆ ಮಾಡಲು ಸಾಧ್ಯ? ಅವರು ಯಾವ ರೀತಿಯಲ್ಲಿ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂಥಾದ್ದು ಒಂದು ಕಡೆ ಆಗಿದೆ ಎಂದು ಅಲ್ಲ. ನಾನಾ ಕಡೆ ಆಗಿದೆ. ನನ್ನ ಕಡೆ ಮಾಹಿತಿ ಇದೆ. ದಯಮಾಡಿ ತಾವು ಖುದ್ದಾಗಿ ಹೋಗಿ ನೋಡಬೇಕು. ಇದು ಸಣ್ಣ ಕೆಲಸ ಎಂದು ಹೇಳಿ ತಾವು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರೆ ಅದು ಆಗುವುದಿಲ್ಲ. ಆ ಅಧಿಕಾರಿಗೆ ತಾವು ಸಂಬಳ ಕೊಡುತ್ತೀರಿ. ಆದ್ದರಿಂದ ಯಾವ ಸ್ಥಾನದಲ್ಲಿ ಯಾವ ಅಧಿಕಾರಿಯನ್ನು ನೇಮಿಸಬೇಕೋ ಆ ಅಧಿಕಾರಿಯನ್ನು ನೇಮಿಸಿದರೆ ಮಾತ್ರ ಒಳ್ಳೆಯ ಕೆಲಸ ಆಗುತ್ತದೆ. ಆದ್ದರಿಂದ ಅದು ತಮ್ಮ ಕರ್ತವ್ಯ ಎಂದು ನಾನು ತಮಗೆ ಹೇಳಲು ಬಯಸುತ್ತೇನೆ. ಇದು ಒಂದೇ ಕಡೆ ನಡೆದಿದೆ ಎಂದು ಅಲ್ಲ. ಇದು ಎಲ್ಲಾ ಕಡೆ ನಡೆದಿದೆ. ನಾನು ಅನೇಕ ಕಡೆ ನೋಡಿದ್ದೇನೆ. ಇನ್ನು ಪಿ ಜಿ. ಕೋರ್ಸ್ ಮುಗಿಸಿದಂತಹವರನ್ನು ಪಿ. ಎಚ್. ಸಿ. ಮತ್ತು ಪಿ. ಎಚ್. ಯು. ಗಳಿಗೆ ಹಾಕುತ್ತೀರಿ. ಹಾಕಬೇಡಿ ಎಂದು ನಾನು ಹೇಳುವವನಲ್ಲ. ಹಾಕಬೇಕು ಎಂದು ಹೇಳತಕ್ಕಂಥವನು ನಾನು. ಅಂತಹ ಒಬ್ಬ ವೈದ್ಯರ ತಜ್ಞರ ನೆರವು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರಿಗೆ ದೊರೆಯಬೇಕು. ಆದರೆ ಆ ವೈದ್ಯರು ಅಲ್ಲಿ ಕೆಲಸ ಮಾಡತಕ್ಕಂಥ ವಾತಾವರಣವನ್ನು ತಾವು ನಿರ್ಮಾಣ ಮಾಡಬೇಕಾಗುತ್ತದೆ. ಅವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಪಿ. ಎಚ್. ಸಿ. ಮತ್ತು ಪಿ. ಎಚ್. ಯು. ಗಳಲ್ಲಿ ಕೊಟ್ಟಿದ್ದೀರಾ ಅಂದರೆ ಇಲ್ಲ. ಅಂತಹ ಕಡೆ ತಾವು ಅವರನ್ನು ಹಾಕುವುದರಿಂದ ಏನು ಪ್ರಯೋಜನವಾಗುತ್ತದೆ? ಸರ್ಕಾರ ಒಬ್ಬರನ್ನು ಪಿ.ಜಿ. ಕೋರ್ಸ್ ಮಾಡಿಸಬೇಕಾದರೆ ಸುಮಾರು ೪-೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಸರ್ಕಾರದ ಖರ್ಚಿನಲ್ಲಿ ಅವರು ಪಿ.ಜಿ. ಕೋರ್ಸ್ ಮಾಡುತ್ತಾರೆ. ಅವರ ಒಂದು ಪರಿಜ್ಞಾನ, ಅವರ ಒಂದು ಪರಿಣಿತಿ ಏನು ಇದೆ ಅದನ್ನು ಉಪಯೋಗಿಸಿಕೊಳ್ಳತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಅಲ್ಲಿ ಆಗಬೇಕು. ಅವರ ಜ್ಞಾನ ಅವರ ಪರಿಣತೆ ಏನು ಇದೆ, ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ನಾನು ಇಂತಹವರನ್ನು ಇಂತಹ ಕಡೆಯೇ ಹಾಕಿ ಎಂದು ಹೇಳುವವನಲ್ಲ. ಇನ್ನೊಂದು ವಿಷಯವನ್ನು ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಸಿಸ್ಟೆಂಟ್ ಸರ್ಜನ್ಸ್ ಸುಮಾರು ೧೫-೨೦ ವರ್ಷಗಳಿಂದ ಬಡ್ತಿ ಇಲ್ಲದೆ ಕೆಲಸ ಮಾಡುತ್ತಿದ್ದರೆ, ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಹೇಳಿ? ಇಂತಹವರು ನನ್ನ ಬಳಿ ಬಂದು ಹೇಳಿದರು. ಕೆಲಸ ಮಾಡುವುದಕ್ಕೆ ಯಾರಿಗಾದರೂ ಆಗಲಿ ಶ್ರದ್ಧೆ ಇರಬೇಕಾಗುತ್ತದೆ. ಅವರಿಗೆ ನ್ಯಾಯವಾಗಿ ಸಿಗಬೇಕಾದ ಬಡ್ತಿಯನ್ನು ಸಕಾಲದಲ್ಲಿ ಕೊಡದಿದ್ದರೆ ಅವರು ಹೇಗೆ ತಾನೆ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ? ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಕಡೆ ಅವರಿಗೆ ಬಡ್ತಿಯನ್ನು ಕೊಟ್ಟರೆ ಅವರು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಅವರು ಒಂದೇ ಕಡೆ ಎಷ್ಟು ವರ್ಷ ಕೊಳೆಯಬೇಕು? ಆದರಿಂದ ಅವರಲ್ಲಿ ಒಂದು ರೀತಿಯ ಆಲಸ್ಯ ಮನೋಭಾವನೆ ಬಂದು ಅವರು ಕೆಲಸ ಸರಿಯಾಗಿ ಮಾಡುವುದಿಲ್ಲ. ಆದ್ದರಿಂದ ಅವರಿಗೆ ಬಡ್ತಿಯನ್ನು ತಕ್ಷಣ ಕೊಡುವ ಅವಶ್ಯಕತೆ ಇದೆ. ದಯಮಾಡಿ ಬಡ್ತಿ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನಮ್ಮ ಸ್ನೇಹಿತರಾದ ಶ್ರೀಮಾನ್ ಡಾಕ್ಟರ್ ಮಲ್ಲರೆಡ್ಡಿಯವರು ವೈದ್ಯಕೀಯ ವಿದ್ಯಾಭ್ಯಾಸದ ಬಗ್ಗೆ ಬಹಳ ಹೇಳಿದ್ದಾರೆ. ಅವರಿಗಿಂತ ಹೆಚ್ಚು ನಾನು ಏನನ್ನು ಹೇಳುವುದಿಲ್ಲ. ಇಲ್ಲಿ

ಎಷ್ಟು ಬೇಕಾದರೂ ಹೇಳುವುದಕ್ಕೆ ಅವಕಾಶ ಇದೆ. ಅವರು ಖಾಸಗಿ ಕಾಲೇಜುಗಳ ಬಗ್ಗೆ ಹೇಳಿದ್ದಾರೆ. ನಾನು ಒಂದು ಮಾತನ್ನು ಗ್ರಾಮಾಂತರ ಪ್ರದೇಶದಿಂದ ಬಂದಿರುವುದರಿಂದ ಹೇಳುವುದು ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಒಂದು ಮಾತು ಹೇಳಲೇಬೇಕಾಗುತ್ತದೆ. ಅದನ್ನು ಯಾರಾದರೂ ತಪ್ಪು ತಿಳಿದುಕೊಂಡರೋ ನನಗೇನೂ ಚಿಂತೆ ಇಲ್ಲ, ನನಗೆ ಆ ಬಗ್ಗೆ ಏನೂ ವ್ಯಸನ ಇಲ್ಲ, ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಯುವಕ ವಿದ್ಯಾರ್ಥಿಗಳಿಗೆ ಈ ಮೆಡಿಕಲ್ ಕಾಲೇಜ್‌ಗಳಲ್ಲಿ ಸೀಟ್‌ಗಳನ್ನು ಕೊಡುವ ಬಗ್ಗೆ ವಂಚನೆಮಾಡತಕ್ಕಂಥ ಪ್ರಯತ್ನ ಸತತವಾಗಿ ನಡೆಯುತ್ತಾ ಬಂದಿದೆ. ಮೆಡಿಕಲ್ ಕಾಲೇಜುಗಳಲ್ಲಿ ಅಡ್ಮಿಶನ್ ಕೇಳಿದರೆ ಆ ಯುವಕನಿಗೆ ೮೫–೯೦–೯೫ ಪರ್ಸೆಂಟ್ ಅಂಕಗಳು ಬಂದಿರಬೇಕು. ಉದಾಹರಣೆಗೆ ನನ್ನ ಮಗ ಇನ್ನು ಹತ್ತು ಜನ್ಮ ಎತ್ತಿ ಬಂದರೂ ಸಹ ೯೦ ಪರ್ಸೆಂಟ್ ಅಂಕಗಳನ್ನು ಮಾತ್ರವಲ್ಲ, ಅದರ ಹತ್ತಿರ ಸಹ ಬರುವುದಕ್ಕೆ ಆಗುವುದಿಲ್ಲ. ಕಾರಣ ಏನೆಂದರೆ ನಾನಾಗಲಿ ನಮ್ಮ ಅಪ್ಪ ಆಗಲಿ, ಈ ವಿದ್ಯೆಯನ್ನು ಕಲಿಯತಕ್ಕಂಥದ್ದು ನಮ್ಮ ಕಸುಬಲ್ಲ. ನಾವೇನಿದ್ದರೂ ನಮ್ಮ ರಕ್ತವನ್ನು ಭೂಮಿಗೆ ಮುಡುಪಾಗಿಟ್ಟು ದುಡಿಯತಕ್ಕಂಥವರು. ನಾವು ಬೆವರು ಸುರಿಸಿ ಭೂಮಿಯಲ್ಲಿ ದುಡಿಯುವವರು. ಈ ವಾತಾವರಣದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಯುವಕರು ಇದ್ದಾರೆ. ಅವರಿಗೆ ಕೊಡತಕ್ಕಂಥ ವಿದ್ಯಾಭ್ಯಾಸ ಅಲ್ಲಿ ಏನೇನು ಇಲ್ಲ. ಇವತ್ತು ಹಳ್ಳಿ ವಿದ್ಯಾಭ್ಯಾಸದ ಮಟ್ಟ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಆ ಬಗ್ಗೆ ನಾನೇನು ಹೊಸದಾಗಿ ಹೇಳಬೇಕಾಗಿಲ್ಲ.

ನಾವು ಹೋಟೆಲ್‌ಗೆ ಹೋದರೆ ಕಾಫಿಯನ್ನು ಒನ್ ಬೈಟು ಎಂದು ಕೇಳಿ ಕುಡಿಯುತ್ತೇವೆ, ಅದರಂತೆ ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಉಪಾಧ್ಯಾಯರನ್ನು ಒನ್‌ಬೈಟು ಮಾಡುವ ಸನ್ನಿವೇಶ ಇದೆ. ನನ್ನ ಕ್ಷೇತ್ರದಲ್ಲಿ ಇದು ನಡೆಯುತ್ತಿದೆ. ಒಂದು ಶಾಲೆಯಲ್ಲಿ ಒಬ್ಬ ಉಪಾಧ್ಯಾಯರನ್ನು ಎರಡು ಕಡೆ ಹೋಗಿ ಪಾಠ ಮಾಡಲು ಹೇಳುತ್ತಾರೆ. ಇಂಥ ಕಡೆ ವಿದ್ಯೆ ಕಲಿತ ಹಳ್ಳಿ ಹುಡುಗರು ಬೆಂಗಳೂರಿನ ಸೋಫಿಯಾ ಸ್ಕೂಲ್ ಅಥವಾ ಎಂಇಎಸ್ ಕಾಲೇಜಿನ ವಿದ್ಯಾರ್ಥಿಗಳ ಮಟ್ಟಕ್ಕೆ ಬರಲು ಸಾಧ್ಯವಾಗುವುದಿಲ್ಲ. ಆದಕ್ಕೆ ನಾನು ಹೇಳಿದ್ದು, ಇನ್ನೂ ೧೦ ತಲೆಮಾರು ಕಳೆದರೂ ನನ್ನ ಮಗ ಬೆಂಗಳೂರಿಗೆ ಬಂದು ಮೆಡಿಕಲ್ ಕಾಲೇಜು ಎಲ್ಲಿದೆ ಎಂದು ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ. ಈಗ ವ್ಯವಸ್ಥಿತವಾಗಿ ಒಂದು ಪ್ರಚಾರ ನಡೆಯುತ್ತಿದೆ. ಏನೆಂದರೆ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಏನೋ ಪಾಪದ ಕೆಲಸ ನಡೆಯುತ್ತಿದೆ ಎಂದು ಅಲ್ಲಿ ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಅದಕ್ಕೂ ಬರುತ್ತೇನೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿನ ಕೆಲವು ಕಾಲೇಜುಗಳಲ್ಲಿ ಆದರೂ ಅಲ್ಲಿನ ಯುವಕರಿಗೆ ಎಲ್ಲ ಸ್ಥಾನಗಳೂ ದೊರೆಯುತ್ತಿದೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಇದಕ್ಕೆಲ್ಲ ಬೇರೆ ಬೇರೆ ಕಾರಣಗಳಿವೆ. ಇವತ್ತು ಮೆರಿಟ್‌ಗೆ ಬಂದರೆ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೆ ಒಂದು ಸ್ಥಾನವೂ ದೊರೆಯುವುದಿಲ್ಲ. ಕೊನೆಯ ಪಕ್ಷ ೫ ಅಥವಾ ೧೦ ಸ್ಥಾನಗಳನ್ನು ಕೊಟ್ಟರೂ ನನಗೆ ಎಷ್ಟೋ ಸಂತೋಷವಾಗುತ್ತದೆ. ನನ್ನ ಪಕ್ಕದ ಹಳ್ಳಿಯ ಹುಡುಗನೊಬ್ಬ ಮೆಡಿಕಲ್ ಕಾಲೇಜ್‌ನಲ್ಲಿ ಓದುತ್ತಿದ್ದಾನೆಂದರೆ ನನಗೆ ಒಂದು ರೀತಿಯ ಸಂತೋಷ ಆಗುತ್ತದೆ. ಮೆರಿಟ್ ಒಂದೇ ಆಧಾರವಾಗಿದ್ದರೆ ಈ ಜನ್ಮದಲ್ಲಿ ಮಾತ್ರವಲ್ಲ, ಇನ್ನೂ ಹತ್ತು ಜನ್ಮಗಳಲ್ಲೂ ಅವಕಾಶ ಇರುತ್ತಿರಲಿಲ್ಲ. ಆದರೆ ಇವೊತ್ತು ಕೆಲವು ಕಾಲೇಜುಗಳಲ್ಲಿ ಇಂತಹವರಿಗೂ ಸ್ಥಾನಗಳು ಸಿಗುತ್ತಿವೆ. ಅಂದರೆ ಆ ಕಾಲೇಜುಗಳಲ್ಲಿ ಎಲ್ಲಾ ಸತ್ಯಹರಿಶ್ಚಂದ್ರರೇ ತುಂಬಿದ್ದಾರೆ, ಬಹಳ ತ್ಯಾಗ ಮನೋಭಾವದಿಂದ ನಡೆಸುತ್ತಿದ್ದಾರೆಂದರೆ ಅದು ಸತ್ಯಕ್ಕೆ ಸಾವಿರಾರು ಮೈಲು ದೂರವಿರುವ ಮಾತು. ಅಲ್ಲೂ ಕೂಡ ಏನೇನು ಅವ್ಯವಹಾರ ನಡೆಯುತ್ತಿದೆ ಎಂದು ಡಾಕ್ಟರ್‌ಗಿಂತ ನಾನು ಚೆನ್ನಾಗಿ ಹೇಳಬಲ್ಲೆ. ಇದಕ್ಕೆ ಕಾರಣ ಯಾರು? ವಿಧಾನಸೌಧದ ಮೂರನೇ ಮಹಡಿ. ನಾನು ಮಾನ್ಯ ಮಂತ್ರಿಗಳ ಹತ್ತಿರ ಕೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ್ಯಾವ ಮೆಡಿಕಲ್ ಕಾಲೇಜಿನಲ್ಲಿ ಸರ್ಕಾರಿ ಕೋಟ ೫೦ ಸೀಟು ಇದ್ದ ಕಡೆ ಎಷ್ಟೆಷ್ಟು ಅಡಿಷನಲ್ ಸೀಟುಗಳನ್ನು ಜಾಸ್ತಿ ಮಾಡಿ ಅಡ್ಮಿಷನ್ ಮಾಡಿಕೊಂಡಿದ್ದಾರೆ. ಇದಕ್ಕೆ ಕಾರಣವೇನು ಎಂಬುದನ್ನು ತಾವು ತಿಳಿಸಬೇಕು. ಇದಕ್ಕೆ ನೀವು ಏನು ಹೇಳುತ್ತೀರೆಂಬುದು ಎಲ್ಲರಿಗೂ ಗೊತ್ತು. ೫೦ ಇದ್ದದ್ದು ೧೫೦ ಆಗುತ್ತದೆ, ೧೫೦ ಇದ್ದದ್ದು ೨೫೦ ಆಗುತ್ತದೆ, ಆಗಿದೆ. ಈ ವಿವರಗಳನ್ನು ಕೊಡಬೇಕು. ಕಳೆದ ಐದಾರು ವರ್ಷಗಳಲ್ಲಿ ಯಾವ್ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟ್‌ಗಳಿತ್ತು, ಆಡಿಷನಲ್ ಆಗಿ ಎಷ್ಟು ಜಾಸ್ತಿ ಆಯಿತು. ಇದರ ಬಗ್ಗೆ ಸರ್ಕಾರದಿಂದ ಅಪ್ರೂವ್ ಆಗಿರುವ ವಿವರಗಳನ್ನು ತಾವು ಕೊಡಬೇಕು. ಡಾ. ಮಲಕರೆಡ್ಡಿ ಅವರು ಹೇಳಿದಂತೆ ೫ ವರ್ಷದಲ್ಲಿ ಈ ಖಾಸಗಿ ಕಾಲೇಜುಗಳವರು ಸ್ವಂತ ಆಸ್ಪತ್ರೆಗಳನ್ನು ಕಟ್ಟಿಕೊಳ್ಳಬೇಕೆಂದು ನಿಯಮ ಇದೆ. ಆದರೆ ೫ ವರ್ಷ ಅಲ್ಲ ೧೫ ವರ್ಷವಾದರೂ ಕೆಲವು ಕಡೆ ಕಟ್ಟಿಸಿಲ್ಲ. ಹಾಗಿದ್ದರೆ ಆ ಕಾಲೇಜಿನವರು ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಕೋಟ್ಯಾಂತರ ರೂ.ಗಳು ಎಲ್ಲಿ ಹೋಯಿತು ಎಂಬ ಬಗ್ಗೆ ನಿಮ್ಮ ಕೈಲಿ

ತನಿಖೆ ಮಾಡಲು ಆಗುವುದಿಲ್ಲ ಬಿಡಿ. ಆದರೆ ನಾನು ಹೇಳಿದ್ದನ್ನು ತಾವು ದಯವಿಟ್ಟು ಗಮನಿಸ ಬೇಕು. ಪ್ರೈವೇಟ್ ಕಾಲೇಜ್‌ನವರು ಸರ್ಕಾರಿ ಆಸ್ಪತ್ರೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಆ ಬಾಬ್ತಿಗೆ ಒಬ್ಬ ವಿದ್ಯಾರ್ಥಿಗೆ ವರ್ಷಕ್ಕೆ ೨೫೦೦ ರೂಪಾಯಿಗಳನ್ನು ಕೊಡಬೇಕೆಂದು ಇದೆ. ಅವನ್ನು ವಸೂಲು ಮಾಡಿದರೆ ನೂರಾರು ವೈದ್ಯರ ಸ್ಥಾನಗಳು ಏನು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಿ ಅವರಿಗೆಲ್ಲಾ ಸಂಬಳ ಕೊಡಲು ಸಾಕಾಗುತ್ತದೆ. ಆದ್ದರಿಂದ ಮೊದಲು ಅದನ್ನು ವಸೂಲಿ ಮಾಡಿ. ಅವರು ಹಣ ಕೊಡದಿದ್ದರೆ ನಿರ್ದಾಕ್ಷಿಣ್ಯವಾಗಿ ಅದು ಯಾವುದೇ ಮೆಡಿಕಲ್ ಕಾಲೇಜು ಇರಬಹುದು. ಯಾರೇ ಆಗಿರಬಹುದು, ಅದಕ್ಕೆ ತತ್‌ಕ್ಷಣದಿಂದ ನಾವು ಆ ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸುವುದಿಲ್ಲ. ಕಳುಹಿಸುವುದಿಲ್ಲ ಎನ್ನತಕ್ಕಂಥ ಸರ್ಕಾರದ ತೀರ್ಮಾನ ವನ್ನು ತಾವು ಉತ್ತರ ಕೊಡುವಾಗ ಹೇಳಬೇಕು. ನೀವು ಹೇಳದಿದ್ದರೆ ನಿಮ್ಮದೂ ಕೂಡಾ ಇವರಲ್ಲಿ ಏನೋ ಇದೆ ಎನ್ನತಕ್ಕಂಥ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಜನರು ಆ ರೀತಿ ತೀರ್ಮಾನಕ್ಕೆ ಬರುತ್ತಾರೆ. ಎಷ್ಟು ಹಣ ಬಾಕಿ ಬರಬೇಕಾಗಿದೆ ? ಆ ವಿವರವನ್ನು ತಾವು ಉತ್ತರವನ್ನು ಹೇಳುವಾಗ ಕೊಡಬೇಕಾಗುತ್ತದೆ. ನಮ್ಮ ಕೋಲಾರ ಜಿಲ್ಲೆಯಲ್ಲಿಯೂ ಒಂದು ಪ್ರೈವೇಟ್ ಮೆಡಿಕಲ್ ಕಾಲೇಜು ಆಗುವುದಕ್ಕೆ ನಮ್ಮ ಜಾಲಪ್ಪನವರು ಎಷ್ಟು ಕಾರಣರೋ ನಾನು ಕೂಡ ಅಷ್ಟೇ ಕಾರಣ ಆಗಿದ್ದೇನೆ. ನಮ್ಮ ಜಿಲ್ಲೆಗೂ ಒಂದು ಕಾಲೇಜು ಬರಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಅದರಲ್ಲಿ ಮುಚ್ಚು ಮರೆ ಏನೂ ಇಲ್ಲ. ನಮ್ಮ ಜಿಲ್ಲೆಗೆ ಮೆಡಿಕಲ್ ಬರುವುದಕ್ಕೆ ನಾವಿಬ್ಬರೂ ಕೂಡಿ ದುಡಿದಿದ್ದೇವೆ. ನಮಗೆ ಕಾಲೇಜು ಬರುವುದಕ್ಕೆ ಶ್ರಮವಹಿಸಿ ಪ್ರಯತ್ನ ಮಾಡಿದ್ದೇವೆ. ಅದರಲ್ಲಿ ಮುಚ್ಚಿಡುವಂಥ ವಿಷಯ ಏನೂ ಇಲ್ಲ. ಆದರೆ ಕೊಡಬೇಕಾಗಿರತಕ್ಕಂಥ ಹಣವನ್ನು ನಾನು ಕೊಡಬೇಡಿ ಎಂದು ಹೇಳುವುದಿಲ್ಲ. ಆದ್ದರಿಂದ ಈ ಹಣವನ್ನು ವಸೂಲಿ ಮಾಡಬೇಕಾಗಿರತಕ್ಕಂಥದ್ದು ಅತಿ ಅವಶ್ಯಕತೆ ಇದೆ ದಯವಿಟ್ಟು ಅದನ್ನು ಮಾಡಬೇಕೆಂದು ಹೇಳುತ್ತೇನೆ. ಪೋಸ್ಟ್ ಗ್ರಾಜುಯೇಟ್ ಅಡ್ಮಿಷನ್ಸ್ ಏನಿದೆ. ಇದು ಒಂದು ದೊಡ್ಡ ಕರ್ಮಕಾಂಡ. ಕೆಲವು ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಮ್ಯಾನೇಜ್ ಮೆಂಟ್‌ಗೆ ಇಷ್ಟು ಸರ್ಕಾರಕ್ಕೆ ಇಷ್ಟು ಎಂದು ನಿಯಮ ಇದೆ. ಕೆಲವು ವರ್ಷಗಳಲ್ಲಿ ಸರ್ಕಾರ ಅಲ್ಲಿಗೆ ಅಭ್ಯರ್ಥಿಗಳನ್ನು ಕಳುಹಿಸಿಲ್ಲ. ಅಲ್ಲಿ ಫಿಲ್-ಅಪ್ ಮಾಡಲೇ ಇಲ್ಲ. ಏತಕ್ಕೆಂದು ಹೇಳಿದರೆ ೩-೪-೫ ಲಕ್ಷ ರೂಪಾಯಿಗಳ ಖರ್ಚು ಬರುತ್ತದೆಂದು ನಮ್ಮ ಮಲಕರೆಡ್ಡಿ ಅವರು ಹೇಳುತ್ತಿದ್ದಾರೆ. ಒಂದು ಪೋಸ್ಟ್ ಗ್ರಾಜುಯೇಟ್ ಸೀಟಿಗೆ ಮೂರು ನಾಲ್ಕು ಐದು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಸರ್ಕಾರ ಇದನ್ನು ಏತಕ್ಕೆ ಉಪಯೋಗಿಸಿಕೊಳ್ಳಲಿಲ್ಲ ? ಸರ್ಕಾರ ತನ್ನ ಅಭ್ಯರ್ಥಿಗಳನ್ನು ಅಲ್ಲಿಗೆ ಏತಕ್ಕೆ ಕಳುಹಿಸಲಿಲ್ಲ ? ಇದು ಕೂಡಾ ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ. ಮತ್ತು ವರ್ಷ ವರ್ಷ ಕೂಡಾ ಇದರ ನೀತಿ ಬದಲಾವಣೆ ಬೇರೆ. ನೀತಿ ಕೂಡಾ ಬದಲಾವಣೆಯಾಗಿದೆ ಇದರ ವಿವರ ಗಳನ್ನೆಲ್ಲಾ ಕೂಡ ತಾವು ಕೊಡಬೇಕಾಗುತ್ತದೆ. ಯಾವ ಯಾವ ಕಾಲೇಜಿನಲ್ಲಿ ಸರ್ಕಾರ ತನ್ನ ಅಭ್ಯರ್ಥಿ ಗಳನ್ನು ಕಳುಹಿಸಿಲ್ಲ, ಇದಕ್ಕೆ ಗುರುತರವಾಗಿರತಕ್ಕಂಥ ಕಾರಣಗಳು ಏನು ? ಇದಕ್ಕೆ ಕಾರಣ ಏನು ಎನ್ನತಕ್ಕಂಥದ್ದು ಮುಖ್ಯ. ಬೇರೆ ಕಾರಣಗಳು ಇದ್ದರೆ ಅದು ನಿಮಗೂ ಗೊತ್ತಿದೆ, ಅದು ನನಗೂ ಗೊತ್ತಿದೆ. ಆದರೆ ಕೊನೆಯಪಕ್ಷ ಕಾಗದದ ಮೇಲಾದರೂ ಏನಾದರೂ ಕಾರಣವಿರಬೇಕು. ಹಾಗೂ ಇದಕ್ಕೆ ಯಾವ ಅಧಿಕಾರಿಗಳು ಇಂಥ ಕೆಲಸವನ್ನು ಮಾಡುವುದಕ್ಕೆ ಶಾಮೀಲಾಗಿದ್ದಾರೆ, ಅವರ ಬಗ್ಗೆ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಈ ಹಗಲು ದರೋಡೆ ಏನು ಇದೆ ಲೂಟಿ ಏನು ಇದೆ. ಇದನ್ನು ನಿಲ್ಲಿಸಬೇಕು. ಪ್ರೈವೇಟ್ ಮೆಡಿಕಲ್ ಕಾಲೇಜು ಇರಬೇಕು ಎಂದು ಹೇಳತಕ್ಕಂಥವ ರಲ್ಲಿ ನಾನು ಒಬ್ಬ. ಯಾವ ಕಾಲೇಜಿನಲ್ಲಿಯೂ ನನಗೆ ಇಂಟರೆಸ್ಟ್ ಇಲ್ಲ, ಮಾನ್ಯ ಜಾಲಪ್ಪನವರಿಗೂ ಕೂಡ ಇಂಥವರಿಗೆ ಸೀಟನ್ನು ಕೊಡಬೇಕೆಂದು ನಾನು ಯಾರ ಬಗ್ಗೆಯೂ ಹೇಳುವುದಕ್ಕೆ ಹೋಗಿಲ್ಲ ಅದು ಬೇರೆ ಪ್ರಶ್ನೆ. ಆದ್ದರಿಂದ ಇದರಲ್ಲಿ ಏನಾಗಿದೆ, ಎಂಬುದರ ಬಗ್ಗೆ ನೀವು ವಿವರವನ್ನು ಕೊಡ ಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಡಾಕ್ಟರ್ ಮಲಕರೆಡ್ಡಿ ಅವರು ಒಂದು ವಿಷಯ ವನ್ನು ಹೇಳುತ್ತಿದ್ದರು. ಇದರ ಬಗ್ಗೆ ಯಾವ ಮಟ್ಟಕ್ಕೆ ಸರ್ಕಾರ ನಡೆಯುವುದಕ್ಕೆ ಹೊರಟಿದೆ ಎಂದು ಹೇಳಿದರೆ ಸುಪ್ರೀಂ ಕೋರ್ಟ್‌ನಲ್ಲಿ ಒಂದು ತೀರ್ಮಾನವಾಗಿದೆ. ಕೇಂದ್ರ ಸರ್ಕಾರದಿಂದ ನಿಮಗೆ ಪತ್ರ ಕೂಡಾ ಈ ರೀತಿ ಮಾಡಬೇಕೆಂದು ಬಂದಿದೆ. ರಾಜ್ಯದ ಹೈಕೋರ್ಟ್‌ನಲ್ಲಿ ಕೂಡ ತೀರ್ಮಾನ ಆಗಿದೆ. ಆದರೂ ಸಹ ಇದೆಲ್ಲವನ್ನು ಕೂಡಾ ತಾವು ಬದಿಗಿಟ್ಟು ನೀವು ಕೋರ್ಟಿಗೆ ಹೋಗುವುದಕ್ಕಿಂತ ಮೊದಲು ಒಂದು ಪಟ್ಟಿಯನ್ನು ಏನು ತಯಾರು ಮಾಡಿದ್ದೀರೋ ಅದೇ ಪಟ್ಟಿಯನ್ನು ಅನೌನ್ಸ್ ಮಾಡಿದ್ದೀರಿ. ಇದಕ್ಕೆ ಏನು ಕಾರಣ ?

ಇದೆಲ್ಲಾ ವಿವರಗಳಿಗೆ ನಾನು ಹೋಗುವುದಿಲ್ಲ ಅದು ಪೋಸ್ಟ್ ಗ್ರಾಜುಯೇಟ್ ಅಡ್ಮಿಷನ್ಸ್ ಬಗ್ಗೆ. ಅದಕ್ಕೆ ಗುರುತರವಾದ ಕಾರಣ ಇರಬೇಕು. ಇದನ್ನು ನಾನು ಜ್ಞಾಪಿಸಿಕೊಂಡಾಗ ಯಥಾವತ್ತಾಗಿ ಹಿಂದಿನ ವರ್ಷಗಳಲ್ಲಿ ಏನೇನು ನಡೆದಿತ್ತು, ಅದೇ ತರಹ ಈ ವರ್ಷ ಕೂಡ ಆಗಿದೆ ಎಂಬ

ತೀರ್ಮಾನಕ್ಕೆ ನಾನು ಕಡ್ಡಾಯವಾಗಿ ಬರಲೇ ಬೇಕಾದ ಪರಿಸ್ಥಿತಿ ಬಂದಿದೆ ಅದಕ್ಕೆ ಕಾರಣ ಏನು ? ಹೈಕೋರ್ಟಿನಲ್ಲಿ ಏನು ತೀರ್ಮಾನ ಆಗಿದೆ, ಸುಪ್ರೀಂ ಕೋರ್ಟಿನ ತೀರ್ಪು ಏನಾಗಿದೆ, ಕೇಂದ್ರ ಸರ್ಕಾರದವರು ಏನು ನಿರ್ದೇಶನ ಕೊಟ್ಟಿದೆ, ಇದನ್ನೆಲ್ಲಾ ತಾವು ದಯವಿಟ್ಟು ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಿ, ಒಟ್ಟಾರೆ ಈ ಅಡ್ಮಿಷನ್ಸ್‌ನಲ್ಲಿ ಆಗಿರತಕ್ಕ ಅವ್ಯವಹಾರದ ಬಗ್ಗೆ ವಿವರವಾದ ಚಿತ್ರವನ್ನು ಕೊಡಬೇಕು. ಅದು ಫಸ್ಟ್ ಎಂ.ಬಿ.ಬಿ.ಎಸ್. ನಲ್ಲಿ ಆಗಿರತಕ್ಕದ್ದು ಮತ್ತು ಪೋಸ್ಟ್ ಗ್ರಾಜ್ಯುಯೇಟ್ ಅಡ್ಮಿಷನ್ಸ್‌ನಲ್ಲಿ ಆಗಿರತಕ್ಕ ಅವ್ಯವಹಾರದ ಬಗ್ಗೆ ವಿವರವಾದ ಚಿತ್ರವನ್ನು ನೀಡಬೇಕೆಂದು ವಿನಂತಿ ಮಾಡಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ಆರೋಗ್ಯ ಇಲಾಖೆಯ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಕೆಲವು ಸಲಹೆ ಸೂಚನೆಗಳನ್ನು ಕೊಡಲಿಕ್ಕೆ ಇಲ್ಲಿ ಪ್ರಯತ್ನಿಸುತ್ತಾ ಇದ್ದೇನೆ. ಈ ಇಲಾಖೆಯ ಮೇಲೆ ಈಗಾಗಲೇ ವಿರೋಧ ಪಕ್ಷದ ಉಪ ನಾಯಕರು ಹಾಗೂ ಇನ್ನಿತರ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಉತ್ತಮವಾದ ಸಲಹೆ ಸೂಚನೆಗಳನ್ನು ಅವರುಗಳು ನೀಡಿದ್ದಾರೆ. ಅದರಲ್ಲೂ ಮಾನ್ಯ ಉಪ ನಾಯಕರು ಈ ಇಲಾಖೆಯ ಮಂತ್ರಿಯಾಗಿ ಕೆಲಸ ನಿರ್ವಹಿಸಿದವರು. ಆದ್ದರಿಂದ ಎಳೆ ಎಳೆಯಾಗಿ ಏನೇನು ಸುಧಾರಣೆ ಮಾಡಬಹುದು ಎನ್ನುವ ಬಗ್ಗೆ ತಮ್ಮ ಅನುಭವವನ್ನು ಹೊಸದಾಗಿ ಈ ಸ್ಥಾನವನ್ನು ವಹಿಸಿಕೊಂಡಿರುವಂತಹ ನಮ್ಮ ಶ್ರೀಮಂತಿ ಮನೋರಮಾ ಮಧ್ವರಾಜ್‌ರವರಿಗೆ ತಿಳಿಸಿ ಹೇಳಿದ್ದಾರೆ. ಒಂದು ಸಂತೋಷಕರವಾದ ವಿಚಾರ ಅಂದರೆ, ಅವರು ಏನೇನು ವಿಚಾರಗಳನ್ನು ಹೇಳಿದ್ದಾರೋ ಆ ವಿಚಾರ ಅವರೇ ಇಲಾಖೆಯನ್ನು ನಿರ್ವಹಿಸುವಾಗ ಗೊತ್ತು ಆಗಿದ್ದರೆ ಇಷ್ಟು ದಿವಸಕ್ಕೆ ಈ ಇಲಾಖೆ ಆರೋಗ್ಯವನ್ನು ಪಡೆದು ಒಂದು ಉತ್ತಮ ಕೆಲಸವನ್ನು ನಿರ್ವಹಿಸುತ್ತಾ ಇತ್ತು. ಆದರೆ ದುರ್ದೈವ. ಈಗ ಅವರ ಹತ್ತಿರ ಸರಿಯಾದ ಮಾಹಿತಿ ಬರಲಿಲ್ಲ. ಆ ಮಾಹಿತಿ ಬರುವುದರೊಳಗೆ ಅವರ ಖಾತೆ ಬೇರೆ ಆಗಿ ಹೋಯಿತು. ಪ್ರಶ್ನೆ ಹೇಗೆ ಆಯಿತು ಅಂದರೆ 'ಹಲ್ಲು ಇದ್ದವರಿಗೆ ಕಡ್ಲೆ ಇಲ್ಲ. ಕಡ್ಲೆ ಇದ್ದವರಿಗೆ ಹಲ್ಲು ಇಲ್ಲ' ಎನ್ನುವ ಪರಿಸ್ಥಿತಿ ಆಯಿತು. ಅದು ಏನೇ ಇರಲಿ, ಅವರು ತಮ್ಮ ತಿಳುವಳಿಕೆಗೆ ಬಂದಾಗ ಅದನ್ನು ಅವರು ಅರಿತು ಕೊಂಡಾಗ ಈ ಖಾತೆ ಹೊರಟು ಹೋಗಿತ್ತು. ಆ ವಿಷಯ ಬೇರೆ. ಅವರು ಈಗ ವಿರೋಧಪಕ್ಷದಲ್ಲಿದ್ದರೂ ಸಹ ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಆದ್ದರಿಂದ ಇದರ ಮೇಲೆ ನಾನು ಬಹಳ ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ಜೊತೆಗೆ ಬಹಳಷ್ಟು ಜನ ಇನ್ನೂ ಮಾತನಾಡುವವರಿದ್ದಾರೆ. ನಾನು ಪ್ರಾಮುಖ್ಯವಾಗಿ ಇಲ್ಲಿ ಹೇಳಬೇಕಾದ ವಿಚಾರ ಒಂದು ಇದೆ. ಅದು ಏನೆಂದರೆ ಜನನ ನಿಯಂತ್ರಣವನ್ನು ಈ ಇಲಾಖೆಯ ಕಕ್ಷೆಯಲ್ಲಿ ತೆಗೆದುಕೊಂಡು ಅದನ್ನು ಸಹ ನಿರ್ವಹಿಸುತ್ತಿದ್ದಾರೆ. ಇದರಿಂದ ಹೆಚ್ಚಿನ ಮಟ್ಟದ ಪ್ರಯತ್ನ ಆಗಿದೆ. ಇದರ ಬಗ್ಗೆ ನಾನು ಅಂಕಿ ಅಂಶಗಳನ್ನು ಅಭ್ಯಾಸ ಮಾಡಿಲ್ಲ. ಆದರೆ ಏನು ಗುರಿಯನ್ನು ಇದರಲ್ಲಿ ಮುಟ್ಟ ಬೇಕಾಗಿತ್ತೋ ಆ ಗುರಿ ನಮ್ಮ ರಾಜ್ಯದಲ್ಲಿಯೋ ಆಗಲಿ ಅಥವಾ ನಮ್ಮ ದೇಶದಲ್ಲಿಯೋ ಆಗಲಿ ಮುಟ್ಟುತ್ತಾ ಇಲ್ಲ. ನಾನು ಕೆಲವು ವೈದ್ಯಾಧಿಕಾರಿಗಳಲ್ಲಿ ಈ ವಿಚಾರದ ಬಗ್ಗೆ ಕೇಳಿದಾಗ ಅವರು ಹೇಳಿದರು. ಅವರು ಏನು ಹೇಳಿದರು ಅಂದರೆ ಎಲ್ಲಿಯವರೆಗೆ ಜನನ ನಿಯಂತ್ರಣವನ್ನು ಒಂದು ಕಾನೂನು ಆಗಿ ಮಾಡುವುದಿಲ್ಲವೋ ಮತ್ತು ಇದು ಎಲ್ಲರೂ ಅತ್ಯವಶ್ಯಕವಾದ ಒಂದು ಕರ್ತವ್ಯವೆಂದು ಜನನ ನಿಯಂತ್ರಣವನ್ನು ಅಳವಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ಗುರಿ ಮುಟ್ಟುವುದಕ್ಕೆ ಸಾಧ್ಯ ಇಲ್ಲ, ಇದು ಖಂಡಾಖಂಡಿತ ಸತ್ಯ ಎಂದು ತಿಳಿಸಿದ್ದಾರೆ. ಈ ಬಗ್ಗೆ ಕಳೆದ ಸಾರಿ ಅಂದರೆ ಗವರ್ನರ್ ಆಡಳಿತ ಬರುವ ಪೂರ್ವದಲ್ಲಿ ಮಾನ್ಯ ರಾಚಯ್ಯನವರು ಈ ಇಲಾಖೆಯನ್ನು ನಿರ್ವಹಿಸುತ್ತಿದ್ದರು. ನಾನು ಅವರ ಭಾಷಣದ ಪ್ರತಿಯನ್ನು ಓದಿದೆ. ಅವರು ಆಗ ಹೇಳಿದ್ದರು. ಇಡೀ ದೇಶಕ್ಕೆ ಅನುಕೂಲವಾಗುವ ಒಂದು ಸಮಗ್ರವಾದ ಕಾನೂನನ್ನು ಈ ಜನನ ನಿಯಂತ್ರಣದ ಬಗ್ಗೆ ತರಬೇಕು, ಅದನ್ನು ಕಡ್ಡಾಯ ಮಾಡಬೇಕು. ಅದನ್ನು ನಾವು ಮಾಡುವುದಕ್ಕೆ ಸಾಧ್ಯ ಇಲ್ಲ, ಅಂದರೆ ಕರ್ನಾಟಕ ಸರ್ಕಾರ ಮಾಡುವುದಕ್ಕೆ ಸಾಧ್ಯ ಇಲ್ಲ, ಕೇಂದ್ರ ಸರ್ಕಾರ ಇದನ್ನು ಮಾಡಬೇಕು ಎಂದು ಹೇಳಿದ್ದಾರೆ. ಈಗ ಉತ್ತಮವಾದ ಕಾಲ ಬಂದಿದೆ. ಕೇಂದ್ರದಲ್ಲಿ ಅವರೇ ಆಡಳಿತದಲ್ಲಿ ಇದ್ದಾರೆ. ಅವರು ಒಂದು ಸಮಗ್ರವಾದ ಒಂದು ಕಾನೂನನ್ನು ತರಲೇಬೇಕು. ಇದನ್ನು ಕಡ್ಡಾಯವಾಗಿ ಮಾಡಬೇಕು. ಕಡ್ಡಾಯವಾಗಿ ಮಾಡದೇ ಹೋದರೆ ನೀವು ಯಾವುದೇ ಸುಧಾರಣೆಗಳನ್ನು ಮಾಡಲಿ, ಯಾವುದೇ ರೀತಿಯ ಎಷ್ಟೇ ಕೆಲಸಗಳನ್ನು ಮಾಡಿದರೂ ಸಹ, ಈ ಜನಸಂಖ್ಯಾ ಸ್ಫೋಟದಿಂದ ಈ ಒಂದು ಸುಧಾರಣೆಯನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವುದಕ್ಕೆ ಸಾಧ್ಯವಾಗುವುದಿಲ್ಲ.

೫-೨೦ ಪಿ. ಎಂ.

ಆದುದರಿಂದ ರಾಷ್ಟ್ರದ ಮಟ್ಟದಲ್ಲಿ ಒಂದು ನಿರ್ದಿಷ್ಟವಾದ ಕಾನೂನು ಬೇಕು ಕಾನೂನು ಹೇಗೆ ಇರಬೇಕು ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲದೇ ಹೋದರೂ ಕಾನೂನು ಒತ್ತಾಯ ಪೂರ್ವಕವಾಗಿ ಇರಬೇಕು ಎಂದು ಹೇಳುತ್ತೇನೆ. ಅದು ಹೇಗೆ ಇರಬೇಕು ಅಂದರೆ, ಯಾರು ಕುಟುಂಬ ಯೋಜನೆಗಳನ್ನು ಅವರ ಸಂಸಾರದಲ್ಲಿ ಅಳವಡಿಸಿಕೊಳ್ಳುವುದಿಲ್ಲವೋ ಅಂಥವರಿಗೆ ನಾಗರೀಕ ಸೌಲಭ್ಯಗಳು ಕೇಂದ್ರ ಸರ್ಕಾರದಲ್ಲಾಗಲಿ, ರಾಜ್ಯಸರ್ಕಾರದಲ್ಲಾಗಲಿ ಪುರಸಭೆಗಳಲ್ಲಾಗಲಿ ನಾಗರೀಕಸೌಲಭ್ಯಗಳು ಏನಿವೆ, ಅವನ್ನು ಸಂಪೂರ್ಣವಾಗಿ ಅವರಿಗೆ ಕೊಡಬಾರದು. ಆ ರೀತಿ ಒಂದು ಒತ್ತಡ ತಂದರೆ ಮಾತ, ಆ ಕಾನೂನಿನಲ್ಲಿ ಆ ರೀತಿ ಪಾಯಿಂಟ್ಸನ್ನು ಅಳವಡಿಸಿದರೆ ಮಾತ್ರ ಜನಸಂಖ್ಯೆಯನ್ನು ನಿಯಂತ್ರಣ ಮಾಡಬಹುದೇ ಹೊರತು ಕೇವಲ ಈ ಇಲಾಖೆಯಿಂದ ಮಾಡುವುದಕ್ಕಾಗುವುದಿಲ್ಲ, ಈ ಇಲಾಖೆ ಸಂಪೂರ್ಣವಾಗಿ ಬಹಳ ಚೆನ್ನಾಗಿ ಕೆಲಸ ಮಾಡಿದೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ನಾವು ರಾಜಕೀಯದಲ್ಲಿರುವವರು, ಮತ್ತು ಸಮಾಜಸೇವಕರಾದವರು ನಾವು ನಮ್ಮಲ್ಲಿರುವ ಜಾತಿಭೇದ, ಧರ್ಮ ಇವೆಲ್ಲವನ್ನೂ ಬಿಟ್ಟು ಈ ದೇಶದಲ್ಲಿ ನಿರ್ದಿಷ್ಟವಾದ ಎಲ್ಲ ಜನರಿಗೂ, ಎಲ್ಲ ಧರ್ಮದವರಿಗೂ ಅನುಕೂಲವಾಗುವಂಥ ಮತ್ತು ಅವಶ್ಯಕವಾದಂಥ ಒಂದು ಅಧಿಕಾರವಾಣಿಯ ಒತ್ತಡವುಳ್ಳಂಥ ಒಂದು ಕಾನೂನನ್ನು ತರಲೇಬೇಕು ಎಂದು ನಾನು ಈ ಮೂಲಕ ಒತ್ತಾಯ ಮಾಡುತ್ತಾ ಇದ್ದೇನೆ. ಅಲ್ಲದೆ ಅವಕಾಶ ಸಿಕ್ಕಿದರೆ ನಮ್ಮ ಮಂತ್ರಿಯವರು ಕೇಂದ್ರಕ್ಕೆ ಹೋದಂಥ ಸಂದರ್ಭದಲ್ಲಿ ಈ ಒಂದು ಸೂಚನೆಯನ್ನು ಅವರಿಗೆ ಕೊಡಬೇಕು ಎಂದು ನಾನು ಹೇಳುತ್ತೇನೆ. ಇನ್ನು ಬಾಕಿ ವಿಚಾರದಲ್ಲಿ ಹೇಳುವುದಾದರೆ ಈ ಆರೋಗ್ಯ ಇಲಾಖೆಯ ಕೆಲಸ ಅಂದರೆ ಎಲ್ಲರಿಗೂ ಆರೋಗ್ಯ ಕೊಡುವುದು, ಎರಡುಸಾವಿರ ಇಸವಿಯಷ್ಟು ಹೊತ್ತಿಗೆ ನಾವು ಸಂಪೂರ್ಣ ಆರೋಗ್ಯವನ್ನು ಈ ಕರ್ನಾಟಕದ ರಾಜ್ಯದ ಎಲ್ಲ ಜನತೆಗೆ ಕೊಡುತ್ತೇವೆ ಎಂದು ಶ್ರೀಮಾನ್ ರಾಚಯ್ಯನವರು ಭಾಷಣ ಮಾಡಿದಾಗ ಹೇಳಿದರು. ಈಗ ಅಮ್ಮ ಅವರು ಅದರ ಬಗ್ಗೆ ಏನು ಹೇಳುತ್ತಾರೋ ಕಾದು ನೋಡಬೇಕಾಗಿದೆ. ಎರಡುಸಾವಿರ ಇಸವಿಗೆ ಇನ್ನು ೧೦ ವರ್ಷ ಇದೆ ಈ ಅವಧಿಯಲ್ಲಿ ನಾವು ಸಂಪೂರ್ಣವಾಗಿ ರಾಜ್ಯದ ಜನತೆಗೆ ಈ ಆರೋಗ್ಯದ ಸೌಲಭ್ಯವನ್ನು ಸಂಪೂರ್ಣವಾಗಿ ಒದಗಿಸುತ್ತೇವೆ. ಆ ಮಟ್ಟದಲ್ಲಿ ನಾವು ತಲುಪುತ್ತೇವೆ ಎಂದು ಹೇಳಿದರು. ಅದು ಸಂಪೂರ್ಣವಾಗಿ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಅದಕ್ಕೆ ಕಾರಣವೇನೆಂದರೆ, ಈ ಇಲಾಖೆಯಲ್ಲಿ ಕೆಲವು ನ್ಯೂನತೆಗಳಿವೆ. ಅದನ್ನು ಎಳೆಎಳೆಯಾಗಿ ಮಾನ್ಯ ಸಿಂಧ್ಯರವರು ಬಿಡಿಸಿ ಹೇಳಿದರು. ಅವರಲ್ಲಿ ಪ್ರಾಮುಖ್ಯವಾದ ವಿಚಾರವೆಂದರೆ, ವೈದ್ಯರು ಮತ್ತು ಅವರ ಕೈಕೆಳಗಿನ ಸಿಬ್ಬಂದಿ ಕೊರತೆ ಎಲ್ಲೆಡೆ ಕಾಣುತ್ತಿದೆ. ಕೊನೆಪಕ್ಷ ವೈದ್ಯರು ಯಾವ ಒಂದು ಸ್ಟ್ಯಾಂಡರ್ಡ್‌ನವರಾದರೂ ಸಹ ಪರವಾಗಿಲ್ಲ ಇರಬೇಕು. ಒಂದು ಆಸ್ಪತ್ರೆ ಇದ್ದಲ್ಲಿ ಅಂದರೆ ಪಿಹೆಚ್‌ಯು, ಪಿ.ಹೆಚ್‌ಸಿ ಏನೇನಿದೆ ಅಲ್ಲೆಲ್ಲ ಒಬ್ಬ ವೈದ್ಯ ನಮ್ಮ ಕಣ್ಣಿಗೆ ಕಾಣಬೇಕು. ಕಣ್ಣಿಗೆ ಕಂಡರು ಅಂದರೆ ಅರ್ಧದಷ್ಟು ರೋಗ ಗುಣವಾಯಿತು ಎಂದು ನಾವು ಭಾವಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಈ ರೀತಿ ವೈದ್ಯರಿಲ್ಲದ ಆಸ್ಪತ್ರೆಗಳಿದ್ದರೆ, ಶಿಕ್ಷಕರಿಲ್ಲದ ಶಾಲೆಗಳಿದ್ದರೆ ಇನ್ನು ೧೦ ವರ್ಷಗಳಲ್ಲಿ ಅಂದರೆ ಎರಡು ಸಾವಿರದ ಇಸವಿಯಷ್ಟು ಹೊತ್ತಿಗೆ ಸಂಪೂರ್ಣವಾಗಿ ಆರೋಗ್ಯ, ಅಲ್ಲದೆ ಅಷ್ಟರಲ್ಲಿ ಸಂಪೂರ್ಣವಾಗಿ ಸಾಕ್ಷರತೆಯನ್ನು ತರುತ್ತೇವೆ ಎನ್ನುವುದು ಅಸಾಧ್ಯವಾದ ಮಾತು. ನಾವು ಎಲೆಕ್ಷನ್ ಬಂದಾಗ ಹೇಳುತ್ತೇವೆ. ನಾನೂ ಕೆಲವು ಕಡೆ ಹೇಳಿದ್ದೇನೆ. ಡಾಕ್ಟರನ್ನು ಕೊಡುತ್ತೇನೆ, ನೋಡುತ್ತಾ ಇರಿ ಎಂದು ಹೇಳಿದ್ದೇನೆ. ನನಗೆ ತಿಳಿದ ಪ್ರಕಾರ ಈಗ ನಮ್ಮ ಜಿಲ್ಲೆಯಲ್ಲಿ ೨೧ ಕಡೆಯೋ, ೨೫ ಕಡೆಯೋ ವೈದ್ಯರಿಲ್ಲ, ಅದು ಸಣ್ಣ ಜಿಲ್ಲೆ. ಹೀಗಿರುವಾಗ ಬಹಳ ಕಷ್ಟವಾಗುತ್ತದೆ. ಹಳ್ಳಿಯಲ್ಲಿ ವೈದ್ಯರು ಇರಲೇಬೇಕು. ಪೇಟೆಗಳಲ್ಲಾದರೆ ಪ್ರೈವೇಟ್ ಪ್ರಾಕ್ಟೀಷನರ್ಸ್ ಇರುತ್ತಾರೆ, ಅವರು ಸ್ವಲ್ಪ ಏನಾದರೂ ಮ್ಯಾನೇಜ್ ಮಾಡಿಕೊಳ್ಳಬಹುದು, ಆದರೆ ಹಳ್ಳಿ ಕಡೆ ಕಷ್ಟವಾಗುತ್ತದೆ. ಇವತ್ತು ಪೇಪರಿನಲ್ಲಿ ಸಿಕ್ಕಾಪಟ್ಟೆ ಮಳೆ ಬಿದ್ದಿದೆ ಎಂದು ಬಂದಿದೆ. ಮಳೆ ಬಂತು ಅಂದರೆ ಇಲ್ಲದ ಖಾಯಿಲೆ. ಮತ್ತೊಂದು ಬಂದಿರುತ್ತವೆ, ಆಗ ಹಳ್ಳಿಯ ಜನರಿಗೆ ಕಷ್ಟವಾಗುತ್ತದೆ. ಆದುದರಿಂದ ರಾಜ್ಯದ ಎಲ್ಲ ಕಡೆಗೆ ವೈದ್ಯಾಧಿಕಾರಿಗಳನ್ನು ಮತ್ತು ಅವರ ಕೈಕೆಳಗಿನ ಸಿಬ್ಬಂದಿಗಳನ್ನು ಹಾಕುವುದಕ್ಕೆ ನೀವು ಏನು ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ನಿಮ್ಮ ಉತ್ತರದಲ್ಲಿ ಸರಿಯಾಗಿ ಹೇಳಬೇಕು. ಹಾಗೆ ಹೇಳದೇಹೋದರೆ ವಿರೋಧ ಪಕ್ಷದಲ್ಲಿ ಕುಳಿತು ನಾವು ಏನು ಭಾಷಣ ಮಾಡಿದೆವೊ ಅದೇರೀತಿ ಭಾಷಣ ಮಾಡಬೇಕಾಗುತ್ತದೆ. ಆ ಕಾರಣಕ್ಕಾಗಿ ತಾವು ಆ ಕಡೆ ಲಕ್ಷ್ಯವನ್ನು ಕೊಟ್ಟು ಅದನ್ನು ಪೂರೈಸಬೇಕಾಗುತ್ತದೆ. ಈಗ ಎರಡು ಸಾವಿರ ಇಸವಿಗೆ ಸಂಪೂರ್ಣವಾಗಿ ಆರೋಗ್ಯವನ್ನು ಕೊಡುವಂಥಾದ್ದು ಕೇವಲ ಆರೋಗ್ಯ ಇಲಾಖೆಯ ಕರ್ತವ್ಯ, ಸಂಪೂರ್ಣ ಅದರ ಜವಾಬ್ದಾರಿ ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಹಲವಾರು ಬೇರೆ ಬೇರೆ ಇಲಾಖೆಗಳು ಈ

ಇಲಾಖೆಗೆ ಪೂರಕವಾಗಿ ನಿಂತರೆ ಮಾತ್ರ ಸಾಧ್ಯತೆ ಇದೆ. ಉದಾಹರಣೆಗೆ ಒಬ್ಬ ಸಾಮಾನ್ಯ ಮನುಷ್ಯನ ಆರೋಗ್ಯ ಚೆನ್ನಾಗಿ ಇರಬೇಕಾದರೆ ಅವನಿಗೆ ಸುತ್ತಮುತ್ತಲಿನ ವಾತಾವರಣದಲ್ಲಿ ಒಳ್ಳೆಯ ಹವೆ ಇರಬೇಕು, ಇದರ ಜೊತೆಗೆ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿರಬೇಕು, ಮನೆ ಸುತ್ತ ಮುತ್ತಲಿನ ಪರಿಸರ ಚೆನ್ನಾಗಿರಬೇಕು ಕೊಳಚೆ ವಗೈರೆ ಇರಬಾರದು. ಅತ್ಯಂತ ಉತ್ತಮವಾದ ಆಹಾರ ಇಲ್ಲದೇಹೋದರೂ ಅವನಿಗೆ ಆಹಾರ ಸೇವನೆಗೆ ಪೌಷ್ಟಿಕಾಂಶ ಇರುವಂಥಾ ಆಹಾರ ಸಿಗಬೇಕು.

ಹೀಗಿದ್ದರೆ ಮಾತ್ರ ಒಬ್ಬ ವ್ಯಕ್ತಿಯ ಆರೋಗ್ಯ ಚೆನ್ನಾಗಿರುವುದಕ್ಕೆ ಸಾಧ್ಯವಾಗುತ್ತದೆ, ಇದು ರಾಜ್ಯದ ಎಲ್ಲ ಜನರಿಗೂ ಅನ್ವಯಿಸುತ್ತದೆ. ಇಂಥ ಸಂದರ್ಭದಲ್ಲಿ ಕುಡಿಯುವ ನೀರನ್ನು ಸಂಪೂರ್ಣವಾಗಿ ಒದಗಿಸುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಇವತ್ತು ನಮಗೆ ಒಳ್ಳೆಯ ಹವೆ ಪ್ರತಿ ದಿವಸ ಸಿಗುತ್ತಿಲ್ಲ. ಸಾಯಂಕಾಲ ಅಥವಾ ಬೆಳಗಿನ ಸಮಯದಲ್ಲಿ ಓಡಾಡಿದರೆ ಒಳ್ಳೆಯ ಹವೆಯೊಂದಿಗೆ ಉಸಿರಾಡಬಹುದೇ ಹೊರತು, ಬೇರೆ ಸಮಯದಲ್ಲಿ ನಮಗೆ ಒಳ್ಳೆಯ ಹವೆ ಸಿಗುತ್ತಿಲ್ಲ ಪೌಷ್ಟಿಕ ಆಹಾರ ಕೂಡ ಕಡಿಮೆ ಬೆಲೆಗೆ ಸಿಗುವುದಿಲ್ಲ ಸಿಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳನ್ನು ಆರೋಗ್ಯ ಇಲಾಖೆಯೊಂದೇ ನಿವಾರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದರೊಂದಿಗೆ ಬೇರೆ ಬೇರೆ ಇಲಾಖೆಗಳು ಸಹಕರಿಸಿ ಕೆಲಸ ಮಾಡಬೇಕಾಗುತ್ತದೆ ರೋಗ ರುಜಿನಗಳು ಬರುವುದಕ್ಕೆ ಬಹುಮುಖ್ಯವಾದ ಕಾರಣವೆಂದರೆ ಸುತ್ತಮುತ್ತಲಿನ ವಾತಾವರಣ ಹಾಗೂ ಕುಡಿಯುವ ನೀರ ; ಇವು ಅಪಾಯಕಾರಿ ಆದಾಗ ಸಾಮಾನ್ಯವಾಗಿ ಇದರಿಂದ ಯಾವ ವ್ಯಕ್ತಿಯೂ ಸಹ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈಗಿನ ಹೊಸ ವ್ಯವಸ್ಥೆ ಪ್ರಕಾರ ಅಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ತಿಗಳ ಕಾನೂನಿನಲ್ಲಿ ಜನರಿಗೆ ಒಳ್ಳೆಯ ಆರೋಗ್ಯ ಒದಗಿಸಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಅದೇ ರೀತಿ ಪುರಸಭೆಗಳು, ಮುನಿಸಿಪಾಲಿಟಿಗಳು ಕಾರ್ಪೊರೇಷನ್‌ಗಳು ಈ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಕಾನೂನು ಮಾಡಿದ್ದೇವೆ.ಒಂದು ವಿಚಾರ ಹೇಳುವುದಾದರೆ ಅದು ಸಣ್ಣದಾಗಿ ಕಾಣಬಹುದು.ನಾನು ಸಾಮಾನ್ಯವಾಗಿ ಹೊನ್ನಾವರದಲ್ಲಿರುತ್ತೇನೆ.ಅಲ್ಲಿ ಬಿಟ್ಟರೆ ಬೆಂಗಳೂರಿನಲ್ಲಿರುತ್ತೇನೆ ಮತ್ತೆ ಬೇರೆ ಕಡೆ ಇರುವುದಿಲ್ಲ. ಬೆಂಗಳೂರಿನಲ್ಲಿ ಎಲ್ ಹೆಚ್.ನಲ್ಲಿ ಸೊಳ್ಳೆಗಳು ಬರುವುದಿಲ್ಲ. ರಾತ್ರಿ ಒಂದೆರಡು ಬರುತ್ತವೆ. ಹೊನ್ನಾವರ ಮತ್ತು ಕುಮಟಾದಲ್ಲಿ ೫-೬ ವರ್ಷಗಳ ಹಿಂದೆ ಸೊಳ್ಳೆಗಳೇ ಇರಲಿಲ್ಲ. ಈಗ ನೋಡಿದರೆ ಸೊಳ್ಳೆಗಳ ಕಾಟ ಜಾಸ್ತಿಯಾಗಿ, ಅವುಗಳು ವಿಜೃಂಭಿಸುತ್ತವೆ. ಅವುಗಳನ್ನು ಹಾಗೆ ಬಿಟ್ಟರೆ ಮುಂದೆ ಸಣ್ಣ ಗುಬ್ಬಚ್ಚಿ ತರ ಆಗಬಹುದು. ಅವುಗಳನ್ನು ನಾಶ ಮಾಡಲು ಔಷಧಿ ಹೊಡೆಯುವವರು ಇಲ್ಲ. ಮೈಗೆಲ್ಲಾ ಬಟ್ಟೆ ಮುಚ್ಚಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಸೊಳ್ಳೆಗಳ ಹಾವಳಿ ನಮ್ಮಲ್ಲಿ ಜಾಸ್ತಿ ಆಗಿದೆ. ಸಾಮಾನ್ಯವಾಗಿ ಮಳೆಗಾಲದಲ್ಲೂ ಕರಾವಳಿ ಪ್ರದೇಶದಲ್ಲಿ ಹವಾಮಾನ ಬಿಸಿ ಇರುತ್ತದೆ. ಮಳೆ ಬರುತ್ತಿದ್ದರೂ ಶಕೆ ಆಗುತ್ತಿರುತ್ತದೆ. ಆದ್ದರಿಂದ ಕರ್ಟನ್ ಹಾಕಿಕೊಂಡು ಮಲಗುವುದಕ್ಕೆ ಆಗುವುದಿಲ್ಲ. ಹಾಕಿಕೊಂಡರೆ ಗಾಳಿ ಬರುವುದಿಲ್ಲ. ಆಗ ನಿದ್ದೆ ಮಾಡುವುದು ಬಹಳ ಕಷ್ಟ ಆಗುತ್ತದೆ. ಪ್ರಜಾವಂತರಿಗೆ ಸೊಳ್ಳೆ ಕಡಿದರೆ ಮಲೇರಿಯಾ ಬರುತ್ತೆ. ಫೈಲೇರಿಯಾ ರೋಗ ಬರುತ್ತೆ ಎನ್ನುವ ಸಮಸ್ಯೆ ಬೇರೆ ಇದೆ. ಹೀಗೆ ನಾನಾ ರೋಗಗಳು ಬರುವ ಭಯ ನಮಗೆ ಬಂದಿದೆ. ಆದ್ದರಿಂದ ಇದು ನಿಮ್ಮ ಕಕ್ಷೆಯಲ್ಲಿ ಬರುವುದರಿಂದ ಸೊಳ್ಳೆ ಕಾಟವನ್ನು ತಪ್ಪಿಸುವುದಕ್ಕೆ ಆಯಾ ಪುರಸಭೆಗಳ ಸಹಾಯದಿಂದ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗ ತಾವು ಬೆಲ್ಲು ಹೊಡೆದಿರಿ. ನನಗೆ ಹೊಡೆದಿರೋ ಅಥವಾ ಬೇರೆ ಯಾರಿಗಾದರೂ ಹೊಡೆದಿರೋ?

ಅಧ್ಯಕ್ಷರು.— ಯಾರಿಗೆ ಅನ್ವಯಿಸುತ್ತೋ ಅವರಿಗೆ. ೧೫ ನಿಮಿಷ ಆಯಿತು. ಇನ್ನು ೫ ನಿಮಿಷದಲ್ಲಿ ಮುಗಿಸಿ.

ಶ್ರೀ ಆರ್. ಎನ್. ನಾಯಕ್.— ಈಗ ಸ್ವಲ್ಪ ನನಗೆ ದಾರಿ ತಪ್ಪಿಹೋಯಿತು.

ಅಧ್ಯಕ್ಷರು.— ನೀವು ಸೊಳ್ಳೆಗೆ ಹೋಗಿದ್ದೀರಿ ಅದಕ್ಕೋಸ್ಕರ ನಿಮ್ಮನ್ನು ಆರೋಗ್ಯ ಇಲಾಖೆಯ ಕಡೆಗೆ ಕರೆದುಕೊಂಡು ಬರುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.— ಸ್ವಾಮಿ, ಈ ಸೊಳ್ಳೆ ಸಣ್ಣ ಪ್ರಾಣಿ ಆದರೂ ಸಹ ಅಷ್ಟೇ ಅಪಾಯಕಾರಿಯಾಗಿದೆ. ಈ ಹಿಂದೆ ಮಾನ್ಯ ರಾಚಯ್ಯನವರು ಆರೋಗ್ಯ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಸರಿಯಾಗಿ ಉತ್ತರ ಕೊಟ್ಟಿದ್ದರು, ಬೆಂಗಳೂರು ಸುತ್ತಮುತ್ತ ಮತ್ತು ವಿಮಾನ ನಿಲ್ದಾಣದಲ್ಲಿರುವ ಸೊಳ್ಳೆಗಳ ನಿವಾರಣೆಗೆ ವಿಶೇಷ ರೀತಿಯಲ್ಲಿ ಔಷಧಿಗಳನ್ನು ಸಿಂಪಡಿಸುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು. ಅದರ ಫಲಶೃತಿ ಏನಾಯಿತೋ ಗೊತ್ತಿಲ್ಲ. ಸೊಳ್ಳೆಗಳನ್ನು ನಾಶ ಮಾಡಿದರೋ ಇಲ್ಲವೋ ಗೊತ್ತಿಲ್ಲ, ಈ ಬಗ್ಗೆ ತಮ್ಮ ಅಧಿಕಾರಿಗಳನ್ನು ಕೇಳಿ ಉತ್ತರ ಕೊಡುತ್ತೀರೆಂದು

ನಾನು ಭಾವಿಸಿದ್ದೇನೆ. ಇನ್ನು ಆಸ್ಪತ್ರೆಗಳ ವ್ಯವಸ್ಥೆಯ ಬಗ್ಗೆ ಸ್ವಲ್ಪ ತಾವು ನೋಡಬೇಕು. ಈಗ ಸುಮಾರು ಎರಡು ಸಾವಿರ ರೂಪಾಯಿಗಳಷ್ಟು ಔಷಧವನ್ನು ಹಳ್ಳಿಗಳಿಗೆ ಏನು ಕೊಡುತ್ತಿದ್ದಾರೆ, ಅದು ಸಾಕಾಗುವುದಿಲ್ಲ, ಮತ್ತು ತಾಲ್ಲೂಕುಮಟ್ಟಕ್ಕೆ ಒಂದು ನಿರ್ದಿಷ್ಟ ಪ್ರಮಾಣದ ಔಷಧ ಏನು ಕೊಡುತ್ತಾರೆ, ಅದೂ ಸಹ ಸಾಕಾಗುವುದಿಲ್ಲ ಎಂದು ಎಲ್ಲರೂ ಹೇಳುತ್ತಾರೆ. ಅದರ ಜೊತೆಗೆ ನೀವು ಕೊಡತಕ್ಕ ಔಷಧ ಏನಿರುತ್ತದೆ. ಅದು ಬೇರೆ ಇರುತ್ತದೆ. ಡಾಕ್ಟರ್ ಇಂಡೆಂಟ್ ಹಾಕಿರತಕ್ಕ ಔಷಧಿಯೇ ಬೇರೆ ಇರುತ್ತದೆ, ತಾವೇ ಬೇರೆಯದನ್ನು ಸಪ್ಲೈ ಮಾಡುತ್ತೀರಿ ಎಂದು ನಾನು ಕೇಳಿದ್ದೇನೆ. ಈಗ ತಾವು ಬೆಂಗಳೂರು ಲೆವೆಲ್‌ನಿಂದ ಕಳುಹಿಸಿರುತ್ತೀರಿ, ಅಲ್ಲಿಯ ಪರಿಸ್ಥಿತಿಗೆ ತಕ್ಕಂತೆ ಔಷಧಿ ಇರುವುದಿಲ್ಲ. ಅಲ್ಲಿಯ ಜನರಿಗೆ ಬೇಕಾದ ಔಷಧವೇ ಬೇರೆ, ಆದರೆ ನೀವು ಸಪ್ಲೈ ಮಾಡತಕ್ಕ ಔಷಧವೇ ಬೇರೆ ಆಗಿರುತ್ತದೆ. ಈಗ ತಾವು ಎರಡು ಸಾವಿರ ರೂಪಾಯಿ ಔಷಧ ಏನು ಕೊಡುತ್ತೀರಿ, ಅದು ಆಯಾ ಹಳ್ಳಿಯಲ್ಲಿರುವಂಥ ಆಯಾ ಊರಿನಲ್ಲಿರುವಂಥ ಡಾಕ್ಟರು ಅವರು ಹೇಳುವಂಥ ಔಷಧಗಳನ್ನೇ ಕೊಡುವಂಥ ವ್ಯವಸ್ಥೆ ಮಾಡಿಕೊಂಡು ಬಂದರೆ ಜನರಿಗೆ ಒಳ್ಳೆಯದಾಗುತ್ತದೆ. ಈಗ ಅಲ್ಲಿ ಮೂರು ನಾಲ್ಕು ಬಾಟಲುಗಳಲ್ಲಿ ೩-೪ ತರಹದ ಬಣ್ಣದ ಔಷಧ ಇಟ್ಟಿರುತ್ತಾರೆ. ಯಾರಾದರೂ ಔಷಧ ತೆಗೆದುಕೊಳ್ಳಬೇಕಾದರೆ ನಂಬಿಕೆಯಿಂದ ತೆಗೆದುಕೊಳ್ಳಬೇಕು ಆದರೆ ಅದರಿಂದ ಗುಣ ಆಗುತ್ತದೆ ಎನ್ನುವುದು ಕಂಡುಬರುವುದಿಲ್ಲ. ಈಗ ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಸಾಕಷ್ಟು ವಿಷಯಗಳು ನನ್ನ ಹತ್ತಿರ ಇವೆ. ಇನ್ನು ಮೆಡಿಕಲ್ ಕಾಲೇಜು ಡೊನೇಷನ್ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಡೊನೇಷನ್ ಕೊಟ್ಟು ಬಂದರೂ ಸಹ ಸರಿಯಾದಂಥ ಸ್ಟ್ಯಾಂಡರ್ಡ್ ವಿದ್ಯೆ ಸಿಕ್ಕುವುದಿಲ್ಲ. ಈ ಪದ್ಧತಿಯನ್ನು ನಾನು ಸಹ ನೂರಕ್ಕೆ ನೂರರಷ್ಟು ವಿರೋಧಿಸಬೇಕಾಗಿದೆ. ಈಗ ನಾಲ್ಕು ಸರ್ಕಾರಿ ಮತ್ತು ೧೪ ಖಾಸಗಿ ಕಾಲೇಜುಗಳು ಏಸಿವೆ ಅಲ್ಲಿ ಕೆಲವನ್ನು ಬಿಟ್ಟರೆ, ಯಾವುದಕ್ಕೂ ಸರಿಯಾದ ಸ್ಟ್ಯಾಂಡರ್ಡ್ ಇಲ್ಲ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಸ್ಟ್ಯಾಂಡರ್ಡ್ ಅವಕ್ಕೆ ಇಲ್ಲ ಎಂಬುದು ತಿಳಿದು ಬಂದಿದೆ. ಈ ಕಾಲೇಜುಗಳನ್ನು ನಡೆಸುವವರು, ತಮ್ಮ ಸ್ವಂತ ಆಸ್ಪತ್ರೆಗಳನ್ನು ಕಟ್ಟಿಕೊಂಡಿರಬೇಕು. ಇಷ್ಟೇ ಬೆಡ್‌ಗಳಿರಬೇಕೆಂದು ನಿಯಮಗಳನ್ನು ಏನು ಮಾಡಿರುತ್ತಾರೆ, ಅದರಲ್ಲಿ ೭೫ ಪರ್‌ಸೆಂಟ್ ಆದರೂ ಈ ಖಾಸಗಿ ಮೆಡಿಕಲ್ ಕಾಲೇಜುಗಳನ್ನು ನಡೆಸುವವರು ಪೂರೈಸಿದ್ದಾರೆಂದು ತಮಗೆ ಏನಾದರೂ ತಿಳಿದುಬಂದಿದೆಯೋ? ಅದರ ಬಗ್ಗೆ ತಾವು ಇನ್ಸಿಸ್ಟ್ ಮಾಡಿ ಏನೇನು ನಿಯಮಗಳು ಇವೆ ಅವುಗಳನ್ನು ಪೂರೈಸಲಿಕ್ಕೆ ತಾವು ಹೇಳಬೇಕು. ಅವುಗಳನ್ನು ಅವರು ಪೂರೈಸಲಿಲ್ಲ ಅಂದರೆ ಆ ಕಾಲೇಜುಗಳನ್ನಾದರೂ ತಾವು ಸ್ವಲ್ಪ ಬಂದ್ ಮಾಡಿಸಿದರೆ ಒಳ್ಳೆಯದು. ಅಲ್ಲಿ ಒಳ್ಳೆಯ ಸ್ಟ್ಯಾಂಡರ್ಡ್ ಡಾಕ್ಟರುಗಳು ತಯಾರಾಗದೆ ಹೋದರೆ ಎರಡು ಸಾವಿರ ಇಸವಿಯ ಹೊತ್ತಿಗೆ ತಾವು ಏನು ಎಲ್ಲರಿಗೂ ಆರೋಗ್ಯ ಕೊಡುತ್ತೇವೆಂದು ಹೇಳುತ್ತೀರಿ ಅದು ಸಾಧ್ಯವಾಗುವುದಿಲ್ಲ. ಆಗ ಇಲಾಖೆಗೇ ಅನಾರೋಗ್ಯ ಬರುವ ಸಾಧ್ಯತೆ ಕಂಡುಬರುತ್ತದೆ. ಆದ್ದರಿಂದ ಈ ಶಿಕ್ಷಣದ ಮಟ್ಟವನ್ನು ಏರಿಸುವುದಕ್ಕೆ ಸಂಪೂರ್ಣವಾದ ಪ್ರಯತ್ನವನ್ನು ಮಾಡಲೇ ಬೇಕಾಗುತ್ತದೆ. ಇದನ್ನು ತಾವು ಮಾಡದೇ ಹೋದರೆ ಖಂಡಿತ ಉಪಯೋಗವಾಗುವುದಿಲ್ಲ. ಈ ರಾಜ್ಯಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ. ೫೦ ಪರ್‌ಸೆಂಟ್ ಜನ ಹೊರ ರಾಜ್ಯದವರು ಬರುತ್ತಾರೆ. ಹೊರ ರಾಜ್ಯದ ವಿದ್ಯಾರ್ಥಿಗಳು ಇಲ್ಲಿ ಬಂದು ಸೇರಿಕೊಂಡ ಮೇಲೆ ಅವರಿಗೆ ಈ ಸ್ಟ್ಯಾಂಡರ್ಡ್‌ನ ಡಾಕ್ಟರ್‌ಗಳನ್ನಾಗಿ ಮಾಡಿ ಕಳುಹಿಸಿದರೆ ಅವರಿಗೆ ಅಲ್ಲಿ ಏನು ಬೆಲೆ ಸಿಕ್ಕಬಹುದು? ಕರ್ನಾಟಕದಲ್ಲಿ ಯಾರು ಯಾರು ಮೆಡಿಕಲ್ ಓದುತ್ತಿರುತ್ತಾರೆ, ಅವರು ಏನೂ ಪ್ರಯೋಜನ ಇಲ್ಲ ಎನ್ನುವ ನಿರ್ಧಾರಕ್ಕೆ ಬರುವ ಸಂದರ್ಭ ಬರದೇ ಇದ್ದಹಾಗೆ ಈ ಇಲಾಖೆ ಸಂಪೂರ್ಣವಾದ ಎಚ್ಚರಿಕೆಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಈಗ ಈ ಡಾಕ್ಟರುಗಳ ಮೇಲೆ ಮತ್ತೊಂದು ದೂರು ಏನಿದೆ ಅಂದರೆ ಈ ವೈದ್ಯರುಗಳು ಕೆಲವೊಂದು ಹಳ್ಳಿಗಳಿಗೆ, ಅಥವಾ ಕೆಲವೊಂದು ತಾಲ್ಲೂಕುಗಳಿಗೆ ಹೋಗುವುದಕ್ಕೆ ಒಪ್ಪುವುದಿಲ್ಲ ಎನ್ನುವ ದೂರು ಇದೆ. ಅದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಅವರು ಅಲ್ಲಿಗೆ ಹೋಗಬೇಕೆಂದರೆ ಕೊನೇ ಪಕ್ಷ ಒಂದು ವ್ಯವಸ್ಥಿತವಾದಂಥ ಮನೆ ಬೇಕಾಗುತ್ತದೆ. ತಾವು ಅವರಿಗೆ ಅಷ್ಟು ವ್ಯವಸ್ಥೆ ಕೊಡದೇ ಹೋದರೆ, ಅವರ ಮಕ್ಕಳು ಸ್ಕೂಲಿಗೆ ಹೋಗಲಿಕ್ಕೆ ಸೌಲಭ್ಯ ಒದಗಿಸಿಕೊಡದೇ ಇದ್ದರೆ ಡಾಕ್ಟರುಗಳು ಹಳ್ಳಿಗಳಿಗೆ ಹೋಗದೇ ಇರುವುದೇ ಸರಿ ಎಂದು ನಾವೂ ಸಹ ಹೇಳಬಹುದು. ಅವರುಗಳಿಗೂ ಸಹ ಈ ತರಹದ ಸಮಸ್ಯೆಗಳು ಇವೆ. ಈಗ ನಾವೇನು ಮಾಡಿದ್ದೇವೆ. ಈ ಆರೋಗ್ಯ ಇಲಾಖೆ ಹೆಚ್ಚಿನ ಜವಾಬ್ದಾರಿಯನ್ನು ಜಿಲ್ಲಾ ಪರಿಷತ್ ಗೆ ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೆ, ಇದರ ಬಗೆ ತಾವು ಪರಿಶೀಲಿಸಿ ನೋಡಬೇಕಾಗುತ್ತದೆ. ಇವೊತ್ತು ಯಾವುದೇ ಆಸ್ಪತ್ರೆಗಳನ್ನು ನೋಡಿದರೂ ಸರಿಯಾಗಿ ರಿಪೇರಿಯಾಗಿರುವುದಿಲ್ಲ. ಡಾಕ್ಟರುಗಳಿಗೆ ಸರಿಯಾದಂಥ ವಸತಿ ಸೌಕರ್ಯಗಳಿರುವುದಿಲ್ಲ. ಅವರ ಸಿಬ್ಬಂದಿಗಳಿಗೂ ಸಹ ವ್ಯವಸ್ಥಿತವಾದಂಥ ಮನೆಗಳು ಇರುವುದಿಲ್ಲ. ಹಳ್ಳಿಗಳಲ್ಲಿರತಕ್ಕಂಥ ಮನೆಗಳಿಗೆ ಕಿಟಕಿ, ಬಾಗಿಲುಗಳು ಸರಿಯಾಗಿ ಇರುವುದಿಲ್ಲ.

ಅಲ್ಲಿರತಕ್ಕ ಮನೆಗಳಿಗೆ ಏನಾದರೂ ಸ್ವಲ್ಪ ಸಣ್ಣ ಪುಟ್ಟ ರಿಪೇರಿ ಮಾಡಿಸಿಕೊಡುವಂಥಾದ್ದು ಏನಾದರೂ ಇದ್ದರೆ ಅದನ್ನು ಜಿಲ್ಲಾ ಪರಿಷತ್‌ನವರಿಗೆ ಹೇಳಿದರೆ, ಅವರು ಪಿ ಡಬ್ಲ್ಯು.ಡಿ. ಇಂಜಿನಿಯರ್ ಕಡೆ ಹೇಳಿ ಎಂದು ಹೇಳುತ್ತಾರೆ. ಪಿ.ಡಬ್ಲ್ಯು.ಡಿ. ಇಂಜಿನಿಯರ್‌ಗೆ ಹೇಳಲಿಕ್ಕೆ ಹೋದರೆ ನೀವು ಜಿಲ್ಲಾ ಪರಿಷತ್‌ನವರಿಗೆ ಹೇಳಿ ಎಂದು ಹೇಳುತ್ತಾರೆ. ಈ ತರಹದ ವ್ಯವಹಾರ ನಡೆಯುತ್ತಿದೆ. ಯಾರು ರಿಪೇರಿ ಮಾಡಿಸಬೇಕೆಂಬುದು ಇನ್ನೂ ನಿರ್ಧಾರ ಆಗಿಲ್ಲ

ಜಿಲ್ಲಾ ಪರಿಷತ್ ಸಭೆಯಲ್ಲೂ ಕೂಡ ನಾನು ಮಾತನಾಡಿದ್ದೇನೆ. ಅಲ್ಲಿ ಮಾತನಾಡಿದ್ದಷ್ಟೇ ಹೊರತು ಬೇರೇನೂ ಆಗಿಲ್ಲ. ಇನ್ನು ಕೆಲವು ಜಿಲ್ಲಾ ಪರಿಷತ್‌ಗಳಂತೂ ತಾವೇ ಸ್ವತಃ ಸೈನ್ ಹಾಕಿಕೊಳ್ಳುವುದು ಒಂದು ಬಾಕಿ ಇದೆ. ಅವರದ್ದೇ ಒಂದು ದೇಶವನ್ನಾಗಿ ಮಾಡಿಕೊಂಡು ಅವರು ಯಾರ ಮಾತೂ ಕೇಳುವ ಹಾಗಿಲ್ಲ ಆ ರೀತಿಯಾಗಿದೆ. ಉತ್ತರ ಕನ್ನಡದ ಜಿಲ್ಲಾ ಪರಿಷತ್ ಅಂತೂ ಒಂದು ಸೈನ್ ಹಾಕಿಕೊಟ್ಟರೆ ನಾವೇ ಮಾಡಿಕೊಳ್ಳುತ್ತೇವೆಂದು ಹೇಳುವ ಮಟ್ಟದಲ್ಲಿದ್ದಾರೆ. ಅದೇ ಬೇರೆ ಇಂಡಿಪೆಂಡೆಂಟ್ ದೇಶ ಆಗಿದೆ. ಅಂದರೆ ಕಾರವಾರವೇ ಒಂದು ದೇಶವಾಗುವ ವ್ಯವಸ್ಥೆ ಅಲ್ಲಿ ಇದೆ. ಇದನ್ನು ರಿಪೇರಿ ಮಾಡುವ ಹಾಗೇ ಇಲ್ಲ ಈಗ ಡಾಕ್ಟರ್‌ಗಳು ಅವರ ಹತೋಟಿಯಲ್ಲಿದ್ದಾರೆ. ಅವರಿಗಾಗಿ ಕಟ್ಟಿಸಿರುವ ಮನೆಗಳು ಕೂಡ ಅವರ ಹತೋಟಿಯಲ್ಲಿವೆ. ಆದರೆ ಅದನ್ನು ರಿಪೇರಿ ಮಾಡುವುದಕ್ಕೆ ತಮ್ಮಲ್ಲಿ ದುಡ್ಡಿಲ್ಲವೆಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ.— ಆ ಕಟ್ಟಡಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಟ್ಟಿಲ್ಲ. ಸರ್ಕಾರದ ವಶದಲ್ಲಿಯೇ ಇದೆ. ಪ್ರೊಸೀಜರ್‌ನಲ್ಲಿ ಏನು ಇದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಅದು ಆಗದೇ ಇರುವ ಕಾರಣದಿಂದಾಗಿ ಇಂತಹ ಪರಿಸ್ಥಿತಿ ಉದ್ಭವವಾಗಿದೆ. ಈ ಆಸ್ಪತ್ರೆಗಳಿಗೆ ಸೇರಿದ ಕಟ್ಟಡಗಳನ್ನು ಜಿಲ್ಲಾಪರಿಷತ್ತಿಗೆ ವಹಿಸಿಕೊಡುವ ಕೆಲಸ ಇನ್ನು ಆಗಿಲ್ಲ.

ಶ್ರೀ ಆರ್. ಎನ್. ನಾಯಕ್.— ಜಿಲ್ಲಾ ಪರಿಷತ್ತಿಗೆ ವಹಿಸಿಕೊಡದಿದ್ದರೆ ಅವರನ್ನು ಕೇಳುವ ಕೆಲಸ ನಮಗೆ ತಪ್ಪುತ್ತದೆ. ಹಾಗಿದ್ದರೆ ಲೋಕೋಪಯೋಗಿ ಇಲಾಖೆಯವರು ರಿಪೇರಿ ಮಾಡಬೇಕು. ಆದರೆ ಅವರನ್ನು ಕೇಳಿದರೆ ಜಿಲ್ಲಾ ಪರಿಷತ್ತಿನವರನ್ನು ಕೇಳಿ ಎಂದು ಹೇಳುತ್ತಾರೆ. ಉದಾಹರಣೆಗೆ ಹೇಳುವುದಾದರೆ ಭಟ್ಕಳದ ಶವಾಗಾರದಲ್ಲಿ ಒಂದು ಶವ ಬಂದರೆ ಎರಡು ದಿನ ಕಾಯಬೇಕಾಗುತ್ತದೆ. ಅಷ್ಟು ಹೊತ್ತಿಗೆ ಒಂದು ಮಾಂಸದ ತುಂಡನ್ನು ಕಾಗೆ ಎತ್ತಿಕೊಂಡು ಹೋದರೆ ಅದೇ ಒಂದು ದೊಡ್ಡ ರಾಜಕಾರಣವಾಗುತ್ತದೆ. ಇದರಿಂದ ಅಲ್ಲಿನ ವೈದ್ಯರಿಗೆ ಕೂಡ ಕಷ್ಟ ಇದೆ. ಒಂದೇ ಸಲ ಎಲ್ಲಿ ಕಟ್ಟಡಗಳಿಗೂ ಸುಣ್ಣ ಬಣ್ಣ ಮಾಡಿಸಿ ಎಂದು ನಾನು ಹೇಳುವುದಿಲ್ಲ. ಆದರೆ ಹಂತ ಹಂತವಾಗಿ ಆದರೂ ಮಾಡಿಸಿ ಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಇನ್ನು ವರ್ಗಾ ವರ್ಗಿಯ ವಿಚಾರದ ಬಗ್ಗೆ ಹೇಳುವುದಾದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಸರಕಾರ ವರ್ಗಾವರ್ಗಿಯ ವಿಚಾರದಲ್ಲಿ ಮಾಡಿದ್ದೆಲ್ಲಾ ಸರಿಯಿಲ್ಲವೆಂದು ವಿರೋಧ ಪಕ್ಷದವರು ಮತ್ತು ನಮ್ಮ ಪಕ್ಷದ ಹಲವು ಸದಸ್ಯರು ಸಹ ಹೇಳಿದರು. ಈಗ ಜಿಲ್ಲಾ ಪರಿಷತ್ತುಗಳ ಅಧಿಕಾರ ನಿಮ್ಮ ಪಕ್ಷದವರ ಕೈಯಲ್ಲಿ ಇದೆ, ಅಲ್ಲಿ ಏನು ಮಾಡುತ್ತಿದ್ದಾರೆಂಬುದು ನಿಮಗೆ ಗೊತ್ತಾಗುತ್ತಿಲ್ಲ. ಇವೊತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ನೋಡಿದೆ, ೧ನೇ ತಾರೀಖಿನೊಳಗೆ ವರ್ಗಾವರ್ಗಿಯನ್ನು ಮುಗಿಸಬೇಕೆಂಬ ನಿಯಮ ಇದೆ. ಆದರೆ ಅವರ ವರ್ಗಾವರ್ಗಿ ಮುಗಿದಿಲ್ಲ. ೩ನೇ ತಾರೀಖು ಇನ್ನೊಂದು ಸರ್ಕ್ಯುಲರ್ ಅನ್ನು ಈ ಬಗ್ಗೆ ಜಿಲ್ಲಾಪರಿಷತ್ತಿನ ಸೆಕ್ರೆಟರಿಯವರಿಗೆ ಕಳುಹಿಸಿಕೊಟ್ಟಿದ್ದರೂ ಸಹ ಅವರು ವರ್ಗಾವರ್ಗಿಯನ್ನು ಮಾಡುತ್ತಲೇ ಇದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಡಿ. ಹೆಚ್. ಒ. ಅವರು ೨ನೇ ತಾರೀಖು ಹಾಕಿ ವರ್ಗಾವರ್ಗಿ ಮಾಡಿದ್ದಾರೆ ಇದರ ಬಗ್ಗೆ ನಾನು ಮಾನ್ಯ ಮಂತ್ರಿಯವರಿಗೆ ಬರೆದು ಕಳಿಸಿದ್ದೇನೆ. ಅವರು ಏನು ಕ್ರಮ ತೆಗೆದು ಕೊಳ್ಳುತ್ತಾರೆಂಬುದನ್ನು ಕಾದು ನೋಡಬೇಕು. ಬರೀ ಆರೋಗ್ಯ ಇಲಾಖೆಯಲ್ಲಿ ಮಾತ್ರ ಅಲ್ಲ, ಬೇರೆ ಇಲಾಖೆಯಲ್ಲೂ ಸಹ ಈ ಕಾನೂನು ಬಾಹಿರವಾದ ವರ್ಗಾವರ್ಗಿಯನ್ನು ಮಾಡುತ್ತಿದ್ದಾರೆ. ಇದನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸದೇ ಹೋದರೆ ಆರೋಗ್ಯ ಇಲಾಖೆಯಲ್ಲಿ ಯಾರಿಗೂ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ, ಆರೋಗ್ಯ ಇಲಾಖೆ ಮಾತ್ರವಲ್ಲ, ವಿದ್ಯಾ ಇಲಾಖೆ ಲೋಕೋಪಯೋಗಿ ಇಲಾಖೆ ಹೀಗೆ ಯಾವ ಇಲಾಖೆಯಲ್ಲಿಯೂ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಭಟ್ಕಳದ ಸರಕಾರೀ ಆಸ್ಪತ್ರೆಗೆ ಸೇರಿದಂತೆ ೧೩ ಎಕರೆ ೯ ಗುಂಟೆ ಜಾಗ ಇದೆ, ಇದು ಕಂದಾಯ ಇಲಾಖೆಯಿಂದ ಮಂಜೂರಾಗಿದೆ. ಆದರೇ ಈ ೧೩ ಎಕರೆಗೆ ಪೂರ್ಣವಾಗಿ ಒಂದು ಕಾಂಪೌಂಡ್ ವಾಲ್ ಇರಲಿಲ್ಲ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕಟ್ಟಿಕೊಂಡಿದ್ದರು. ಉಳಿದುದನ್ನು ಹಾಗೇ ಬಿಟ್ಟಿದ್ದರು. ನಾನು ೮೩ನೇ ಇಸವಿಯಲ್ಲಿ ಶಾಸಕನಾಗಿ ಬರುವುದಕ್ಕೆ ಮೊದಲೇ ೧೫ ದಿವಸಗಳ ಮೊದಲೇ ವಿ. ಹೆಚ್. ನಾಯಕ್ ಎಂಬ ತಹಸೀಲ್ದಾರ್‌ರವರು ಅಲ್ಲಿ ೬-೮ ಸೈಟ್‌ಗಳನ್ನು ಮಾಡಿ ಅಂದರೆ ಆ ಕಾಂಪೌಂಡ್‌ನ ಒಳಗಡೆಯೇ ಮಾಡಿ

ಅದನ್ನು ಶ್ರೀಮಂತರಿಗೆ ಕೊಟ್ಟರು. ವಿಲೇಜ್ ಅಕೌಂಟೆಂಟ್ ಅವರಿಂದ ಹಿಡಿದು ಡಿ.ಸಿ. ಲೆವೆಲ್‌ವರೆಗೆ ಹೋಗಿ ಇದು ಮಂಜೂರಾಯಿತು. ಇದು ನನಗೆ ತಿಳಿದ ಮೇಲೆ ಇಲ್ಲಿ ಬಂದು ಆ ಬಗ್ಗೆ ಮಾನ್ಯ ವಿ. ಎಲ್. ಪಾಟೀಲರ ಜೊತೆ ಕಾದಾಡಿ, ಕಾದಾಡಿ ಸಾಕಾಯಿತು. ಆಗ ನಾನು ಹೇಳುವುದು ಅವರಿಗೆ ತಿಳಿಯುವುದಿಲ್ಲ, ಅವರು ಹೇಳಿದ್ದು ನನಗೆ ತಿಳಿಯುವುದಿಲ್ಲ, ಹಾಗಾಯಿತು. ಏಕೆಂದರೆ ಆಗ ನಾನು ಇನ್ನೂ ಈ ಮನೆಗೆ ಹೊಸಬ. ಅಂತೂ ಹೇಗೋ ಆಗಿ ಕೊನೆಗೆ ಇದು ಅವರ ಕೈಗೆ ಹೋಗದೆ ಹಾಗೆಯೇ ಉಳಿಯಿತು. ಮೊನ್ನೆ ಮಾನ್ಯ ರಾಷ್ಟ್ರಪತಿಯವರ ಆಡಳಿತ ನಮ್ಮ ರಾಜ್ಯಕ್ಕೆ ಬಂದಾಗ ರೆವಿನ್ಯೂ ಅಧಿಕಾರಿಗಳು ಬದಲಾದರು. ಅಲ್ಲಿಗೆ ಮಹದೇವಯ್ಯ ಎನ್ನತಕ್ಕ ತಹಸೀಲ್ದಾರ್‌ರವರು ಬಂದರು. ಈ ಸೈಟುಗಳು ಅಷ್ಟೇ ಅಲ್ಲದೆ ಉಳಿದ ಜಾಗದಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳುವುದಕ್ಕೆ ನಮ್ಮ ಆಸ್ಪತ್ರೆಯ ಸುತ್ತಲೂ ವ್ಯವಸ್ಥೆ ಮಾಡಿದ್ದಾರೆ. ಈಗ ಆ ಆಸ್ಪತ್ರೆಯನ್ನು ದೊಡ್ಡದು ಮಾಡಬೇಕಾಗಿದೆಯೆಂದು ಹೇಳಿದರು. ಇದನ್ನು ಮಾಡಬೇಕಾದರೆ ಭಟ್ಕಳ್‌ನಲ್ಲಿ ಮಾಡಬೇಕಾಗುತ್ತದೆ. ಆದರೆ ಅದಕ್ಕೆ ಅಲ್ಲಿ ಜಾಗ ಎಲ್ಲಿದೆ ? ಈ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಈಗ ಆ ಜಾಗವನ್ನು ರೆವಿನ್ಯೂ ಅಧಿಕಾರಿಗಳು ನುಂಗಿ ನೀರು ಕುಡಿದಿದ್ದಾರೆ ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದೆ, ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದೆ ಅಲ್ಲಿಯ ಅಸಿಸ್ಟೆಂಟ್ ಕಮೀಷನರ್‌ರವರ ಜೊತೆಯಲ್ಲಿ ಮಾತನಾಡಿದೆ. ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಇದು ತೀರ್ಮಾನಕ್ಕೆ ಬಂತು, ಇಷ್ಟಾದರೂ ಕೂಡ ಅಲ್ಲಿ ಇನ್ನೂ ಕಟ್ಟಡಗಳು ಆಗುತ್ತಲೇ ಇವೆ. ಸ್ವಾಮಿ, ಸರ್ಕಾರಿ ಆಸ್ಪತ್ರೆಯ ಜಾಗದ ಪರಿಸ್ಥಿತಿಯೇ ಹೀಗಾದರೆ ಇನ್ನು ಬೇರೆ ಜಾಗಗಳ ಗತಿ ಏನು ? ಅಲ್ಲಿ ದೇವಸ್ಥಾನ ಕಟ್ಟುವ ಬಗ್ಗೆ ನಮಗೆ ಜಾಗ ಬೇಕು, ಆಸ್ಪತ್ರೆಗೆ ಜಾಗ ಬೇಕು, ಶಾಲೆಗಳನ್ನು ಕಟ್ಟುವುದಕ್ಕೆ ನಮಗೆ ಜಾಗ ಬೇಕು. ಈ ಉದ್ದೇಶಕ್ಕೆಲ್ಲಾ ನಾವು ಜಾಗಗಳನ್ನು ಇಟ್ಟುಕೊಳ್ಳದೇ ಹೋದರೆ ಮುಂದೆ ಬರತಕ್ಕವರು ನಮ್ಮನ್ನು ಕ್ಷಮಿಸುವುದಿಲ್ಲ. ಆದ್ದರಿಂದ ನಾವು ಇದನ್ನು ರಕ್ಷಣೆ ಮಾಡಬೇಕು. ನಾನು ಭಟ್ಕಳ್‌ನ ಹುಡುಗರನ್ನೆಲ್ಲಾ ಸೇರಿಸಿ ಅವರ ಮೇಲೆ ಹೊಡೆದಾಟಕ್ಕೆ ಹೋಗುವುದಕ್ಕೆ ಸಾಧ್ಯವೇ ? ನೀವು ಕಟ್ಟಿಕೊಂಡಿರುವ ಮನೆಗಳನ್ನೆಲ್ಲಾ ಕಿತ್ತುಹಾಕಿ ಎಂದು ಹೇಳುವುದಕ್ಕಾಗುತ್ತದೆಯೇ ? ತಾವು ಯಾವುದನ್ನು ಮಾಡದಿದ್ದರೂ ಕೂಡ ನನ್ನ ಕ್ಷೇತ್ರಕ್ಕೆ ಮೊದಲು ೪ ಜನ ವೈದ್ಯರನ್ನು ಹಾಕಿ ಆಸ್ಪತ್ರೆಯ ಜಾಗ ಎಷ್ಟಿದೆ, ಅದಕ್ಕೆ ಸುತ್ತಲೂ ಬೇಲಿ ಅಥವಾ ಗೋಡೆ ಹಾಕಿಸಲು ವ್ಯವಸ್ಥೆ ಮಾಡಬೇಕು. ಯಾರ್‍ಯಾರು ಆ ಜಾಗವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ ಅವರನ್ನೆಲ್ಲಾ ಅಲ್ಲಿಂದ ಎಬ್ಬಿಸಬೇಕು. ಇದನ್ನು ಯಾವ ರೀತಿ ಮಾಡಬೇಕೆಂದು ಅಲ್ಲಿ ಒಬ್ಬ ವೈದ್ಯರು ನನ್ನನ್ನು ಕೇಳಿದರು. ಅದಕ್ಕೆ ನಾನೇನು ಹೇಳುವುದಕ್ಕೆ ಸಾಧ್ಯ ? ೨೨೪ ಜನ ಶಾಸಕರ ಮಧ್ಯದಲ್ಲಿ ನಾನೂ ಒಬ್ಬ ಶಾಸಕನಾಗಿ ಇರಬೇಕೆಂದರೂ ಅದು ಸಾಧ್ಯವಾಗುತ್ತಿಲ್ಲ. ನಾನು ಬಹಳ ಪ್ರಬಲನಾಗಿದ್ದೇನೆಂದು ಮೊದಲು ತಿಳಿದಿದ್ದೆ. ಆದರೆ ನಾನು ಏನೂ ಪ್ರಬಲನಾಗಲಿಲ್ಲ. ಹಿಂದೆ ನಾನು ಅಲ್ಲಿ ಕೂತಿದ್ದಾಗ ಪ್ರಬಲನಾಗಿದ್ದೇನೇನೋ ಎಂದು ಅನಿಸುತ್ತದೆ. ಆಗ ನನಗೆ ಬಾಯಿ ಬಲವಾಗಿತ್ತು. ನಾನು ಕೂಗಾಡಿದರೆ ಅದನ್ನು ನೋಡಿ ಬೇರೆಯವರು ಸುಮ್ಮನಿರುತ್ತಿದ್ದರು. ಆದರೆ ಈಗ ನನಗೆ ಶಕ್ತಿ ಇಲ್ಲವೆಂದು ನೀವು ತಿಳಿದುಕೊಳ್ಳಬಾರದು. ನಾನು ಬೇರೆಯವರಿಗೆ ತೊಂದರೆ ಕೊಡುವುದಿಲ್ಲ. ಈ ಆಸ್ಪತ್ರೆಗೆ ಮೀಸಲಿಟ್ಟಿರತಕ್ಕ ಜಾಗಕ್ಕೆ ಇನ್ನು ೮ ದಿವಸದಲ್ಲಿ ಬೇಲಿಯನ್ನು ಹಾಕಿಸಬೇಕು. ಅದಕ್ಕೆ ಸುಮಾರು ೪-೫ ಸಾವಿರ ರೂ. ಖರ್ಚಾಗಬಹುದು. ಈ ಹಣವನ್ನು ನೀವು ಯಾವ ಹೆಡ್‌ನಲ್ಲಾದರೂ ಮಂಜೂರು ಮಾಡಿ ಎಂದು ಹೇಳಿ ನೀವು ಬೆಲ್ ಹೊಡೆಯುವುದಕ್ಕೆ ಮುಂಚಿತವಾಗಿ, ನಿಮ್ಮ ಭಾಷಣವನ್ನು ಮುಗಿಸಿ ಎಂದು ಹೇಳುವುದಕ್ಕೆ ಪೂರ್ವದಲ್ಲೇ ನನ್ನ ಮಾತನ್ನು ಮುಗಿಸಿ ತಾವು ಬಹಳ ತಾಳ್ಮೆಯಿಂದ ನನ್ನ ಮಾತನ್ನು ಕೇಳಿದ್ದಕ್ಕೆ ತಮಗೂ ಮತ್ತು ಮಾನ್ಯ ಮಂತ್ರಿಯವರಿಗೂ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದಿರೆ).— ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಇಲಾಖೆಯ ಸಚಿವೆಯವರು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಸದನದ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಪುರಸ್ಕರಿಸುತ್ತಾ ನನ್ನ ಅನಿಸಿಕೆಗಳನ್ನು ಸಭೆಯ ಮುಂದೆ ಮಂಡಿಸಲು ತುಂಬಾ ಸಂತೋಷಪಡುತ್ತೇನೆ.

ನಮ್ಮ ಕರ್ನಾಟಕ ರಾಜ್ಯದ ಆರೋಗ್ಯ ಇಲಾಖೆಯ ಪರಿಸ್ಥಿತಿ ಬಹಳಷ್ಟು ಕನಿಕರವನ್ನು ಮೂಡಿಸುವಂಥ ಪರಿಸ್ಥಿತಿಗೆ ಬಂದವೇಳೆಯಲ್ಲಿ, ಈ ತೊಂದರೆಗಳನ್ನು ಹೋಗಲಾಡಿಸುವಂಥ ಜವಾಬ್ದಾರಿಯನ್ನು ಬಹಳಷ್ಟು ಧೈರ್ಯವಾಗಿ ಎದುರಿಸುವ...

ಅಧ್ಯಕ್ಷರು.— ಮಾನ್ಯ ಲಿಂಗಪ್ಪನವರೆ, ಮಾನ್ಯ ನಾಯಕ್‌ರವರು ಆಗಲೇ ಮಾತನಾಡುವಾಗ ತಾವು ಈಕಡೆ ಬಂದಿರಿ, ಈಗ ಮಾನ್ಯ ಸುವರ್ಣರವರು ಮಾತನಾಡುವಾಗ ಆಕಡೆಗೆ ಹೋಗುತ್ತಿದ್ದೀರಿ.

ಇದು ಸರಿಯಲ್ಲ. ಈ ಸದನದ ನಿಯಮಾವಳಿಗೆ ಸಂಬಂಧಪಟ್ಟಂಥ ಪುಸ್ತಕವನ್ನು ತಮಗೆ ಕಳುಹಿಸಿ ಕೊಡುತ್ತೇನೆ, ಅದನ್ನು ದಯವಿಟ್ಟು ಓದಿ.

ಶ್ರೀ ಕೆ. ಸೋಮಪ್ಪ ಸುವರ್ಣ.— ಮಾನ್ಯ ಸಚಿವೆಯರು ಈ ಸಮಸ್ಯೆಗಳನ್ನು ಹೋಗಲಾಡಿಸುವಂಥ ಎದೆಗಾರಿಕೆಯನ್ನು ತೋರಿಸುವಂಥ ಸಂದರ್ಭ ಬಂದಿದೆ. ಏಕೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಹಲವಾರು ಮಂದಿ ಆರೋಗ್ಯ ಸಚಿವರಾಗಿ ನಮ್ಮ ಜಿಲ್ಲೆಗೆ ಒಳ್ಳೆಯ ಹೆಸರನ್ನು ತಂದಿದ್ದಾರೆ. ಮದ್ರಾಸ್ ಸರ್ಕಾರದಲ್ಲಿ ಮಾನ್ಯ ಎ.ಬಿ. ಶೆಟ್ಟಿಯವರು, ಡಾಕ್ಟರ್ ಅಲ್ಲದಿದ್ದರೂ ಬಹಳ ಕಾಲ ಆರೋಗ್ಯ ಸಚಿವರಾಗಿ ನಮ್ಮ ಜಿಲ್ಲೆಗೆ ಒಳ್ಳೆಯ ಹೆಸರನ್ನು ತಂದಿದ್ದಾರೆ. ಅನಂತರ ಡಾ: ನಾಗಪ್ಪ ಆಳ್ವ ಅವರು ಮತ್ತು ಕೆ.ಕೆ. ಹೆಗಡೆಯವರೂ ಕೂಡ ನಮ್ಮ ಜಿಲ್ಲೆಯಿಂದಲೇ ಆರೋಗ್ಯ ಸಚಿವರಾಗಿ ನಮ್ಮ ಜಿಲ್ಲೆಯ ಕೀರ್ತಿಗೆ ಕಾರಣೀಭೂತರಾಗಿದ್ದರು.

ಈಗ ದೊಡ್ಡ ಜವಾಬ್ದಾರಿ ನಮ್ಮ ಜಿಲ್ಲೆಯ ಓರ್ವ ನಿಷ್ಣಾತ ಕಾರ್ಯಕರ್ತರಾದಂಥ, ಹಾಗೂ ಸಾಮಾಜಿಕ ಸೇವೆಯಲ್ಲಿ ಬಹಳಷ್ಟು ದುಡಿದಂಥ ಮಹಿಳೆಯಾದ ಶ್ರೀಮತಿ ಮನೋರಮಾ ಮಧ್ವರಾಜ್‌ರವರ ಹೆಗಲಿಗೆ ಬಂದಿದೆ, ಏತಕ್ಕೆಂದರೆ ನಮ್ಮ ಕರ್ನಾಟಕದ ರಾಜಕೀಯವನ್ನು ನೋಡುವಾಗ ನಾವು ಇಷ್ಟರವರೆಗೆ ಹೇಳುತ್ತಿದ್ದೆವು, ಸೇಂದಿ ದೊರೆಗಳ ಉಪಟಳದಿಂದ ಕರ್ನಾಟಕ ರಾಜ್ಯದ ರಾಜಕೀಯ ಬಣ್ಣ ಆಗಾಗ್ಗೆ ಬದಲಾಗುತ್ತಿತ್ತೆಂದು. ಕರ್ನಾಟಕ ರಾಜ್ಯದ ರಾಜಕೀಯದ ಏರುಪೇರುಗಳಿಗೆ ಹೆಂಡದ ದೊರೆಗಳೇ ಮುಖ್ಯ ಕಾರಣಕರ್ತರಾಗಿದ್ದರು ಎಂದು ನಾವು ಹೇಳುತ್ತಿದ್ದೆವು, ಹೆಂಡದ ದೊರೆಗಳ ಪಾನ ಮತ್ತತೆಯಿಂದ ಸರ್ಕಾರಕ್ಕೆ ಕೆಲವೊಂದು ತೊಂದರೆಗಳು ಬಂದು ಅಡಿಮೇಲಾಗುವಂಥ ಪರಿಸ್ಥಿತಿಗೆ ಬಂದರೂ ಸಹ ಆ ಸರ್ಕಾರ ವರ್ಷಂ ಪ್ರತಿ ಆ ಸೇಂದಿ ಶರಾಬನ್ನು ಏಲಂ ಪಡಿಸುವಾಗ ತಂದೆ ಮಕ್ಕಳಲ್ಲಿ, ಮಾವ ಅಳಿಯಂದಿರೊಳಗೆ ಪೈಪೋಟಿ ತಂದು ರಾಜಕೀಯವನ್ನು ನಡೆಸುತ್ತಿದ್ದರೋ ಅಂಥ ಸೇಂದಿ ದೊರೆಗಳ ದೊರೆತನವನ್ನು ನಾವು ಇಂದು ಹೋಗಲಾಡಿಸಿದ್ದೇವೆ. ಆದರೆ ಇಂದು ಈ ಆರೋಗ್ಯ ಇಲಾಖೆಯ ಪರಿಸ್ಥಿತಿಯನ್ನು ನೋಡಿದಾಗ ಯಾವ ಒಂದು ಕ್ಯಾಪಿಟೇಷನ್ ಫೀ ಪರಾಕಾಷ್ಠತೆಗೆ ಏರಿ ಕರ್ನಾಟಕದಲ್ಲಿ ತಾಂಡವವಾಡುತ್ತಿದೆಯೋ ಅಂಥ ಒಂದು ಕ್ಯಾಪಿಟೇಷನ್ ‘‘ ಫೀ ’’ಯ ಒಂದು ಪ್ರಭಾವ ರಾಜಕೀಯದ ರಂಗದಲ್ಲಿ ಬಹಳಷ್ಟು ಕಾಣುತ್ತಿದ್ದೇವೆ, ಪ್ರಾಯಶ: ಇಂದು ಈ ರಾಜ್ಯದಲ್ಲಿ ನಡೆಯುತ್ತಿರುವಂತಹ ಯಾವ ವೈದ್ಯಕೀಯ ಕಾಲೇಜುಗಳು ಇವೆ ಈ ವೈದ್ಯಕೀಯ ಕಾಲೇಜುಗಳ ಪ್ರಭಾವ ಈ ಕರ್ನಾಟಕ ರಾಜ್ಯದ ಶಕ್ತಿಯನ್ನು ಪರೀಕ್ಷಿಸುವಂಥ ಒಂದು ಧೀಮಂತ ಶಕ್ತಿಯಾಗಿ ಇಂದು ಗೋಚರಿಸುತ್ತಿದೆ. ಏತಕ್ಕೆಂದರೆ ಈ ಕರ್ನಾಟಕದಲ್ಲಿರುವಂಥ ಈ ವೈದ್ಯಕೀಯ ಕಾಲೇಜುಗಳನ್ನು ಅನೇಕ ಮಠಾಧಿಪತಿಗಳು, ಧಾರ್ಮಿಕ ಮುಖಂಡರು, ರಾಜಕೀಯ ಧುರೀಣರು ಮಾತ್ರವಲ್ಲದೆ ಅನೇಕ ಧೀಮಂತ ಶ್ರೀಮಂತ ವ್ಯಕ್ತಿಗಳು ಇದರಲ್ಲಿ ಸೇರಿಕೊಂಡಿರುವ ಕಾರಣ ಈ ರಾಜಕೀಯ ರಂಗದ ಮೇಲೆ ಸ್ವಾಭಾವಿಕವಾಗಿ ಈ ಪ್ರಭಾವ ಬೀರುವ ಕಾರಣ ಮಾನ್ಯ ಸಚಿವರು ಭೋರ್ಗರೆವ ಸಮುದ್ರದ ಮೀನುಗಾರಿಕರ ವಂಶದಲ್ಲಿ ಹುಟ್ಟಿ, ಸಮುದ್ರದಲ್ಲಿ ತೇಲುವಂತಹ ಶಕ್ತಿಯನ್ನು ಹೊಂದಿರುವ ನೀವು ಸಮುದ್ರದಲ್ಲಿ ದೊಡ್ಡ ದೊಡ್ಡ ತಿಮಿಂಗಿಲಗಳು ಈಗ ಏನು ಬಂದಿವೆ, ಆ ತಿಮಿಂಗಿಲಗಳನ್ನು ಎದುರಿಸಿ ನಮ್ಮ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಯಾವ ಒಬ್ಬ ಮಹಿಳೆಗೆ ಈ ಆರೋಗ್ಯ ಸಚಿವರ ಸ್ಥಾನ ಸಿಕ್ಕಿದೆಯೋ ಈ ಹಿಂದಿನ ಆರೋಗ್ಯ ಸಚಿವರ ಯಾವ ಘನತೆಗೆ ಶ್ರೇಯಸ್ಸಿಗೆ ಕೀರ್ತಿಗೆ ಕುಂದು ಬಾರದಂತೆ ನೀವು ಬಹಳಷ್ಟು ಧೈರ್ಯದಿಂದ ಈ ತಿಮಿಂಗಿಲಗಳನ್ನು ನಿಭಾಯಿಸಿ ನಮ್ಮ ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತರುವಂತಾಗಬೇಕೆಂದು ನಾನು ಆಶಿಸುತ್ತಿದ್ದೇನೆ ಏತಕ್ಕೆಂದರೆ ನಿಮ್ಮಲ್ಲಿ ಮಾತೃ ಹೃದಯದ ವೈಶಾಲ್ಯತೆ ಇದೆ, ಕಷ್ಟಗಳನ್ನು ಎದುರಿಸುವಂಥ ಧೈರ್ಯ ಇದೆ, ಸಮಸ್ಯೆಗಳನ್ನು ನಿಭಾಯಿಸತಕ್ಕಂಥ ಚಾಕಚಕ್ಯತೆ ಇದೆ. ಈ ಎಲ್ಲ ಶಕ್ತಿಗಳನ್ನು ಒಂದುಗೂಡಿಸಿ ಇಂದು ನಮ್ಮ ಕರ್ನಾಟಕದಲ್ಲಿ ತಲೆಎತ್ತಿರುವಂಥ ಯಾವ ಕ್ಯಾಪಿಟೇಷನ್ ಶುಲ್ಕದ ಪ್ರಭಾವದಿಂದ ಕರ್ನಾಟಕದ ಜನರು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೋ ಅಂತಹ ಶಕ್ತಿಗಳನ್ನು ಮುರಿಯುವಂಥ ಸ್ತ್ರೀ ಶಕ್ತಿಯನ್ನು ನೀವು ತಂದುಕೊಡಬೇಕೆಂದು ಈ ಸಂದರ್ಭದಲ್ಲಿ ನಿಮ್ಮನ್ನು ಕೇಳಿಕೊಳ್ಳುತ್ತೇನೆ, ನಮ್ಮ ಕರ್ನಾಟಕದ ಸುತ್ತಲೂ ಕಣ್ಣುಹಾಯಿಸುವಾಗ ನಮ್ಮ ಸಂಖ್ಯಾ ಬಲದಲ್ಲಿರುವಂಥ ಮೆಡಿಕಲ್ ಕಾಲೇಜುಗಳು ಹಲವಾರು. ಆದರೆ ಅವುಗಳ ಬಗ್ಗೆ ಮೌಲ್ಯಾಧಾರಿತವಾಗಿ ಆಲೋಚಿಸುವಾಗ ಈ ಕಾಲೇಜುಗಳು ಮೌಲ್ಯ ಆಧಾರಿತವಾಗಿವೆ. ಮೌಲ್ಯ ಎಂದರೆ ಹಣವನ್ನು ಆಧರಿಸಿಕೊಂಡು ನಮ್ಮ ಇಂದಿನ ಮೆಡಿಕಲ್ ಕಾಲೇಜುಗಳು ಕರ್ನಾಟಕದಲ್ಲಿ ತಲೆ ಎತ್ತುತ್ತಿವೆ.

೫-೫೦ ಪಿ. ಎಂ.

ಇನ್ನೂ ಹಲವಾರು ಮಂದಿ ಹಲವಾರು ಕಾಲೇಜುಗಳನ್ನು ತಮಗೆ ಕೊಡಬೇಕು. ತಮಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಹೀಗೆ ಇದು ಒಂದು ವ್ಯಾಪಾರಿ ಮನೋ ದೃಷ್ಟಿಯಿಂದ ನಮ್ಮ ಕರ್ನಾಟಕದಲ್ಲಿ ಬಹಳಷ್ಟು ಒಂದು ಆಕರ್ಷಕವಾದ ಒಂದು ಉದ್ಯೋಗವಾಗಿ ನಮ್ಮ ಕರ್ನಾಟಕದಲ್ಲಿ ಪರಿಣಮಿಸಿದೆ. ಹೀಗಿರುವಾಗ ಈ ಕಡಿವಾಣ ತಪ್ಪಿದ ಈ ಕ್ಯಾಪಿಟೇಷನ್ ಶುಲ್ಕಕ್ಕೆ ನಿಯಂತ್ರಣವನ್ನು ತರುವಂತಹ ಜವಾಬ್ದಾರಿ ಈ ವರ್ಷದಲ್ಲಿ ಈ ಕರ್ನಾಟಕ ರಾಜ್ಯದಲ್ಲಿ ಆಗಲಿ ಎಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಪಾಪದ ಬಡ ಜನರು ನಮ್ಮ ಕರ್ನಾಟಕದಲ್ಲಿ ಬಡವರಿಗೂ ವಿದ್ಯೆ ಸಿಕ್ಕಬಹುದೆಂಬ ವಿಶ್ವಾಸದಿಂದ, ಪಾಪದವರಿಗೂ ಈ ಸಮಾಜದಲ್ಲಿ ಸಮಾನವಾಗಿ ಬಾಳಬಹುದೆಂಬ ಆಸೆಯಿಂದ ಈ ಕಾಂಗ್ರೆಸ್ ಪಕ್ಷವನ್ನು ಬಹಳಷ್ಟು ಬಹುಮತದಿಂದ ಆರಿಸಿ ಕೊಟ್ಟಿದ್ದಾರೆ. ಹೀಗಿರುವಾಗ ಆ ಪಾಪದ ಜನರ ಕಣ್ಣೀರನ್ನು ಅಳಿಸುವಂತಹ, ಅವರ ವಿಶ್ವಾಸವನ್ನು ಉಳಿಸಿ ಬೆಳೆಸುವಂತಹ ಎದೆಗಾರಿಕೆಯನ್ನು ತೋರಿಸುವಂತಹ ಒಂದು ಸಂದರ್ಭ ನಮಗೆ ಬಂದಿದೆ. ನಾವು ಈ ಸಲ ಈ ಕ್ಯಾಪಿಟೇಷನ್ ಶುಲ್ಕವನ್ನು ರದ್ದುಪಡಿಸಬೇಕಲ್ಲದೆ ನಿರ್ದಾಕ್ಷಿಣ್ಯವಾಗಿ ಅದಕ್ಕೆ ಬೇಕಾದಂತಹ ಒಂದು ವ್ಯವಸ್ಥೆಯನ್ನು ಮಾಡದಿದ್ದರೆ ನಾವು ಇಷ್ಟೊಂದು ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದರೂ ಸಹ ಅದರ ಪ್ರಯೋಜನ ನಮ್ಮನ್ನು ಆರಿಸಿ ಕಳುಹಿಸಿ ಕೊಟ್ಟ ವ್ಯಕ್ತಿಗಳಿಗೆ ಕೊಟ್ಟಂತೆ ಖಂಡಿತ ಆಗುವುದಿಲ್ಲ. ಆದ್ದರಿಂದ ಈ ಕರ್ನಾಟಕದಲ್ಲಿ ರೋಗಪೀಡಿತವಾದ ಈ ಆರೋಗ್ಯ ಇಲಾಖೆಗೆ, ಅನಾರೋಗ್ಯದಿಂದ ಇರುವ ನಮ್ಮ ಆಸ್ಪತ್ರೆಗೆ ಆಪರೇಷನ್ ಮಾಡಿ ಒಳ್ಳೆಯ ಚಿಕಿತ್ಸೆಯನ್ನು ಮಾಡಿ ಅದನ್ನು ಗುಣಪಡಿಸುವ ಕೆಲಸವನ್ನು ಮಾನ್ಯ ಆರೋಗ್ಯ ಸಚಿವೆಯವರು ಧೈರ್ಯದಿಂದ ಮಾಡಬೇಕೆಂದು ನಾನು ಆಲೋಚಿಸುತ್ತಾ ನಿಮ್ಮಲ್ಲಿ ವಿನಂತಿಸುತ್ತಿದ್ದೇನೆ. ಕೆಲವು ಸಂದರ್ಭದಲ್ಲಿ ನಮ್ಮ ಕೆಲವೊಂದು ವಿಭಾಗಗಳಿಗೆ ಪೋಸ್ಟ್‌ಮಾರ್ಟಂ ಮಾಡಿಯಾದರೂ ಇದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡದಿದ್ದರೆ ನಮ್ಮ ಕರ್ನಾಟಕದಲ್ಲಿ ಇನ್ನು ಮುಂದೆ ಯಾವ ಕ್ಯಾಪಿಟೇಷನ್ ಫೀಯ ಪ್ರಭಾವ ನಮ್ಮ ರಾಜಕೀಯ ರಂಗಿನ ಏರು ಪೇರುಗಳಲ್ಲಿ, ಹಂಡದ ದೊರೆಗಳ ಮೇಲೆ ಯಾವ ಪ್ರಭಾವ ಇತ್ತು ಎಂದು ನಾವು ಭಾವಿಸಿದ್ದೆವೋ ಅದಕ್ಕಿಂತ ಹೆಚ್ಚಿನ ಪ್ರಭಾವ ಈ ಕರ್ನಾಟಕ ರಾಜ್ಯದಲ್ಲಿ ಖಂಡಿತ ಬರುತ್ತದೆ. ಆದ್ದರಿಂದ ಆ ಪ್ರಭಾವವು ನಶಿಸಿ ಹೋಗುವಂತೆ, ನಾವು ಧೈರ್ಯದ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ, ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯದ ವಿಚಾರದಲ್ಲಿ ನಾನು ಮಾತನಾಡುವುದಾದರೆ ಮುಖ್ಯವಾಗಿ ಆಸ್ಪತ್ರೆಗಳು ನಮ್ಮ ಕರ್ನಾಟಕದಲ್ಲಿ ಬಹಳಷ್ಟು ಇರುತ್ತವೆ. ಸಂಖ್ಯಾ ಬಾಹುಳ್ಯದ ದೃಷ್ಟಿಯಿಂದ, ನಮ್ಮ ಸಂಖ್ಯೆಯನ್ನು ಹೇಳುತ್ತಾ ಹೋಗುವ ರೀತಿಯಲ್ಲಿ ನಮ್ಮ ಜನರ ದುಃಖ ಕಷ್ಟ ಅವರ ಅನಾರೋಗ್ಯ ದೂರವಾಗಲಿಲ್ಲವೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ರೋಗ ಬರುವುದಕ್ಕಿಂತ ಮುಂಚಿತವಾಗಿ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿದರೆ ಅದಕ್ಕಿಂತ ಉತ್ತಮವಾದುದು ಮತ್ತೊಂದಿಲ್ಲ. ರೋಗ ಬಂದ ನಂತರ ಅದನ್ನು ಗುಣಪಡಿಸುವುದು ನಮ್ಮ ಎರಡನೆಯ ಧರ್ಮವಾಗಿದೆ. ಆದ್ದರಿಂದ ಈ ಕರ್ನಾಟಕ ರಾಜ್ಯದಲ್ಲಿ ತಲೆಎತ್ತಬಹುದಾದ ಅನೇಕ ಸಾಂಕ್ರಾಮಿಕ ರೋಗಗಳು, ಅಂಟು ರೋಗಗಳು ಮಾತ್ರವಲ್ಲದೆ ನಮ್ಮ ನೆಲದಲ್ಲಿಯೇ ಹುಟ್ಟುವಂತಹ ಅನೇಕ ಕಾಯಿಲೆಗಳು ಈ ನೆಲದಲ್ಲಿ ಹುಟ್ಟದಂತೆ ಅದಕ್ಕೆ ಬೇಕಾದ ಯೋಜನೆಯನ್ನು ರೂಪಿಸಿ ಅವುಗಳು ಈ ಕರ್ನಾಟಕ ರಾಜ್ಯದಲ್ಲಿ ಬಾರದ ಹಾಗೆ ನೋಡಬೇಕು. ಉದಾಹರಣೆಗೆ, ನಮ್ಮ ಜಿಲ್ಲೆಯಲ್ಲಿರುವ ಆನೆಕಾಲು ರೋಗ, ಮಲೆನಾಡಿನಲ್ಲಿರುವಂತಹ ಮಂಗನ ಕಾಯಿಲೆ, ಇವು ಈ ಕರ್ನಾಟಕದ ಅತ್ಯಂತ ದೊಡ್ಡ ಕಾಯಿಲೆಗಳಾಗಿ ನಮ್ಮ ಕಣ್ಣಮುಂದೆ ಕಾಣುತ್ತಿವೆ. ಆದ್ದರಿಂದ ಸಂಖ್ಯಾ ಬಲದಿಂದ ನೋಡುವಾಗ ನಮ್ಮ ಕರ್ನಾಟಕದಲ್ಲಿ ಹಲವಾರು ಆಸ್ಪತ್ರೆಗಳು ಇವೆ. ಆದರೆ ಗುಣ ಮಟ್ಟದಲ್ಲಿ ನೋಡುವಾಗ ಇಂದು ಆಸ್ಪತ್ರೆಗಳ ಗುಣ ಅವುಗಳ ಯೋಗ್ಯತೆಗೆ ತಕ್ಕಹಾಗೆ ಸರಿಯಾಗಿ ಖಂಡಿತವಾಗಿ ಇಲ್ಲವೆಂದು ಹೇಳಬಹುದು. ಒಂದು ಕಾಲದಲ್ಲಿ ನಮ್ಮ ಜನರು ಈ ಮದ್ದು ಕೊಡುವ ಡಾಕ್ಟರ್‌ಗಳನ್ನು ಧನ್ವಂತರಿ ಎಂದು ಪೂಜಿಸಿ ದೇವರಿಗೆ ಸಮಾನವಾಗಿ ಭಕ್ತಿಯಿಂದ ಪೂಜಿಸುವಂತಹ ಕಾಲ ನಮ್ಮ ಕರ್ನಾಟಕದಲ್ಲಿತ್ತು. ಆದರೆ ಅದೇ ಕಾಲ ಇಂದು ಬದಲಾಗಿ ಕರ್ನಾಟಕದಲ್ಲಿ ಈ ಚಿಕಿತ್ಸೆಗೆ ಎಲ್ಲಿಯಾದರೂ ಒಂದು ಪ್ರೈವೇಟ್ ನರ್ಸಿಂಗ್ ಹೋಂಗೆ ಸೇರಿ ವಾಪಸ್ಸು ಬರುವಾಗ ಅವರು ಕೊಡತಕ್ಕಂತಹ ಆ ಬಿಲ್ಲನ್ನು ನೋಡುವಾಗ ಅವನಿಗೆ ಬ್ಲಡ್ ಪ್ರಶರ್ ಸ್ವಾಭಾವಿಕವಾಗಿ ಏರಿರುತ್ತದೆ. ಅಥವಾ ಹೃದಯಾಘಾತ ಆಗುವ ಪ್ರಮೇಯವನ್ನು ನಮ್ಮ ಕರ್ನಾಟಕದಲ್ಲಿ ನಾವು ಕಾಣುತ್ತಿದ್ದೇವೆ. ಆದ್ದರಿಂದ ಈ ಆರೋಗ್ಯ ಚಿಕಿತ್ಸೆಗೆ ಏನು ಒಂದು ಬೆಲೆ ಉಂಟು. ಅದನ್ನು ಕಾಪಾಡುವುದಕ್ಕಾಗಿ ಬೇಕಾದ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಆರೋಗ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಇನ್ನು ನಮ್ಮ ಕ್ಷೇತ್ರದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ತಮ್ಮ ಮುಂದೆ ಇಡುವಂತಹದ್ದು ನನ್ನ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಯಾವ ಮೂಲ್ಕಿ ಆಸ್ಪತ್ರೆ ಒಂದು ಉಂಟು, ಅದು ಎಲ್ಲವೂ ಜನರಿಂದ ಕೊಡಮಾಡಲ್ಪಟ್ಟ, ದಾನ ಮಾಡಲ್ಪಟ್ಟ ಒಂದು ಆಸ್ಪತ್ರೆಯಾಗಿದೆ. ಅದು ಒಂದು ಹೋಬಳಿ ಕೇಂದ್ರವಾದರೂ ಬಹಳ ಹಿಂದಿನಿಂದ ಅಂದರೆ ೩೦ ವರ್ಷಗಳ ಹಿಂದೆಯೇ ಅಲ್ಲಿ ಎಲ್ಲ ತರಹದ ಅನುಕೂಲಗಳು ಇದ್ದವು. ೪೨ ಬೆಡ್‌ಗಳುಳ್ಳ ಒಂದು ಪ್ರಸಿದ್ಧವಾದ ಆಸ್ಪತ್ರೆಯಾಗಿ ಆ ಊರಿನ ಆಸುಪಾಸಿನ ಜನರಿಗೆ ಆಕರ್ಷಕವಾದ ಆಸ್ಪತ್ರೆಯಾಗಿತ್ತು. ನಮ್ಮ ಸರ್ಕಾರದ ಯೋಜನೆಯಂತೆ ನಮ್ಮ ಹೋಬಳಿ ತಾಲ್ಲೂಕು ಕೇಂದ್ರವಲ್ಲದಿದ್ದರೂ, ಇಂದು ಬೆಳಿಗ್ಗೆ ನಮ್ಮ ಕಾನೂನು ಮಂತ್ರಿಗಳು ಹೇಳುತ್ತಿದ್ದರು. ಅದು ಏನೆಂದರೆ, ನಿಮ್ಮದು ತಾಲ್ಲೂಕು ಕೇಂದ್ರವಲ್ಲದಿದ್ದರಿಂದ ಅಲ್ಲಿ ನ್ಯಾಯಾಲಯವನ್ನು ಕೊಡಲಿಕ್ಕೆ ಆಗುವುದಿಲ್ಲ ಅಂತ ಹೇಳಿದರು. ನಮ್ಮ ಊರಾದ ಮೂಲ್ಕಿ ತಾಲ್ಲೂಕು ಕೇಂದ್ರವಲ್ಲ ಅದು ಒಂದು ಹೋಬಳಿ ಕೇಂದ್ರವಾದರೂ ಸಹ ಇಂದು ನಮ್ಮ ಜಿಲ್ಲೆಗೆ ಕೊಡಮಾಡಲ್ಪಟ್ಟ ಯಾವ ಸಮುದಾಯ ಆಸ್ಪತ್ರೆಯ ಯೋಗ್ಯತೆ ನಮ್ಮ ಮೂಲ್ಕಿ ಆಸ್ಪತ್ರೆಗೆ ಬಂದಿದೆ. ಕಾರಣ ನಮ್ಮ ಆಸ್ಪತ್ರೆಯಲ್ಲಿ ೪೨ ಬೆಡ್ಡುಗಳು ಇವೆ. ಜನರಿಂದ ಕೊಡಮಾಡಲ್ಪಟ್ಟ ಎಕ್ಸ್-ರೇ ಪ್ಲಾಂಟ್ ಇತ್ತು, ಆಪರೇಷನ್ ಥಿಯೇಟರ್ ಇತ್ತು, ಆ ಒಂದು ಸುಂದರವಾದ ಜಾಗ ಸಹ ಮೂಲ್ಕಿ ಜನತೆಯ ಕೊಡುಗೆಯಾಗಿದೆ. ಅಲ್ಲಿಗೆ ಆಸ್ಪತ್ರೆಯೇನೋ ಕೊಡಮಾಡಲ್ಪಟ್ಟಿದೆ. ಆದರೆ ಕಳೆದ ೪ ವರ್ಷಗಳಿಂದ ಅದಕ್ಕೆ ಯಾವ ತರಹದ ಸುಣ್ಣ ಬಳಿಯುವ ಕೆಲಸವಾಗಿಲ್ಲ. ಏನೋ ಸಮುದಾಯದ ಆಸ್ಪತ್ರೆಯ ಯೋಗ್ಯತೆ ಪ್ರಕಾರ ೪ ಡಾಕ್ಟರ್‌ಗಳು ಅಲ್ಲಿಗೆ ಬರಬೇಕು. ಎಕ್ಸ್-ರೇ ಇರಬೇಕು. ೨ ಲಕ್ಷ ರೂಪಾಯಿಗಳ ಬೆಲೆ ಬಾಳುವಂತಹ ಒಂದು ಎಕ್ಸ್-ರೇಯನ್ನು ಕೊಟ್ಟಿದ್ದಾರೆ. ಅದನ್ನು ಕೊಟ್ಟು ೬ ತಿಂಗಳಾದವು. ಇಷ್ಟರವರೆಗೆ ಅದಕ್ಕೆ ಬೇಕಾದಂತಹ ಟೆಕ್ನಿಷಿಯನ್ ಬರಲಿಲ್ಲ, ಟೆಕ್ನಿಷಿಯನ್ ಮುಂದಿನ ಒಂದೆರಡು ತಿಂಗಳಲ್ಲಿ ಬರದಿದ್ದರೆ ಆ ಎಕ್ಸ್-ರೇ ಗೆ ತುಕ್ಕು ಹಿಡಿದು ಮೂಲೆ ಸೇರುವ ಪರಿಸ್ಥಿತಿ ಬಂದಿದೆ. ಇನ್ನೊಂದು ಡೆಂಟಲ್‌ಚೇರ್ ಅಂತ ಕಳುಹಿಸಿಕೊಟ್ಟಿದ್ದಾರೆ. ಆದರೆ ನಮ್ಮಲ್ಲಿ ಡೆಂಟಲ್ ಡಾಕ್ಟರ್ ಇಲ್ಲ ಆ ಡೆಂಟಲ್ ಚೇರ್ ಆಸ್ಪತ್ರೆಯಲ್ಲಿ ಕುಳಿತುಕೊಂಡಿದೆ, ನನ್ನನ್ನು ಪರೀಕ್ಷಿಸುವ, ನನಗೆ ಕಾಯಕಲ್ಪ ಕೊಡುವ ಡಾಕ್ಟರ್ ಯಾವಾಗ ಬರುತ್ತಾರೆಂದು ಕಾಯುತ್ತಿದೆ. ಆದ್ದರಿಂದ ನಾವು ದಯಮಾಡಿ ಮೂಲ್ಕಿ ಸಮುದಾಯ ಆಸ್ಪತ್ರೆಯಲ್ಲಿ ಕೊರತೆ ಇರುವ ಡಾಕ್ಟರ್‌ಗಳನ್ನು ಕೂಡಲೇ ನೇಮಕ ಮಾಡಬೇಕು. ಆದರೆ ಏನೋ ನಿನ್ನೆ ಮಾನ್ಯ ಸಚಿವರು ಭಾಷಣ ಮಾಡುವಾಗ ಉದಾರ ಭಾವನೆಯಿಂದ ಹೇಳಿದ್ದೀರಿ, ನನ್ನ ಜಿಲ್ಲೆಯಲ್ಲಿ ಮೊದಲು ೫೨ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇದ್ದವು. ಈಗ ೫೬ ಡಾಕ್ಟರ್‌ಗಳ ಕೊರತೆ ಇರುವಂತೆ ಮಾಡಿಬಿಟ್ಟಿದ್ದೇನೆ ಅಂತ. ಆದರೆ ನಿಮ್ಮ ಸ್ವಾರ್ಥ ನಿಮ್ಮ ಮಟ್ಟಿಗೆ ನೀವು ಮಾಡುವುದು ಬೇಡ. ನಮ್ಮ ಊರಿನ ಮಟ್ಟಿಗೆ ಸ್ವಾರ್ಥ ನಿಮ್ಮಲ್ಲಿ ಬರಲಿ. ಏಕೆಂದರೆ ಎಲ್ಲವನ್ನೂ ಬಿಟ್ಟ ಕಬೀರ್‌ದಾಸ್ ತನ್ನ ದೋಹೆವೊಂದರಲ್ಲಿ ಹೀಗೆ ಹೇಳಿಬಿಟ್ಟಿದ್ದಾನೆ. ಅದನ್ನು ಹಿಂದಿಯಲ್ಲಿ ಹೇಳಿಬಿಟ್ಟಿದ್ದಾನೆ. ಅದು ಹೀಗಿದೆ.—

"ಸ್ವಾರಥಿ . ಸಬ್‌ಹಿಸಗೇ ಗಿನ ಸ್ವಾರತ ಗೋವೂನಹೀ
ಜೈಸೇ ಪಂಖೀ ಸರಸತರು ನಿರಸ ಬಯೇ ಉಡ್‌ಜಾಯೇ"

ಆದ ರಿಂದ ನಿಮ್ಮ ಮಟ್ಟಿಗೆ ನಿಮಗೆ ಯಾವ ಸ್ವಾರ್ಥ ಇಲ್ಲವೆಂದು ನನಗೆ ಗೊತ್ತಿದೆ. ಆದರೆ ನಮ್ಮ ಊರಿನ ಮಟ್ಟಿಗೆ, ನಮ್ಮ ಕರ್ನಾಟಕ ಮಟ್ಟಿಗೆ ನಿಮ್ಮ ಸ್ವಾರ್ಥ ಇರಲಿ. ಈ ಕರ್ನಾಟಕ ರಾಜ್ಯದ ಆರೋಗ್ಯ ವಿಭಾಗವು ಸುಸಜ್ಜಿತವಾಗುವಂತೆ ನಿಮ್ಮ ಸ್ವಾರ್ಥವನ್ನು ಬೆಳೆಸಿಕೊಳ್ಳಿ. ಅದರಲ್ಲೂ ನಿಮ್ಮ ಮೆಚ್ಚುಗೆಯನ್ನು ಪಡೆದಂತಹ ನಿಮ್ಮ ಮೂಲ್ಕಿ ಆಸ್ಪತ್ರೆಯಸ್ಥಿತಿ ಚಿಂತಾಜನಕವಾಗುವಂತೆ ಖಂಡಿತ ಬಿಡ ಬೇಡಿರೆಂದು ನಿಮ್ಮ ಹತ್ತಿರ ಕೇಳಿಕೊಳ್ಳುತ್ತೇನೆ. ಆ ಒಂದು ಕೇಂದ್ರ, ಆದರ್ಶ ಊರಿನ ಉಡುಗೊರೆ ಆಸ್ಪತ್ರೆ ಆಗಿ ಸ್ವಚ್ಛವಾದ ಆಸ್ಪತ್ರೆಯಾಗಿ ನಿಮ್ಮ ಕಾಲವಲ್ಲಿ ಕಾಣಿಸುವಂತಾಗಲಿ. ಬಹಳ ಸುಂದರವಾದ ಕಟ್ಟಡವನ್ನು ಕಟ್ಟಿಸುವಂತಹ ಯೋಜನೆಯನ್ನು ಊರಿನ ಜನರೆಲ್ಲ ಸೇರಿ ಹಾಕಿಕೊಂಡಿದ್ದೇವೆ. ಅದಕ್ಕೆ ಶಂಕುಸ್ಥಾಪನೆ ಮಾಡುವುದಕ್ಕೆ ನಿಮಗೆ ಹೇಳಿದ್ದೇನೆ. ಅದಕ್ಕೆ ಬರುವುದಕ್ಕೆ ಮೊದಲು ಅಲ್ಲಿಗೆ ಬೇಕಾಗುವ ಡಾಕ್ಟರ್, ದಾದಿಯರು, ನರ್ಸ್‌ಗಳು ಇನ್ನಿತರೆ ಉಪಕರಣಗಳನ್ನು ಕಳುಹಿಸಿ ನಂತರ ನೀವು ಬಂದು ನಿಮ್ಮ ಊರಿನ ಮುಖವನ್ನು ಕಾಣಿರಿ ಅಂತ ಹೇಳಿ ಈ ಸಂದರ್ಭದಲ್ಲಿ ನಿಮ್ಮ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ನಮ್ಮ ಕ್ಷೇತ್ರದ ಹಲವಾರು ಆಸ್ಪತ್ರೆಗಳು ನಮ್ಮ ಮೂಲ್ಕಿ ಆಸ್ಪತ್ರೆಗಳಿಗಿಂತಲೂ ಚಿಂತಾಜನಕವಾಗಿವೆ. ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಪಾಪಾ ಆ ಆಸ್ಪತ್ರೆಗಳು

ಬೆಂಗಳೂರಿನಲ್ಲಿರುವ ವಿಧಾನ ಸೌಧವನ್ನು ಕೂಗಿ ಕೂಗಿ ಕರೆಯುತ್ತಿವೆ ನಮ್ಮನ್ನು ಕಾಯುವಂತಹ ಡಾಕ್ಟರ್‌ಗಳು ಯಾವಾಗ ಬರುತ್ತಾರೆಂದು ಹೇಳಿ. ಆದ್ದರಿಂದ ನಿಮಗೆ ಏನೋ ಈ ಸಾರಿ ಸಚಿವ ಸಂಪುಟದಲ್ಲಿ ಆರೋಗ್ಯ ಖಾತೆಗೆ ಡಾಕ್ಟರ್‌ಗಳನ್ನು ಮತ್ತು ಉಪಾಧ್ಯಾಯರುಗಳನ್ನು ಕೂಡಲೇ ನೇಮಕ ಮಾಡುವುದಕ್ಕೆ ದೊಡ್ಡ ಮನಸ್ಸನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿರುವ ಯಾವ ಪಾಪದ ಜನರ, ಕಣ್ಣೀರನ್ನು ದೂರ ಮಾಡುವ ಸಂದರ್ಭ ಬಂದಿದೆ. ಆದ್ದರಿಂದ ಕೂಡಲೇ ವೈದ್ಯರುಗಳನ್ನು ದಾದಿಯರುಗಳನ್ನು ನೇಮಕ ಮಾಡಿ ನಿಮ್ಮನ್ನು ಕುರಿತು ಕೂಗುತ್ತಿರುವ ಅನಾರೋಗ್ಯ ಪೀಡಿತವಾಗಿರುವ ಆಸ್ಪತ್ರೆಗಳನ್ನು, ಕಾಯಿಲೆಗಳನ್ನು ಗುಣಪಡಿಸುವಂತಹ ಕೆಲಸವನ್ನು ತಕ್ಷಣವೇ ತಾವು ಮಾಡಬೇಕು. ಇಲ್ಲದಿದ್ದರೆ ಆಸ್ಪತ್ರೆಗಳ ಸ್ಥಿತಿ ಚಿಂತಾಜನಕವಾಗಿ ಅವುಗಳನ್ನು ಪೋಸ್ಟ್ ಮಾರ್ಟಂ ಮಾಡುವ ಪರಿಸ್ಥಿತಿಗೆ ನೀವು ಸಂದರ್ಭವನ್ನು ಕಲ್ಪಿಸಿಕೊಳ್ಳಬೇಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನೊಂದು ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಇಂದು ಹಳ್ಳಿಗೆ ಡಾಕ್ಟರ್‌ಗಳನ್ನು ಹೋಗಿ ಎಂದು ಹೇಳುವಾಗ ಡಾಕ್ಟರ್ ಯಾರೂ ಹೋಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಕಳುಹಿಸಿದರೂ ಏನೋ ಒಂದೆರಡು ತಿಂಗಳು ಹೋಗಿ ಮತ್ತೆ ಅಲ್ಲಿಂದ ಹೇಗೆ ತಪ್ಪಿಸಿಕೊಳ್ಳುವುದು ಎಂದು ಹೇಳಿ ವಿಧಾನ ಸೌದ ಮೂರನೇ ಮಹಡಿಗೆ ಬಂದು ಯಾವಾಗಲೂ ಕಾಡುವ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ನನಗೆ ಒಂದು ಅಭಿಪ್ರಾಯ ಬರುತ್ತದೆ. ಪೇಟೆ ಪಟ್ಟಣಗಳಲ್ಲಿ ಡಾಕ್ಟರು ಏಕೆ ಆಕರ್ಷಣೆ ಪಡುತ್ತಾರೆ ಎಂದರೆ, ಪಟ್ಟಣದಲ್ಲಿ ತರತರದ ಸೌಕರ್ಯಗಳು ಇವೆ, ಮಕ್ಕಳಿಗೆ ಅನುಕೂಲಕರ ವಿದ್ಯಾಭ್ಯಾಸ ಇದೆ, ಇರುವುದಕ್ಕೆ ಒಳ್ಳೆಯ ಮನೆಗಳು ಇವೆ, ತಿರುಗಾಡುವುದಕ್ಕೆ ಚೆಂದದ ರಸ್ತೆಗಳು ಇವೆ. ಇಂತಹ ಅನುಕೂಲಗಳು ಹಳ್ಳಿಯಲ್ಲಿ ಇಲ್ಲ, ನೀವು ಯಾವ ಪಟ್ಟಣದಲ್ಲಿ ಇರುವ ಸರ್ಕಾರಿ ನೌಕರರಿಗೆ ಸಿಟಿ ಅಲೋವೆನ್ಸ್ ಕೊಡುತ್ತಿರೋ. ಅದಕ್ಕೆ ಮುಖ್ಯ ಆಕರ್ಷಣೆಗೊಂಡು ಜನರು ಪಟ್ಟಣದ ಕಡೆಗೆ ಆಕರ್ಷಿತಗೊಳ್ಳುತ್ತಾರೆ. ಆದ್ದರಿಂದ ಅದನು ರದ್ದು ಮಾಡಿ ಅಥವಾ ಹಳ್ಳಿಯ ಅಲೋಯೆನ್ಸ್ ಎಂದು ಹೇಳಿ ಸಿಟಿ ಅಲೋಯೆನ್ಸ್ ಗಿಂತಾ ಹೆಚ್ಚು ಹಳ್ಳಿಯ ಅಲೋಯೆನ್ಸ್ ಎಂದು ಕೊಟ್ಟರೆ ಕೆಲವು ಡಾಕ್ಟರ್‌ಗಳಾದರೂ ಈ ಮನೋಭಾವನೆಯಿಂದ ಹಳ್ಳಿಯ ಕಡೆಗೆ ಖಂಡಿತ ತೆರಳುತ್ತಾರೆಂದು ನಾನು ನಂಬಿದ್ದೇನೆ, ಇದೂ ಅಲ್ಲದೇ ಇನ್ನೊಂದು ಸೂಚನೆ ಉಂಟು ಏನೆಂದರೆ ಡಾಕ್ಟರರನ್ನು ನೀವು ಯಾವಾಗ ಕೆಲಸಕ್ಕೆ ನೇಮಕ ಮಾಡುತ್ತಿರೋ ಆಗ ಅವರ ಹತ್ತಿರ ಬಾಂಡ್ ಬರೆಸಿಕೊಳ್ಳಬೇಕು. ಕನಿಷ್ಟ ಪಕ್ಷ 3 ವರ್ಷ ಹಳ್ಳಿಯಲ್ಲಿ ಸೇವೆ ಮಾಡಿ ಬಾಂಡ್‌ನಲ್ಲಿ ಹೇಳಿರುವಂತೆ ತಮ್ಮ ಸೇವೆ ಪೂರ್ಣಗೊಳಿಸುವಂತೆ ಕಟ್ಟಪ್ಪಣೆ ಮಾಡಿದರೆ ಇಂದು ಹಳ್ಳಿಯ ಜನರು ಯಾವ ವಿಶ್ವಾಸದಿಂದ ನಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟು ಅವರ ಕಷ್ಟ ದುಃಖದಲ್ಲಿ ನಾವು ಭಾಗಿಯಾಗುತ್ತೇವೆನ್ನುವ ವಿಶ್ವಾಸವನ್ನು ಇಟ್ಟು ಕೊಂಡಿದ್ದಾರೋ ಆ ವಿಶ್ವಾಸಕ್ಕೆ ನಾವು ತಣ್ಣೀರು ಎರಚಿದಂತೆ ಆಗುವುದಿಲ್ಲ, ಹಳ್ಳಿಯ ಜನರ ಆರೋಗ್ಯದ ಜೊತೆ ಅಲ್ಲಿ ಮನೆ ಮಠ, ಮಾರ್ಗ ಇತ್ಯಾದಿಗಳ ಕಡೆಗೆ ನಾವು ಗಮನ ಕೊಡುವ ಒಂದು ಸಂದರ್ಭ ನಮಗೆ ಬಂದಿದೆ. ಇನ್ನೊಂದು ವಿಚಾರ. ಈ ಹಳ್ಳಿ ಆಸ್ಪತ್ರೆಗಳಲ್ಲಿ ಏನು ಒಂದು ಮದ್ದು ಬೇಕೆಂದು ಇಂಡೆಂಟ್ ಮಾಡಿ ಕಳುಹಿಸಿಕೊಟ್ಟರೂ ಕೂಡಾ, ಬೆಂಗಳೂರಿನ ಜನರಿಗೆ ಯಾವ ಖಾಯಿಲೆ ಉಂಟು ಅದಕ್ಕೆ ಬೇಕಾದ ಕಿಟ್ ತಯಾರು ಮಾಡಿ ಎಲ್ಲಾ ಆಸ್ಪತ್ರೆಗಳಿದ್ದು ಎಲ್ಲಾ ಜನರಿಗೆ ಒಂದೇ ನಮೂನೆಯ ಖಾಯಿಲೆ ಉಂಟೆಂದು ಹೇಳಿ ಈ ಕಿಟ್‌ನ್ನು ಕಳುಹಿಸುತ್ತಿದ್ದಾರೆ. ಮಂಗನ ಖಾಯಿಲೆಗೆ ಬೇಕಾದ್ದು, ಆನೆಕಾಲಿನ ರೋಗಕ್ಕೆ ಬೇಕಾದ್ದು ಔಷಧಿಗಳು ಅದರಲ್ಲಿ ಇರುವುದಿಲ್ಲ. ಅದು ಒಂದು ಕೇವಲ ಕಣ್ಣೊರೆಸುವ ಮದ್ದು ಮಾತ್ರ ಆಗಿದೆ. ನಿಜವಾಗಿ ನೀವು ಹಣ ಖರ್ಚು ಮಾಡಿ ಆ ಮದ್ದನ್ನು ತಾವು ಕಳುಹಿಸಿದರೆ ಹಳ್ಳಿಯ ಜನರಿಗೆ ಪ್ರಯೋಜನವಾಗುವುದಿಲ್ಲ. ಆದುದರಿಂದ ಇನ್ನು ಮುಂದೆ ಯಾವ ಹಳ್ಳಿಯಲ್ಲಿ ಯಾವ ಕಾಯಿಲೆ ಇರುತ್ತದೆಯೋ ಅದಕ್ಕೆ ಬೇಕಾದ ಔಷಧಿಗಳು ಯಾವುದೆಂದು ಹಳ್ಳಿಯ ಡಾಕ್ಟರಿಗೆ ಗೊತ್ತುಂಟು ಆ ಹಳ್ಳಿಯ ಡಾಕ್ಟರ್ ಯಾವುದನ್ನು ಇಂಡೆಂಟ್ ಮಾಡುತ್ತಾರೋ ಆ ಪ್ರಕಾರವೇ ನೀವು ಮದ್ದನ್ನು ಕಳುಹಿಸುವ ಒಂದು ವ್ಯವಸ್ಥೆಯನ್ನು ಈ ಸಂದರ್ಭದಲ್ಲಿ ನಮಗೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯವನ್ನು ನಾನು ನಿಮ್ಮ ಹತ್ತಿರ ಅರಿಕೆ ಮಾಡಿಕೊಳ್ಳುತ್ತೇನೆ, ನಾನು ಪ್ರಾರಂಭದಲ್ಲೇ ಹೇಳುವಾಗ ಕರ್ನಾಟಕದ ಆರೋಗ್ಯ ವಿಭಾಗದಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿದ್ದೇನೆ. ಏಕೆಂದರೆ ಈ ಆರೋಗ್ಯ ಖಾತೆಯು ಒಂದು ಅಂದವು ಪ್ರಭಾವೀ ಶಕ್ತಿಗಳ ಪ್ರಭಾವದಿಂದ ಅದು ನೈಜತನವನ್ನು ತೋರಿಸದಂತೆ ಧಾರುಣ ಸ್ಥಿತಿಗೆ ಇಂದು ಆರೋಗ್ಯ ಖಾತೆ ಬಂದಿದೆ, ಆದುದರಿಂದ ನೀವು ಈ ಮಟ್ಟಿಗೆ ಸ್ವಲ್ಪ ಜಾಗ್ರತಿಯನ್ನು ವಹಿಸಬೇಕಾಗಿದೆ, ಏಕೆಂದರೆ ನಮಗೆ ಬಂದ ಎಕ್ಸರೇ ಯಂತ್ರದ ಕ್ರಯವನ್ನು ನೋಡಿದರೆ ಅದು ಪೇಟೆಯಲ್ಲಿ ಅದಕ್ಕಿಂತಾ ಕಡಿಮೆ ಕ್ರಯದಲ್ಲಿ ಸಿಕ್ಕುತ್ತದೆಂದು ಹೇಳುತ್ತಾರೆ. ನಮಗೆ ಬಂದ ಡೆಂಟಲ್ ಛೇರ್ ಕ್ರಯ ನೋಡಿದರೆ ಅದಕ್ಕಿಂತಾ ಕಡಿಮೆ ಕ್ರಯದಲ್ಲಿ

ಪೇಟಿಯಲ್ಲಿ ಸಿಗುತ್ತದೆಂದು ಹೇಳುತ್ತಾರೆ. ಆದುದರಿಂದ ಇದರಲ್ಲಿ ಯಾವುದೋ ಒಂದು ದುರುದ್ದೇಶದ ಕಾಣದ ಕೈ ಕೆಲಸ ಮಾಡಿಕೊಂಡು ಭ್ರಷ್ಟಾಚಾರವು ನಡೆಯುತ್ತಿದೆ. ಆದರೆ ಆ ವಿಭಾಗವು ಬಹಳ ಪ್ರಭಾವಶಾಲಿಯಾಗಿ ಬಹುಶಃ ಕರ್ನಾಟಕದಲ್ಲಿ ಪ್ರಸಾರ, ಪ್ರಚಾರ ಇವೆರಡೂ ತನ್ನ ಅಧೀನವನ್ನು ಇಟ್ಟುಕೊಂಡು ತಮ್ಮ ಇಚ್ಛೆಗೆ ಸರಿಯಾಗಿ ಕೆಲಸ ಮಾಡದಂತಹ ಅಧಿಕಾರಗಳನ್ನು ಅಥವಾ ಮಂತ್ರಿಗಳನ್ನು ತಮ್ಮ ಪ್ರಚಾರದ ಪ್ರಭಾವದಿಂದ ತಲೆತಗ್ಗಿಸುವಂತೆ ಮಾಡುವಂತಹ ಒಂದು ಕುಚೋದ್ಯದ ಕೆಲಸವನ್ನು ನಾವು ಇಂದು ಕರ್ನಾಟಕದಲ್ಲಿ ಕಾಣುತ್ತಿದ್ದೇವೆ. ಆದ್ದರಿಂದ ನಾನು ನಿಮಗೆ ಒಂದು ವಿಷಯ ಹೇಳಿದೆ. ದೊಡ್ಡ ಸಾಗರ ನಿಮ್ಮ ಮನೆಯ ಬದಿಯಲ್ಲೇ ಇದೆ. ದೊಡ್ಡ ದೊಡ್ಡ ತಿಮಿಂಗಲಗಳು ಈ ಆರೋಗ್ಯ ಇಲಾಖೆ ಎಂಬ ಸಾಗರದಲ್ಲಿ ಇವೆ. ಆ ತಿಮಿಂಗಿಲಗಳನ್ನು ಧೈರ್ಯದಿಂದ ಎದುರಿಸಿರಿ. ಏಕೆಂದರೆ ಭೋರ್ಗರೆವ ಕಡಲ ತಡಿಯಲ್ಲಿ ಹುಟ್ಟಿದ ನೀವು, ಕಡಲಿನೊಡನೆ ಹೋರಾಟ ಮಾಡಿದ ತಾವು ಈ ತಿಮಿಂಗಿಲಗಳ ಸುಳಿವು ಗೊತ್ತಿರುವ ನೀವು ಈ ಕರ್ನಾಟಕ ರಾಜ್ಯದ ಈ ಆರೋಗ್ಯ ಇಲಾಖೆಯಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಒಂದು ದೊಡ್ಡ ಸಮೂಹದ ಆಳವನ್ನು ಕಾಣುವಂತಹ ಪರಿಸ್ಥಿತಿಯಲ್ಲಿರುವಾಗ ಆ ತಿಮಿಂಗಿಲಗಳನ್ನು ಭೇಟೆಯಾಡಿ ಯಾವ ತಿಮಿಂಗಿಲಗಳು ಆರೋಗ್ಯ ಇಲಾಖೆಯಲ್ಲಿ ಇಲ್ಲದಂತೆ ಮಾಡಬೇಕು. ನಮ್ಮ ಜಿಲ್ಲೆಯ ಎ. ಬಿ. ಶೆಟ್ಟರು ಡಾಕ್ಟರು ಆಗದೆ ಒಳ್ಳೆಯ ಆರೋಗ್ಯ ಮಂತ್ರಿಗಳಾಗಿ ನಮ್ಮ ಜಿಲ್ಲೆಗೆ ಒಳ್ಳೆಯ ಹೆಸರನ್ನು ಯಾವ ರೀತಿ ತಂದರೋ ಅದಕ್ಕಿಂತಲೂ ಒಳ್ಳೆಯ ಹೆಸರನ್ನು ನಮ್ಮ ಜಿಲ್ಲೆಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಸದಸ್ಯರು ತಿಮಿಂಗಿಲಗಳು ಎಂದು ಹೇಳಿದ್ದಾರೆ. ಆ ತಿಮಿಂಗಿಲಗಳು ನೆಲದ ತಿಮಿಂಗಿಲಗಳೋ ಅಥವಾ ಜಲದ ತಿಮಿಂಗಿಲಗಳೋ ಎಂಬುದನ್ನು ಹೇಳಿ.

ಶ್ರೀ ಕೆ. ಸೋಮಪ್ಪ ಸುವರ್ಣ.—ಈ ತಿಮಿಂಗಿಲಗಳು ಕೆಲವೊಮ್ಮೆ ನಮಗೆ ಕಾಣದ ಹಾಗೆ ನೆಲದ ಮೇಲಿರುತ್ತವೆ. ಇವು ಜಲದಲ್ಲಿ ಇದ್ದರೂ ಸಹ ನಾವು ಇಲ್ಲದ ಸಮಯದಲ್ಲಿ ಆಕಾಶದಲ್ಲಿಯೂ ಸಹ ಹಾರುತ್ತವೆ. ಆದ್ದರಿಂದ ತಿಮಿಂಗಿಲಗಳನ್ನು ಹಿಡಿಯುವುದು ನಮ್ಮ ಸಾಮಾನ್ಯ ಇದಿನಬ್ಬನವರ ಉಳ್ಳಾಳದ ಬದಿಯಲ್ಲಿರುವ ಮೋಟು ಬಿಲ್‌ಗಳಿಂದ ಸಾಧ್ಯವಿಲ್ಲ. ರಂಪಣಿ ಬಲ್‌ಗಳಿಂದಲೂ ಸಾಧ್ಯವಿಲ್ಲ. ಅವುಗಳನ್ನು ಹಿಡಿಯಲಿಕ್ಕೆ ಕಬ್ಬಿಣದ ಅಸ್ತ್ರಗಳೇ ಬೇಕು. ಕೆಲವೊಮ್ಮೆ ಬಾಂಬ್ ಬಿಡುವಂತಹ ಪ್ರಮೇಯ ಬರಬಹುದು. ಆದ್ದರಿಂದ ತಾವು ದಿಟ್ಟತನದಿಂದ ಆ ತಿಮಿಂಗಿಲಗಳನ್ನು ಹಿಡಿಯಿರಿ ತಾವು ಭೇಟೆಯನ್ನಾಡಬೇಕು. ಮೀನುಗಾರಿಕೆಯ ಆ ತಂತ್ರವನ್ನು ಬಲ್ಲಂತಹ ತಾವುಗಳು ಭೇಟಿಯಾದ ಕೀರ್ತಿಯನ್ನು ನಮ್ಮ ಜಿಲ್ಲೆಗೆ ತನ್ನಿ, ಕರ್ನಾಟಕದ ಆರೋಗ್ಯ ಇಲಾಖೆಗೆ ಒಳ್ಳೆಯ ಹೆಸರನ್ನು ತನ್ನಿಯೆಂದು ಹೇಳಿ ನಾನು ಈ ನಾಲ್ಕು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಡಾ. ಆರ್. ಬಿ ಚೌದರಿ (ಸಿಂಧಗಿ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಆರೋಗ್ಯ ಸಚಿವೆಯವರು ಆರೋಗ್ಯ ಇಲಾಖೆಯ ಬೇಡಿಕೆಗಳನ್ನು ಮಂಡಿಸಿದ್ದಾರೆ. ನಾನು ಆ ಬೇಡಿಕೆಗಳನ್ನು ಬೆಂಬಲಿಸುತ್ತಾ ನಾನು ವೈದ್ಯನಾದುದರಿಂದ ಕೇವಲ ಎರಡು ಮೂರು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಸರ್ವೀಸ್ ಮಾಡಿದ್ದು ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಹಿರಿಯ ಸದಸ್ಯರುಗಳಾದ ಮಾನ್ಯ ಸಿಂಧ್ಯಾ ರವರು ಮತ್ತು ಡಾ. ಮಲಕರೆಡ್ಡಿಯವರು ಸವಿಸ್ತಾರವಾಗಿ ಆರೋಗ್ಯ ಇಲಾಖೆಯ ಬಗ್ಗೆ ಹೇಳಿದ್ದಾರೆ. ಆದಾಗ್ಯೂ ಕೂಡ ನನ್ನ ಒಂದೆರಡು ಅನುಭವಗಳನ್ನು ಹೇಳುವುದು ಉಚಿತವೆಂದು ನಾನು ಮಾತನಾಡುತ್ತಿದ್ದೇನೆ. ನಾನು ೧೯೬೭ರಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಅನುಕೂಲತೆಗಳು ಇರಲಿಲ್ಲ. ಆಗ ಎಲೆಕ್ಟ್ರಿಸಿಟಿ ಕೂಡ ಇರಲಿಲ್ಲ. ಜನರೂ ಕೂಡ ಮೆಡಿಕಲ್ ಫೆಸಿಲಿಟಿಯಿಂದ ವಂಚಿತರಾಗಿದ್ದರು. ಆ ಒಂದು ಪರಿಸ್ಥಿತಿಯಲ್ಲಿ ನಾನು ಸೇವೆಗೆ ಹೋದಾಗ ನನಗೆ ನಾನಾ ತರಹದ ಸಮಸ್ಯೆಗಳು ಈ ಇಲಾಖೆಯಿಂದ ಎದುರಾದವು. ಆ ಸಮಸ್ಯೆಗಳು ಏನೆಂದರೆ ಸಿಬ್ಬಂದಿಯೇ ಇರಲಿಲ್ಲ. ಅದು ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಈಗಲೂ ಕೂಡ ಸಿಬ್ಬಂದಿಯ ಕೊರತೆಯಿಂದ ಈ ಇಲಾಖೆಯಲ್ಲಿ ಎಷ್ಟೋ ಎಡರುತೊಡರುಗಳು ಬರುತ್ತಿವೆ. ಡಾಕ್ಟರುಗಳ ಕೊರತೆಯಿದೆ, ನರ್ಸಗಳ ಕೊರತೆ ಇದೆ. ಫಾರ್ಮಸಿಸ್ಟರ ಕೊರತೆ ಇದೆ. ಈ ಕೊರತೆಗಳು ಇರುವುದರಿಂದ ಸುಗಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಆರೋಗ್ಯ ಇಲಾಖೆಯಲ್ಲಿ ಅನೇಕ ಸ್ಕೀಮುಗಳನ್ನು ಹಾಕಿಕೊಂಡ ಮೇಲೆ ಪಬ್ಲಿಕ್ ಹೆಲ್ತ್ ಸೆಂಟರ್‌ಗಳು ಬಹಳ ಇದ್ದವು. ಈಗ ಮತ್ತಷ್ಟು ಹೆಚ್ಚಾಗಿವೆ. ನ್ಯಾಷನಲ್ ಮಲೇರಿಯಾ ಎರಾಡಿಕೇಶನ್ ಪ್ರೋಗ್ರಾಮ್, ಲೆಪ್ರಸಿ ಎರಾಡಿಕೇಶನ್ ಪ್ರೋಗ್ರಾಮ್ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಮ್ ಹೀಗೆ ನಾನಾ ತರಹದ ಪ್ರೋಗ್ರಾಂಗಳನ್ನು ನಾವು ಜಾರಿಗೆ ತರಬೇಕಾಗುತ್ತದೆ, ಆ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಮುಖ

ವಾಗಿ ಸಿಬ್ಬಂದಿ ಬೇಕು. ಔಷಧಿಗಳ ಕೊರತೆ ಆಗಲೂ ಕೂಡ ಕಂಡುಬರುತ್ತಿತ್ತು. ಈಗ ಪರಿಸ್ಥಿತಿ ಬೇರೆಯೇ ಇದೆ. ಈಗ ಜಿಲ್ಲಾಪರಿಷತ್‌ಗಳಿಗೆ ಬಹಳಷ್ಟು ಪವರ್ಸ್ ಕೊಟ್ಟಿದ್ದಾರೆ. ಆದರಿಂದ ಅನುಕೂಲ ಎಷ್ಟು ಆಗಿದೆ, ಅನಾನುಕೂಲ ಎಷ್ಟಾಗಿದೆ ಎಂಬುದು ಮುಖ್ಯವಲ್ಲ. ಮುಖ್ಯವಾಗಿ ಆರೋಗ್ಯ ಇಲಾಖೆಯ ಸಿಬ್ಬಂದಿ ಜಿಲ್ಲಾಪರಿಷತ್‌ನ ಕೆಳಗೆ ಕೆಲಸ ಮಾಡಬೇಕೋ ಅಥವಾ ಆರೋಗ್ಯ ಇಲಾಖೆಯ ಕೆಳಗೆ ಕೆಲಸ ಮಾಡಬೇಕೋ ಎಂಬುದು ಬಹುದೊಡ್ಡ ಸಮಸ್ಯೆಯಾಗಿದೆ. ಡಾಕ್ಟರುಗಳಿಗೂ ಸಹ ಇದೇ ಒಂದು ಸಮಸ್ಯೆ ಎದುರಾಗಿದೆ. ಈ ಸಮಸ್ಯೆಯನ್ನು ಹೋಗಲಾಡಿಸಬೇಕಾದರೆ ಈ ಸ್ಪೆಷಲಿಸ್ಟ್ಸ್ ಕೇಡರ್ ಎಂದು ಮಾಡಿದರೆ ಈ ಟ್ರಾನ್ಸ್‌ಫರ್ ಗದ್ದಲ ಕೂಡ ಆಗುವುದಿಲ್ಲ. ಡಾ. ಮಲಕರೆಡ್ಡಿಯವರು ಹೇಳಿದ ಹಾಗೆ ಸ್ಪೆಷಲಿಸ್ಟ್ಸ್ ಕೇಡರ್ ಅಂತ ಮಾಡಿ ಕಮ್ಯೂನಿಟಿ ಹಾಲ್ ಸೆಂಟರ್‌ನಲ್ಲಿ ಒಬ್ಬರು ಗೈನಕಾಲಜಿಸ್ಟ್, ಒಬ್ಬರು ಫಿಶಿಯನ್, ಒಬ್ಬರು ಸರ್ಜನ್, ಒಬ್ಬರು ಅಸಿಸ್ಟೆಂಟ್ ಸರ್ಜನ್ ಎಂದು ಈ ಪ್ರಕಾರ ಹೊಂದಾಣಿಕೆ ಮೇಲೆ ಹೋದರೆ ಈ ಇಲಾಖೆಯ ಕಾರ್ಯ ಸುಗಮವಾಗಿ ಸಾಗುತ್ತದೆ ಎಂದು ನನಗನ್ನಿಸುತ್ತದೆ. ಈ ಮೆಡಿಕಲ್ ಕಾಲೇಜುಗಳ ಬಗ್ಗೆ ಸಹ ಡಾ. ಮಲಕರೆಡ್ಡಿಯವರು ಹೇಳಿದ್ದಾರೆ. ಇವು ಕಮರ್ಶಿಯಲ್ ಸೆಂಟರ್ ಆಗಬಾರದು, ಮತ್ತು ಈ ಇಲಾಖೆಯ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಏನಿದೆ, ಈಗ ಅಲ್ಲಿ ಎಲ್ಲಾ ವಾಹನಗಳು ನಿಂತಲ್ಲೇ ನಿಂತು ಬಿಟ್ಟಿವೆ. ಬಹಳ ವರ್ಷಗಳಿಂದ ಅಂದರೆ ೭೦ನೇ ಇಸವಿಯಿಂದಲೂ ನಾನು ಇದನ್ನು ನೋಡುತ್ತಿದ್ದೇನೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯ ಕಛೇರಿಯನ್ನು ಗುರುತಿಸಬೇಕಾದರೆ ಎಲ್ಲಿ ಕೆಟ್ಟ ವಾಹನಗಳ ಸಮುದಾಯ ಇದೆಯೋ ಅದೇ ಅವರ ಕಛೇರಿ ಎಂದು ಗೊತ್ತಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಈ ಇಲಾಖೆಯಲ್ಲಿ ಕೆಲಸ ಹೇಗೆ ಮಾಡಬೇಕು ಎಂಬುದು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಈಗಾಗಲೇ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನು ಹೇಳುವುದು ಏನೂ ಇಲ್ಲ. ನನಗೆ ಇವತ್ತಿನ ದಿವಸ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮತ್ತು ಮಾನ್ಯ ಆರೋಗ್ಯ ಸಚಿವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸಿ. ಸಿದ್ಧನಗೌಡರ್ (ಕಲಘಟಗಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಇಲಾಖೆಯ ಸಚಿವೆಯವರು ಮಂಡಿಸಿದಂಥ ಈ ಬೇಡಿಕೆಗೆ ವಿರೋಧವನ್ನು ವ್ಯಕ್ತಪಡಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಆರೋಗ್ಯ ಇಲಾಖೆ ಬಹಳ ಅನಾರೋಗ್ಯವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಉದಾಹರಣೆಗೆ ನಮ್ಮ ಉತ್ತರ ಕರ್ನಾಟಕದಲ್ಲಿ ಕರ್ನಾಟಕ ಮೆಡಿಕಲ್ ಕಾಲೇಜ್ ಆಸ್ಪತ್ರೆ ಇದೆ. ಮಾನ್ಯ ಸಚಿವರು ಮತ್ತು ಅನೇಕ ಶಾಸಕರು ಅಲ್ಲಿಗೆ ಭೇಟಿ ಕೊಟ್ಟು ಬಂದರು. ಪೇಪರ್‌ಗಳಲ್ಲಿ ಕೂಡ ನೋಡಿದೆವು, ಅಷ್ಟೆ ಯಾವುದೇ ಸುಧಾರಣೆ ಆಗಿಲ್ಲ. ಈಗ ಉದಾಹರಣೆಗೆ ಯಾರಾದರೂ ಒಬ್ಬರು ಬೆಂಕಿ ಅನಾಹುತದಲ್ಲಿ ಸಿಕ್ಕಿಕೊಂಡು ಅವರನ್ನು ಅಲ್ಲಿಗೆ ಸೇರಿಸಿದರೆ ಅವರು ಬದುಕುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಕಡೆಯೂ ಹೇಳುತ್ತಾರೆ ಕೆ.ಎಂ.ಸಿ.ಗೆ ಅಡ್ಮಿಟ್ ಆದರೆ ಸತ್ತೇ ಹೋಗುತ್ತಾರೆ ಎಂದು ಅಲ್ಲಿ ಹೋದರೆ ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಅಭಿಪ್ರಾಯ ಇದೆ. ಸರ್ಕಾರದ ಕಾನೂನಿನ ಚೌಕಟ್ಟಿನಲ್ಲಿ ಕೆಲವೊಂದು ಕೇಸುಗಳು, ಕ್ರಿಮಿನಲ್ ಕೇಸಾಗಿದ್ದರೆ ಅಲ್ಲಿಗೆ ಹೋಗಲೇಬೇಕಾಗುತ್ತದೆ. ನಾವು ವಿರೋಧ ಪಕ್ಷದವರು ಹೇಳುತ್ತೇವೆ ಎಂದಲ್ಲ. ತಾವು ದಯವಿಟ್ಟು ಮನಸ್ಸು ಮಾಡಿ ಈ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸಿದರೆ ನಿಮ್ಮ ಇಲಾಖೆಯೂ ಸುಧಾರಿಸಬಹುದೆಂದು ಕಳಕಳಿಯಿಂದ ನಾನು ಹೇಳುತ್ತೇನೆ. ಅಲ್ಲಿ ಅನೇಕ ಸಂದರ್ಭದಲ್ಲಿ ಲೈಟು ಕೂಡ ಇರುವುದಿಲ್ಲ. ಒಂದು ಸಲ ಆಪರೇಶನ್ ಮಾಡುವಾಗ ಲೈಟು ಹೋಯಿತು. ಆಗ ಬ್ಯಾಟರಿ, ಲ್ಯಾಂಟೀನು ಹಿಡಿದುಕೊಂಡು ಕೆಲಸ ಮಾಡತಕ್ಕಂಥ ಪರಿಸ್ಥಿತಿ ಉದ್ಭವಿಸಿದೆ. ಅಲ್ಲಿರತಕ್ಕಂಥ ಸ್ಟಾಫ್‌ನ್ನು ಬದಲಾವಣೆ ಮಾಡಬೇಕು. ಅಲ್ಲಿ ನೋಡಿದರೆ, ನಮ್ಮಲ್ಲಿ ಜಾನುವಾರು ಜಾತ್ರೆ ಎಂದು ಹೇಳುತ್ತಾರೆ. ಎಲ್ಲಾ ದನಗಳನ್ನು ಅಲ್ಲಿ ಕಟ್ಟಿದ್ದಾರೆ. ಹೀಗಾದರೆ ಅಲ್ಲಿ ಚೊಕ್ಕಟವಾಗಿ ಕಾಣುತ್ತಿಲ್ಲ. ಅಲ್ಲಿ ಒಬ್ಬ ಒಳ್ಳೆಯ ಅಡ್ಮಿನಿಸ್ಟ್ರೇಟರ್‌ನ್ನು ಹಾಕಿಸಿ ಈ ಕೆ. ಎಂ. ಸಿ. ಆಸ್ಪತ್ರೆಯನ್ನು ಸುಧಾರಣೆ ಮಾಡಿದರೆ ಸಾರ್ವಜನಿಕರಿಗೆ ನಿಜವಾಗಿಯೂ ಒಳ್ಳೆಯದಾಗುತ್ತದೆ. ಇನ್ನು ಐ.ಪಿ.ಸಿ. ಸ್ಕೀಮ್‌ನಲ್ಲಿ ಮೆಟೀರಿಯಲ್ಸ್‌ನ್ನು ಹೈಲೆವಲ್ಸ್‌ನಿಂದ ಕಳಿಸಿಕೊಡುತ್ತಾರೆ. ಈಗ ಹೊಸದಾಗಿ ಒಂದು ಬಿಲ್ಡಿಂಗ್ ಆಗಿದೆ ತಾವು ದಯಮಾಡಿ ವಿಸಿಟ್ ಮಾಡಿನೋಡಿ. ಒಂದು ಕಿಟಕಿಯನ್ನು ಸಣ್ಣ ಹುಡುಗರು ಮುಟ್ಟಿದರೂ ಸಾಕು, ಅದು ಹಾಳಾಗುತ್ತದೆ.

೬-೨೦ ಪಿ.ಎಂ.

ಅಂದರೆ ಅವು ಬಹಳ ವೀಕ್‌ನೆಸ್ ಇವೆ. ಡೋರ್ಸ್, ವಿಂಡೋಸ್ ಇವೆಲ್ಲಾ ಈ ವೀಕ್‌ನೆಸ್ ಕೆಳಗೆ ಬರುತ್ತವೆ. ಆದ್ದರಿಂದ ಐ.ಟಿ.ಟಿ.ಯೊಳಗೆ ಪರ್ಚೇಸ್ ಮಾಡಿದ್ದನ್ನು ಇನ್‌ವೆಸ್ಟಿಗೇಷನ್ ಮಾಡಬೇಕು. ಮುಂದೆ ಈ ರೀತಿಯಾಗಬಾರದೆಂದು ನಾನು ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತಿದ್ದೇನೆ. ಈ ಐ.ಟಿ.ಟಿ.ಯೊಳಗೆ ಆದಂಥ ವರ್ಕ್ ಮುಂದೆಯಾದರೂ ಪ್ರೊಗ್ರೆಸ್ ಆಗಲಿ ಎಂದು ಹೇಳುತ್ತಾ, ನನ್ನ ಕ್ಷೇತ್ರದ ಬಗ್ಗೆ ಹೇಳಬೇಕೆಂದರೆ, ದುಷ್ಯಾಡು ಎಂಬ ವಿಲೇಜ್ ಇದೆ. ಇದು ಕೆ.ಎಂ.ಸಿ. ಕಂಟ್ರೋಲ್‌ನಲ್ಲಿದೆ. ಜಿಲ್ಲಾ ಪರಿಷತ್ ಬಂದ ಮೇಲೆ, ಇದರದ್ದೇ ಒಂದು ರೂಲ್ಸ್. ಇನ್ನು ಸರ್ಕಾರದ ಕೆ.ಎಂ.ಸಿ. ರೂಲ್ಸ್ ಬೇರೆ. ಇದರಿಂದ ಔಷಧಿ ಕೊಡಬೇಕಾದರೆ ಬಹಳ ತೊಂದರೆಯಾಗುತ್ತದೆ. ಅಧಿಕಾರಿಗಳ ಮೇಲಿನ ಕಂಟ್ರೋಲ್ ಸರ್ಕಾರದವರಿಗೆ ಇಲ್ಲದಂತಾಗಿದೆ. ಈ ವಿಷಯವನ್ನು ಕೆ.ಡಿ.ಪಿ.ನಲ್ಲೂ ಹೇಳಿದ್ದೇನೆ ಮತ್ತೆ ಸರ್ಕಾರಕ್ಕೂ ತಿಳಿಸಿದ್ದೇನೆ, ಈ ಆಸ್ಪತ್ರೆಯನ್ನು ಜಿಲ್ಲಾಪರಿಷತ್ತಿಗೆ ಕೊಡಿ ಅಥವಾ ಕೆ. ಎಂ.ಸಿ. ಕಂಟ್ರೋಲ್‌ನಲ್ಲಿ ಕ್ಲಿಯರ್ ಕಟ್ಟಾಗಿ ಕೊಡಿ ಎಂದು ಇದರಿಂದ ಅಲ್ಲಿ ನೋಡತಕ್ಕ ಡಾಕ್ಟರಂಗಳಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ನಮ್ಮಲ್ಲಿ ಒಂದು ಜೀಪು ಇದೆ. ಜೀಪು ಎಂದು ಹೇಳಿದರೆ ಅಂಬಾಸಿಡರ್ ಕಾರು. ಇಂತಹ ವೆಹಿಕಲ್ ಕರ್ನಾಟಕದಲ್ಲಿ ಎಲ್ಲೂ ಇಲ್ಲ. 60–70 ಹಳ್ಳಿ ಇರತಕ್ಕ ತಾಲ್ಲೂಕಿಗೆ ಇದು ಒಂದೇ ವೆಹಿಕಲ್. ಏನಾದರೂ ಒಂದು ಪೇಷಂಟ್‌ಗೆ ತೊಂದರೆಯಾದರೆ ಕಷ್ಟವಾಗುತ್ತದೆ. ದಯವಿಟ್ಟು ತಾವು ಏನಾದರೂ ಇದರ ಬಗ್ಗೆ ಮಾಡಿ. ಇನ್ನು 30 ಬೆಡ್ಡಿನ ಆಸ್ಪತ್ರೆಯನ್ನು ನಮ್ಮ ಮಲೆನಾಡು ಪ್ರದೇಶದಲ್ಲಿತಕ್ಕ ಕಲಘಟಗಿಗೆ ಕೊಡಬೇಕೆಂದು ಕೇಳಿದ್ದೇನೆ. ತಾವು ಮಂಜೂರ್ ಮಾಡಿ ಕೊಡುತ್ತೀರೆಂದು ಆಸೆಪಟ್ಟಿದ್ದೇನೆ. ಅಲ್ಲದೆ ಈ ಇಲಾಖೆಯಲ್ಲಿ ಅನೇಕ ಸದಸ್ಯರು ಹೇಳಿದ ಹಾಗೆ ಭ್ರಷ್ಟಾಚಾರ ಬಹಳ ಇದೆ. ಇದನ್ನು ತಾವು ಹೋಗಲಾಡಿಸುವುದಕ್ಕೆ ಯಾವ ರೀತಿಯ ಪ್ರಯತ್ನ ಮಾಡುತ್ತೀರೋ ಮಾಡಬೇಕು. ಇದು ಪಕ್ಷದ ಪ್ರಶ್ನೆ ಅಲ್ಲ. ಧಾರವಾಡ ಜಿಲ್ಲಾ ಪರಿಷತ್ ನಮ್ಮ ಪಕ್ಷದ ಹಿಡಿತದಲ್ಲಿಯೇ ಇದೆ. ನಾನು ಇದರ ಮಾತನಾಡುವುದಕ್ಕೆ ಹೋಗುವುದಿಲ್ಲ. ಗುಳಿಗೆ ಪರ್ಚೇಸ್ ಮಾಡುವುದರಲ್ಲೇ ಅನೇಕ ಭ್ರಷ್ಟಾಚಾರ ಆಗಿದೆ. ಅಲ್ಲಿ ನಾವೇ ಇದ್ದೇವೆ, ಇದರ ಬಗ್ಗೆ ರಿಪೋರ್ಟ್ ಕೂಡ ಬಂದಿದೆ. ಬಹುತೇಕ ಜಿಲ್ಲಾ ಪರಿಷತ್ ಪರ್ಚೇಸ್ ಮಾಡಿದ ಮೆಡಿಸಿನ್ ಬಗ್ಗೆ ದೂರುಗಳು ಬಂದಿವೆ. ತಾವು ಯಾವರೀತಿ ಕಂಟ್ರೋಲ್ ಮಾಡುತ್ತೀರೆಂದು ಮಾನ್ಯ ಸಚಿವೆಯರಲ್ಲಿ ಕೇಳುತ್ತೇನೆ. ಮತ್ತೆ ಈಗ ಡಾಕ್ಟರುಗಳು ಫಾರಿನ್‌ಗೆ ಹೋಗುತ್ತಿದ್ದಾರೆ, ತಾವು ಅದನ್ನು ಕಂಟ್ರೋಲ್ ಮಾಡಿ, ಅವರು ಈ ರಾಜ್ಯದಲ್ಲಿಯೇ ಸೇವೆ ಮಾಡುವುದಕ್ಕೆ ಬಿಗಿ ಮಾಡಬೇಕು. ಸರ್ಕಾರಿ ಡಾಕ್ಟರುಗಳು, ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಿದ್ದಾರೆ, ಇದು ಕೆ.ಎಂ.ಸಿ.ಯಲ್ಲಿ ಅಷ್ಟೇ ಅಲ್ಲ ಬೇರೆ ಕಡೆಗಳಲ್ಲೂ ಮಾಡುತ್ತಾರೆ. ಇನ್ನು ತಮ್ಮ ಆಡಳಿತದಲ್ಲಿ ಹೆಚ್ಚಿನ ಪ್ರಗತಿ ಮಾಡುತ್ತೀರೆಂದು ಆಸೆ ಮಾಡುತ್ತಾ, ಕೆಲವೊಂದು ಆಸ್ಪತ್ರೆಗಳಿಗಾಗಿ ಮಂಜೂರಾತಿಗಾಗಿ ಕಳುಹಿಸಿರುವುದನ್ನು ಈ ಸರ್ಕಾರದವರು ತೀವ್ರವಾಗಿ ಮಂಜೂರು ಮಾಡಬೇಕೆಂದು ಹೇಳಿ, ಕೆಲವೊಂದು ಅನಿಸಿಕೆಗಳನ್ನು ಸಂಪೂರ್ಣ ಒಪ್ಪುತ್ತೀರೆಂದು ನಂಬಿ. ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸುತ್ತಾ, ವಿಸ್ತಾರವಾಗಿ ಮಾತನಾಡುವುದಕ್ಕೆ ಬಹುಶಃ ಸಮಯಾವಕಾಶ ಇಲ್ಲವೆಂದು ತಿಳಿದು, ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನಿಸುತ್ತೇನೆ. ಆ ಕಡೆಯ ಮಿತ್ರರು ಮಾತನಾಡುವಾಗ ಕಳೆದ ೫-೬ ವರ್ಷಗಳಲ್ಲಿ ಸಾಧನೆ ಆಗದೇ ಇದ್ದುದನ್ನು ೫-೬ ತಿಂಗಳಲ್ಲಿ ಮಾನ್ಯ ಸಚಿವೆಯರು ನೆರವೇರಿಸಿಕೊಡಬೇಕೆಂದು ಭಾವಿಸಿದರೆ, ಅದು ನಿಜವಾಗಿಯೂ ತಪ್ಪು ಎಂದು ನನಗನಿಸುತ್ತದೆ. ಆದರೆ ಸಚಿವೆಯರಲ್ಲಿ ನನ್ನ ವಿನಂತಿ, ತಾವು ನಿರ್ದಾಕ್ಷಿಣ್ಯವಾಗಿ ಈ ಆರೋಗ್ಯ ಇಲಾಖೆಯಲ್ಲಿ ಇರುವಂಥ ತೊಂದರೆಗಳನ್ನು, ನ್ಯೂನತೆಗಳನ್ನು ಅಥವಾ ದೋಷಗಳನ್ನು ಸರಿಪಡಿಸುವುದಕ್ಕೆ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕೆಂದು ಅನೇಕ ವಿಧದ ಸೂಚನೆ ಕೊಟ್ಟಿದ್ದಾರೆ, ನಿಮ್ಮ ಹತ್ತಿರ ಒಂದು ಶಕ್ತಿ ಇದೆ, ಅದೇನೆಂದರೆ, ಕಣ್ಣಿಗೆ ಕಂಡ ಅನ್ಯಾಯವನ್ನು ಕಂಡಂತೆ ಯಾವ ಮುಚ್ಚುಮರೆ ಇಲ್ಲದೆ ಹೇಳುವುದು; ಇದನ್ನು ಹೇಳುವುದು ಮಾತ್ರವಲ್ಲ ಈ ಕೆಲಸ ಆಗುವಹಾಗೆ ಮಾಡುವಂಥ ಧೈರ್ಯವನ್ನು ತಾವು ಮಾಡಬೇಕು. ರಾಜ್ಯದ ಎಲ್ಲಾ ಕಡೆಗೂ ಹೋಗಲಾಗದಿದ್ದರೂ, ಕೊನೆಯ ಪಕ್ಷ ಕೆಲವು ಮುಖ್ಯ ಆಸ್ಪತ್ರೆಗಳಿಗಾದರೂ ಹೋಗಿ ಈ ಕೆಲಸವನ್ನು ಮಾಡುವಂಥ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಇದರಿಂದ ನಿಜವಾಗಿಯೂ ತಮಗೆ ಪುಣ್ಯ ಬರುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಈ ಜಿಲ್ಲಾಪರಿಷತ್ ರಚನೆ ಆದ ಮೇಲೆ ಈ ಆರೋಗ

ಇಲಾಖೆ, ಜಿಲ್ಲಾಪರಿಷತ್ತಿನಲ್ಲಿ ಬಹಳ ದೊಡ್ಡ ಸ್ಥಾನ. ಹಾಗೆಯೇ ರಾಜ್ಯ ವಲಯದಿಂದ ಆರೋಗ್ಯ ಇಲಾಖೆ ಮೂಲಕ ನಡೆಸುವಂತಹ ಆಸ್ಪತ್ರೆಗಳು ಇನ್ನೊಂದು ಕಡೆ. ಜಿಲ್ಲಾಪರಿಷತ್ತಿಗೆ ಆಸ್ಪತ್ರೆಗಳನ್ನು ಸಮರ್ಪಕವಾಗಿ ನಡೆಸಬೇಕಾದರೆ, ಸೂಕ್ತ ಸಿಬ್ಬಂದಿಗಳನ್ನು ಕೊಡಬೇಕು, ಅಲ್ಲಿ ಕಟ್ಟಡಗಳು ಆಗಬೇಕು. ಮದ್ದನ್ನು ಸಮರ್ಪಕವಾಗಿ ಕೊಡಬೇಕು. ಇದು ತಮಗೆ ಗ್ರಾಹ್ಯವಾಗುತ್ತಿದೆಯೆಂದು ತಿಳಿದುಕೊಂಡಿದ್ದೇನೆ. ಇನ್ನು ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಒಂದು ವರ್ಷದ ಅವಧಿಯಲ್ಲಿ ಹೆಲ್ತ್ ಸೆಂಟರುಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಯಿತು ಎಂದು ಹೇಳಿದ್ದೀರಿ. ಇದರ ಪರಿಣಾಮವಾಗಿ ನನ್ನ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, ಕೆಲವು ಮಂಡಲ ಪಂಚಾಯ್ತಿಗಳಲ್ಲಿ ಕನಿಷ್ಟ ಅವಶ್ಯಕತೆ ಒಂದು ಪಿ.ಹೆಚ್.ಸಿ. ಆದರೂ ಬೇಕು. ಕೆಲವು ಮಂಡಲಗಳಲ್ಲಿ ೩-೪ ಪಿ.ಹೆಚ್.ಸಿ.ಗಳು ಇವೆ. ಕೆಲವು ಮಂಡಲಿಗಳಲ್ಲಿ ಒಂದೂ ಇಲ್ಲ ಪಿ.ಹೆಚ್.ಸಿ. ಆಗಲೀ, ಪಿ.ಹೆಚ್.ಯು. ಆಗಲೀ ಇಲ್ಲ. ಈ ಎಲ್ಲವನ್ನು ಮೇಲ್ದರ್ಜೆಗೆ ಏರಿಸುವಂಥ ಸಂದರ್ಭದಲ್ಲಿ ಈ ಯೋಜನೆಯನ್ನು ಮಾಡುವುದರ ಜೊತೆಗೆ, ಎಲ್ಲಿ ಯಾವ ಮಂಡಲದೊಳಗೆ ಆರೋಗ್ಯಕ್ಕಾಗಿ ಚಿಕಿತ್ಸೆ ವ್ಯವಸ್ಥೆ ಇಲ್ಲವೋ ಅಲ್ಲಿಗೆ ಈ ಕೇಂದ್ರಗಳನ್ನು ಕೊಡುವಂಥ ವ್ಯವಸ್ಥೆ ಆಗಬೇಕು. ನನ್ನ ಕ್ಷೇತ್ರದಲ್ಲಿ ೫ ಮಂಡಲಗಳಲ್ಲಿ ಇಲ್ಲ ಉಪ್ಪುಂದ, ಕಂಬಿದ ಕೋಣೆ, ಹೆಮ್ಮಾಡಿ, ಕರಕುಂಜೆ, ಚಿತ್ತೂರು ಇಲ್ಲಿಗೆ ಪ್ರೈಮರಿ ಹೆಲ್ತ್ ಸೆಂಟರುಗಳನ್ನು ಕೊಡುವಂಥ ಕಾರ್ಯವನ್ನು ಜೊತೆ ಜೊತೆಯಾಗಿ ಕೈಗೊಳ್ಳಬೇಕೆಂದು ಬಯಸುತ್ತೇನೆ. ತಮ್ಮ ವಾರ್ಷಿಕ ವರದಿಯಲ್ಲಿ ೯ ತಿಂಗಳ ಸಾಧನೆ ಇದೆ. ಈ ಸಾಧನೆ ಹೆಚ್ಚಾಗಿ ಆಗಬೇಕು, ಏಕೆ ಆಗಿಲ್ಲ? ನಾನು ಮಂತ್ರಿಗಳನ್ನು ದೂರುವುದಿಲ್ಲ. ಆದರೆ ಸಮರ್ಪಕವಾಗಿ ಆಗುವ ದೃಷ್ಟಿಯಲ್ಲಿ ಮುಂದಾಲೋಚನೆ ಯೋಜನೆಯನ್ನು ಹಾಕಿಕೊಳ್ಳಬೇಕು. ಕೇಂದ್ರದಿಂದ ಸಂಪೂರ್ಣವಾದ ಸಹಕಾರ ಸಿಗುವಂಥ ರಾಷ್ಟ್ರೀಯ ಕುಷ್ಟ ರೋಗ ನಿರ್ಮೂಲನೆ ಕಾರ್ಯಕ್ರಮ, ಅಂಧತ್ವ ನಿವಾರಣಾ ಕಾರ್ಯಕ್ರಮ, ಮಲೇರಿಯಾ ನಿವಾರಣಾ ಕಾರ್ಯಕ್ರಮದಲ್ಲಿ ಶೇಕಡಾ ೫೦–೬೦–೭೦ರ ಸಾಧನೆಯಾಗಿದೆ. ಹಾಗೆಯೇ ಸಮಗ್ರ ಬಾಲ ವಿಕಾಸ ಸೇವೆಯಲ್ಲಿ ಬಿ.ಸಿ.ಜಿ. ಡಿ.ಪಿ.ಟಿ. ಪೋಲಿಯೋ, ದಡಾರ, ಇವು ಶೇಕಡಾ ೪೭–೪೭–೪೮ ಈ ರೀತಿ ಸಾಧನೆಯಾಗಿದೆ. ಈ ಸಾಧನೆ ಹೆಚ್ಚಾಗಬೇಕು. ಇವು ಜನರಿಗೆ ಉಚಿತವಾಗಿ ಸಿಗತಕ್ಕ ಸೇವೆಗಳು ಗ್ರಾಮೀಣ ಪ್ರದೇಶಗಳಲ್ಲಿ ಈ ಸೇವೆಗಳು ಸರಿಯಾಗಿ ಆಗುವಂಥಾದ್ದನ್ನು ನೋಡಬೇಕಾದ ಅವಶ್ಯಕತೆ ಇದೆ. ಅದೇ ರೀತಿ ರೂರಲ್ ಡಿಸ್‌ಪೆನ್ಸರಿಗಳ ಬಗ್ಗೆ ಬಂದರೆ ನನ್ನ ಕ್ಷೇತ್ರದಲ್ಲಿಯೇ ಮೂರು ಡಿಸ್‌ಪೆನ್ಸರಿಗಳು ಇವೆ. ಇವಕ್ಕೆ ಸರಿಯಾದ ವೈದ್ಯರು ಇಲ್ಲ. ಇವು ಯಾವುದೋ ಮದ್ರಾಸ್ ಸರ್ಕಾರದ ಪ್ಯಾಟ್ರನ್‌ನಲ್ಲಿ ಸ್ಥಾಪನೆ ಆದವು. ಈ ಮೂರರಲ್ಲಿ ಇರುವಂಥ ವೈದ್ಯಾಧಿಕಾರಿಗಳು ಯಾವುದೋ ಊರಿನಲ್ಲಿ ಇದ್ದಾರೆ. ಅವರಿಗೆ ಸಂಬಳ ಸಿಗುತ್ತಿದೆ, ಮದ್ದು ಹೋಗುತ್ತದೆ. ಜಿಲ್ಲಾ ಪರಿಷತ್ ಸಭೆಯಲ್ಲಿ ಹೇಳಿದಾಗ, ಜಿಲ್ಲಾ ವೈದ್ಯಾಧಿಕಾರಿಗಳು ಅವರಿಗೆ ತಿಳಿಸಿ, ಆ ಸ್ಥಳಕ್ಕೆ ಹೋಗುವ ಬದಲು, ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ ಎಂದು ಹೇಳಿ, ಅವರನ್ನು ಕರೆಸಿ, ಎಂ.ಎಲ್.ಎ.ಗಳು ದೂರು ಹೇಳುತ್ತಿದ್ದಾರೆ ಎಂದು ಅವರಿಗೆ ತಿಳಿಸಿದ್ದರು, ಈ ವ್ಯವಸ್ಥೆ ಹಾಗೆಯೇ ನಡೆಯುತ್ತಿದೆ. ನಾನು ಹೇಳಿದನೇ ಹೊರತು ವ್ಯವಸ್ಥೆ ಮಾತ್ರ ಸರಿಯಾಗಿಲ್ಲ. ಅವರಲ್ಲಿ ಒಬ್ಬರು ಚುನಾವಣೆಗೆ ನಿಂತು, ಮಂಡಲ ಪಂಚಾಯ್ತಿ ಪ್ರಧಾನರೂ ಆದರು, ಅವರು ನನ್ನ ಪಕ್ಷದವರಲ್ಲ. ಅವರು ರಾಜೀನಾಮೆ ಕೊಟ್ಟ ಮೇಲೆ ಮತ್ತೆ ಮದ್ದು ತೆಗೆದುಕೊಂಡಿದ್ದಾರೆ. ಇದನ್ನು ಗುರುತು ಮಾಡಿ ನಾನು ಆಕ್ಷೇಪ ಹೇಳಿದ್ದೇನೆ. ಆದರೆ ಈ ವಿಚಾರದ ಬಗ್ಗೆ ತನಿಖೆ ಮಾಡಲಿಲ್ಲ. ಇಂತಹ ಅವ್ಯವಹಾರ ನಡೆಯುತ್ತಿವೆ, ತಾವು ನೋಡಬೇಕು. ಇದೇ ರೀತಿ ಇವತ್ತು ಎಲ್ಲಿ ನೋಡಿದರೂ ಖಾಸಗಿ ಆಸ್ಪತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ನಮ್ಮ ಆಸ್ಪತ್ರೆಗಳಲ್ಲಿ ಒಳ್ಳೆಯ ವ್ಯವಸ್ಥೆ ಇದೆ, ಒಳ್ಳೆಯ ಡಾಕ್ಟರುಗಳು ಇದ್ದಾರೆ, ಒಳ್ಳೆಯ ಸೇವೆ ಮಾಡುವಂಥ ದಾದಿಯರು ಇದ್ದಾರೆ. ಆದರೂ ಖಾಸಗಿ ಆಸ್ಪತ್ರೆಗಳಿಗೆ ಏಕೆ ಜನ ಹೋಗುತ್ತಾರೆ. ನಮ್ಮ ಕುಂದಾಪುರ ತಾಲ್ಲೂಕು ಕೇಂದ್ರವನ್ನು ತೆಗೆದುಕೊಂಡರೆ ಅಲ್ಲಿ ಸಾರ್ವಜನಿಕ ಆಸ್ಪತ್ರೆ ಇದೆ. ಆದರೂ ಅಲ್ಲಿ ೯ ನರ್ಸಿಂಗ್ ಹೋಮ್ ತಲೆ ಎತ್ತಿವೆ. ಇವು ಕಳೆದ ೩-೪ ವರ್ಷಗಳಲ್ಲಿ ಆಗಿವೆ. ಅಲ್ಲಿ ವಿಪರೀತ ರಷ್, ಮೊದಲೇ ಬುಕಿಂಗ್ ಮಾಡಿಕೊಂಡು ಹೋಗುತ್ತಾರೆ. ಇದು ಏಕೆ? ಇದನ್ನು ಕುರಿತು ಸಮಗ್ರ ಚಿಂತನೆ ಆಗಬೇಕು. ಇದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಸಾಕಷ್ಟು ಶುಶ್ರೂಷೆ, ಅವಕಾಶಗಳು ಇಲ್ಲದೇ ಇದ್ದರೂ, ಸಾಕಷ್ಟು ತಜ್ಞರು ಡಾಕ್ಟರು ಇಲ್ಲದೇ ಇದ್ದರೂ ಏಕೆ ಹೋಗುತ್ತಾರೆ? ಇದರ ಬಗ್ಗೆ ಆಮೂಲಾಗ್ರವಾಗಿ ಚಿಂತನೆ ಈ ಬಗ್ಗೆ ಆಗಬೇಕು. ನಮ್ಮ ಡಾಕ್ಟರುಗಳಲ್ಲಿ ಹುರುಪು ಕೊಡುವಂಥ ಸೇವಾ ಮನೋಭಾವನೆಯಿಂದ ಕೆಲಸ ಮಾಡತಕ್ಕಂಥ ಒಂದು ಪ್ರತಿಕ್ರಿಯೆ, ಮಾನಸಿಕ ಪ್ರತಿಸ್ಪಂದನ ಆಗುವಂಥ ವಾತಾವರಣವನ್ನು ನಿರ್ಮಿಸಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಈ ವರದಿಯಲ್ಲಿ ೩೧-೧೨-೯೫ರವರೆಗೆ ೧೩೫೫ ವಾಹನಗಳು ಚಾಲನೆಯಲ್ಲಿದೆ. ಹಾಗೂ ೩೮೮ ವಾಹನಗಳು ಅಚಲನಾ ಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ. ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಇದೇ ರೀತಿ ಸಹಸ್ರಾರು ವಾಹನಗಳು ಚಾಲನೆ ಸ್ಥಿತಿಯಲ್ಲಿಲ್ಲ. ಹಾಗೂ ಹಾಳು ಬಿದ್ದಿವೆ. ಮಂಗಳೂರಿನ ಡಿ.ಹೆಚ್.ಓ. ಆಫೀಸಿನಲ್ಲಿ ಅನೇಕ ವರ್ಷಗಳಿಂದ ಚಾಲನೆಯಲ್ಲಿಲ್ಲದ ಹಲವಾರು ವಾಹನಗಳು ಕೆಟ್ಟು ನಿಂತಿದೆ. ಇದನ್ನು ಆಕ್ಷನ್ ಮಾಡಬೇಕು ಈಗ ಮಾಡದಿದ್ದರೆ ಹಾಗೂ ಇದನ್ನು ಇನ್ನೂ ಕೆಲವು ವರ್ಷಗಳು ಹೀಗೆ ಬಿಟ್ಟರೆ ಅವೂ ರಸ್ಟ್ ಹಿಡಿದು ಹಾಳಾಗಿ ಹೋಗುತ್ತವೆ. ಈಗ ಆಕ್ಷನ್ ಮಾಡಿದರೆ ಸ್ವಲ್ಪ ಹೆಚ್ಚು ಹಣವಾದರು ಬರುತ್ತದೆ. ಆರೋಗ್ಯ ಇಲಾಖೆಯಲ್ಲಿ ಚಾಲನೆಯಲ್ಲಿಲ್ಲದ ವಾಹನಗಳನ್ನು ಕೂಡಲೇ ಹರಾಜು ಮಾಡಲು ಕ್ರಮ ಕೈಗೊಳ್ಳಬೇಕೆಂದು ಆರೋಗ್ಯ ಮಂತ್ರಿಗಳನ್ನು ವಿನಂತಿಸಿ ಕೊಳ್ಳುತ್ತೇನೆ.

ಇನ್ನು ಖಾಲಿ ಇರುವ ಸ್ಥಾನಗಳನ್ನು ತುಂಬುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ರಾಜ್ಯದ ಆಸ್ಪತ್ರೆಗಳಲ್ಲಿ ಸರ್ಜನ್‌ಗಳು ೧೬೬, ಹೆಲ್ತ್ ಆಫೀಸರ್ ಕ್ಲಾಸ್ ೧, ೭೧. ಅಸಿಸ್ಟೆಂಟ್ ಸರ್ಜನ್ ೩೨೧. ಅಸಿಸ್ಟೆಂಟ್ ಡೆಂಟಲ್ ಸರ್ಜನ್ ೧೨೨, ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳು, ಫಾರ್ಮಾಸಿಸ್ಟ್ ೨೦೦ ಈ ರೀತಿ ಒಟ್ಟು ೬೪೫೬ ಹುದ್ದೆಗಳು ಖಾಲಿ ಇವೆ. ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಅಸಿಸ್ಟೆಂಟ್ ಪ್ರೊಫೇಸರ್ ಲೆಕ್ಚರರ್ ಹುದ್ದೆಗಳು ೧೦೭೫ ಖಾಲಿ ಇವೆ. ೬ ತಿಂಗಳಿನಲ್ಲಿ ಎಲ್ಲಾ ಹುದ್ದೆಗಳನ್ನು ತುಂಬಲು ಸಾಧ್ಯವಿಲ್ಲ. ನೀವು ೬ ತಿಂಗಳಲ್ಲಿ ಇವುಗಳನ್ನು ತುಂಬಬೇಕಿತ್ತೆಂದು ನಾನು ಹೇಳುವುದಿಲ್ಲ. ೬ ತಿಂಗಳಿನಲ್ಲಿ ತುಂಬಿಸಲು ಏನಾದರೂ ಪ್ರಯತ್ನ ಮಾಡಬೇಕಾಗಿತ್ತೆಂದು ನನಗನ್ನಿಸುತ್ತದೆ. ಇನ್ನಾದರೂ ಶೀಘ್ರವಾಗಿ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಬೇಕು. ಪಿ.ಎಸ್.ಸಿ. ಯವರು ಮಾಡತಕ್ಕ ಶ್ರ ದಿಂದ ಅವೆಲ್ಲಿ ಬಹಳ ವಿಳಂಬವಾಗುತ್ತದೆ. ಆದ್ದರಿಂದ ಕೂಡಲೆ ರೋಸ್ಟರ್ ಪ್ರಕಾರ ಈ ಹುದ್ದೆಗಳನ್ನು ತುಂಬುವ ವ್ಯವಸ್ಥೆ ಮಾಡಲು ಸನ್ಮಾನ್ಯ ಆರೋಗ್ಯ ಸಚಿವೆಯರನ್ನು ಕೇಳಿಕೊಳ್ಳುತ್ತೇನೆ. ಎರಡು ಸಾವಿರದ ಇಸವಿಯೊಳಗೆ ನಾವು ಸರ್ವರಿಗೂ ಆರೋಗ್ಯ ಎನ್ನುವ ತತ್ವವನ್ನು ನಂಬಿಕೊಂಡಿದ್ದೇವೆ. ಈ ರೀತಿ ಖಾಲಿಯಿದ್ದರೆ ಈ ಆರೋಗ್ಯ ಜನರಿಗೆ ಎಲ್ಲಿಂದ ಬರುತ್ತದೆಂದು ನಮಗೆ ಆಶ್ಚರ್ಯವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಹಿಂದಿನ ವರ್ಷ ೨ ಸ್ಥಾನ ಖಾಲಿ ಇತ್ತು. ಮೆಡಿಕಲ್ ಆಫೀಸರ್ ಮತ್ತು ಲೇಡಿ ಮೆಡಿಕಲ್ ಆಫೀಸರ್ ಸೇರಿ, ಈ ವರ್ಷ ಐದು ಸ್ಥಾನಗಳು ಖಾಲಿಯಾಗಿವೆ ? ಬೈಂದೂರು, ಕೊಲ್ಲೂರು, ವಂದಸೆ, ಹತ್ತಾಡಿ, ಹಳ್ಳಿಹೊಳೆ, ಇಲ್ಲಿ ಬಡವರು ದುರ್ಬಲ ವರ್ಗದವರು ಬಹಳ ಜನ ಇದ್ದಾರೆ. ಅಲ್ಲಿ ಖಾಸಗಿ ಆಸ್ಪತ್ರೆಗಳೂ ಇಲ್ಲ. ಇಂ ಹ ಕಡೆಗಳಲ್ಲಿ ಹುದ್ದೆಗಳನ್ನು ತುಂಬದಿದ್ದರೆ ಬಹಳ ಕಷ್ಟವಾಗುತ್ತದೆ. ಮಹಿಳಾ ವೈದ್ಯಾಧಿಕಾರಿಯ ಹುದ್ದೆಗಳು ಹಾಗೂ ಇತರೆ ಎಲ್ಲಾ ಹುದ್ದೆಗಳನ್ನು ನನ್ನ ಕ್ಷೇತ್ರದಲ್ಲಿರತಕ್ಕ ಆಸ್ಪತ್ರೆಗಳಿಗೆ ತುಂಬಬೇಕೆಂದು ನಾನು ವಿನಂತಿಸಿ ಕೊಳ್ಳುತ್ತೇನೆ.

ಇನ್ನು ಮೆಡಿಕಲ್ ಕಾಲೇಜ್‌ಗಳಲ್ಲಿರುವ ಸೀಟ್‌ಗಳ ಬಗ್ಗೆ ನಾನು ಹೆಚ್ಚು ಹೇಳಲು ಹೋಗುವುದಿಲ್ಲ ಅದರ ಬಗ್ಗೆ ಹಲವಾರು ಸದಸ್ಯರು ವ್ಯಾಖ್ಯಾನ ಮಾಡಿದ್ದಾರೆ. ಸರ್ಕಾರ ಒಂದು ನೀತಿಯನ್ನು ತೆಗೆದುಕೊಂಡಿದೆ. ಅದು ತಪ್ಪೋ ಸರಿಯೋ ಗೊತ್ತಿಲ್ಲ. ಬಹುಶಃ ಸರ್ಕಾರ ಎಲ್ಲಾ ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಸರಕಾರವೇ ತೆಗೆದುಕೊಂಡು ನಡೆಸುವ ಸ್ಥಿತಿಯಲಿಲ್ಲ. ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಹಾಗೂ ಒಳ್ಳೆಯದಾಗುತ್ತಿತ್ತು. ಆದರೆ ಜನಸಾಮಾನ್ಯರಿಗೆ, ಬಡವರಿಗೆ ನ್ಯಾಯಸಿಗುವಂತೆ ಒಂದು ರೀತಿಯಲ್ಲಿ ಏನಾದರೂ ಕ್ರಮ ಕೈಗೊಳ್ಳಬೇಕು. ೨೮೫೦ ಒಟ್ಟು ಸೀಟುಗಳು ಇವೆ, ಅದರಲ್ಲಿ ೬೩೫ ಸರ್ಕಾರಿ ಕಾಲೇಜುಗಳಲ್ಲಿ ಇರತಕ್ಕ ಸೀಟುಗಳು. ೨೨೧೫ ಖಾಸಗಿ ಕಾಲೇಜಿನಲ್ಲಿರತಕ್ಕ ಸೀಟುಗಳು. ೨ ವರ್ಷದ ಹಿಂದೆ ಸರ್ಕಾರಕ್ಕೆ ಕೊಡತಕ್ಕ ಸೀಟು, ೩೬೫ ಕಳೆದ ವರ್ಷ ೩೭೫ ಈ ವರ್ಷ ಇನ್ನೂ ಫಿಕ್ಸ್ ಆಗಿಲ್ಲ, ಏನಾದರೂ ೫ ಸೀಟು ಜಾಸ್ತಿಯಾಗಬಹುದು. ಒಟ್ಟು ಸೀಟುಗಳಲ್ಲಿ ಶೇಕಡ ೫೦ರಷ್ಟನ್ನು ಮೆರಿಟ್ ಪ್ರಕಾರ ಕೊಡತಕ್ಕ ಯೋಜನೆಯನ್ನು ರೂಪಿಸುವಂತಹ ಕಾರ್ಯಕ್ರಮ ಕೈಗೊಳ್ಳಬೇಕು. ಅನೇಕ ಹಳ್ಳಿಗಳಲ್ಲಿ ಕ್ವಾಕ್ ಡಾಕ್ಟರ್ಸ್‌ಗಳು ಇದ್ದಾರೆ. ಯಾವುದೋ ಒಂದು ಡಿಗ್ರಿ, ಹಾಕಿಕೊಂಡು ಜನರನ್ನು ಮೋಸಗೊಳಿಸುತ್ತಿದ್ದಾರೆ. ಅವರಿಗೆ ಯಾವ ಒಂದು ವೈದ್ಯಕೀಯ ಶಾಸ್ತ್ರವೂ ಗೊತ್ತಿಲ್ಲ.

ಅವರು ಹೋಮಿಯೋಪತಿ ವ್ಯಾಸಂಗ ಮಾಡಿದ್ದು ಸಹ ಇಲ್ಲ. ಕೆಲವರು ಬಿಹಾರದಿಂದ ಡಿಗ್ರಿ ಸರ್ಟಿಫಿಕೇಟ್ಸ್ ತರಿಸಿ ಕೊಡುವವರಿದ್ದಾರೆ ಎಂ. .ಹೆಚ್.ಎಸ್. ಎನ್ನುವ ಒಂದು ಡಿಗ್ರಿ ಹಾಕಿಕೊಂಡು ರಾತ್ರಿ ಬೆಳಗಾಗುವುದರೊಳಗಾಗಿ ಡಾಕ್ಟರ್ಸ್ ಆಗಿಬಿಡುತ್ತಾರೆ. ಇವರು ಹೇಗಪ್ಪ ಡಾಕ್ಟರ್ ಇಷ್ಟು ಬೇಗ ಅದರು ಎಂದು ನಾನು ಯೋಚನೆ ಮಾಡುವಂತಾಗುತ್ತದೆ. ಅಷ್ಟು ಬೇಗನೆ ಅವರು ಪ್ರಾಕ್ಟೀಸ್ ಸಹ ಮಾಡುವುದಕ್ಕೆ ಶುರು ಮಾಡಿಬಿಡುತ್ತಾರೆ. ಅವರು ಒಂದು ಸ್ಟೆತಾಸ್ಕೋಪ್ ಇಟ್ಟುಕೊಂಡು ಏನೇನೋ ಟ್ರೀಟ್‌ಮೆಂಟ್ ಕೊಡುವುದು ಇವೆಲ್ಲ ನಡೆಯುತ್ತಿವೆ. ಕೆಲವರು ಇದನ್ನು ದುರುಪಯೋಗ ಮಾಡಿ

ಕೊಳ್ಳುತ್ತಿದ್ದಾರೆ. ಕೆಲವು ಅಬಾರ್ಷನ್ ಕೇಸ್‌ಗಳನ್ನು ಸಹ ಡೀಲ್ ಮಾಡುವುದು, ಇದರಿಂದ ಎಷ್ಟೋ ಜನ ಹೆಣ್ಣು ಮಕ್ಕಳು ಸತ್ತು ಹೋಗಿರುವುದು ಉಂಟು. ಇನ್ನು ಏನೇನೋ ಕಾಯಿಲೆಗಳಿಗೆ ಟ್ರೀಟ್‌ಮೆಂಟ್ ಮಾಡುವುದು, ಮುಗ್ಧ ಜನರ ಮೇಲೆ ಇವರು ಪ್ರಯೋಗ ಮಾಡುವುದು. ಇದರಿಂದ ಅನ್ಯಾಯವಾದ, ಮೋಸವಾದ ಬಗ್ಗೆ ನಾನು ಈಗಾಗಲೇ ಮಾನ್ಯ ಮಂತ್ರಿಗಳಿಗೆ ಒಂದು ಪತ್ರ ಬರೆದು ತಿಳಿಸಿದ್ದೇನೆ. ಈ ಬಗ್ಗೆ ತಾವು ಎಚ್ಚರಿಕೆ ವಹಿಸಬೇಕು. ಅನ್ ಕ್ವಾಲಿಫೈಡ್ ಡಾಕ್ಟರ್ಸ್ ಯಾರು ಇರುತ್ತಾರೋ ಅವರು ಇಂತಹ ಪ್ರಾಕ್ಟೀಸ್‌ಗಳನ್ನು ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ಸರಿ ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ಒಂದು ವರದಿ ಬಂದಿದೆ. ಅದೇನೆಂದರೆ ಡ್ರಗ್ ಕಂಟ್ರೋಲ್ ಆಫೀಸಿನಲ್ಲಿ ಯಾರೋ ಒಬ್ಬರ ಮಾನವಿ ಪ್ರಕಾರ ಪೋಲೀಸಿನವರು ರೈಡ್ ಮಾಡಿದರು ಎಂದು. ಅಲ್ಲಿ ಗ್ಯಾಂಬ್ಲಿಂಗ್ ಇನ್ನು ಏನೇನೋ ನಡೆಯುತ್ತಿತ್ತು ಎಂದು ವರದಿ ಬಂದಿದೆ. ಇಂತಹ ಘಟನೆಗಳ ಬಗ್ಗೆ ಮಾನ್ಯ ಸಚಿವರು ಯೋಗ್ಯ ಕ್ರಮ ಕೈಗೊಂಡು ಅನಿರೀಕ್ಷಿತವಾಗಿ ಭೇಟಿ ಕೊಟ್ಟು ವಿಷಯಗಳನ್ನು ಬಹಿರಂಗಗೊಳಿಸಿದರೆ ಹೆಚ್ಚು ಹೆಚ್ಚು ಅನುಕೂಲವಾಗುತ್ತದೆ. ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಗುರಿ ಮತ್ತು ಅದರ ಸಾಧನೆ ಮಾಡುವಲ್ಲಿ ಉನ್ನತ ಮಟ್ಟದಲ್ಲಿ ಉತ್ಸಾಹ ಇಲ್ಲ. ಅದರಲ್ಲಿ ಕುಟುಂಬ ಕಲ್ಯಾಣದ ಗುರಿ ಮೀರುವುದಕ್ಕೆ ಸಾಧ್ಯ ಆಗುತ್ತಿಲ್ಲ, ನಾನೂ ಸಹ ಒಂದು ತಾಲ್ಲೂಕು ಪಂಚಾಯತಿ ಸಮಿತಿಯ ಅಧ್ಯಕ್ಷ. ತಾಲ್ಲೂಕು ಪಂಚಾಯಿತಿ ಸಮಿತಿಗೆ ಒಂದು ಟಾರ್ಗೇಟ್ ಕೊಟ್ಟಿರುತ್ತಾರೆ. ನಮಗೆ ಅಧಿಕಾರಿಗಳ ಮತ್ತು ಅಧಿಕಾರೇತರ ನೆರವು ಸಾಕಷ್ಟು ಸಿಗುವುದಿಲ್ಲ. ಈ ಬಗ್ಗೆ ನಾವು ಯಾರ ಮೇಲೂ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಕಾರ್ಯಕ್ರಮ ಏನಿದ್ದರೂ ಸ್ವಯಂಪ್ರೇರಣೆಯಿಂದ ಬರತಕ್ಕಂಥಾದ್ದು ಅಧಿಕಾರಿಗಳು ಮತ್ತು ಅಧಿಕಾರೇತರರು ಈ ಬಗ್ಗೆ ಪ್ರೋತ್ಸಾಹ ನೀಡಿದರೆ ಮಾತ್ರ ಈ ಕಾರ್ಯ ಯಶಸ್ವಿಯಾಗುತ್ತದೆ ಎಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶ ನೀಡಿದ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ನಾನು ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು.—ಈಗ ಸಮಯ ಆರೂವರೆ ಗಂಟೆಯಾದ ಕಾರಣ ನಾನು ಸದನದ ಇಚ್ಛೆಯನ್ನು ಕೇಳ ಬಯಸುತ್ತೇನೆ. ನಾಳೆ ಮಾನ್ಯ ಮಂತ್ರಿಗಳಿಂದ ಉತ್ತರ ಇದೆ. ಆದ್ದರಿಂದ ಮಾತನಾಡತಕ್ಕಂಥ ಮಾನ್ಯ ಸದಸ್ಯರು ಇವತ್ತೇ ಮಾತನಾಡಬೇಕು. ಇವತ್ತು ಅವಕಾಶ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಮ್ಮ ಕಡೆ ಇನ್ನೂ ಇಬ್ಬರು ಸದಸ್ಯರು ಮಾತನಾಡುವವರಿದ್ದಾರೆ. ಅವರಿಗೊಂದು ೫ ನಿಮಿಷ ಅವಕಾಶ ಕೊಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಕೆಲವು ವಿಚಾರಗಳು ಬಂದಾಗ ನಾವೇನಾದರೂ ಪ್ರಶ್ನೆ ಕೇಳಲು ತಮ್ಮ ಗಮನ ಸೆಳೆದಾಗ ನೀವು ನಮಗೆ ಆಗಾಗ ಎಚ್ಚರಿಕೆ ಕೊಟ್ಟು ಬೇಡಿಕೆಗಳು ಬಂದಾಗ ಮಾತನಾಡಿ ಎಂದು ತಾವು ಹೇಳುವುದನ್ನು ನಾವು ನೋಡಿದ್ದೇವೆ. ಈಗ ತಾವು ನಮ್ಮನ್ನು ನೂರು ಕಿಲೋಮೀಟರ್ ಸ್ಪೀಡ್‌ನಲ್ಲಿ ಓಡಿಸುತ್ತಿದ್ದೀರಿ, ಆದ್ದರಿಂದ ತಾವು ದಯಮಾಡಿ ನಮ್ಮ ಕಷ್ಟಕ್ಕೆ ತಾವು ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ನಮಗೂ ಒಂದು ೫ ನಿಮಿಷ ಅವಕಾಶ ಕೊಡಿ.

† ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಆರೋಗ್ಯ ಸಚಿವರು ಈ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಈ ಬಗ್ಗೆ ಈಗಾಗಲೇ ಹಿರಿಯ ಸದಸ್ಯರಾದ ಶ್ರೀಮಾನ್ ಸಿಂಧ್ಯಾರವರು ಹಾಗೂ ಇದೇ ಒಂದು ವೃತ್ತಿಯಲ್ಲಿ ಮಾಹಿತಿ ಇರುವಂತಹ ಶ್ರೀಮಾನ್ ಡಾಕ್ಟರ್ ಮಲ್ಕರೆಡ್ಡಿಯವರು ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ನಾನು ಅದಕ್ಕಿಂತ ಹೆಚ್ಚು ಏನನ್ನು ಹೇಳದೆ ಕೆಲವು ಸಲಹೆಗಳನ್ನು ಮಾತ್ರ ನನ್ನ ಜಿಲ್ಲೆಗೆ ಸೀಮಿತ ಇಟ್ಟುಕೊಂಡು ಹೇಳಬಯಸುತ್ತೇನೆ. ಮೊದಲನೆಯದಾಗಿ ಇವತ್ತಿನ ದಿವಸ ರಾಜ್ಯದಲ್ಲಿ ೫೬ ಫಾರ್ಮಸಿ ಕಾಲೇಜುಗಳು ಇದ್ದು ಅದರಲ್ಲಿ ಒಂದೇ ಒಂದು ಸರ್ಕಾರದ ಫಾರ್ಮಸಿ ಕಾಲೇಜು ಇರುತ್ತದೆ. ಅದೂ ಸಹ ಬೆಂಗಳೂರು ನಗರದಲ್ಲಿ ೧೯೬೪ನೇ ಇಸವಿಯಲ್ಲಿ ಸ್ಥಾಪ ಮಾಡಿದ್ದು ಈಗ ೩ ಹಂತದಲ್ಲಿ ಅದು ಪ್ರಾರಂಭವಾಗಿದೆ. ಉಳಿದದ್ದು ಹಂತ ಹಂತವಾಗಿ ಎಲ್ಲಾ ಡಿವಿಜನ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಈ ಫಾರ್ಮಸಿ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ೪೫ ಲಕ್ಷ ರೂಗಳ ಯೋಜನೆಗಳು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಲುವಾಗಿ ನಿಮ್ಮ ಇಲಾಖೆಗೆ ಬಂದಿವೆ. ಅವುಗಳಿಗೆ ಕೂಡಲೇ ಮಂಜೂರಾತಿ ನೀಡ

ಬೇಕೆಂದು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ ಬೆಳಗಾಂ ಆಸ್ಪತ್ರೆ ಕಟ್ಟಡದ್ದು ಮತ್ತು ನಮ್ಮ ಬೈಲಹೊಂಗಲ ಟಿಬಿ ಸೆಂಟರದು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಲುವಾಗಿ ನಿಮ್ಮ ಇಲಾಖೆಯಲ್ಲಿದೆ, ಅವನ್ನು ಕೂಡಲೇ ಮಂಜೂರು ಮಾಡಬೇಕು. ಕೆಲವು ಕಡೆ ಹಳೇ ಜಿಲ್ಲಾ ಲೋಕಲ್ ಬೋರ್ಡ್‌ನವರು ಪ್ರಸೂತಿ ಗೃಹಗಳನ್ನು ತೆಗೆದಿದ್ದಾರೆ. ಬೆಳಗಾಂ ಜಿಲ್ಲೆಯ ನೇಸರ್ಗಿ ಎಂಬ ಗ್ರಾಮದಲ್ಲಿ ಒಂದು ಪ್ರಸೂತಿ ಗೃಹವಿದ್ದು ೫ ಮಂದಿ ನರ್ಸ್‌ಗಳು ಹಾಗೂ ದಾದಿಯರು ಮಾತ್ರ ಇದ್ದಾರೆ; ವೈದ್ಯರು ಮಾತ್ರ ಒಬ್ಬರೂ ಇಲ್ಲ, ಮೊದಲು ಒಬ್ಬರು ಇದ್ದರು ಅವರು ವರ್ಗವಾಗಿ ಹೋದ ನಂತರ ಬೇರೆ ಯಾರೂ ಬಂದಿಲ್ಲ. ಇದರಿಂದಾಗಿ ೫ ಮಂದಿ ನರ್ಸ್‌ಗಳಿಗೂ ಕೂಡಿಸಿ ಪಗಾರ ಕೊಡುವಂತಾಗಿದೆ. ಆದ್ದರಿಂದ ಅಲ್ಲಿಗೆ ಒಬ್ಬ ವೈದ್ಯರನ್ನು ಕೂಡಲೇ ಪೋಸ್ಟಿಂಗ್ ಮಾಡಬೇಕು, ಒಂದು ವೇಳೆ ಅದು ಆಗದಿದ್ದರೆ ಅದೇ ಏರಿಯಾದಲ್ಲಿ ಬರುವ ನಾಗನೂರಿನಲ್ಲಿರುವ ಒಬ್ಬರು ಡಾಕ್ಟರನ್ನು ಅಲ್ಲಿಗೆ ಡೆಪ್ಯೂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ರಾಚಯ್ಯನವರು ಆರೋಗ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಅಲ್ಲಿರುವ ಇಬ್ಬರು ವೈದ್ಯರಲ್ಲಿ ಒಬ್ಬರನ್ನು ನೇಸರ್ಗಿ ಆಸ್ಪತ್ರೆಗೆ ಡೆಪ್ಯೂಟ್ ಮಾಡುವುದಾಗಿ ಹೇಳಿದ್ದರು. ಅದು ಇನ್ನು ಆಗಲಿಲ್ಲ. ಈಗ ತಾವು ಆ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಬೈಲಹೊಂಗಲದಲ್ಲಿರುವ ಆಸ್ಪತ್ರೆ ಕಟ್ಟಡದ ಕೆಲಸ ಪ್ರಾರಂಭವಾಗಿ ೫-೬ ವರ್ಷಗಳಾದರೂ ಇಲ್ಲಿಯವರೆಗೆ ಪೂರ್ಣಗೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ಹಣಕಾಸಿನ ತೊಂದರೆ. ಪ್ರತಿ ವರ್ಷ ಎರಡು ಲಕ್ಷ ಮೂರು ಲಕ್ಷ ಎಂದು ಆಯವ್ಯಯದಲ್ಲಿಡುತ್ತಾರೆ. ಇದರಿಂದ ಅದರ ಕೆಲಸ ಕುಂಠಿತವಾಗಿದೆ. ಆದಷ್ಟು ಬೇಗ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಮತ್ತು ೧೯೭೧ರ ಜನ ಸಂಖ್ಯೆಗನುಗುಣವಾಗಿ ಈ ಆಸ್ಪತ್ರೆಯು ಮಂಜೂರಾಗಿದ್ದು ಈಗ ಬೈಲಹೊಂಗಲದ ಜನಸಂಖ್ಯೆ ೪೫ ಸಾವಿರವಾಗಿದೆ. ಆದ್ದರಿಂದ ಈ ಆಸ್ಪತ್ರೆಯನ್ನು ೧೦೦ ಬೆಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕೆಂದು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಆಮೇಲೆ ಐಬಿಬಿ ಬಿಲ್ಡಿಂಗ್‌ಗಳು ಇವೊತ್ತಿನ ದಿವಸ ಬರುತ್ತಿದೆ. ಅವುಗಳಿಗೆ ತಾವು ಕಾಂಪೌಂಡ್ ವಾಲ್‌ಗಳನ್ನು ಪ್ರೊವೈಡ್ ಮಾಡಬೇಕು. ಇಲ್ಲದಿದ್ದರೆ ಆ ಭಾಗ ಎನ್‌ಕ್ರೋಚ್‌ಮೆಂಟ್ ಆಗಿ ಗುಡಿಸಲುಗಳನ್ನು ಕೆಲವರು ಕಟ್ಟಿಕೊಳ್ಳುತ್ತಾರೆ. ಆದ್ದರಿಂದ ಸರ್ಕಾರ ಇವುಗಳಿಗೆ ಹಾಲಿ ಇರುವ ಎಸ್ಟಿಮೇಟನ್ನು ರಿವೈಸ್ ಮಾಡಿ ಪ್ರತಿಯೊಂದು ಕಡೆ ಕಾಂಪೌಂಡ್ ವಾಲ್‌ಗಳನ್ನು ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ, ಹಿಂದಿನ ಸರ್ಕಾರ ಇದ್ದಾಗ ಪ್ರತಿ ಪಿಹೆಚ್‌ಸಿಗೂ ಅಲ್ಲಿನ ಸ್ಥಳೀಯ ಎಂ. ಎಲ್. ಎ. ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಗಳನ್ನು ನೇಮಕ ಮಾಡಬೇಕೆಂದಿದ್ದರು. ಆದರೆ ಆ ಕೆಲಸ ಇದುವರೆಗೂ ಆಗಿಲ್ಲ. ಆದ್ದರಿಂದ ಕೂಡಲೇ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಈ ಸಲಹಾಸಮಿತಿಗಳನ್ನು ರಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಹೆಚ್ಚಿಗೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಬಗ್ಗೆ ಎಲ್ಲ ಸದಸ್ಯರೂ ಮಾತನಾಡಿದರು. ನಮ್ಮ ರಾಜ್ಯದಲ್ಲಿ ೧೮ ಮೆಡಿಕಲ್ ಕಾಲೇಜ್‌ಗಳಿದ್ದು ಆ ಪೈಕಿ ೪ ಸರ್ಕಾರಿ, ಹಾಗೂ ೧೪ ಖಾಸಗಿ ಕಾಲೇಜ್‌ಗಳಾಗಿವೆ. ಈ ಖಾಸಗಿ ಮೆಡಿಕಲ್ ಕಾಲೇಜ್‌ಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೨ ಸಾವಿರವಿದ್ದು ಸರ್ಕಾರಿ ಮೆಡಿಕಲ್ ಕಾಲೇಜಗಳ ವಿದಾರ್ಥಿಗಳ ಸಂಖ್ಯೆ ೬೩೦ ಎಂದು ನನಗೆ ತಿಳಿದು ಬಂದಿದೆ. ಇವತ್ತು ಖಾಸಗಿ ಮೆಡಿಕಲ್ ಕಾಲೇಜನವರು ಸರ್ಕಾರದ ಯಾವ ಸಹಾಯವನ್ನೂ ತೆಗೆದುಕೊಳ್ಳದೆ ಒಂದು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು, ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ ಖಾಸಗಿಯವರು ಸರ್ಕಾರಿ ಆಸ್ಪತ್ರೆಗಳಿಗಿಂತ ಒಳ್ಳೆಯ ಆಸ್ಪತ್ರೆಗಳನ್ನು ಕಟ್ಟಿಸಿ ಹೆಚ್ಚು ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯೆಯನ್ನು ಕಲಿಸುತ್ತಿದ್ದಾರೆ, ಆದ್ದರಿಂದ ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಅವಶ್ಯಕತೆಯಿರುವ ಕಡೆಗೆ ಹೊಸದಾಗಿ ಕೊಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ. ಈಗ ಬೆಳಗಾಂ ಜಿಲ್ಲೆಯ ಘಟಪ್ರಭಾದಲ್ಲಿ ಜೆಜೆ ಆಸ್ಪತ್ರೆ ಎಂದು ಇದೆ. ಇಡೀ ಕರ್ನಾಟಕದಲ್ಲೇ ಎಲ್ಲೂ ಅಷ್ಟು ಸುಸಜ್ಜಿತವಾದ ಆಸ್ಪತ್ರೆಯಿಲ್ಲ. ಆದ್ದರಿಂದ ಅಂಥವರಿಗೆ ಮೆಡಿಕಲ್ ಕಾಲೇಜ್ ಕೊಟ್ಟರೆ ತಪ್ಪಿಲ್ಲ. ಏಕೆಂದರೆ ಯಾವುದೇ ಸರ್ಕಾರದ ಫೆಸಿಲಿಟೀಸ್ ತೆಗೆದುಕೊಳ್ಳದೆ ಅವರು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಾರೆಂದು ಹೇಳಬಹುದು.

ಇವತ್ತಿನ ದಿವಸ ನಮ್ಮ ಕರ್ನಾಟಕ ಸರ್ಕಾರದಲ್ಲಿ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಿಲ್ಲ. ಯಾವುದೇ ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನನ್ನು ತೆಗೆದುಕೊಳ್ಳುತ್ತಿಲ್ಲ ಎಂದು ನನಗೆ ತಿಳಿದು ಬರುತ್ತದೆ. ಮೊದಲು ಯಾವುದೇ ಒಂದು ಮೈನರ್ ಇನ್‌ಸ್ಟಿಟ್ಯೂಷನ್ ಮುಂದೆ ಬರಬೇಕಾದರೆ ಐದು ವರ್ಷದತನಕ ಆ ಇನ್‌ಸ್ಟಿಟ್ಯೂಷನ್ ಬೆಳೆಯುವ ಸಲುವಾಗಿ ಸೀಟುಗಳನ್ನು ಕೊಟ್ಟಿದ್ದಾರೆಯೇ ಹೊರತಾಗಿ ಬೇರೆ ಉದ್ದೇಶದಿಂದ ಕೊಟ್ಟಿಲ್ಲ. ಉದಾಹರಣೆಗೆ ಬೆಳಗಾಂ ಜೈನ್ ಮೆಡಿಕಲ್ ಕಾಲೇಜನ್ನು ಬೇಕಾದವರು ಬಂದು ನೋಡಬಹುದು. ಅಲ್ಲಿಯ ಸ್ವಂತ ಅಲ್ಲಿಯ ಸ್ಥಿತಿಯನ್ನು ತಾವು ನೋಡಿದರೆ ಯಾವುದೇ ಗೌರ್ನಮೆಂಟ್ ಕಾಲೇಜು ಸಹಿತ ಆ ರೀತಿ ಇಲ್ಲ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಅದೇ ಪ್ರಕಾರವಾಗಿ ದಾವಣಗೆರೆ ಮೆಡಿಕಲ್ ಕಾಲೇಜು ಕೂಡಾ ಬಹಳ ಚೆನ್ನಾಗಿದೆ. ಮೊನ್ನೆ ನಾನು

ತುಮಕೂರಿಗೆ ಹೋಗಿದ್ದೆ. ಶ್ರೀಮಾನ್ ಖರ್ಗೆಯವರು ನಡೆಸುತ್ತಿರುವ ಸಿದ್ಧಾರ್ಥ ಮೆಡಿಕಲ್ ಕಾಲೇಜು ಬಹಳ ಚೆನ್ನಾಗಿದೆ, ಆ ಕಟ್ಟಡ ಎಲ್ಲಾ ನೋಡಿ ನನಗೆ ಬಹಳ ಸಂತೋಷವಾಯಿತು. ಇವತ್ತು ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಆಸ್ಪತ್ರೆಯಲ್ಲಿ ಸಿಗದಂಥ ಒಂದು ಫೆಸಿಲಿಟಿ ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಇವತ್ತಿನ ದಿನ ಸಿಗುತ್ತಿದೆ. ಇವತ್ತಿನ ದಿವಸ ಪ್ರತಿಯೊಬ್ಬ ಮೆಡಿಕಲ್ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೩೭,೫೦೦ ರೂಪಾಯಿ ಖರ್ಚು ಬರುತ್ತದೆ. ಅವನು ಮೆಡಿಕಲ್ ಕೋರ್ಸನ್ನು ಮುಗಿಸಬೇಕಾದರೆ ಎರಡು ಲಕ್ಷ ಮೂವತ್ತು ಸಾವಿರ ರೂಪಾಯಿ ಖರ್ಚು ಬರುತ್ತದೆ. ಆ ಎರಡು ಲಕ್ಷ ಮೂವತ್ತು ಸಾವಿರ ಖರ್ಚು ಸಹಿತ ಸರ್ಕಾರಕ್ಕೆ ಬರದೆ ಅದನ್ನು ಆ ಖಾಸಗಿ ಮೆಡಿಕಲ್ ಕಾಲೇಜಿನವರೇ ಕೊಡುತ್ತಾರೆ ಜೊತೆಗೆ ಅವರು ಸರ್ಕಾರಕ್ಕೆ ಕೆಲವು ಸೀಟ್‌ಗಳನ್ನು ಬಿಟ್ಟುಕೊಡುತ್ತಾರೆಂದು ತಿಳಿದುಬರುತ್ತದೆ. ಆದರೂ ಸಹ ಪ್ರೈವೇಟ್ ಕಾಲೇಜಿನವರು ಯಾರು ತಪ್ಪು ಮಾಡುತ್ತಾರೆ, ಯಾರು ಚಲೋ ಇಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಲ್ಲರೂ ಚಲೋ ಇದ್ದಾರೆ ಎಂದು ಹೇಳುವುದಕ್ಕಾಗ ವುದಿಲ್ಲ. ೧೪ ಮೆಡಿಕಲ್ ಕಾಲೇಜುಗಳು ಬಹಳ ಒಳ್ಳೆಯದು ಇವೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವುದು ಒಳ್ಳೆಯದು ಇದೆ, ಅವುಗಳನ್ನು ಒಳ್ಳೆಯದು ಎಂದು ಹೇಳಬೇಕು, ಯಾವುದು ಕೆಟ್ಟದು ಇದೆ ಅದನ್ನು ಕೆಟ್ಟದು ಎಂದು ಹೇಳಬೇಕು ಎಂದು ಹೇಳುತ್ತೇನೆ ಎಲ್ಲವನ್ನೂ ಒಂದೇ ರೀತಿಯಲ್ಲಿ ಅಳೆಯಬಾರದು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ಪೋಸ್ಟಿಂಗ್ಸ್ ಆಫ್ ಮೆಡಿಕಲ್ ಆಫೀಸರ್ಸ್ ಬಗ್ಗೆ ನಿಜವಾಗಿಯೂ ಹಿರಿಯ ಸದಸ್ಯರೊಬ್ಬರು ಮಾತನಾಡುವಾಗ ಎಂ.ಡಿ. ಮತ್ತು ಎಂ. ಎಸ್. ಆದವರನ್ನು ಸಹಿತ ಪಿ.ಹೆಚ್.ಸಿ.ಗೆ ಪೋಸ್ಟ್ ಮಾಡಿದ್ದಾರೆ ಎಂದು ಹೇಳಿದರು. ಇದು ಬಹಳ ಸ್ತುತ್ಯಾರ್ಹವಾಗಿರತಕ್ಕಂಥ ಕೆಲಸ, ಏಕೆಂದರೆ ಹಳ್ಳಿಯ ಜನರಿಗೆ ಸಹ ಮೆಡಿಕಲ್ ಏಡ್ ಸಿಗಬೇಕು, ಆದಕಾರಣ ಈ ರೀತಿ ಪೋಸ್ಟಿಂಗ್ ಮಾಡಿದ್ದಾರೆ ದಯಮಾಡಿ ಅವರನ್ನು ಕ್ಯಾನ್ಸಲ್ ಮಾಡಬಾರದು. ಅವರು ಸರ್ಕಾರದ ಮೇಲೆ ಡೆಪ್ಯುಟೇಷನ್ ಮೇಲೆ ಹೋಗಿ ಸುಮ್ಮನೆ ಕುಳಿತುಕೊಂಡು ಸಂಬಳ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲಿಗೆ ಅವರುಗಳು ಹೋಗಲಿಕ್ಕೆ ಅಂದರೆ ಹಳ್ಳಿಗೆ ಹೋಗಲಿಕ್ಕೆ ತಯಾರು ಇಲ್ಲ. ಅವರ ಮಕ್ಕಳ ಮುಂದೆ ಆಡ್ತಾಡಿಕೊಂಡು ಇರಬೇಕು ಎಂದು ಹೇಳಿ ಹಳ್ಳಿಗೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ಡಿಸ್ಟ್ರಿಕ್ಟ್ ಪ್ಲೇಸ್‌ನಲ್ಲಿಯೇ ಇರಬೇಕು ಎಂದು ಹೇಳುತ್ತಾರೆ ಎಲ್ಲಿ ಶ್ರೀಮಂತರು ಇದ್ದಾರೆ, ಅಲ್ಲಿ ಇರಬೇಕು ಎಂದು ಹೇಳುತ್ತಾರೆ. ಇಂಥವರನ್ನು ಹಳ್ಳಿಗೆ ಕಂಪಲ್‌ಸರಿಯಾಗಿ ಹಳ್ಳಿಗೆ ಹೋಗುವಂಥ ರೀತಿಯಲ್ಲಿ ಮಾಡಬೇಕು. ಈಗ ತಾವು ಅದನ್ನು ಮಾಡಿದ್ದೀರಿ. ಆದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಆಚಾರ್‌ರವರು ಹಳೆಯ ವಾಹನಗಳ ಬಗ್ಗೆ ಹೇಳಿದರು, ಪ್ರತಿಯೊಂದು ಜಿಲ್ಲಾ ಆಸ್ಪತ್ರೆ ಮುಂದೆ, ಡಿ.ಹೆಚ್.ಓ. ಆಫೀಸ್ ಮುಂದೆ ಹೋಗಿ ತಾವು ನೋಡಬೇಕು ೨೦-೩೦ ವಾಹನಗಳು ನಿಂತಿರುತ್ತದೆ. ಅವುಗಳು ಹತ್ತು-ಹತ್ತು ವರ್ಷಗಳಿಂದ ನಿಂತಿದೆ. ದಯಮಾಡಿ ಅವುಗಳನ್ನು ಮಾರಿಬಿಡಿ. ಹಾಗೆ ಮಾರಿದರೆ ಸರಕಾರಕ್ಕೂ ಕೂಡಾ ರೊಕ್ಕ ಬರುತ್ತದೆ. ಇಲ್ಲದಿದ್ದರೆ ಆ ರೀತಿ ವಾಹನಗಳನ್ನು ಅಲ್ಲಿಯೇ ಇಡುವುದರಿಂದ ಡಿಪ್ರಿಸಿಯೇಷನ್ ಕೂಡಾ ಹೆಚ್ಚಾಗುತ್ತದೆ, ಇದರಿಂದ ಸರ್ಕಾರಕ್ಕೂ ಕೂಡಾ ಲುಕ್ಸಾನು ಆಗುತ್ತದೆ ಮತ್ತು ಒಂದು ಕೆಟ್ಟ ಹೆಸರು ಕೂಡಾ ಬರುತ್ತದೆ. ಏಕೆಂದರೆ ಜನರು ಸರ್ಕಾರ ಇದೆಯೋ ಇಲ್ಲವೋ ಎಂದು ಈ ರೀತಿ ಮಾತನಾಡಿಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ಆಚಾರ್‌ರವರು ಏನು ಹೇಳಿದ್ದಾರೆ, ಆ ರೀತಿ ವಾಹನಗಳನ್ನು ಮಾರಿಬಿಡಿ ಎಂದು ಹೇಳುತ್ತೇನೆ ಅನಂತರ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ತಾವು ಒಂದು ಈ ಮಹತ್ವವಾದ ಖಾತೆಯನ್ನ ವಹಿಸಿಕೊಂಡಿದ್ದೀರಿ, ತಮ್ಮ ಮೇಲೆ ಜನರು ಶುಭಾಶಯಗಳನ್ನು ಹೇಳಿದ್ದಾರೆ, ನಾನು ಸಹಿತ ತಮಗೆ ಮೊದಲಿನಿಂದಲೂ ಗೊತ್ತು. ತಾವು ಒಂದು ಒಳ್ಳೆಯ ಕೆಲಸಗಾರರು ತಮ್ಮ ಇಲಾಖೆಯಲ್ಲಿ ಒಳ್ಳೆಯ ಕಾರ್ಯದರ್ಶಿಗಳಿದ್ದಾರೆ. ಅವರು ಸಹಿತ ನನಗೆ ಗೊತ್ತು. ಅವರು ಬಹಳ ಉತ್ಸಾಹಶಾಲಿಗಳು. ಅವರು ಚಲೋ ಆಗಿ ಕೆಲಸವನ್ನು ಮಾಡತಕ್ಕಂಥವರು. ಅದೂ ಅಲ್ಲದೆ ಡೈರೆಕ್ಟರ್ ಮೆಡಿಕಲ್ ಸರ್ವೀಸಸ್ ಆಫೀಸರ್ಸ್, ಅವರು ಕೂಡಾ ಚಲೋ ಇದ್ದಾರೆ. ನಿಜವಾಗಿಯೂ ತಮ್ಮ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳು ಇರುವುದರಿಂದ ತಮಗೆ ಒಳ್ಳೆಯ ಕೆಲಸವನ್ನು ಮಾಡಲಿಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಉಳಿದ ನನ್ನ ಹಿರಿಯ ಸದಸ್ಯರುಗಳು ಹೇಳಿದ ಪ್ರಕಾರ ಒಂದು ಸರ್ಕಾರಿ ಆಸ್ಪತ್ರೆಯ ಬಗ್ಗೆ ನಮ್ಮ ಸಿದ್ಧನಗೌಡರ್ ಹೇಳಿದರಲ್ಲಾ, ಆ ರೀತಿ ನಮ್ಮ ಸರ್ಕಾರಿ ಆಸ್ಪತ್ರೆಗಳಾಗಬಾರದು. ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಸೇವೆ ದೊರೆಯುವುದಿಲ್ಲ ಎಂದು ಹೇಳಿ ಖಾಸಗಿ ಆಸ್ಪತ್ರೆಗೆ ಹೋಗಬೇಕು ಎನ್ನುವ ಭಾವನೆ ಜನಗಳಿಗೆ ಬರಬಾರದು. ಆದ್ದರಿಂದ ಚಲೋ ಸುಧಾರಣೆ ಮಾಡಬೇಕು ಮತ್ತು ತಮ್ಮ ಇಲಾಖೆಗೆ ಹೆಚ್ಚಿನ ಮಹತ್ವವನ್ನು ತರಬೇಕು ಎಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಇಟ್ಟಂತಹ ಬೇಡಿಕೆಯನ್ನು ಸ್ವಾಗತ ಮಾಡುತ್ತಾ ಹಲವಾರು ವಿಚಾರಗಳನ್ನು ಆರೋಗ್ಯ ಸಚಿವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹೆಚ್ಚಿನ ಅಂಶಗಳು ಆರೋಗ್ಯ ಇಲಾಖಾ ಸಚಿವರಿಗೆ ಹಾಗೂ ಅದೇ ರೀತಿ ಸರ್ಕಾರಕ್ಕೂ ಕೂಡ ದೊಡ್ಡ ಸವಾಲು ಆಗಿದೆ ಎಂದು ಹೇಳಿದರೆ ತಪ್ಪು ಆಗಲಿಕ್ಕಿಲ್ಲ. ಈಗಾಗಲೇ ಘೋಷಣೆ ಮಾಡಿರುವ ರೀತಿಯಲ್ಲಿ ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಎನ್ನುವ ಒಂದು ಘೋಷಣೆ ಸರ್ಕಾರದ ಮುಂದೆ ಇದೆ. ಇದನ್ನು ಕಾರ್ಯಗತ ಮಾಡುವಂತಹ ಒಂದು ಸವಾಲು ನಮ್ಮ ಮುಂದೆ ಇದೆ. ಇವೊತ್ತು ನಾವುಗಳು ಒಂದು ತಾಲ್ಲೂಕು ಮಟ್ಟದಿಂದ ಹಾಗೂ ಗ್ರಾಮಾಂತರ ಪ್ರದೇಶದಿಂದ ಜನರ ಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದಂತಹ ವಿಧಾನಸಭಾ ಸದಸ್ಯರಾಗಿದ್ದೇವೆ. ಇವೊತ್ತು ಸಾಕಷ್ಟು ವ್ಯವಸ್ಥೆಗಳು ಅಂದರೆ ಅದು ತಾಲ್ಲೂಕು ಮಟ್ಟದ ಸರ್ಕಾರಿ ಆಸ್ಪತ್ರೆಗಳು ಇರಬಹುದು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರಬಹುದು, ಹೀಗೆ ಬೇರೆ ಬೇರೆ ರೀತಿಯ ವ್ಯವಸ್ಥೆ ಇದ್ದರೂ ಕೂಡ ಜನ ಸಾಮಾನ್ಯರಲ್ಲಿ, ವಿದ್ಯೆ ಇಲ್ಲದೇ, ಆರ್ಥಿಕ ಶಕ್ತಿ ಇಲ್ಲದೆ, ಬಡತನದ ರೇಖೆಗಿಂತ ಕೆಳಗಡೆ ಇರುವಂತಹ ಜನರಲ್ಲಿ ಇನ್ನೂ ಕೂಡ ಮೂಢ ನಂಬಿಕೆಗಳು ಇವೆ. ಮೂಢ ನಂಬಿಕೆಗಳನ್ನು ಅತ್ಯಂತ ಎತ್ತರವಾಗಿ ಇಟ್ಟುಕೊಂಡು ಯಾವುದೇ ರೀತಿಯ ಅನಾರೋಗ್ಯ ಬಂದರೂ ಕೂಡ ಬೇರೆ ಬೇರೆ ರೀತಿಯಲ್ಲಿ ಮೂಢ ನಂಬಿಕೆಗಳಿಗೆ ಅನುಗುಣವಾಗಿ ತಮ್ಮ ಆರೋಗ್ಯದಲ್ಲಿ ಇನ್ನೂ ಕೂಡ ಅತ್ಯಂತ ಹೆಚ್ಚಿನ ವಿಪತ್ತನ್ನು ತಂದುಕೊಳ್ಳುವಂತಹ ಸಂದರ್ಭಗಳು ಗ್ರಾಮಾಂತರ ಪ್ರದೇಶದಲ್ಲಿದೆ. ಇವೊತ್ತು ನಾನು ಒಂದು ಉದಾಹರಣೆಗೆ ಹೇಳಬೇಕಾಗಿದ್ದರೆ, ಕ್ಯಾನ್ಸರ್ ರೋಗ. ಇದು ಅತೀ ಕ್ರೂರವಾದ ರೋಗ. ಇದರ ಮಟ್ಟಿಗೆ ಹಳ್ಳಿಯ ಗ್ರಾಮಾಂತರ ಪ್ರದೇಶದ ಜನರಿಗೆ ವಿದ್ಯಾಭ್ಯಾಸ ಇಲ್ಲದಿರುವ ಜನರಿಗೆ ಪ್ರಾಥಮಿಕ ಹಂತದಲ್ಲಿ. ಎರಡನೇ ಹಂತದಲ್ಲಿ ಇದು ಅವರ ತಿಳುವಳಿಕೆಗೆ ಬರದೇ ಮೂರನೇ ಹಂತದಲ್ಲಿ ಇಲ್ಲವೇ ನಾಲ್ಕನೇ ಹಂತದಲ್ಲಿ ಅವರು ಸಾವಿಗೆ ಈಡಾಗುವಂತಹ ಪ್ರಸಂಗಗಳನ್ನು ನಾವು ಗ್ರಾಮಾಂತರ ಪ್ರದೇಶದಲ್ಲಿ ಕಾಣುತ್ತಿದ್ದೇವೆ. ಈ ಒಂದು ಸಮಸ್ಯೆ ಬಗ್ಗೆ, ಈ ಒಂದು ರೋಗದ ಮಟ್ಟಿಗೆ ಜನತೆಗೆ ಸರಿಯಾದ ರೀತಿಯಿಂದ ಎಚ್ಚರಿಕೆ ಕೊಡುವಂತಹ ಕೆಲಸ ಆರೋಗ್ಯ ಇಲಾಖೆ ಮುಖಾಂತರವಾಗಿ ನಡೆಯಬೇಕಾಗಿದೆ. ಆದರೂ ಜನರ ಪ್ರತಿನಿಧಿಯಾಗಿ ಶಾಸಕರಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಮ್ಮದೂ ಕೂಡ ಕರ್ತವ್ಯ ಹಾಗೂ ಜವಾಬ್ದಾರಿ ನಮ್ಮ ಮುಂದೆ ಇದೆ. ಇದನ್ನು ಪರಿಜ್ಞಾನದಲ್ಲಿ ಇಟ್ಟುಕೊಂಡು ಕಿದ್ವಾಯಿ ಮೆಮೋರಿಯಲ್ ಹಾಸ್ಪಿಟಲ್‌ನ ಆಶ್ರಯದಲ್ಲಿ ಕಳೆದ ತಿಂಗಳು ನನ್ನ ಕ್ಷೇತ್ರದಲ್ಲಿ ಒಂದು ಶಿಬಿರವನ್ನು ಮಾಡಲಾಯಿತು. ಅದರ ಉದ್ದೇಶ, ಕ್ಯಾನ್ಸರ್ ರೋಗದ ಮಟ್ಟಿಗೆ ಸಾಮಾನ್ಯ ಜನರಿಗೂ ತಿಳುವಳಿಕೆ ಕೊಡಬೇಕು ಎಂಬ ರೀತಿಯಲ್ಲಿ ಆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ಆ ಶಿಬಿರದಲ್ಲಿ ೨ ರಿಂದ ೩½ ಸಾವಿರ ಜನರುಗಳು ಭಾಗ ವಹಿಸಿದ್ದರು. ಆ ಒಂದು ಶಿಬಿರದಲ್ಲಿ ಭಾಗವಹಿಸಿದ್ದವರ ಪೈಕಿ ೪೮ ಜನರಿಗೆ ಕ್ಯಾನ್ಸರ್ ರೋಗ ಇರುವುದನ್ನು ಪತ್ತೆ ಹಚ್ಚುವ ಕಾರ್ಯ ಮಾಡಿದ್ದೇವೆ. ಅದರ ಮಟ್ಟಿಗೆ ಬರೇ ಶಿಬಿರ ಮಾತ್ರ ನಡೆಯುವುದಲ್ಲ, ಕ್ಯಾನ್ಸರ್ ರೋಗ ಯಾವ ರೀತಿಯಿಂದ ಸಾಮಾನ್ಯ ಜನರಿಗೆ ಬರುತ್ತದೆ ಎಂಬ ಬಗ್ಗೆ ತಿಳುವಳಿಕೆ ಕೊಡುವಂತಹ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಂಡಿದ್ದೆವು. ಈ ರೀತಿಯಲ್ಲಿ ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಎನ್ನುವಂತಹ ಸಾಧನೆಯನ್ನು ಬೇರೆ ಇಲಾಖೆಗಳ ಮುಖಾಂತರ ಸರ್ಕಾರದಿಂದ ಈಡೇರಿಸುವಂತಹ ಒಂದು ಅವಕಾಶ ಅಲ್ಲಿ, ಪ್ರತಿಯೊಬ್ಬ ಜನ ಪ್ರತಿನಿಧಿಗಳೂ ಇರಬಹುದು, ಸಮಾಜದ ಇತರ ಎಲ್ಲ ಜನರ ಸಹಕಾರವನ್ನು ಪಡೆದುಕೊಂಡು ಸಮಾಜ ಸೇವಾ ಮನೋಭಾವ ಇರುವಂತಹ ಜನರನ್ನೂ ಕೂಡ ಇದರಲ್ಲಿ ಅಳವಡಿಸಿಕೊಂಡು ಈ ಒಂದು ಸಾಧನೆಯನ್ನು ಮಾಡುವಂತಹ ಒಂದು ದೊಡ್ಡ ಸವಾಲು ನಮ್ಮ ಮುಂದೆ ಇದೆ. ನಾನಾದರೂ ಈ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುವಂಥಾದ್ದು ಏನೆಂದರೆ, ಈಗಾಗಲೇ ಹಲವಾರು ನಿವೃತ್ತ ಅನುಭವಿ ಪ್ರಖ್ಯಾತ ವೈದ್ಯರುಗಳು ನಮ್ಮಿಂದ ದೂರವಾಗುತ್ತಾ ಇದ್ದಾರೆ. ಡಾಕ್ಟರ್ ಕೃಷ್ಣಭಾರ್ಗವ ಅವರ ನೇತೃತ್ವದಲ್ಲಿ ಕಿದ್ವಾಯಿ ಮೆಮೋರಿಯಲ್ ಆಸ್ಪತ್ರೆ ರಾಷ್ಟ್ರದಲ್ಲೇ ಒಂದು ಅತ್ಯುತ್ತಮ ಕ್ಯಾನ್ಸರ್ ಆಸ್ಪತ್ರೆ

೬.೫೦ಪಿ. ಎಂ.

ಎಂದು ಹೆಸರು ಗಳಿಸಿದೆ. ಈಗ ಅವರು ನಿವೃತ್ತರಾಗಿದ್ದಾರೆ. ಅವರು ನಿವೃತ್ತರಾಗಿದ್ದರೂ ಕೂಡ ಇಂತಹ ಕೆಲಸಕಾರ್ಯಗಳಿಗೆ ಅಂತಹ ವೈದ್ಯರುಗಳನ್ನು ಅಳವಡಿಸಿಕೊಂಡು ಹೋದರೆ ಅದರಿಂದ ಸಮಾಜದಲ್ಲಿ ಒಳ್ಳೆಯ ರೀತಿಯಲ್ಲಿ ಪರಿಣಾಮ ಆಗಲಿಕ್ಕೆ ಸಾಧ್ಯವಿದೆ. ಅದೇ ರೀತಿಯಲ್ಲಿ ಡಾಕ್ಟರ್ ಮೋದಿ ಅವರು. ಅವರ ಒಂದು ಸೇವೆಯನ್ನು ನಾವು ಅಳವಡಿಸಿಕೊಂಡು ಮುಂದೆ ಹೋಗುವುದರಿಂದ ನಮ್ಮ ಆರೋಗ್ಯ

ಇಲಾಖೆಗೆ ಹೆಚ್ಚಿನ ರೀತಿಯ ಫಲಿತಾಂಶ ಬರಲಿಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ನಾವು ಮುಂದೆ ಹೋಗುವಂಥ ಒಂದು ಅವಕಾಶವಿದೆ. ಇವನ್ನೆಲ್ಲಾ ಪರಿಗಣನೆಗೆ ಇಟ್ಟುಕೊಂಡು, ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಕೊಡುವಂಥಾದ್ದನ್ನು ಒಂದು ಚಳುವಳಿ ರೀತಿಯಲ್ಲಿ ಮಾನ್ಯ ಆರೋಗ್ಯ ಸಚಿವರು ಕಾರ್ಯಕ್ರಮವನ್ನು ಹಾಕಿಕೊಂಡು ಹೋಗಬೇಕು. ಪ್ರತಿಯೊಬ್ಬ ಶಾಸಕರಿಗೂ ಕೂಡ ಇದರಲ್ಲಿ ಒಂದು ದೊಡ್ಡ ಜವಾಬ್ದಾರಿಯನ್ನು ಹೊರುವಂಥ ಅವಕಾಶ ಇರಬೇಕು ಎನ್ನುವಂಥ ವಿಚಾರದಲ್ಲಿ ತಾವ ಕಾರ್ಯಕ್ರಮವನ್ನು ಹಮ್ಮಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ನಾನು ಸಲಹೆ ಮಾಡುತ್ತೇನೆ. ಇದೇ ಹಂತದಲ್ಲಿ ಈಗಾಗಲೇ ಶಾಸಕ ಮಿತ್ರರುಗಳು ಹಲವಾರು ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಈ ಒಂದು ಗ್ರಾಮೀಣ ಪ್ರದೇಶದಲ್ಲಿರುವಂಥ ಆರೋಗ್ಯ ಕೇಂದ್ರಗಳ ಮಟ್ಟಿಗೆ ಇರಬಹುದು, ಸರ್ಕಾರಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಮಟ್ಟಿಗೆ ಇರಬಹುದು ಜಿಲ್ಲಾ ಮಟ್ಟದ ಆಸ್ಪತ್ರೆಗಳ ಮಟ್ಟಿಗೆ ಇರಬಹುದು ಇವುಗಳ ಬಗ್ಗೆ ಇವತ್ತು ಇಲ್ಲಿ ಸಾಕಷ್ಟು ರೀತಿಯಲ್ಲಿ ಪ್ರತಿಪಾದನೆ ಮಾಡುವಂಥಾದ್ದಲ್ಲ, ಅವನ್ನು ಸಮರ್ಥವಾಗಿ ಸರಿಯಾದ ಪರಿಸ್ಥಿತಿಗೆ ತರುವಂಥ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಹೋಗುವಂತಹ ಅವಶ್ಯಕತೆ ಇದೆ. ನಾನಾದರೂ ನನ್ನ ಒಂದು ಕ್ಷೇತ್ರದ ತಾಲ್ಲೂಕಿನ ಆಸ್ಪತ್ರೆ ಮಟ್ಟಿಗೆ ಹೇಳುವುದಾದರೆ, ಕಳೆದ 100 ವರ್ಷಗಳಿಂದ ಈ ಸರ್ಕಾರಿ ಆಸ್ಪತ್ರೆ ನಡೆದು ಬಂದು, ಈಗ ಅದು 6 ಳ ಬೆಡ್ಡಿನ ಆಸ್ಪತ್ರೆಯಾಗಿ ಮುಂದುವರಿಯುತ್ತಿದೆ. ಹಲವಾರು ವರ್ಷಗಳಿಂದ ಇಲಾಖಾ ಮಟ್ಟಗಳಲ್ಲಿ, ಬೇರೆ ಬೇರೆ ಮಟ್ಟಗಳಲ್ಲಿ ಈ ಆಸ್ಪತ್ರೆಯನ್ನು 100 ಬೆಡ್ಡುಗಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಆ ಅವಕಾಶ ಇನ್ನೂ ಕೂಡಿ ಬಂದಿಲ್ಲ. ಇದಕ್ಕೋಸ್ಕರ ಸರ್ಕಾರದ ಮುಂದೆ ಇರುವಂಥ ಈ ವಿಷಯವನ್ನು ಮಾನ್ಯ ಮಂತ್ರಿಗಳು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ನಾವು ಒತ್ತಡ ತಂದಿದ್ದೇವೆ. ಈ ವಿಷಯದಲ್ಲಿ, ಮಾನ್ಯ ಮಂತ್ರಿಗಳು ಹಿಂದೆ ಉಳಿಯಲಿಕ್ಕಿಲ್ಲ ಎಂಬ ಭರವಸೆ ನಮಗೆ ಇದೆ, ಅದೇ ರೀತಿ ಈ ಆಸ್ಪತ್ರೆಗಳಲ್ಲಿ ಕಂಡಿರುವಂಥ ಸಮಸ್ಯೆಯೆಂದರೆ ಅನೆಸ್ತೆಟಿಕ್ ಡಾಕ್ಟರ್‌ಗಳ ಕೊರತೆ. ಇವತ್ತು ತಾಲ್ಲೂಕು ಮಟ್ಟಗಳ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ಆಪರೇಷನ್ ಆಗಬೇಕಾಗಿದ್ದರೆ ಅನೆಸ್ತೆಟಿಕ್ ಡಾಕ್ಟರುಗಳ ಕೊರತೆಯಿಂದಾಗಿ ಅಲ್ಲಿ ಇವತ್ತು ಆಪರೇಷನ್ ಮಾಡುವಂಥ ಅವಕಾಶವಿಲ್ಲ. ಈ ಒಂದು ತೊಂದರೆಯಿಂದ ನಮ್ಮಲ್ಲಿ ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ರೋಗಿಗಳನ್ನು ಕೊಂಡೊಯ್ಯುವಂಥ ಅವಕಾಶವಿರುತ್ತದೆ. ಇದರಿಂದ ರೋಗಿಗಳಿಗೆ ಅದರಲ್ಲೂ ಹೆಚ್ಚಾಗಿ ಬಡವರಿಗೆ ತೊಂದರೆಯಾಗುವಂಥ ಅವಕಾಶವಿರುತ್ತದೆ. ಆದುದರಿಂದ ಅನೆಸ್ತೆಟಿಕ್ ಡಾಕ್ಟರುಗಳನ್ನು ಪ್ರತಿಯೊಂದು ತಾಲ್ಲೂಕುಮಟ್ಟದ ಸರ್ಕಾರಿ ಆಸ್ಪತ್ರೆಗಳಿಗೆ ಒದಗಿಸಿಕೊಡುವಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಮಾನ್ಯ ಸಚಿವರ ಹತ್ತಿರ ನಾನು ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಇನ್ನೊಂದು ಸಮಸ್ಯೆಯೇನೆಂದರೆ, 'ಡಿ' ಕ್ಲಾಸ್ ಲೇಬರರ್ಸ್ ಸಮಸ್ಯೆ. ಇವತ್ತು ಇವರನ್ನು ದಿನಗೂಲಿಯಲ್ಲಿ ಮುಂದುವರಿಸುತ್ತಾ ಇದ್ದೇವೆ. 'ಡಿ' ಕ್ಲಾಸ್ ಲೇಬರರ್ಸ್ ಇಲ್ಲದೆ ಆಸ್ಪತ್ರೆಯ ಶುಚಿತ್ವ ಮತ್ತು ಪ್ರತಿಯೊಂದು ಕೆಲಸಕಾರ್ಯಗಳಿಗೂ ತೊಂದರೆಯಾಗಿದೆ. ಆದುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಶೀಘ್ರವಾಗಿ ಈ ಸಮಸ್ಯೆ ಪರಿಹಾರವಾಗುವಂಥ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇರೀತಿ ನಮ್ಮ ಪುತ್ತೂರು ಒಂದು ಸಬ್ ಡಿವಿಜನ್ ಸೆಂಟರ್ ಆಗಿದೆ. ನಮ್ಮ ಪುತ್ತೂರಿನಲ್ಲಿ ಕೂಡ ಒಂದು ಆಯುರ್ವೇದಿಕ್ ಕಾಲೇಜು ಕೂಡ ಆಗಬೇಕು ಎನ್ನುವುದು ನಮ್ಮ ಬೇಡಿಕೆ ಇದೆ. ಸರ್ಕಾರಕ್ಕೆ ಅಲ್ಲಿ ಆಯುರ್ವೇದಿಕ್ ಕಾಲೇಜನ್ನು ಕೊಡಲಿಕ್ಕೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಇಲ್ಲ ಎಂದು ಕಾಣುತ್ತದೆ. ಈ ಹಂತದಲ್ಲಿ ಪುತ್ತೂರಿನ ಅಭಿವೃದ್ಧಿಯ ಒಂದು ಹಾದಿಯಲ್ಲಿ ಈ ಆಯುರ್ವೇದಿಕ್ ಕಾಲೇಜಿನ ವ್ಯವಸ್ಥೆಯನ್ನು ನಮಗೆ ಕಲ್ಪಿಸಿಕೊಡಬೇಕಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ನಮ್ಮ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿದ್ದಾರೆ.

ಹಿಂದೆ ಈ ಆರೋಗ್ಯ ಖಾತೆಯನ್ನು ಮಾನ್ಯ ಸೋಮಪ್ಪ ಸುವರ್ಣ ಅವರು ಹೇಳಿದಂತೆ ನಮ್ಮ ಜಿಲ್ಲೆಯವರೇ ಆದಂತಹ ಕೆ.ಬಿ. ಶೆಟ್ಟಿಯವರು, ನಾಗಪ್ಪ ಆಳ್ವರವರು ಹೊಂದಿದ್ದರು, ಅವರು ಕೂಡ ಸಮರ್ಥರಾಗಿ ಕೆಲಸ ಮಾಡಿ ಹೋಗಿದ್ದಾರೆ. ಈಗಿನ ಆರೋಗ್ಯ ಸಚಿವರು ಕೂಡ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಕರ್ನಾಟಕ ರಾಜ್ಯದ ಅದರಲ್ಲಿಯೂ ಬಡವರ ಕಣ್ಣೀರನ್ನು ಒರೆಸುವಂಥ, ಬಡವರ ಕಷ್ಟದಲ್ಲಿ ಭಾಗಿಯಾಗುವಂಥ ಒಂದು ಅವಕಾಶ ತಮಗೆ ದೊರಕಿದೆ. ಬಡವರ ಕಷ್ಟದಲ್ಲಿ ಭಾಗಿಯಾದವರಿಗೆ ದೇವರಸಹಾಯ ಕೂಡ ಇದ್ದೇ ಇರುತ್ತದೆ. ಭಾರತದಲ್ಲಿ ಮದರ್ ಥೆರೇಸಾ ರವರು ಮಾಡುವಂಥ ಒಂದು ಮಹತ್ವವಾದ ಕೆಲಸ ಕಾರ್ಯವನ್ನು ತಾವು ಕರ್ನಾಟಕದಲ್ಲಿ ಮಾಡಬೇಕೆಂದು ಕೇಳಿಕೊಂಡು, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈ ಸಭೆಯಲ್ಲಿ ಬಹಳ ಪ್ರಮುಖವಾದ ಬೇಡಿಕೆ ಮೇಲೆ ಚರ್ಚೆ ನಡೆಯುತ್ತಿದೆ. ಇದು ನಿಮಗೆ ಗೊತ್ತಿದೆ ನಮಗೂ ಗೊತ್ತಿದೆ. ಮಾನ್ಯ ಆರೋಗ್ಯ ಸಚಿವರು ಬೆಳಿಗ್ಗೆಯಿಂದ ನಗು ನಗುತ್ತಾ ಸಭೆಯಲ್ಲಿ ಕೂತಿದ್ದಾರೆ. ಆದರೂ ಈ ಸಭೆ ಸಂಪೂರ್ಣವಾಗಿ ಅನಾರೋಗ್ಯದಿಂದ ಕೂಡಿದೆ. ಎಲ್ಲರೂ ಆಸ್ಪತ್ರೆಗಳಿಗೆ ಹೋಗಿ ಬಂದವರ ಹಾಗೆ ಕಾಣುತ್ತಾರೆ ೭ ಗಂಟೆ ಆಗಿದೆ. ಈಗ ಸಭೆಯಲ್ಲಿ ೨೩ ಜನ ಇದ್ದೇವೆ. ಕೊಳ್ಳೇಗಾಲ ಶಾಸಕರು ಈಗತಾನೆ ಬಂದರು, ಅವರೂ ಸೇರಿದರೆ ೨೪ ಜನ ಸದಸ್ಯರು ಇದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮನ್ನೂ ಲೆಕ್ಕಕ್ಕೆ ತೆಗೆದುಕೊಂಡಿದ್ದೀರಾ ?

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಅಕೌಂಟ್ ಇದೆ. ನಿಮ್ಮನ್ನು ಬಿಟ್ಟಿಲ್ಲ. ನಿಮ್ಮನ್ನೂ ಸೇರಿಸಿ ೨೫ ಜನ ಇದ್ದೇವೆ, ಈಗತಾನೆ ಹೆಗ್ಗಡದೇವನ ಕೋಟೆಯ ಸದಸ್ಯರು ಬಂದರು. ಇವರು ಯಾವ ಯಾವ ಕಡೆ ಓಡಾಡುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ಇದು ಅತ್ಯಂತ ಪ್ರಮುಖವಾದ ಬೇಡಿಕೆ, ನಾನೂ ಸಹ ಮಾತನಾಡಬೇಕಿದೆ, ಮಾನ್ಯ ಶಿವರಾಮೇಗೌಡರು ಮಾತನಾಡಬೇಕಿದೆ. ನಾವು ಬಹಳ ಉತ್ಸಾಹದಿಂದ ಆರೋಗ್ಯಪೂರ್ಣವಾದ ಈ ಇಲಾಖೆಯಮೇಲೆ ಮಾತನಾಡಬೇಕೆಂದು ಬಂದರೆ, ಈ ಸಭೆಯ ಪರಿಸ್ಥಿತಿ ನೋಡಿದರೆ ನಮಗೇ ಆರೋಗ್ಯ ಹೋಗುತ್ತಿದೆ.

ಛೇರ್ಮನ್.—ಇದಿನಬ್ಬನವರು ಮಾತನಾಡಲಿ......

ಶ್ರೀ ವಾಟಾಳ್ ನಾಗರಾಜ್.—ಬೇಡಿ ಬೇಡಿ, ಕೇಳಿ, ಈ ಸಭೆಯನ್ನು ಬಲವಂತವಾಗಿ, ಒತ್ತಾಯವಾಗಿ ನಡೆಸುವುದು ಬೇಡ. ನಾನು ತಮಗೆ ಹೇಳುತ್ತೇನೆ ರಾತ್ರಿ ೧೦ ಗಂಟೆಯವರೆಗೂ ಬೇಕಾದರೆ ನಾನು ಕೂತುಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳ ಪೈಕಿ ಗಂಭೀರವಾಗಿ ಪ್ರತಿದಿನ ಎಷ್ಟು ಹೊತ್ತಿಗೆ ಸಭೆ ಪ್ರಾರಂಭವಾಗುತ್ತದೆ, ಅಷ್ಟೊತ್ತಿಗೆ ಬರುತ್ತೇನೆ. ಮತ್ತು ಸಭೆ ಮುಗಿಯುವ ತನಕ ಕೂತಿರುತ್ತೇನೆ. ನಮ್ಮ ಏಕಾಂತಯ್ಯನವರು ಅಷ್ಟೆ, ಈಗ ತಾವು ಒಂದು ತೀರ್ಮಾನಕ್ಕೆ ಬರಬೇಕು. ಇಲ್ಲಿ ಯಾರುಯಾರು ಎಷ್ಟು ಹೊತ್ತು ಕೂತಿರುತ್ತಾರೆ ಅಂಥವರನ್ನು ಲೆಕ್ಕ ಹಾಕಿ ಅವರಿಗೆ ಮಾತನಾಡುವುದಕ್ಕೆ ಹೆಚ್ಚಿನ ಅವಕಾಶ ಕೊಡಿ. ಕಾಂಗ್ರೆಸ್ ಶಾಸಕರಿಗೆ ಸೆಂಚುರಿಕ್ಲಬ್‌ನಲ್ಲಿ ಊಟಕ್ಕೆ ಅರೇಂಜ್ ಮಾಡಿದ್ದಾರೆಂದು ಗೊತ್ತಾಯಿತು. ಸಹಿ ಸಂಗ್ರಹಣೆ ಶುರುವಾಗಿದೆಯಂತೆ......

ಛೇರ್ಮನ್.—ಆ ವಿಚಾರ ಬೇಡ, ಈ ರೀತಿಯ ಆರೋಪ ಸರಿಯಲ್ಲ. ಆರೋಗ್ಯ ಇಲಾಖೆ ಬಗ್ಗೆ ಮಾತನಾಡಿ. ಬೇರೆ ವಿಚಾರಗಳು ಇಲ್ಲಿ ಬೇಡ.

ಶ್ರೀ ವಾಟಾಳ್ ನಾಗರಾಜ್.—ಏನಾಗಿದೆ ಅಂದರೆ, ಸ್ವಲ್ಪ ಕೇಳಿ ಸ್ವಾಮಿ, ನಾನು ಸರ್ಕಾರವನ್ನು ಉರುಳಿಸುವುದಕ್ಕೆ ಹೋಗುವುದಿಲ್ಲ. ವೀರೇಂದ್ರಪಾಟೀಲರು ಆದರ್ಶವಾದಂಥ ವ್ಯಕ್ತಿ, ೫ ವರ್ಷ ಅವರು ಇರಬೇಕೆಂಬುದೇ ನನ್ನ ವಾದ ನನ್ನಷ್ಟು ಕಳಕಳಿ ಕಾಂಗ್ರೆಸ್‌ನವರಿಗೆ ಇಲ್ಲವೇನೋ ಎಂಬ ನೋವು ನನಗೆ ಬರುತ್ತಿದೆ. ತಾವು ಈ ಸಭೆಯನ್ನು ನೋಡಿ ಆರೋಗ್ಯ ಪೂರ್ಣವಾಗಿದೆಯೇ ? ನಮ್ಮ ಆರೋಗ್ಯ ಸಚಿವರ ಬಗ್ಗೆ ನನಗೆ ಗೌರವ ಇದೆ. ನಿನ್ನೆ ನಾನು ಇಲ್ಲಿ ಕೂಗಾಡಿದಾಗ ನಿಮ್ಮ ವಿರುದ್ಧವೆಂದು ನೀವು ತಿಳಿದುಕೊಂಡಿರಿ. ನಿಮ್ಮ ಸಿಸ್ಟಂ ಮತ್ತು ವ್ಯವಸ್ಥೆ ಬಗ್ಗೆ ಕೂಗಾಡಿದೆ. ಅದನ್ನು ನಿಮಗೆ ಆಮೇಲೆ ಹೇಳುತ್ತೇನೆ.

(ಗೊಂದಲ)

ಶ್ರೀ ಬಿ. ಎಂ. ಇದಿನಬ್ಬ.—ನನ್ನನ್ನು ಕರೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ತಾವು ಬಹಳ ಹಿರಿಯರು, ನಿಮ್ಮ ಬಗ್ಗೆ ಗೌರವ ಇದೆ. ಕನ್ನಡದ ಬಗ್ಗೆ ವಿಶೇಷವಾದ ಆಸ್ಥೆ ಇಟ್ಟುಕೊಂಡಿರುವವರು. ಅಧ್ಯಕ್ಷರೆ, ನಾನು ಬಹಳ ಹೊತ್ತಿನಿಂದ ಅಂದರೆ ಬೆಳಿಗ್ಗೆಯಿಂದ ಇಲ್ಲಿ ಕುಳಿತಿದ್ದೇನೆ. ಪತ್ರಕರ್ತರು ಈ ಸಭೆಯನ್ನು ನೋಡಿದರು. ಅವರು ಹೋಗುತ್ತಿದ್ದಾರೆ, ಬರುತ್ತಿದ್ದಾರೆ. ನಮ್ಮನ್ನು ಬೆಳಿಗ್ಗೆಯಿಂದ ತಾವು ಮಾತನಾಡಲಿಕ್ಕೆ ಕರೆಯುತ್ತೀರಿ ಎಂದು ಒಂದೇ ಸಮನೆ ಚಾತಕ ಪಕ್ಷಿಗಳ ತರಹ ಕಾದು ಕುಳಿತಿದ್ದೇವೆ. ನಮ್ಮನ್ನು ತಾವು ಕರೆಯಲಿಲ್ಲ. ನಾವು ಕುಳಿತು, ಕುಳಿತು ಸಾಕಾಗಿದೆ. ನಾವು ಅರ್ಧ ರಾತ್ರಿಯಾದರೂ ನಾನು ಮತ್ತು ಮಾನ್ಯ ಏಕಾಂತಯ್ಯನವರು ಇಬ್ಬರೇ ಬೇಕಾದರೆ ಕುಳಿತುಕೊಳ್ಳುತ್ತೇವೆ. ಏಕೆಂದರೆ, ಆರೋಗ್ಯ ಇಲಾಖೆ ಬಹಳ ದೊಡ್ಡ ಇಲಾಖೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯಬೇಕು.

(ಗೊಂದಲ)

ಛೇರ್ಮನ್.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ನಾವು ಇಬ್ಬರೂ ಹೊರಗಡೆ ಹೋದರೆ ಕೋರಂ ಇರುವುದಿಲ್ಲ.

(ಗೊಂದಲ)

ಛೇರ್ಮನ್.—ದಯಮಾಡಿ ತಾವು ಕುಳಿತುಕೊಳ್ಳಬೇಕು. ಇವೊತ್ತಿನ ದಿವಸ ಬಿ. ಎ. ಸಿ. ಮೀಟಿಂಗ್‌ನಲ್ಲಿ ಈ ವಿಷಯದ ಚರ್ಚೆಯನ್ನು ಮುಗಿಸಬೇಕೆಂದು ನಿರ್ಣಯವಾಗಿದೆ. ಆ ನಿರ್ಣಯದ ಪ್ರಕಾರ ಚರ್ಚೆಯನ್ನು ಮುಗಿಸಬೇಕಾಗುತ್ತದೆ. ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ನಾವು ಯಾರೂ ಈ ಸಭೆಯ ನಿಯಮವನ್ನು ಉಲ್ಲಂಘನೆ ಮಾಡುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ತಾವು ದಯಮಾಡಿ ಸಭೆಯನ್ನು ಮುಂದಕ್ಕೆ ಹಾಕಿ. ಬೆಳಿಗ್ಗೆ ೧೧ ಗಂಟೆಗೆ ನಾವು ಬಂದಿರುವುದು. ಈಗ ೭ ಗಂಟೆ ೫ ನಿಮಿಷ ಆಯಿತು:

(ಗೊಂದಲ)

ಛೇರ್ಮನ್.—ಮಾನ್ಯ ಸದಸ್ಯರಾದ ಇದಿನಬ್ಬ ಅವರ ಭಾಷಣ ಮುಗಿಯಲಿ ನಂತರ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ.

(ಗೊಂದಲ)

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ನಾನು ಇಷ್ಟು ಹೊತ್ತಿಗೆ ಮಾತನಾಡಿ ಮುಗಿಸುತ್ತಿದ್ದೆ,

(ಗೊಂದಲ)

ಛೇರ್ಮನ್.—ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಮಾನ್ಯ ಇದಿನಬ್ಬ ಅವರು ಒಳ್ಳೆಯ ಕವಿಗಳು. ಕನ್ನಡದ ಬಗ್ಗೆ ಅಪಾರವಾದಂಥ ಗೌರವ ಇರತಕ್ಕಂತಹವರು. ಅವರ ಮಾತನ್ನು ಪ್ರೀತಿ ಮತ್ತು ವಿಶ್ವಾಸದಿಂದ ನಾವು ಕೇಳಬೇಕೆಂದು ಇದ್ದೇವೆ.

(ಗೊಂದಲ)

† ಶ್ರೀ ಬಿ.ಎಂ, ಇದಿನಬ್ಬ (ಉಲ್ಲಾಳ).—ಅಧ್ಯಕ್ಷರೇ, ನಾನು ದೀರ್ಘವಾಗಿ ಮಾತನಾಡಲಿಕ್ಕೆ ಈಗ ಅವಕಾಶ ಇಲ್ಲದೇ ಇದ್ದರೂ ಸಹ, ಇಂತಹ ಒಂದು ಸಂದರ್ಭದಲ್ಲಿ ನನ್ನ ಕ್ಷೇತ್ರದ ವಿಚಾರವನ್ನು ಹೇಳದಿದ್ದರೆ, ಅದು ಸರಿಯಾಗುವುದಿಲ್ಲ. ಈಗ ಮಾತನಾಡುವುದು ಇದ್ದರೆ ಒಂದೆರಡು ಗಂಟೆಗಳ ಕಾಲ ಮಾತನಾಡುವಂಥ ವಿಚಾರಗಳು ಇವೆ. ಈಗಾಗಲೇ, ಮಾನ್ಯ ಸಿಂಧ್ಯ ಅವರು ಸುದೀರ್ಘವಾಗಿ ಎಳೆ, ಎಳೆಯಾಗಿ ವಿವರಿಸಿ ಹೇಳಿದ್ದಾರೆ ಪುನಃ ಅದನ್ನು ನಾನು ಹೇಳಬೇಕಾದ್ದು ಇಲ್ಲ, ಶ್ರೀಮತಿ ಮನೋರಮ ಮಧ್ವರಾಜ್ ಅವರು ಈಗ ಆರೋಗ್ಯ ಖಾತೆಯನ್ನು ವಹಿಸಿಕೊಂಡು ೬ ತಿಂಗಳು ಆಯಿತು ಅಷ್ಟೆ. ಆ ರೀತಿ ಇರುವಾಗ, ಇದರಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ಅದು ಬಹಳ ಹಿಂದಿನಿಂದ ನಡೆದುಕೊಂಡುಬಂದಿರುವಂಥಾದ್ದು ಆಗಿರುವುದರಿಂದ ಅದೆಲ್ಲವನ್ನು ಅಧ್ಯಯನ ಮಾಡಿ ಅದನ್ನು ಸರಿ ಮಾಡಲಿಕ್ಕೆ ಇವೊತ್ತು ಅವರು ಪ್ರಯತ್ನ ಮಾಡುತ್ತಿದ್ದಾರೆ, ಇವೊತ್ತು ನಮಗೆ ಮುಖ್ಯವಾಗಿ ಬೇಕಾದ್ದು ಎಲ್ಲಾ ಭಾಗ್ಯಗಳಿಗಿಂತಲೂ ದೊಡ್ಡದು ಆರೋಗ್ಯ ಭಾಗ್ಯ. ಒಬ್ಬ ಶಿಕ್ಷಣ ಸಚಿವನಾಗಬೇಕಾದರೆ, ಒಬ್ಬ ವಿಜ್ಞಾನಿಯಾಗಬೇಕಾದರೆ ಒಬ್ಬ ಸಾಹಿತಿಯಾಗಬೇಕಾದರೆ ಒಬ್ಬ ವಕೀಲನಾಗಬೇಕಾದರೆ, ಒಬ್ಬ ಒಳ್ಳೆಯ ಎಂ. ಎಲ್. ಎ. ಆಗಬೇಕಾದರೆ, ಒಬ್ಬ ಒಳ್ಳೆಯ ಮಂತ್ರಿಯಾಗಬೇಕಾದರೆ, ಆರೋಗ್ಯ ಇದ್ದರೆ ಮಾತ್ರ ಅವನು ಒಳ್ಳೆಯ ಒಬ್ಬ ಕೆಲಸಗಾರನು ಆಗಲಿಕ್ಕೆ ಸಾಧ್ಯ. ಆರೋಗ್ಯ ಇಲ್ಲದಿದ್ದರೆ ಯಾರಿಗೂ ಏನೂ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಈ ಆರೋಗ್ಯ ಇಲಾಖೆ ಸುಸೂತ್ರವಾಗಿ ಕರ್ನಾಟಕ ರಾಜ್ಯದಲ್ಲಿ ನಡೆಯಬೇಕಾಗಿದೆ.

ಆದ್ದರಿಂದ ಇವತ್ತು ಶ್ರೀಮತಿ ಮನೋರಮ ಮಧ್ವರಾಜ್‌ರವರು ಈ ಒಂದು ಅಧಿಕಾರವನ್ನು ಪಡೆದುಕೊಂಡಿದ್ದಾರೆ. ಅವರಲ್ಲಿ ಒಂದು ಒಳ್ಳೆಯ ಗುಣ ಉಂಟು. ಕಂಡದ್ದನ್ನು ಕಂಡ ಹಾಗೆ ಹೇಳುವಂತಹ ಶಕ್ತಿ ತಮಗೆ ಇದೆ ಎಂದು ಅವರೇ ಹೇಳಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ ಕಂಡದ್ದನ್ನು ಕಂಡ ಹಾಗೆ ಹೇಳುವಂತೆ ನೀವು ಸಹ ಒಂದೊಂದು ಸಾರಿ ಕೆಂಡದ ಶಕ್ತಿ ಬೆಳೆಸಿಕೊಂಡು

ಅದನ್ನು ಪಾಲಿಸಿ ಆಚರಣೆಗೆ ತಂದರೆ ನಮಗೆ ತುಂಬಾ ಸಂತೋಷವಾಗುತ್ತದೆ. ಆಗ ಇವರ ಎಲ್ಲಾ ಶಕ್ತಿ ಮುರಿದು ಬೀಳುತ್ತದೆ. ಆಗ ಯಾರ್ಯಾರು ಮೋಸ ಮಾಡುತ್ತಾರೋ ಯಾರ್ಯಾರೋ ಅನ್ಯಾಯ ಮಾಡುತ್ತಾರೆ ಅವರಿಗೆ ನೀವು ಕೊಡದಂತೆ ಆಗಬೇಕು ಅದು ಆಗ ನಮಗೆ ಗೊತ್ತಾಗುತ್ತದೆ.

ಶ್ರೀ ಪಾಟೀಲ್ ನಾಗರಾಜ್.—ನಿಮ್ಮ ಜಿಲ್ಲೆಯವರು ನಿಮ್ಮನ್ನು ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ ಏರಿಸುತ್ತಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ.—ಹಾಗೇನೂ ಇಲ್ಲ. ನಮ್ಮ ಜಿಲ್ಲೆ ಕೆಲಸ ಆಗಬೇಕು. ನಮ್ಮ ಸ್ವಾತಂತ್ರ್ಯ ಪೂರ್ವದಲ್ಲಿ ಮನುಷ್ಯನ ಸರಾಸರಿ ಆಯುಸ್ಸು ೨೭ ವರ್ಷವಾಗಿತ್ತು. ಆದರೆ ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಆರೋಗ್ಯಕ್ಕೆ ಸಂಬಂಧ ಪಟ್ಟಂತೆ ಒಳ್ಳೆಯ ಕೆಲಸಗಳನ್ನು ಮಾಡಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆರೆದು ಹೆಚ್ಚು ಹೆಚ್ಚು ಡಾಕ್ಟರ್‌ಗಳನ್ನು ನೇಮಕ ಮಾಡಿ ಒಳ್ಳೆಯ ಔಷಧಿಗಳನ್ನು ಕಂಡುಹಿಡಿದಿರುವುದರಿಂದ ಮನುಷ್ಯನ ಸರಾಸರಿ ಆಯುಸ್ಸು ೫೭ ವರ್ಷ ಆಗಿದೆ. ಆರೋಗ್ಯದ ವಿಷಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮುಂದೆ ಬಂದಿದ್ದೇವೆ. ಆದರೆ ಸರ್ಕಾರದ ಉದ್ದೇಶಗಳು ಫಲಿಸಬೇಕು. ಮಂತ್ರಿಗಳ ಉದ್ದೇಶ ಬಹಳ ಒಳ್ಳೆಯದು ಇದೆ. ಸರ್ಕಾರದ ಉದ್ದೇಶ ಒಳ್ಳೆಯದು ಇದೆ. ಆದರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಬೇರೆ ಬೇರೆ ನಗರಗಳಲ್ಲಿ ಇದನ್ನು ಪಾಲನೆ ಮಾಡತಕ್ಕಂಥವರು ಅಲ್ಲಿನ ಸಿಬ್ಬಂದಿಯವರು ಮತ್ತು ಅಲ್ಲಿನ ಅಧಿಕಾರಿಗಳು ಅವರ ಉದ್ದೇಶ ಒಳ್ಳೆಯದು ಇದ್ದರೆ ಆಗ ಎಲ್ಲಾ ಸರಿಯಾಗುತ್ತದೆ. ಅವರು ಸರಿ ಇರದಿದ್ದರೆ ಆಗ ಎಲ್ಲರಿಗೂ ಅಪಕೀರ್ತಿ ಬರುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಪ್ರತಿಯೊಂದು ಜಿಲ್ಲೆಗೂ ಅನಿರೀಕ್ಷಿತ ಭೇಟಿಯನ್ನು ಎಲ್ಲಾ ನಗರಗಳಿಗೂ ಎಲ್ಲಾ ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಿಗೂ ಕೊಟ್ಟು ಅವರ ಎಲ್ಲಾ ಗುಟ್ಟುಗಳನ್ನು ರಟ್ಟು ಮಾಡಿ ಅದಕ್ಕೆ ಬೇಕಾದಂತಹ ತನಿಖೆ ಮಾಡತಕ್ಕ ಶಿಕ್ಷೆಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ತಾವು ಒಂದೋ ಎರಡೋ ಕಡೆ ಮಾಡಿದರೆ ಸಾಕು, ಬೇರೆ ಎಲ್ಲಾ ಕಡೆಯೂ ಸರಿಯಾಗುತ್ತದೆ. ಎಲ್ಲಾ ಆಸ್ಪತ್ರೆಗಳಲ್ಲಿರುವ ಭ್ರಷ್ಟಾಚಾರ ನಿಲ್ಲುತ್ತದೆ, ಮೋಸ ನಿಲ್ಲುತ್ತದೆ ಹಾಗೂ ಸ್ವಚ್ಛತೆ ಬರುತ್ತದೆ. ಒಳ್ಳೆಯ ರೀತಿಯಲ್ಲಿ ಕೆಲಸಗಳು ಆಗುತ್ತದೆ. ತಾವು ಸಹ ಅನಿರೀಕ್ಷಿತ ಭೇಟಿ ಕೊಡುತ್ತೇನೆಂದು ಹೇಳಿರುವುದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ನಮ್ಮ ಪ್ರಜಾಪ್ರಭುತ್ವದಲ್ಲಿ ದುಷ್ಟರ ನಿಗ್ರಹ ಆಗಬೇಕು ಶಿಷ್ಟರ ಪರಿಪಾಲನೆಯಾಗಬೇಕು. ಆದರೆ ಪ್ರಜಾಪ್ರಭುತ್ವದ ಪ್ರಕಾರ, ಕಾನೂನಿನ ಪ್ರಕಾರ ಕೆಲವನ್ನು ಮಾಡುವುದಕ್ಕೆ ಆಗುವುದಿಲ್ಲ. ಈಗ ನೋಡಿ ಸೌದಿ ಅರೇಬಿಯಾದಲ್ಲಿ ಯಾರಾದರೂ ಕದ್ದರೆ ಅವರ ಕೈಯನ್ನೇ ಕಡಿದು ಹಾಕುತ್ತಾರೆ. ಆ ರೀತಿ ಮಾಡಿದರೆ ಮತ್ತೆ ಯಾರೂ ಕದಿಯುವುದಕ್ಕೆ ಹೋಗುವುದಿಲ್ಲ. ಅಲ್ಲಿ ಉಗ್ರವಾದ ಶಿಕ್ಷೆಯನ್ನು ಕೊಡುತ್ತಾರೆ. ಶಿಕ್ಷೆ ಸ್ವಲ್ಪ ಉಗ್ರವಾಗಿರಬಹುದು. ಅದೇ ರೀತಿ ವ್ಯಭಿಚಾರ ಮಾಡಿದವನನ್ನು ಕಲ್ಲು ಹಾಕಿ ಕೊಲ್ಲುತ್ತಾರೆ. ಒಬ್ಬೊಬ್ಬರನ್ನು ಕೊಂದರೆ ಮತ್ತೆ ರಾತ್ರಿ ಯಾರೂ ವ್ಯಭಿಚಾರಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ಆ ರೀತಿ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮಲ್ಲಿ ತಪ್ಪು ಮಾಡಿದವರಿಗೆ ಉಗ್ರವಾದ ಶಿಕ್ಷೆ ಇಲ್ಲವಾಗಿದೆ. ಇದು ಮಂತ್ರಿಗಳ ದೋಷ ಇಲ್ಲ. ಸರ್ಕಾರದ ದೋಷ ಇಲ್ಲ, ಅವರ ಉದ್ದೇಶ ಒಳ್ಳೆಯದು. ಆದರೆ ಮೇಲಿನಿಂದ ಕೆಳಗೆ ಬರುವಾಗ ಯಾವ ರೀತಿ ನಡೆಯುತ್ತದೆಂಬುದು ಎಲ್ಲರಿಗೂ ಗೊತ್ತಿದೆ ಇದರ ಬಗ್ಗೆ ಸಹ ಮಾನ್ಯ ಮಂತ್ರಿಗಳು ತನಿಖೆ ಮಾಡಬೇಕು. ಇನ್ನುರೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಹೇಳುತ್ತೇನೆ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಮತ್ತು ಲೇಡಿ ಗೋಷನ್ ಆಸ್ಪತ್ರೆಗೆ ಮತ್ತು ನಮ್ಮ ಉಲ್ಲಾಳದ ಆಸ್ಪತ್ರೆಗಳಿಗೆ ಔಷಧಿ ಹೆಚ್ಚು ಬೇಕಾಗುತ್ತದೆ. ಅದನ್ನು ತಾವು ಕೊಡಿಸುವುದಕ್ಕೆ ಏರ್ಪಾಡು ಮಾಡಬೇಕು. ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿ ಗೋಷನ್ ಆಸ್ಪತ್ರೆಗಳಲ್ಲಿ ಕೆಳದರ್ಜೆಯಲ್ಲಿ ಕೆಲಸ ಮಾಡುತ್ತಿರುವ ದಾದಿಯರಿಗೆ ಮತ್ತು ಇತ್ತ ಸಂಬಂಧಪಟ್ಟ ನೌಕರರಿಗೆ ಮೇಲಿನ ಅಧಿಕಾರಿಗಳಾದ ಡಿ ಎಂ ಓ, ಮತ್ತು ಆರ್. ಎಂ. ಓಗಳು ಸರಿಯಾಗಿ ನೋಡಿಕೊಂಡರೆ ಅಲ್ಲಿ ಒಳ್ಳೆಯ ರೀತಿಯಿಂದ ಕೆಲಸವಾಗುತ್ತದೆ. ಅಲ್ಲಿಗೆ ಬಂದ ಕಡುಬಡವರು ಸಹ ಹೇಳುತ್ತಾರೆ. ಏನೆಂದರೆ ನಮ್ಮಿಂದ ಕೆಳಗಿನ ದರ್ಜೆ ನೌಕರರು ಹಣ ಕೇಳುತ್ತಾರೆ. ತೊಂದರೆಕೊಡುತ್ತಾರೆ ಎಂದು ಇಂಥಾದ್ದನ್ನು ನಿಲ್ಲಿಸಲು ತಾವು ಒಳಗಿಂದ ಒಳಗೆ ಇದಕ್ಕೆ ಬೇಕಾದಂತಹ ಏರ್ಪಾಡುಗಳನ್ನು ಮತ್ತು ಸುತ್ತೋಲೆಗಳನ್ನು ಕಳುಹಿಸಿ ನಿಲ್ಲಿಸಬೇಕಾಗುತ್ತದೆ. ಇನ್ನು ಆಸ್ಪತ್ರೆಗಳಲ್ಲಿ ಸ್ವಚ್ಛತೆ ಇರಬೇಕು. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಅದು ಸ್ವಲ್ಪ ಕಡಿಮೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಜಿ. ಎಸ್ ಆಚಾರ್‌ರವರು ಹೇಳುತ್ತಿದ್ದರು, ಖಾಸಗಿ ಆಸ್ಪತ್ರೆಗಳಿಗೆ ಜನರು ಏತಕ್ಕೆ ನುಗ್ಗುತ್ತಾರೆ ಎಂದರೆ, ಅಲ್ಲಿ ಸ್ವಚ್ಛತೆ ಇರುತ್ತದೆ ಎಂದು. ಅಲ್ಲಿ ಎಷ್ಟು ಬಿಲ್ ಆದರೂ ಪರವಾಗಿಲ್ಲ, ಖಾಸಗಿ ಆಸ್ಪತ್ರೆಗಳಿಗೆ ಜನರು ಹೋಗುತ್ತಾರೆ. ಕಾರಣ ನಮ್ಮ ಸರ್ಕಾರದ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಕಡಿಮೆ. ಖಾಸಗಿ ಆಸ್ಪತ್ರೆಗಳಲ್ಲಿ

ಬೇಕಾದಂತಹ ಸಿಬ್ಬಂದಿ ಹೆಚ್ಚು ಇಟ್ಟಿದ್ದಾರೆ. ಬೇಕಾದಷ್ಟು ದಾದಿಯರನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಸ್ವಲ್ಪ ಹೆಚ್ಚು ಹಣ ಆದರೂ ಚಿಂತೆ ಇಲ್ಲ. ಎಂದು ಜನ ಅಲ್ಲಿಗೆ ಮುಗ್ಗರಿಸಿ ಬೀಳುವುದಕ್ಕೆ ಕಾರಣವಿರಬಹುದು ಎಂದು ನನ್ನ ಅಭಿಪ್ರಾಯ. ಈ ಖಾಸಗಿ ಆಸ್ಪತ್ರೆಗಳಿಗೆ ಜನರು ಹೋಗುವುದನ್ನು ಪೈಪೋಟಿಯನ್ನು ನಿಲ್ಲಿಸಬೇಕಾದರೆ ನಮ್ಮ ಸರ್ಕಾರದ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಇರಬೇಕು. ನಾನು ಸಹ ಆಸ್ಪತ್ರೆಗಳ ಸಲಹಾ ಸಮಿತಿಯ ಸದಸ್ಯನಾಗಿದ್ದೆ. ನಾವು ಒಂದು ಸಾರಿ ಆಸ್ಪತ್ರೆಗಳಿಗೆ ಸಮಿತಿಯ ಜೊತೆ ಭೇಟಿ ಕೊಟ್ಟಿದ್ದೆ. ಆಗ ಏನು ಎಲ್ಲಾ ಕಡೆ ಔಷಧಿ ಫಿಂಪಂಡಿಷಿ ಗಮ ಗಮ ಎಂದು ಏನು ಚಂದ ಇಟ್ಟಿದ್ದರು ಗೊತ್ತೆ. ಅದಾದ ಮೇಲೆ ಎರಡು ದಿವಸಗಳ ನಂತರ ನಾನು ಒಬ್ಬನೆ ಹೋದೆ. ಅಲ್ಲಿ ಔಷಧಿ ಸಿಂಪಡಿಸಿಲ್ಲ ಏನೂ ಇಲ್ಲ. ಇದೆಲ್ಲ ಕಣ್ಣಿಗೆ ಮಣ್ಣು ಹಾಕುವ ಕೆಲಸ ಅವರು ಮಾಡಿದ್ದರು. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತಿ ದಿವಸ ಸ್ವಚ್ಛತೆ ಇರಬೇಕು ಅದು ಇಲ್ಲದಿದ್ದರೆ ಪರಿಪೂರ್ಣತೆ ಇರುವುದಿಲ್ಲ. ಇನ್ನು ನಾನು ಹೇಳುವಂಥಾದ್ದು ಏನೆಂದರೆ ಯುನಾನಿಗೆ ಮಾನ್ಯ ಸಚಿವರು ಹೆಚ್ಚು ಪ್ರೋತ್ಸಾಹ ಕೊಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಹ ಒಂದು ಕಡೆ ಹೇಳಿಕೆ ಕೊಟ್ಟಿದ್ದರೆ ಅದನ್ನು ನಾನು ಓದಿದ್ದೇನೆ. ಅದೇ ರೀತಿ ಆಯುರ್ವೇದ ಪದ್ಧತಿಗೂ ಸಹ ಹೆಚ್ಚು ಪ್ರೋತ್ಸಾಹ ಕೊಡಬೇಕು. ಅವರು ತಮ್ಮ ಭಾಷಣದಲ್ಲಿ ಈ ಮಾತನ್ನು ಹೇಳಿದ್ದಾರೆ. ಆಯುರ್ವೇದ ಪದ್ಧತಿ ಬಹಳ ಹಿಂದಿನಿಂದ ನಡೆದುಕೊಂಡುಬಂದಂತಹ ಒಂದು ಉತ್ತಮವಾದ ಪ್ರಯೋಗ. ಆದ್ದರಿಂದ ಇವತ್ತು ನಮ್ಮ ರಾಜ್ಯದಲ್ಲಿ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಇದಕ್ಕೆ ನಾನು ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ರಕ್ತ ಕಾರತಕ್ಕಂಥ ಒಬ್ಬ ಮನುಷ್ಯನನ್ನು ಕರೆತಂದರು. ಆತ ಇಡೀ ಇಡೀಯಾಗಿ ರಕ್ತ ವಾಂತಿ ಮಾಡುತ್ತಿದ್ದ. ಅಲ್ಲಿದ್ದಂತಹ ಡಾಕ್ಟರ್ಸ್‌ಗೆ ಇದನ್ನು ನೋಡಿ ಆಶ್ಚರ್ಯ. ಅವರು ಏನೆಲ್ಲಾ ಮಾಡಿದರು ಆದರೆ ಏನೂ ಆಗಲಿಲ್ಲ, ದೊಡ್ಡ ದೊಡ್ಡ ಡಿಗ್ರಿ ಪಡೆದಂಥ ಡಾಕ್ಟರ್‌ಗಳೆಲ್ಲಾ ತಲೆಕೆಳಗಾದರು. ಅಲ್ಲಿ ಯಾರೋ ಒಬ್ಬರು ಹೇಳಿದರು. ಹಳ್ಳಿಯಲ್ಲಿ ಒಬ್ಬ ಆಯುರ್ವೇದಿಕ್ ಪಂಡಿತ ಇದ್ದಾನೆ, ಅವನು ಇಂಥ ದ್ದರಲ್ಲಿ ಬಹಳ ಗಟ್ಟಿಗ ಎಂದು. ಆಗ ಡಾಕ್ಟರ್ಸ್ ತಪಾಷೆ ಮಾಡಿದರು. ಆಗ ನಾನು ಸಹ ಅಲ್ಲಿ ಇದ್ದೆ. ಅವರು ಯೋಚನೆ ಮಾಡಿ ಈತ ಹೇಗೋ ಸಾಯುತ್ತಾನೆ?, ಪರವಾಗಿಲ್ಲ ಎಂದು ಸಾಯುವ ಮನುಷ್ಯನನ್ನು ಎತ್ತಿಕೊಂಡು ಆ ಹಳ್ಳಿಗೆ ಹೋದರು. ಅವರು ಬೈರಾಸ್ ಹುಟ್ಟುಕೊಳ್ಳುವಂತಹ ಜನರು. ಅವನು ಏನೂ ಮಾಡಲಿಲ್ಲ. ಅವನ ಕೈಯಲ್ಲಿ ಎರಡು ತರಹದ ಭಸ್ಮ ಇತ್ತು. ಆ ಭಸ್ಮವನ್ನು ಕುಂಕುಮದ ಕೇಸರಿಯಲ್ಲಿ ಬೆರಸಿದನಂತರ ಹಾಲಿನಲ್ಲಿ ಹಾಕಿ ಆತನಿಗೆ ಎರಡು ಎರಡು ಸಲ ಕುಡಿಸಿದರು.

ಅದನ್ನು ಆತ ಕುಡಿದ ಕೂಡಲೇ ರಕ್ತವನ್ನು ಕಾರುತ್ತಿದ್ದವನು ಮೊದಲನೇ ದಿವಸವೇ ಅರ್ಧ ಭಾಗದಷ್ಟು ಗುಣಮುಖನಾದ; ಎರಡನೇ ದಿವಸಕ್ಕೆ ಸಂಪೂರ್ಣವಾಗಿ ಗುಣಮುಖನಾದ. ಮುಂದೆ ರಕ್ತ ಕಾರುತ್ತಿದ್ದದು ಸಂಪೂರ್ಣವಾಗಿ ನಿಂತುಹೋಯಿತು. ಆಗ ಡಿಗ್ರಿಗಳನ್ನು ಪಡೆದ ಬಂದಿದ್ದ ಡಾಕ್ಟರ್‌ಗಳೆಲ್ಲಾ ಆಶ್ಚರ್ಯಚಕಿತರಾದರು ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಳ್ಳೊಳ್ಳೆಯ ಭಸ್ಮ ಗಿಡಮೂಲಿಕೆಗಳು ಈ ಆಯುರ್ವೇದದಲ್ಲಿ ಇರುವುದರಿಂದ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಸರ್ಕಾರದವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದನ್ನು ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಶುಲ್ಕ ತೆಗೆದುಕೊಳ್ಳತಕ್ಕ ಬಗ್ಗೆ ಮಾನ್ಯ ಸದಸ್ಯರಾದ ಸೋಮಪ್ಪ ಸುವರ್ಣರವರು ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಜಲ ತಿಮಿಂಗಿಲಗಳನ್ನು ಮೀನುಗಾರರು ಹಿಡಿಯುತ್ತಾರೆ, ಅದೇರೀತಿ ನೀವು ಅಂದರೆ ಮಂತ್ರಿಗಳು ನೆಲ ತಿಮಿಂಗಲಗಳನ್ನು ಹಿಡಿದು ಪುಡಿ ಮಾಡ ಬೇಕೆಂದು ಹೇಳಿದ್ದಾರೆ. ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಏಕೆಂದರೆ ಸುಸೂತ್ರವಾದ, ಸ್ವಚ್ಛ ವಾದ ಆಡಳಿತ ರಾಜ್ಯದಲ್ಲಿ ಬರಬೇಕೆಂಬುದು ನಮ್ಮ ಮತ್ತು ನಮ್ಮ ಸರ್ಕಾರದ ಅಪೇಕ್ಷೆ. ಇವತ್ತು ಕುಟುಂಬ ಯೋಜನೆಗೋಸ್ಕರ ನಾವು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಹಿಂದೂಸ್ಥಾನ ಪಾಕಿಸ್ಥಾನ ಎಂದು ದೇಶ ವಿಭಾಗವಾದಾಗ ನಮ್ಮಲ್ಲಿ ೩೫ ಕೋಟಿ ಜನ ಇದ್ದುದು ಇವತ್ತು ನಮ್ಮ ದೇಶದಲ್ಲಿ ೮೫ ಕೋಟಿ ಆಗಿದ್ದೇವೆ ಈ ಕುಟುಂಬ ಯೋಜನೆಗೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೂ ಕೂಡ ಇಷ್ಟೊಂದು ಅಧಿಕ ಸಂಖ್ಯೆಗೆ ಮುಟ್ಟಿದ್ದೇವೆ. ಆದ್ದರಿಂದ ಈಗ ಏನು ಈ ಕುಟುಂಬ ಯೋಜನೆ ಕಾರ್ಯವನ್ನು ಕೈಗೊಂಡಿದ್ದೇವೆ ಇದು ಫಲಕಾರಿ ಯಾಗಿದೆಯೋ, ಇಲ್ಲವೋ ಎಂಬುದನ್ನು ನೋಡಬೇಕು ಈ ಬಗ್ಗೆ ಆಗಿಂದಾಗ್ಗೆ ಸುತ್ತೋಲೆಗಳನ್ನು ಕಳುಹಿಸುವುದರ ಜೊತೆಗೆ ತನಿಖಾ ಕಾರ್ಯವನ್ನು ಕೂಡ ತಾವು ಇಟ್ಟುಕೊಳ್ಳುವುದು ಅವಶ್ಯಕ. ಇದು ಆತ್ಮ ಸಂತೋಷದಿಂದ ಆಗತಕ್ಕ ಕೆಲಸ. ಸ್ವಪ್ರೇರಣೆಯಿಂದ ಆಗತಕ್ಕ ಕೆಲಸ, ಇದು ಬಲಾತ್ಕಾರ

ದಿಂದ ಆಗುವ ಕೆಲಸ ಅಲ್ಲ. ಈ ಕುಟುಂಬ ಯೋಜನೆ ಜಯಪ್ರದವಾಗಬೇಕಾದರೆ ನಾವು ಹೆಚ್ಚು ಆಸಕ್ತಿಯನ್ನು ಇದರ ಬಗ್ಗೆ ತೋರಿಸಬೇಕಾಗುತ್ತದೆ. ಇಲ್ಲಿ ನಮ್ಮ ಪ್ರಾರ್ಥನೆ ಏನೆಂದರೆ, ನಮ್ಮ ಜಿಲ್ಲೆಯ ನಾಗಪ್ಪ ಆಳ್ವ ಆಗಲಿ, ಎ. ಬಿ. ಶೆಟ್ಟಿಯವರಾಗಲಿ, ಕೆ. ಕೆ. ಹೆಗಡೆಯವರಾಗಲಿ ಏನು ಒಳ್ಳೆಯ ಹೆಸರನ್ನು ಪಡೆದಿದ್ದಾರೆ, ಅದಕ್ಕಿಂತಲೂ ಒಳ್ಳೆಯ ಹೆಸರನ್ನು ಮಾನ್ಯ ಮಂತ್ರಿಗಳಾದ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ತೆಗೆದುಕೊಳ್ಳಬೇಕು. ಅವರು ಈ ವಿಚಾರದಲ್ಲಿ ಯಾವುದೇ ಸಂದರ್ಭದಲ್ಲೂ ಕೂಡ ದಾಕ್ಷಿಣ್ಯಕ್ಕೆ ಎಡೆಕೊಡಬಾರದು. ದುಷ್ಟರ ನಿಗ್ರಹ ಶಿಷ್ಟರ ಪರಿಪಾಲನೆಯನ್ನು ತಾವು ಮಾಡಬೇಕು. ಹಾಗೆಯೇ ತಮ್ಮ ಕೀರ್ತಿ ಸಹ ಹೆಚ್ಚಾಗಬೇಕೆಂದು ಅಪೇಕ್ಷಿಸಿ ನಾನು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್‌ಮನ್.—ಈಗ ಶ್ರೀ ವಾಟಾಳ್ ನಾಗರಾಜ್ ಅವರು ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ......

ಶ್ರೀ ಎಲ್. ಆರ್. ಶಿವರಾಮೇಗೌಡ (ನೆಲಮಂಗಲ).—ಮಾನ್ಯ ಅಧ್ಯಕ್ಷರೆ ಮಾನ್ಯ ವಾಟಾಳ್ ನಾಗರಾಜ್‌ರವರು ಜೋರಾಗಿ ಮಾತನಾಡುತ್ತಾರೆಂದು ಅವರಿಗೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ. ನಾನು ಈ ದಿವಸ ಆರೋಗ್ಯ ಇಲಾಖೆಯ ಮೇಲೆ ಮಾತನಾಡಲೇಬೇಕೆಂದು ಬೆಳಿಗ್ಗೆಯಿಂದ ಇದುವರೆಗೂ ಕಾದು ಕೂತಿದ್ದೇನೆ. ದಯವಿಟ್ಟು ಈಗ ಇದು ತೀರ್ಮಾನವಾಗಬೇಕು. ಮೊದಲು ನಾನು ಮಾತನಾಡಲು ಅವಕಾಶ ಕೊಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು. ನಾನು ಉಪ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಅಧ್ಯಕ್ಷರು ಆರೋಗ್ಯ ಇಲಾಖೆಯ ಮೇಲಿನ ಬೇಡಿಕೆ ಬಂದಾಗ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇವೆಂದು ಹೇಳಿದ್ದರು. ಆದರೆ ಈಗ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ತಾವು ಅವಕಾಶವನ್ನು ಕೊಡುತ್ತಿದ್ದೀರಿ ಅವರು ಭಾಷಣ ಮುಗಿಸಿದ ನಂತರ ನೀವು ಸಭೆಯನ್ನು ಮುಂದು ಹಾಕಿದರೆ ನಾವು ಏನು ಮಾಡುವುದು ?

ಛೇರ್ಮನ್.—ತಮಗೆ ಸಮಯ ಬೇಕಾದರೆ ಕೊಡುತ್ತೇವೆ. ವಾಟಾಳ್ ನಾಗರಾಜ್‌ರವರೇ ನೀವು ೧೦ ನಿಮಿಷದಲ್ಲಿ ಮುಗಿಸಬೇಕು. ಅನಂತರ ತಮಗೂ ಸಹ ಮಾತನಾಡಲು ೧೦ ನಿಮಿಷಗಳ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನಗೆ ಕನಿಷ್ಟ ಒಂದು ಗಂಟೆಯಾದರೂ ಬೇಕಾಗುತ್ತದೆ. ಆದ್ದರಿಂದ ನಾನು ನಾಳೆ ಮಾತನಾಡುತ್ತೇನೆ.

ಛೇರ್ಮನ್.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿರುವುದರಿಂದ ಅದರ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಇವತ್ತು ಈ ಡಿಬೇಟ್ ಕನ್‌ಕ್ಲೂಡ್ ಆಗಲೇಬೇಕಾಗುತ್ತದೆ. ಇದು ತಮಗೂ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ನಾಳೆ ಅವರು ಉತ್ತರ ಕೊಡುವುದಕ್ಕಿಂತ ಮೊದಲು ಮಾತನಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಸದಸ್ಯರಾಗಿದ್ದಾರೆ. ಇದು ಅವರಿಗೂ ಗೊತ್ತಿದೆ. ಬಿ. ಎ. ಸಿ. ಯಲ್ಲಿ ತೀರ್ಮಾನವಾಗಿದೆ. ಇವತ್ತು ಈ ಡಿಸ್ಕಷನ್ ಮುಗಿಯಬೇಕು, ನಾಳೆ ಮಂತ್ರಿಗಳಿಂದ ರಿಪ್ಲೈ ಆಗಬೇಕೆಂದು ತೀರ್ಮಾನವಾಗಿದೆ. ಇದಕ್ಕೆ ಮಾನ್ಯ ಸದಸ್ಯರೂ ಸಹ ಬದ್ಧರಾಗಿರಬೇಕು.

ಛೇರ್ಮನ್.—ತಾವು ಚೆನ್ನಾಗಿ ಮಾತನಾಡುತ್ತೀರಿ. ಜಾಗ್ರತ ಮುಗಿಸಿಬಿಡಿ.

ಶ್ರೀ ಕೆ. ಎಚ್. ರಂಗನಾಥ.—ಮಾನ್ಯ ಅಧ್ಯಕ್ಷರೇ, ಇವತ್ತೇ ಚರ್ಚೆಯನ್ನು ಮುಗಿಸಬೇಕಾಗಿದೆ.

ಛೇರ್ಮನ್.—ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಬಹಳ ಉತ್ತಮವಾಗಿ ಮಾತನಾಡುತ್ತೀರಿ, ಮುಖ್ಯವಾದ ವಿಚಾರಗಳನ್ನು ಹೇಳಿ ತಮ್ಮ ಭಾಷಣವನ್ನು ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್.—ಮೊದಲು ಸಭೆಯಲ್ಲಿ ಕೋರಮ್ ಇದೆಯೇ, ನೋಡಿ.

ಛೇರ್ಮನ್,—ಕೋರಮ್ ಇದೆ. ೨೪ ಜನ ಸದಸ್ಯರಿದ್ದಾರೆ. ನೀವು ಮಾತನಾಡಿ ಮುಗಿಸಿ. ನಾಳೆಯ ದಿವಸ ಮಾನ್ಯ ಆರೋಗ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ನಂತರ ಬೇಕಾದರೆ ತಾವು ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ವಾಟಾಳ್‌ನಾಗರಾಜ್‌ರವರು ಮನಸ್ಸುಮಾಡಿದರೆ ೧೦ ನಿಮಿಷಗಳಲ್ಲಿ ಅವರ ಭಾಷಣವನ್ನು ಮುಗಿಸಬಹುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಮೊದಲು ಎಷ್ಟು ಹೊತ್ತು ಸಭೆ ಕುಳಿತು ಕೊಳ್ಳಬೇಕೆಂಬುದು ನಿರ್ಧಾರವಾದರೆ ನಾನು ನನ್ನ ಕಡತವನ್ನು ಬಿಚ್ಚುತ್ತೇನೆ.

ಛೇರ್ಮನ್.—ನಿಮಗೆ ಹತ್ತು ನಿಮಿಷ ಮತ್ತು ಮಾನ್ಯ ಶಿವರಾಮೇಗೌಡರಿಗೆ ಹತ್ತು ನಿಮಿಷ ಮಾತನಾಡಲು ಅವಕಾಶ ಕೊಟ್ಟಿರುತ್ತೇನೆ,

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ. ಈಗ ಸಮಯ ಏಳುಗಂಟೆ ಹದಿನೇಳು ನಿಮಿಷವಾಗಿದೆ. ಪ್ರತಿದಿವಸ ಸಭೆ ೬ ಗಂಟೆಗೆ ಮುಕ್ತಾಯವಾಗುತ್ತಿತ್ತು. ಆದ್ದರಿಂದ ಇವತ್ತು ಎಂಟೂವರೆ ಗಂಟೆಯವರೆಗೆ ಕುಳಿತುಕೊಳ್ಳಬೇಕೇ ಅಥವಾ ಒಂಬತ್ತೂವರೆ ಗಂಟೆಯವರೆಗೆ ಕುಳಿತು ಕೊಳ್ಳಬೇಕೇ ಅಷ್ಟು ಹೇಳಿದರೆ ಸಾಕು.

ಛೇರ್ಮನ್.—ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ತಾವು ಸಹ ಸದಸ್ಯರಾಗಿದ್ದೀರಿ. ಅಲ್ಲಿ ತಾವೇ ನಿರ್ಣಯ ಮಾಡಿಕೊಂಡು ಬಂದಿದ್ದೀರಿ. ಆ ನಿರ್ಣಯಕ್ಕೆ ತಾವೂ ಸಹ ಬದ್ಧರಾಗಿರಬೇಕೆಂದು ಹೇಳು ತ್ತೇನೆ, ನಮಗೆ ತಾವು ಸಹಕಾರ ನೀಡಬೇಕು.

ಶ್ರೀ ವಾಟಾಳ್ ನಾಗರಾಜ್,—ಅಧ್ಯಕ್ಷರೇ, ತಮ್ಮ ಆಜ್ಞೆಗೆ ವಿರುದ್ಧ ಹೇಳುತ್ತಿಲ್ಲ. ನಾನು ಮನವಿ ಮಾಡುತ್ತಿರುವುದೇನೆಂದರೆ ನಾವು ಇವತ್ತು ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳಬೇಕು ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ,—ನೀವು ಎಲ್ಲಿಯವರೆಗೆ ಒಳ್ಳೆಯ ಸಲಹೆಗಳನ್ನು ಕೊಟ್ಟುಕೊಂಡು ಬರುತ್ತೀರೋ ಅಲ್ಲಿಯವರೆಗೆ ಕುಳಿತುಕೊಳ್ಳೋಣ.

ಛೇರ್ಮನ್,—ಮಾನ್ಯ ಶಿವರಾಮೇಗೌಡರು ಮತ್ತು ನೀವು ಒಂದೇ. ಆದ್ದರಿಂದ ನೀವು ಅವರದ್ದನ್ನು ಸೇರಿಸಿ ಮಾತನಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಅದು ಹೇಗೆ ಸಾಧ್ಯ. ಅವರೇ ಬೇರೆ ನಾವೇ ಬೇರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರು ಮತ್ತು ನಾವು ಒಂದೇ ಆಗಿದ್ದರೂ ಸಹ ಅನೇಕ ವಿಚಾರಗಳಲ್ಲಿ ವಿರೋಧವಾಗಿರುತ್ತೇವೆ.

ಛೇರ್ಮನ್.—ತಾವು ಬೇಗ ಪ್ರಾರಂಭಮಾಡಿ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಮ್ಮ ಮನವಿಯನ್ನು ತಾವು......

ಛೇರ್ಮನ್.—ವಾಟಾಳ್ ನಾಗರಾಜ್‌ರವರು ಮಾತನಾಡುವುದಿಲ್ಲವೆಂದು ಕಾಣುತ್ತೆ. ಶ್ರೀ ಶಿವರಾಮೇಗೌಡರೇ ನೀವು ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬೇಡಿಕೆಗೆ ನನ್ನ ಬೆಂಬಲವನ್ನು ಸೂಚನೆ ಮಾಡಿ ನನ್ನ ಕೆಲವು ವಿಚಾರಗಳನ್ನು ಹೇಳುವವನು ಇದ್ದೇನೆ. ಬೆಳಗ್ಗಿನಿಂದ ಈ ಇಲಾಖೆಯ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ ಮಾತನಾಡಿದ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. (ನಗು) ಈ ಒಂದು ಚರ್ಚೆಯಲ್ಲಿ ಮಾಜಿ ಆರೋಗ್ಯ ಮಂತ್ರಿ ಗಳು ಮಾತನಾಡಿದ್ದಾರೆ. ಅತ್ಯಂತ ಹೆಚ್ಚಿನ ಅನುಭವ ಇರತಕ್ಕ ಡಾಕ್ಟರ್ ಮಾಲಕರೆಡ್ಡಿಯವರೂ ಕೂಡ ಬಹಳ ಒಳ್ಳೆಯ ...... (ನಗು)

(ಮಾನ್ಯ ಸದಸ್ಯರು ನಗುವಿನಿಂದಾಗಿ ಮಾತನಾಡದೆ ಸುಮ್ಮನೆ ಕುಳಿತುಬಿಟ್ಟರು)

ಛೇರ್ಮನ್.—ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ನಾಳೆ ಬೆಳಗ್ಗೆ ೯-೦೦ ಗಂಟೆಗೆ ಸಚಿವ ರಿಂದ ಉತ್ತರ ಕೊಡಲಾಗುತ್ತದೆ.

ಈಗ ಸಭೆಯು ಎದ್ದು ನಾಳೆ ಬೆಳಿಗ್ಗೆ ಪ್ರವಃ ೯-೦೦ ಗಂಟೆಗೆ ಪುನಃ ಸೇರುವುದು.

ಸದನವು 7-22 ಕ್ಕೆ ಮುಕ್ತಾಯವಾಗಿ ಮತ್ತೆ ನಾಳೆ ಬೆಳಿಗ್ಗೆ
ದಿನಾಂಕ 15-6-90ರ ಶುಕ್ರವಾರ ಬೆಳಿಗ್ಗೆ 9-00 ಗಂಟೆಗೆ ಪುನಃ
ಸಮಾವೇಶಗೊಳ್ಳಲು ನಿರ್ಧರಿಸಿತು

W. D. 9708